ಸಾಹಿತ್ಯ ದಾಸೋಹ – 238

ಸಂಚಿಕೆ 62 – ಜುಲೈ 2025

14.06.2025ರ ದಾಸೋಹದ ಬರಹಗಳ ಸಂಕಲನ

ಎಚ್ಚೆಸ್ವಿ ಸ್ಮರಣೆ

ಎಚ್.ಎಸ್. ವೆಂಕಟೇಶಮೂರ್ತಿಯವರ
ಬರಹಗಳನ್ನು ಕುರಿತ ವಿಶೇಷ ದಾಸೋಹ



ಬಾನು ಮುಷ್ತಾಕ್ ಅವರ
ಕಥಾಲೋಕದಲ್ಲೊಂದು ಪಯಣ



ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ

ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಪುಟ ತೆರೆಯುವ ಮುನ್ನ…

ನಮ್ಮ ಮಾತು

ಆತ್ಮೀಯರೆ,

ಮೇ ತಿಂಗಳಲ್ಲಿ ತಮ್ಮ ಭೌತಿಕ ಶರೀರ ತ್ಯಜಿಸಿದ ಭಾವಗೀತೆಗಳ ಚಕ್ರವರ್ತಿ, ಕತೆ, ಕಾದಂಬರಿಗಾರ, ವಿಮರ್ಶಕ, ಸಾಹಿತ್ಯ ಚಿಂತಕ, ಸಂಘಟಕ, ದೂರದರ್ಶನ ಹಾಗೂ ಚಲನಚಿತ್ರ ಗೀತರಚನಕಾರ, ಚಿತ್ರ ನಿರ್ದೇಶಕ, ಆದರ್ಶ ಬೋಧಕ ಡಾ. ಎಚ್ಚೆಸ್ವಿಯವರ ಸಾಹಿತ್ಯಲೋಕದಲ್ಲೊಂದು ಇಣುಕು ನೋಟ ನೀಡುವ ಸಾಹಿತ್ಯ ದಾಸೋಹದ ವಿಶೇಷ ಸಂಚಿಕೆಯೊಂದನ್ನು ನಿಮ್ಮ ಕೈಗಿಡುತ್ತಿದ್ದೇವೆ. ನಮ್ಮ ಸಾಹಿತ್ಯ ದಾಸೋಹದ ಇತಿಹಾಸದಲ್ಲೇ ಇದೇ ಮೊದಲ ಬಾರಿಗೆ ಒಬ್ಬ ಸಾಹಿತಿಯ ಕುರಿತ ಇಂಥ ವಿಶೇಷ ದಾಸೋಹ ಏರ್ಪಾಡಾಗಿ ಯಶಸ್ವಿಯಾಗಿರುವುದು ನಮ್ಮ ಸಂತಸ ಹೆಚ್ಚಿಸಿದೆ. ಬಹಳ ಕಡಿಮೆ ಅವಧಿಯಲ್ಲಿ ಲೇಖನ ಬರೆದುಕೊಟ್ಟು ಸಹಕರಿಸಿದ ವೇದಿಕೆಯ ಎಲ್ಲ ಪ್ರತಿಭಾನ್ವಿತ ಸಾಹಿತ್ಯ ಬಂಧುಗಳಿಗೆ ಹಾಗೂ ಸಾಹಿತ್ಯ ದಾಸೋಹದ ಅಧ್ಯಕ್ಷತೆವಹಿಸಿ, ಎಲ್ಲ ಪ್ರಸ್ತುತಿಗಳನ್ನೂ ಅವಲೋಕಿಸಿದ ಶ್ರೀ ಕೆ.ಎನ್. ಮಹಾಬಲ ಅವರಿಗೂ ಕೃತಜ್ಞತೆಗಳು.

ಈ ಬಾರಿಯ 'ತಿಂಗಳ ಬೆಳಕು' ಕಾರ್ಯಕ್ರಮವೂ ವಿಶೇಷವಾಗಿತ್ತು. ತಮ್ಮ 'ಹೃದಯ ದೀಪ' ಕೃತಿಗೆ ಬೂಕರ್ ಪ್ರಶಸ್ತಿಗೆ ಭಾಜನರಾದ 'ಬಾನು ಮುಷ್ತಾಕ್ ಅವರ ಕಥಾಲೋಕದಲ್ಲೊಂದು ಪಯಣ' ಎಂಬ ವಿಷಯದ ಬಗ್ಗೆ ಶ್ರೀಮತಿ ಟಿ.ಎಸ್. ಶ್ರವಣ ಕುಮಾರಿಯವರು ಸುದೀರ್ಘ ಹಾಗೂ ಮನೋಜ್ಞ ಉಪನ್ಯಾಸವನ್ನು ನೀಡಿದರು. ಉಪನ್ಯಾಸದ ಸಮಗ್ರ ಚಿತ್ರಣ ನೀಡುವ ಸುಮಾರು 20 ಪುಟಗಳ ವಿಶೇಷ ಲೇಖನವೂ ಈ ಸಂಚಿಕೆಯಲ್ಲಿದೆ. ಬೂಕರ್ ಪ್ರಶಸ್ತಿ ಪಡೆದ ಬಾನು ಮುಷ್ತಾಕ್ ಅವರಿಗೆ ಅಭಿನಂದನೆಗಳು ಹಾಗೂ ಅವರ ಕೃತಿಗಳನ್ನು ಅವಲೋಕಿಸಿದ ಶ್ರವಣ ಕುಮಾರಿಯವರಿಗೆ ಕೃತಜ್ಞತೆಗಳು.

'ಮಕ್ಕಳ ಕಥಾ ಅಭಿಯಾನ' – ಮತ್ತೆ ಶ್ರಾವಣ ಬಂತು. ಕಳೆದ ವರ್ಷದ ಶ್ರಾವಣ ಮಾಸ ಪುಟ್ಟ ಕತೆಗಳಿಗೆ ಮೀಸಲಾಗಿತ್ತು. ಈ ಬಾರಿಯ ವಿಶ್ವಾವಸು ಶ್ರಾವಣ 'ಮಕ್ಕಳ ಕಥಾ ಅಭಿಯಾನ'ಕ್ಕೆ ತೆರೆದುಕೊಳ್ಳುತ್ತಿದೆ. 25 ಜುಲೈ 2025ರಿಂದ 23 ಆಗಸ್ಟ್ 2025ರವರೆಗಿನ 30 ದಿನಗಳಲ್ಲಿ ಎಲ್ಲರೂ ಮಕ್ಕಳ ಕಥೆಗಳನ್ನು ಬರೆಯಿರಿ, ಚಿಣ್ಣರ ಕನ್ನಡ ಸಾಹಿತ್ಯಲೋಕವನ್ನು ಸಮೃದ್ಧಗೊಳಿಸಿ ಎಂಬುದೇ ನಮ್ಮ ಮನವಿ.

ಸಾಹಿತ್ಯ ದಾಸೋಹ ಮತ್ತು ತಿಂಗಳ ಬೆಳಕು ಕಾರ್ಯಕ್ರಮಗಳ ಯಶಸ್ಸಿಗೆ ಸಹಕರಿಸಿದ ಎಲ್ಲ ಪ್ರಸ್ತುತಿಕಾರರಿಗೆ ಮತ್ತು ತಾಂತ್ರಿಕ ವರ್ಗಕ್ಕೆ ನಮ್ಮ ವಂದನೆಗಳು.

ಈ ಸಂಚಿಕೆಯನ್ನು ಓದಿ, ಆಸ್ವಾದಿಸಿ ನಿಮ್ಮ ಅಭಿಪ್ರಾಯ ದಾಖಲಿಸಿದರೆ ನಮ್ಮ ಶ್ರಮ ಸಾರ್ಥಕ.


ವಂದನೆಗಳೊಂದಿಗೆ,

ಸಂಚಾಲಕ ಸಮಿತಿ
ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

12.07.2025

ದಾಸೋಹದ ಪುಟಗಳಲ್ಲಿ...

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ




ಸಾಹಿತ್ಯ ದಾಸೋಹ – 238

“ಎಚ್ಚೆಸ್ವಿ ಸ್ಮರಣೆ”

ಕಾರ್ಯಕ್ರಮ ವರದಿ: ರಾಧಿಕಾ ಗುಜ್ಜರ್

14.06.2025ರ ಶನಿವಾರ ಇಳಿ ಮಧ್ಯಾಹ್ನ 3.30ಕ್ಕೆ ಸರಿಯಾಗಿ 238ನೆಯ ಸಾಹಿತ್ಯ ದಾಸೋಹವು ಗೂಗಲ್ ಮೀಟ್ ಅಂತರಜಾಲ ವೇದಿಕೆಯಲ್ಲಿ ಆರಂಭವಾಯಿತು. ಈ ಬಾರಿಯ ಸಾಹಿತ್ಯ ದಾಸೋಹವು ಇತ್ತೀಚೆಗಷ್ಟೇ ನಮ್ಮನ್ನಗಲಿದ ಮೇರು ಸಾಹಿತಿ ಡಾ.ಎಚ್.ಎಸ್.ವೆಂಕಟೇಶಮೂರ್ತಿ ಅವರಿಗೆ ವೇದಿಕೆಯ ಪರವಾಗಿ ನುಡಿ ನಮನಗಳನ್ನು ಅರ್ಪಿಸುವ "ಎಚ್ಚೆಸ್ವಿ ಸ್ಮರಣೆ" ವಿಶೇಷ ಕಾರ್ಯಕ್ರಮವಾಗಿತ್ತು. ದಾಸೋಹದ ಎಲ್ಲ ಪ್ರಸ್ತುತಿಕಾರರೂ ಎಚ್ಚೆಸ್ವಿ ಅವರ ವಿವಿಧ ಕೃತಿಗಳ ಕುರಿತಂತೆ ತಂತಮ್ಮ ಪ್ರಸ್ತುತಿಗಳನ್ನು ವಾಚಿಸಿದರು. ಶ್ರೀ ಕೆ.ಎನ್. ಮಹಾಬಲ ಅವರು 238ನೆಯ ದಾಸೋಹದ ಅಧ್ಯಕ್ಷತೆ ವಹಿಸಿದ್ದರು.

ಸಭೆಯ ಸಾರಥ್ಯ ವಹಿಸಿದ್ದ ಶ್ರೀ ರವಿ ಕುಸಬಿ ಅವರು, 'ಎಚ್ಚೆಸ್ವಿ ಸ್ಮರಣೆ'ಯ ವಿಶೇಷ ದಾಸೋಹದ ಬಗ್ಗೆ ವಿವರಗಳನ್ನು ನೀಡಿ, ಅಧ್ಯಕ್ಷತೆ ವಹಿಸಿದ ಶ್ರೀ ಕೆ.ಎನ್. ಮಹಾಬಲ ಅವರನ್ನು ಹಾಗೂ ಸಾಹಿತ್ಯ ದಾಸೋಹದಲ್ಲಿ ಭಾಗವಹಿಸಿದ ಎಲ್ಲರನ್ನೂ ಸ್ವಾಗತಿಸಿದರು.



ನಂತರ ದಾಸೋಹದಲ್ಲಿ ಲೇಖನಗಳನ್ನು ಪ್ರಸ್ತುತ ಪಡಿಸಲು ನೋಂದಾಯಿಸಿದ್ದ ಎಲ್ಲ ಇಪ್ಪತ್ತೂರು ಸದಸ್ಯರೂ ತಮ್ಮ ಸ್ವರಚಿತ ಲೇಖನಗಳನ್ನು ವಾಚಿಸಿ, ಡಾ.ಎಚ್.ಎಸ್.ವೆಂಕಟೇಶ ಮೂರ್ತಿಯವರ ಕತೆ, ಕವನ, ನಾಟಕ ಮುಂತಾದ ವಿಭಾಗಗಳಲ್ಲಿ ರಚಿಸಿದ ಹಾಗೂ ಜನಮನದಲ್ಲಿ ಸದಾ ನೆಲೆನಿಂತಿರುವ ಹಲವು ಸಾಹಿತ್ಯಕ ಬರಹಗಳ ಬಗ್ಗೆ ತಮ್ಮ ಅನಿಸಿಕೆಗಳನ್ನು ದಾಖಲಿಸಿದರು.

ಎಲ್ಲ ಪ್ರಸ್ತುತಿಗಳು ಮುಗಿದ ನಂತರ ಅಧ್ಯಕ್ಷರಾದ ಶ್ರೀ ಕೆ.ಎನ್. ಮಹಾಬಲ ಅವರು ತಮ್ಮ ಅಧ್ಯಕ್ಷೀಯ ಅನಿಸಿಕೆಗಳನ್ನು ಮಂಡಿಸಿ, 'ಎಚ್ಚೆಸ್ವಿ ಸ್ಮರಣೆ'ಯ ವಿಶೇಷ ದಾಸೋಹದಲ್ಲಿ ಪ್ರಸ್ತುತಪಡಿಸಲಾದ ಎಲ್ಲ ಇಪ್ಪತ್ತೂರು ಬರಹಗಳ ವಿಶೇಷತೆ, ವಿಷಯದ ಆಯ್ಕೆ, ಕೇಂದ್ರ ಆಶಯ ಹಾಗೂ ಸಾರವನ್ನು ಸಂಕ್ಷಿಪ್ತವಾಗಿ ವಿವರಿಸಿ, ಪ್ರೋತ್ಸಾಹಕರ ನುಡಿಗಳನ್ನಾಡಿದರು. ಎಚ್ಚೆಸ್ವಿಯವರ

ಸಾಹಿತ್ಯದ ಬಹಮುಖಗಳನ್ನು ಬಗೆಗಿನ ಹಲವು ಲೇಖನಗಳನ್ನು ಒಟ್ಟಿಗೇ ಅವಲೋಕಿಸುವ ಅವಕಾಶ ದೊರೆತುದಕ್ಕಾಗಿ ಸಂತಸ ವ್ಯಕ್ತಪಡಿಸಿದರು.

ಮಾಲತಿ ಶ್ರೀನಿವಾಸನ್ ಹಾಗೂ ಶೃತಿ ಕಟ್ಟಿ ಅವರುಗಳು ಎಚ್ಚೆಸ್ವಿಯವರ ಕೆಲವು ಗೀತೆಗಳನ್ನು ಹಾಡುವುದರ ಮೂಲಕ ಎಚ್ಚೆಸ್ವಿಯವರಿಗೆ ಗೀತ ನಮನಗಳನ್ನು ಸಲ್ಲಿಸಿದರು.

ಶ್ರೀ ರವಿ ಕುಸಬಿ ಅವರ ವಂದನಾರ್ಪಣೆಯೊಂದಿಗೆ ಜೂನ್ ತಿಂಗಳ ನೋಡಿಯೋ ಸಾಹಿತ್ಯ ದಾಸೋಹವು ಮುಕ್ತಾಯವಾಯಿತು.

ಸಾಹಿತ್ಯ ದಾಸೋಹದ ಸಾರಥ್ಯ : ಶ್ರೀ .ರವಿ ಕುಸಬಿ
ಜಿ ಮೀಟ್ ಆತಿಥ್ಯ : ಶ್ರೀಮತಿ ರಾಧಿಕಾ ವಿ. ಗುಜ್ಜರ್
ವಿಡಿಯೋ ಸಂಸ್ಕರಣೆ : ಶ್ರೀ ಗುರುಪ್ರಸಾದ್ ಹಾಲ್ಕುರಿಕೆ
ಪಿಡಿಎಫ್ ಆವೃತ್ತಿ ತಯಾರಕರು : ಶ್ರೀ ಶೃಂಗೇಶ್ವರ ಶರ್ಮ

ಇಡೀ ಕಾರ್ಯಕ್ರಮವು ಸಾಹಿತ್ಯ ದಾಸೋಹದ ಜಾಲತಾಣ ಹಾಗೂ ಯುಟ್ಯೂಬ್‌ನಲ್ಲಿ ವೀಕ್ಷಣೆಗೆ ಲಭ್ಯವಿದೆ.

***



ಶ್ರಾವಣ ಕಥಾಪರ್ವ
ಆವೃತ್ತಿ ೦೩/೨೦೨೫

ಮತ್ತೆ ಬರಲಿದೆ ಶ್ರಾವಣ
ವೇದಿಕೆಯಲೇನು ಅಭಿಯಾನ
ತುಂತುರೋ, ಭೋರ್ಗರೆತವೋ
ಜಡಿಮಳೆಯೋ, ಅಮೃತಧಾರೆಯೋ?

ತವಕಿಸುತಿದೆ ಲೇಖನಿಯು
ಚಾಚಿದೆ ಕಥಾಚಿತ್ತದ ಗಣಿಗೆ
ಕೊಂಬೆ ರೆಂಬೆಯ ಚಿಗುರಿಗೆ
ಬಾಚಿ ತುಂಬಿರಿ ಕಥಾ ಜೋಳಿಗೆ!

ಮಾನ್ಯ ಗೆಳೆಯರೇ,
೨೦೨೫ ರ ಶ್ರಾವಣ ಮಾಸವು ಜುಲೈ ೨೫ ರಿಂದ ಆಗಸ್ಟ್ ೨೩ ರವರೆಗೆ ; ಒಟ್ಟು ೩೦ ದಿನಗಳು.
ಮತ್ತೆ ನೀವು ಕಥೆ ಹೇಳುವ ದಿನಗಳು ಮರಳುತ್ತಿವೆ.
ವೇದಿಕೆಯಲ್ಲಿ ಮತ್ತೊಂದು ಶ್ರಾವಣ ಕಥಾ ಅಭಿಯಾನ ಆರಂಭ.
ಹೌದಲ್ಲ! ಈ ಬಾರಿ ನಾವು ಯಾವ ಕಥೆ ಹೇಳೋಣ!!
ಇಲ್ಲಿ ಕೇಳಿ !!!

ವಿಶ್ವಾವಸು ಶ್ರಾವಣದ ಮಕ್ಕಳ ಕಥಾ ಅಭಿಯಾನ

೦೧. ಈ ಬಾರಿಯ ಕಥಾಶ್ರಾವಣವು ಮಕ್ಕಳ ಕಥೆಗಾಗಿ ಮೀಸಲು.
೦೨. ಆರರಿಂದ ಹನ್ನೆರಡು ವರ್ಷ ವಯಸ್ಸಿನ ಮಕ್ಕಳಿಗಾಗಿ ಕಥೆಗಳನ್ನು ಬರೆಯಿರಿ.
೦೩. ಪುರಾಣ/ಜಾತಕ/ಪ್ರಚಲಿತ ದೃಷ್ಟಾಂತ ಕಥೆಗಳು/ಈಗಾಗಲೇ ಹೇಳಿರುವ ಕಥೆಗಳು ಬೇಡ.
೦೪. ಕಥೆಗಳು ಇಂದಿನ ಕಾಲಧರ್ಮಕ್ಕೆ ಅನುಗುಣವಾಗಿ ವೈಜ್ಞಾನಿಕ ಮನೋಧರ್ಮದಿಂದ ಕೂಡಿರಲಿ.
೦೫. ಇನ್ನೂರೈವತ್ತು ಪದಗಳ ಗರಿಷ್ಠ ಮಿತಿ.
೦೬. ಪ್ರತಿದಿನ ಒಂದರಂತೆ ಮೂವತ್ತು ಕಥೆಗಳನ್ನು ಪ್ರಸ್ತುತಪಡಿಸಿ. ಕಡಿಮೆಯಾದರೆ ಪರವಾಗಿಲ್ಲ. ನಿಮ್ಮ ಪ್ರಸ್ತುತಿಯಂತೂ ಬರಲಿ.
೦೭. ಅಭಿಯಾನದಲ್ಲಿ ಪ್ರಸ್ತುತವಾಗುವ ಕಥೆಗಳ ಆಯ್ದ ಸಂಕಲನವನ್ನು ಪ್ರಕಾಶಿಸುವ ಉದ್ದೇಶವನ್ನು ವೇದಿಕೆಯು ಹೊಂದಿದೆ. ಎಂದಿನಂತೆ ಚಂದದ ಕಾರ್ಯಕ್ರಮ ಕೂಡಾ. ಕಥೆಗಳನ್ನು ಪ್ರಸ್ತುತಿಪಡಿಸಿದ ಸದಸ್ಯರು ಪುಸ್ತಕ ಪ್ರಕಾಶನಕ್ಕೆ/ಕಾರ್ಯಕ್ರಮಕ್ಕೆ ಸರ್ವರೀತಿಯ ಸಹಕಾರವನ್ನು ನೀಡಬೇಕೆಂದು ಮನವಿ ಮಾಡುತ್ತೇವೆ.

ಶ್ರಾವಣ ಕಥಾ ಪರ್ವದ ಮೂರನೆ ಆವೃತ್ತಿಯ ಯಶಸ್ಸಿಗೆ ನಿಮ್ಮೆಲ್ಲರ ಸಹಕಾರ ಕೋರುತ್ತೇವೆ.

ಬೆಂಗಳೂರು
೭-೬-೨೦೨೫

ಸಂಸ ಪರವಾಗಿ,
ಶ್ರೀರಂಗರಾಜನ್
ಗುರುರಾಜ ಶಾಸ್ತ್ರಿ
ಅಭಿಯಾನದ ಸಂಚಾಲಕರು

ತಿಂಗಳ ಬೆಳಕು - 16

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ



"ಬಾನು ಮುಷ್ತಾಕರ ಕಥಾಲೋಕದಲ್ಲೊಂದು ಪಯಣ"

ಉಪನ್ಯಾಸಕರು : ಶ್ರೀಮತಿ ಶ್ರವಣ ಕುಮಾರಿ ಟಿ.ಎಸ್.

ಕಾರ್ಯಕ್ರಮ ವರದಿ: ಹು.ವಾ. ಶ್ರೀಪ್ರಕಾಶ್

ದಿನಾಂಕ ೨೮.೦೬.೨೦೨೫ ಶನಿವಾರ ಸಂಜೆ ೫.೩೦ಕ್ಕೆ ಶ್ರೀಮತಿ ಶ್ರವಣ ಕುಮಾರಿಯವರಿಂದ "ಬಾನು ಮುಷ್ತಾಕರ ಕಥಾಲೋಕದಲ್ಲಿ ಪಯಣ" ಎಂಬ ಉಪನ್ಯಾಸವನ್ನು ಅಂತರ್ಜಾಲ ಮುಖೇನ ಗೂಗಲ್ ಮೀಟ್ ನಲ್ಲಿ ಏರ್ಪಡಿಸಲಾಗಿತ್ತು.

'ತಿಂಗಳ ಬೆಳಕು' ಸಂಚಾಲಕರಾದ ಶ್ರೀ ರವಿ ಕುಸಬಿಯವರು ಪ್ರಾಸ್ತಾವಿಕ ಮಾತುಗಳನ್ನಾಡಿ ಶ್ರೀಮತಿ ಶ್ರವಣಕುಮಾರಿ ಯವರನ್ನು ಪರಿಚಯಿಸಿ, ಎಲ್ಲರಿಗೂ ಸ್ವಾಗತ ಕೋರಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಇತ್ತೀಚೆಗೆ ಬೂಕರ್ ಪ್ರಶಸ್ತಿಗೆ ಭಾಜನರಾದ ಶ್ರೀಮತಿ ಬಾನು ಮುಷ್ತಾಕ್ ಅವರ ಸಮಗ್ರ ಕಥಾಲೋಕದ ಬಗ್ಗೆ ಸಾಕಷ್ಟು ಅಧ್ಯಯನ ಮಾಡಿ ಸಿದ್ಧರಾಗಿದ್ದ ಶ್ರೀಮತಿ ಶ್ರವಣ ಕುಮಾರಿಯವರು, ತಮ್ಮ ಉಪನ್ಯಾಸದಲ್ಲಿ ಹಲವು ಕತೆಗಳನ್ನು ವಿಶ್ಲೇಷಿಸಿ, ಅವುಗಳಲ್ಲಿ ಕಾಣುವ ಸಂಪ್ರದಾಯಗಳು, ಮಹಿಳಾ ಶೋಷಣೆ, ಕಟ್ಟುಪಾಡುಗಳು ಮುಂತಾದವನ್ನು ಎಳೆಎಳೆಯಾಗಿ ಬಿಚ್ಚಿಟ್ಟರು. ನಡುನಡುವೆ ಕೆಲವು ಕತೆಗಳಲ್ಲಿನ ಚಿಂತನೆಗೆ ಹಚ್ಚುವ ಸಾಲುಗಳನ್ನು ಓದಿ, ಸಭಿಕರ ಗಮನ ಸೆಳೆದರು.



ಉಪನ್ಯಾಸದ ನಂತರ ನಡೆದ ಸಂವಾದದಲ್ಲಿ ಹಲವರು ಭಾಗವಹಿಸಿ, ಬಾನು ಮುಷ್ತಾಕರ ಕಥೆಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು.

ಕೊನೆಯಲ್ಲಿ ಶ್ರೀ ರವಿ ಕುಸಬಿಯವರು ಎಲ್ಲರಿಗೂ ವಂದನೆಗಳನ್ನು ಸಲ್ಲಿಸುವುದರೊಂದಿಗೆ ತಿಂಗಳ ಬೆಳಕು–೧೬ರ ಒಂದು ವಿಶಿಷ್ಟ ಕಾರ್ಯಕ್ರಮ ಮುಕ್ತಾಯವಾಯಿತು.

ಶ್ರೀಮತಿ ಶ್ರವಣಕುಮಾರಿಯವರು ತಮ್ಮ ಉಪನ್ಯಾಸದ ಮುಖ್ಯಾಂಶಗಳನ್ನು ಲೇಖನ ರೂಪದಲ್ಲಿ ನೀಡಿದ್ದು, ಅದನ್ನು ಈ ಸಂಚಿಕೆಯಲ್ಲಿ ಪ್ರಕಟಿಸಲಾಗಿದೆ.

ಸಂಪೂರ್ಣ ಉಪನ್ಯಾಸ ಸಮನ್ವಯ ಸಮಿತಿಯ ಯೂಟ್ಯೂಬ್‌ನಲ್ಲಿಯೂ ಲಭ್ಯವಿದೆ.

***

ಕವಿಮನ

ಅವಲೋಕನ

ನಿಲ್ದದಲೆಗಳ ನಡುವೆ ಮಂದಗತಿ ಎದೆಬಡಿತ,
ಶ್ವಾಸಗಳ ಲೆಕ್ಕಕ್ಕೆ ಅಂತಕನ ಹುನ್ನಾರ
ಇಂತಿಷ್ಟು ಶಬ್ದಗಳು... ಸಾಂತ್ವನದ ಸಂಬಂಧ
ಮುಚ್ಚಿದೆವೆಗಳ ಆಳ... ಮೌಲ್ಯಗಳನರಸಿ!

ಚುಚ್ಚಿದೀಟಿಗಳ ತಡೆದು, ಚಾಟಿಯನು ಬೀಸುತ್ತ
ಹರಿಸಿದ್ದು ಬೆವರ ಹನಿ, ಒರೆಸಿದ್ದು ಕಣ್ಣೀರು
ಬೆಸುಗೆ, ಬಿರುಕು, ಒಡನಾಟ, ಪರದೆ ಪದರಗಳು
ಚಿತ್ರಪಟಗಳ ಬಣ್ಣ... ಹಸಿರು ಕೆಂಪು!

ಕನಸುಗಳು ಮರೆಯಾಗಿ ನೆನಪುಗಳು ಹೊರೆಯಾಗಿ
ನಿಗಿನಿಗಿಯ ಮನಸೋತು ಬಾಗಿ ಬೆನ್ನೆಲುಬು
ಸಂಭ್ರಮಕೆ ಸಂಘರ್ಷ, ಸದ್ಭಾವ ಸಮ್ಮೋಹ
ಅರ್ಥ-ಸಾರ್ಥಕತೆಗಷ್ಟೆ ನರ-ನಾಡಿ ಮಿಡಿದು

ಸೂಜಿ, ಪೈಪು, ಯಂತ್ರ ಅಪ್ಪಿಹವು ಈ ದೇಹ
ಕಟಕಟೆಯ ಚೌಕಟ್ಟು ಏರಲೇನದು ಅಡ್ಡಿ?
ವಾದ-ವಿವಾದ ತರ್ಕಗಳ ಹರವಿನಲಿ
ನ್ಯಾಯ-ಅನ್ಯಾಯಗಳ ಮಹತರದ ತೀರ್ಪು!

ಸೊರಗಿ ಒರಗಿರೆ ದೇಹ ಚಿಂತನೆಗೆ ಜೀರುಂಡೆ
ಹಕ್ಕಿ ಅವಲೋಕನಕೆ ಇಂತಿಷ್ಟು ಸಮಯ!
ಯಾಚಿಸಲೆ ಕ್ಷಮೆಯನ್ನು ಪಟ್ಟಿಯದು ದೊಡ್ಡದಿದೆ
ಫಲಿತಗಳಿರಲೆದುರು ಯಾಚನೆಯು ಲೀನ!

ಮುಕ್ತಿಸ್ವರ ಪರ-ಮಂತ್ರ "ಮ-ರ-ಣ" ಮೂರಕ್ಷರವು
ಹೃದಯ ಬಯಕೆಯ ರಾಗ ಬೆಸುಗೆ ಮಾತ್ರ!
ಚೇತನಕೆ ಚಿಂತನೆಯು, ಚಿಂತನೆಗೆ ಚೇತನವು
ನೈಜ ಬದುಕಿನೊಳಮೊಳಗು, ಶುದ್ಧ ಪ್ರೀತಿ!

ಬಿಡುಗಡೆಯ ಬಯಸಿ ಕಾಯುತಿದೆ ಕಿರುಪಕ್ಷಿ
ಹೊರೆ ಕರಗಿ... ನಿಷ್ಕರ್ಷೆ! ಉತ್ತರವು ಬೆಳಗಿ!

– ಕೆ.ಆರ್.ಎಸ್. ಮೂರ್ತಿ
04.06.2025

ನಿರಂತರಿತ

ಚಿಂತೆಗಳ ಸಂತೆಯಿದೆ
ಒಳಗಣ ಮನದ ಮೈದಾನದಲ್ಲಿ
ಎದ್ದೇಳಲೂ ಭಯ
ಇನ್ನೂ ಹೆಜ್ಜೆ ಇಡುವುದೆಲ್ಲಿಯದು
ಕಾಯುವುದು ತರವೇ?
ನೆರವೇನಾದರೂ ಬರಬಹುದೇ?
ಆಗದು; ಮನದಟ್ಟಾಗಿದೆ
ದೂರ ದೂರದವರೆಗೂ ಹುಸಿ ಭರವಸೆ

ಬೆಳಗಿನ ಮೊದಲಾದರೆ
ಮೈದಾನದ ದಿಕ್ಕುಗಳೇ ಮಾಯ
ಮಧ್ಯಾಹ್ನಕೋ ದಿಗಿಲು
ದಿಕ್ಕೇ ತೋಚದಷ್ಟು ಗೌಜು ಗದ್ದಲ
ಕಣ್ಣು ಕೀಲಿಸಿದರೂ
ಕಾಣದ ದಾರಿ, ಉಜ್ಜುವ ಭುಜಗಳು
ನೆತ್ತಿಗೋ, ಸುಡು ಬಿಸಿಲು
ಬವಳಿ ಬರುವ ತೀರದ ಘಾಟು
ಮೂಲೆ ಹಿಡಿದು ಕುಳಿತರೆ
ಬಗೆಹರಿದೀತೆ ಕೊಡು ಕೊಳ್ಳುವಿಕೆಯು

ಸಂಜೆಯವರೆಗೂ ಸುತ್ತುವೆ
ಹಾಗಾದರೂ ಒಂಟಿತನ ಮರೆವೆ
ಒಂಟಿಗರ ಸಂತೆಯಲ್ಲಿ
ಮೂಕತನದ ಕುರಿತೇ ಮಾತನಾಡಿಕೊಳ್ಳುವೆ
ಈಗ ಮತ್ತೊಂದು ಚಿಂತೆ
ಜಗದ ಸಂತೆಯ ಸರಕೆಲ್ಲವೂ ಚಿಂತೆ!
ಕೊಟ್ಟರೂ ಕೊಂಡರೂ
ಬಣ್ಣಗಳ ಬದಲಾಯಿಸಿ ಬರುವುದು ಮತ್ತದೇ

ಒಮ್ಮೆ ಮೈದಾನವ ದಾಟಿದೆ
ಚಿಂತೆಯ ಜಾಗದಲ್ಲೀಗ ಅರಸುವಿಕೆಯಿದೆ
ನಿರಂತರಿತವರಿತ ಚೇತನ
ಅನಿಕೇತನವಾದರೂ ನೆಮ್ಮಗೆಯ ಕೇತನ

– ರಾಧಿಕಾ ಗುಜ್ಜರ್
18.06.2025

ಕವಿಮನ

ಮುರಿದ ಕತ್ತಿನ ಅಲ್ಯೂಮಿನಿಯಂ ಬಿಂದಿಗೆ

ನಿನ್ನ ಮಾತು ಕೇಳಿ ನಾನು ನಕ್ಕು ಬಿಡಬೇಕಿತ್ತು
ನಿನ್ನಂತರಾಳದಲಿ
ಏನಿತ್ತು ಏನಿಲ್ಲ ಅಂತೇಕೆ ಕೆದಕಬೇಕಿತ್ತು

ಇಷ್ಟಕ್ಕೂ ನನಗೂ ನಿನಗೂ
ಎದುರಲ್ಲೂ ಎದುರಲ್ಲಿಲ್ಲದಾಗಲೂ
ಅದುರದ ಭಾವ
ಕಂಡಾಗ ಒಬ್ಬರಿಗೊಬ್ಬರು ಕೈ ಜೋಡಿಸಿ
ಮುಗುಳು ನಗುತ್ತೇವಲ್ಲ!
ಕೈ ಕೂಡಿಸಿದಾಗ ಬೆಚ್ಚನೆಯ ಭಾವ
ಎದೆಯ ತುಂಬಾ ಮಲ್ಲಿಗೆಯ ಅರಳು
ಇಂತಲ್ಲಿ ಪಾತಾಳ ಗರಡಿಯನ್ನೇಕೆ
ಚಿದ್ಭಾವಿಯಲ್ಲಿ ಇಳಿಸಬೇಕಿತ್ತು

ಈಗ ನೋಡು ಸಿಕ್ಕಿದ್ದು
ಜಾಲಾಡಿದ್ದಕ್ಕೆ ರಾಶಿ ರಾಡಿ
ಮುರಿದ ಕತ್ತಿನ ಅಲ್ಯೂಮಿನಿಯಂ ಬಿಂದಿಗೆ
ಬುಡಕ್ಕೆ ಸಿಮೆಂಟು ಹಾಕಿದ ಬಕೀಟು
ಜಾರಿದ ಹಳೆಯ ಬಟ್ಟೆ, ಭಾವಿಯ ಹಗ್ಗ
ಸತ್ಯ ಸಣ್ಣ ಸರಕಲ್ಲ; ಊಹೆಯ ಬಸಿರಲ್ಲ
ರಾಚುವ ಸೂರಿಯ ಚುಚ್ಚು

ನಾವೆಲ್ಲ ಎಂಥವರು; ಬಿರಟೆ ಭಾಗ್ಯದವರು
ಹಳೆಯ ಸೋಡಾ ಬಾಟ್ಲ ಗಾಜಿನ ಗೋಲಿ
ಒಳಜಾರಿ ಬುರುಗು ಉಕ್ಕಿದಂತೆ
ಹಲವೊಮ್ಮೆ ಸೋಡಾ ಹೊರಹರಿದಂತೆ

ಹನಿ ಹನಿ ಇಳಿಯದು ಇಳೆಯ ಗರ್ಭದೊಳಗೆ
ಭೋರೆಂದು ಸುರಿಯಬೇಕು
ಇಲ್ಲವೆ ಹಿಡಿಯಬೇಕು ಜಡಿ ಬಿಡದೆ
ಒಳಗಿಳಿಯುತ್ತಾ ಒಳಗಿಳಿಯುತ್ತಾ
ಕಾವು ಆರುತ್ತ ಗಂ ಎಂಬ ಮಣ್ಣಿನ ವಾಸನೆ
ಸುರಿಯಬೇಕೊಂದೇ ಸಮನೆ ಮತ್ತು ಸುಮ್ಮನೆ
ಸುಮ್ಮಾನಕೆ ಸಮನಿರಬೇಕು ಸುಮ್ಮನೆ
ಮನಸ್ಸೇ
ನೆನಪಿರಲಿ ಅಮೃತಮತಿಯಲ್ಲ
ದಮಯಂತಿ ಶಕುಂತಲೆ
ಹುಣ್ಣಿಮೆಯಲ್ಲಿ ಚಂದ್ರನೆಳತಕ್ಕೆ
ಉಕ್ಕುವುದಲ್ಲವೆ ಸಮುದ್ರ
ನಾವಿಕ ಇರಬೇಕು ಕುಶಲ; ಕುಶಾಲಲ್ಲ

ನಾನು ನಕ್ಕು ಬಿಡಬೇಕಿತ್ತು
ಇಲ್ಲವೆ ಸುಮ್ಮನಿರಬೇಕಿತ್ತು
ನಿರಾಳವಾಗಿರುತ್ತಿತ್ತು
ಅಂತರಾಳಕ್ಕೆ ಏಕೆ ಜಿಗಿಯಬೇಕಿತ್ತು

–ಬೆಂ.ಶ್ರೀ. ರವೀಂದ್ರ
11.06.2025

ಕವಿಮನ

ವರುಣನಾ ಆಗಮನ

ಕರೆದಿಹರು ವರುಣನನು ಬೇಗೆಯನು ತಣಿಸೆ
ಸರಿಯೆಂದು ಬಂದಿಹನು ರಸ್ತೆಯದು ಹುಣಿಸೆ
ಕಿರಿದಾದ ಮನೆಯವರು ರಂಪಾಟ ನಡೆಸಿ
ಸುರಿಯುತಿಹ ಮಳೆಯನ್ನು ಒಂದಷ್ಟು ಶಪಿಸಿ

ಮೊಂಡು ಮಕ್ಕಳ ತೆರದಿ ವರುಣನ ನೀತಿ
ಚಂಡಿಯೊಲು ಬಿಟ್ಟು ಬಿಡದಿಹ ಮಳೆಯ ರೀತಿ
ಗುಂಡಿಗಳೊ ಮೋರಿಗಳೊ ಅರಿಯದಿಹ ಹಾದಿ
ಚೆಂಡಾಡಿ ಎಲ್ಲವೂ ತೇಲುತಿಹ ಬೀದಿ

ಕೆರೆಗಳನು ಮುಚ್ಚುತಲಿ ಕಟ್ಟಿದರು ಮಹಡಿ
ಕರೆಯದಯೆ ಬರುವ ಜಲ ತಗ್ಗಿನಲಿ ನೋಡಿ
ಬರಿಮಳೆಯೆ ಸಾಕಷ್ಟು ನೀಡಿಹುದು ನೋವ
ಸುರಿಮಳೆಗೆ ಮತ್ತಷ್ಟು ನಲುಗುವುದು ಜೀವ

ಸರಿಯಾದ ನಿರ್ಧಾರ ಕೈಗೊಳ್ಳಿ ಮುಂದೆ
ಅರಿಯದಿಹ ಜನರನ್ನು ಬಿಟ್ಟುಬಿಡಿ ಹಿಂದೆ
ಮುರಿಯದಲೆ ನಿಯಮಗಳ ಪರಹಿತವ ನೋಡಿ
ಹಿರಿತನದ ಘನತೆಯನು ಕಾಪಾಡೊ ಮೋಡಿ.

ಉಂಬಳಿಯ ಜಾಗವದು ಎಂದು ತಿಳಿದಿಹರೆ
ಕಂಬಳಿಯ ಹೊದ್ದು ಜಡತೆಯಿಂ ಮಲಗಿಹರೆ
ಸಂಬಳವು ಸಾಲದಲೆ ಗಿಂಬಳಕೆ ಇಳಿದು
ಸಿಂಬಳದ ನೊಣದಂತೆ ಸಿಲುಕಿಹರೆ ತಿಳಿದು

ನಂಬಿದವರಿಗೆ ಮೋಸ ವಂಚನೆಯು ಅಲ್ಲಿ
ಡೊಂಬರಾಟದ ಬಿಂಬ ಕಾಣುತಿದೆಯಲ್ಲಿ
ತುಂಬಿರಲಿ ಕೆರೆಕುಂಟೆ ರಸ್ತೆಗಳು ಅಲ್ಲ
ಹುಂಬರೆನ್ನುವ ಭಾವ ನೂಕಿಬಿಡಿರೆಲ್ಲ

ಬಿಟ್ಟಿಭಾಗ್ಯಗಳು ತತ್ಕಾಲ ಮಾತ್ರ ತಾವು
ಗಟ್ಟಿ ನಿಲುವಿನ ಕಾರ್ಯ ಸಾರ್ವಕಾಲಿಕವು
ತುಟ್ಟಿಯಾಗದೆ ಇರಲಿ ಬದುಕಿನಾ ಮೌಲ್ಯ
ಜಟ್ಟಿ ಕಾಳಗಕಿಳಿಯೆ ಬರಿದೆ ನಿರ್ಮಾಲ್ಯ

ಬರಿದೆ ಮಾತನು ಆಡೆ ಫಲವಿಲ್ಲವೆಂದು
ಸರಿಯಾದ ಕೆಲಸವೇ ಉಳಿಗಾಲಕೆಂದು
ಬಿರಿದ ಮಲ್ಲಿಗೆ ಕಂಪು ಪಸರಿಸಲಿ ಮುಂದೆ
ಕೆರೆದು ಗಾಯವ ಮಾಡಿಕೊಳ್ಳದಿರಿ ಮಂದೆ.

– ಪೂರ್ಣಿಮ ಭಗವಾನ್
25.06.2025

ಎಚ್ಚೆಸ್ವಿಯವರ ಕವಿತೆ

"ಮಕ್ಕಳಿರಲಮ್ಮ ಮಕ್ಕಳಾಗಿ..."

– ಜಿ.ವಿ. ಅರುಣ

ಎಚ್ ಎಸ್ ವಿಯವರು ತಮ್ಮ ಕೆಲವು ಕವನ ಗಳಲ್ಲಿ ಬರುವ ಪಾತ್ರಗಳನ್ನು ಹೆಸರಿಸುವ ರೀತಿ ಆ ಪಾತ್ರಗಳು ನಮಗೆ ಬಹಳ ಆಪ್ತರು ಎನ್ನುವ ಭಾವವನ್ನು ತಂದುಬಿಡುತ್ತದೆ. ಉದಾಹರಣೆಗೆ 'ಘಟು' ಎಂಬ ಹೆಸರನ್ನು ನೋಡಿ. ನಮಗೆ ಅದು ಯಾರು ಎಂದು ತಕ್ಷಣ ಹೊಳೆಯುವುದಿಲ್ಲ. ಅದೇ 'ಘಟು ಭೀಮನಿಗೆ...' ಎಂಬ ಕವನದ ಶೀರ್ಷಿಕೆಯನ್ನು ನೋಡಿದೊಡನೆ ಸಂತಸದಿಂದ ನಮ್ಮ ತುಟಿ ಅರೇಬಿರಿಯುತ್ತದೆ. 'ಘಟು' ಪರಿಚಯಸ್ತನೇ ಆಗಿಹೋಗುತ್ತಾನೆ.

ಅವರ ಮತ್ತೊಂದು ಕವನ 'ಮಕ್ಕಳಿರಲಮ್ಮ ಮಕ್ಕಳಾಗಿ...' ಇದರಲ್ಲೂ ಪ್ರಸಿದ್ಧ ಹೆಸರುಗಳನ್ನು ಆಪ್ತವಾಗಿ ಕವಿ ಹ್ರಸ್ವ ಮಾಡಿದ್ದಾರೆ. ಎಲ್ಲರಿಗೂ ಅವರ ಮಕ್ಕಳು, ಮೊಮ್ಮಕ್ಕಳು ಎಷ್ಟೇ ದೊಡ್ಡವರಾದರೂ ಪುಟ್ಟ ಮಕ್ಕಳಂತೆ ಇರಲಿ ಎಂಬ ಹಂಬಲ ಇದ್ದೇ ಇರುತ್ತದೆ. ಅವರ ಚಿಕ್ಕಂದಿನ ಆಟ-ಓಟಗಳನ್ನು ನೆನೆದು ಸಂತೋಷಪಡುತ್ತೇವೆ. ಯಾರದ್ದೋ ಅತ್ತೆ "ಏ ನೋಡೋ, ಇವಳೇ ನಿನ್ನ ಹೆಂಡತಿ" ಎಂದು ಯಾವುದೋ ಪುಟ್ಟ ಹುಡುಗನಿಗೆ ಹೇಳುತ್ತಾಳೆ. ಮದುವೆ, ಸಂಸಾರ ಎಂದರೆ ಏನೆಂದೇ ಗೊತ್ತಿರದವನು "ಈ ಜಗಳ ಗಂಟಿನಾ!?" ಎಂದು ರಾಗ ಎಳೆದಿರುತ್ತಾನೆ. ಆ ಪುಟ್ಟ ಹುಡುಗಿ "ಈ ಡುಮ್ಮನ್ನ ನಾನು ಮದುವೆ ಆಗಲ್ಲ!" ಎಂದು ಅತ್ತ ಓಡಿಸುತ್ತಾಳೆ. ಮಾರನೇ ದಿನ ಅವನ ಬೆನ್ನಮೇಲೆ ಇವಳು ಕೂಸುಮರಿ. ಇಂಥ ಒಂದು ಚಿತ್ರವೇ ನಿಜಜೀವನದಲ್ಲಿ ಫ್ರೀಜ್ ಆಗಿ ಇದ್ದು ಬಿಡುವಂತಿದ್ದರೆ!

ಆದರೆ 'ಹುಟ್ಟುತ್ತಾ ಅಣ್ಣತಮ್ಮಂದಿರು, ಬೆಳೀತಾ ದಾಯಾದಿಗಳು' ಎಂಬ ಗಾದೆ ಸಾಮಾನ್ಯವಾಗಿ ಸುಳ್ಳಲ್ಲ. ದಾಯತ್ವದ ಪ್ರಶ್ನೆಯು ಪ್ರೀತಿ ವಿಶ್ವಾಸವನ್ನು ಮೀರಿದಾಗಲೇ ಅಣ್ಣತಮ್ಮಂದಿರು ದಾಯಾದಿಗಳಾಗುವುದು. ಭರತ-ಬಾಹುಬಲಿ ಕಥೆ, ರಾಮಾಯಣದ ಮಂಥರೆಯಿಂದ ಕಿವಿ ಊದಿಸಿಕೊಂಡ ಕೈಕೇಯಿಯ ಚಿಂತನೆ, ಮಹಾಭಾರತದ ಕೌರವ ಪಾಂಡವರು ಇದಕ್ಕೆ ಪೌರಾಣಿಕ ಉದಾಹರಣೆಗಳು. ಅಷ್ಟೇ ಏಕೆ, ನಮ್ಮ ಸುತ್ತಮುತ್ತಲೂ ಇವು ಈಗಲೂ ಕಂಡು ಬರುತ್ತವೆ. ಅವುಗಳ ಬಗ್ಗೆ ನಿರ್ಭಾವುಕತೆಯಿಂದ

ಮಕ್ಕಳಿರಲಮ್ಮಾ ಮಕ್ಕಳಾಗಿ...

ಮರದಿಂದ ಹ್ಯಾಗೆ ಬಿದ್ದನೋ ಏನೋ ಹುಡುಗ ದುರು.
ತೊಡೆ ಇಷ್ಟು ದಪ್ಪ ಊದಿದೆ. ಮೂಳೆ ಮುರಿದಿದ್ದರೂ
ಮುರಿದಿರಬಹುದು ಎಂದಿದ್ದಾರೆ ಅರಮನೆ ರಾಜವೈದ್ಯ.
ದೆಬ್ಬೆ ಕಟ್ಟಿದ್ದಾರೆ. ಮಗುವಿಗೀಗಷ್ಟೆ ನಿದ್ದೆ ಹತ್ತಿದೆ ಸದ್ಯ.
ಯಾಕೆ ಇನ್ನೂ ದೀಪ ಆರಿಸಿಲ್ಲ ಎನ್ನುತ್ತಾ ಬರುತ್ತಾಳೆ ಕುಂತಿ.
ಅವಳ ಜೊತೆಗೇ ಹಿರೀಮಗ ಜಗಿಯುತ್ತಾ ಅಂಗಿ, ನಿಂತಿ
ದ್ದಾನಾಕೆಯ ಸೆರಗ ಮರೆಯಲ್ಲಿ. ನೋಡಪ್ಪಾ ಯುಧಿ,
ದುರುಗೆ ತೊಡೆಯೇ ಮುರಿದಿದೆ – ಅರೆ! ನೀನ್ಯಾಕೋ ಅಳುತ್ತಿ?

ಇನ್ನುಮೇಲೆ ಜಗಳಾಡಬೇಡಿ ತಿಳಿಯಿತಾ ಎನ್ನುತ್ತಾ ದೊಡ್ಡಮ್ಮ
ಚಾಚುತ್ತಾಳೆ ಕೈ ಯುಧಿಯ ಕಡೆ. ಯುಧಿ ಹತ್ತಿರ ಬಂದು ತಮ್ಮ
ನ ಕಾಲೊತ್ತಲಾ ಕೇಳುತ್ತಾನೆ. ದುರುಗೆ ಎಚ್ಚರಾಗುತ್ತೆ. ಯಾರು
ಯುಧಿಯಾ ಅನ್ನುತ್ತಾನೆ. ಭೀಮನ ಜೋಡಿ ಆಡಬೇಡಿರಿ ಯಾರೂ
ಎಂದು ಅಣ್ಣನ ಕೈ ಹಿಡಿದು ಅಳುತ್ತಾನೆ. ತುಂಬ ನೋವಾ
ಎಂದು ದುರುವಿನ ತಲೆಯಲ್ಲಿ ಕೈಯಿಟ್ಟು ಬೆರಳಾಡಿಸುವ
ಯುಧಿಯನ್ನು ಪ್ರೀತಿ ತುಂಬಿದ ಕಣ್ಣಲ್ಲಿ ನೋಡುತ್ತಾಳೆ
ದೊಡ್ಡಮ್ಮ, ಅಂಜಂಜುತ್ತಾ ಭೀಮನೂ ಬಂದು, "ದುರೂ ನಾಳೆ
ನೀನು ನೂಕು. ನಾನು ಬೀಳುತ್ತೇನೆ ಮರದಿಂದ" ಅನ್ನಲು ಮತ್ತೆ
ದುರು ಅಳುತ್ತಾನೆ–ಬೇಡಣ್ಣ ತೊಡೆ ಮುರಿದರೆ ವಿಪರೀತ ನೋಯತ್ತೆ.
ನೀವು ಯಾವತ್ತೂ ಹೀಗೇ ಇರಿ ಮಕ್ಕಳೆ, ಅಲವತ್ತುಕೊಳ್ಳುತ್ತಾಳೆ
ಕಣ್ಣೊರೆಸುತ್ತಾ ಕುಂತಿ. ಸರಿ. ಆದರೆ ಆದದ್ದಾದರೂ ಏನು ಆಮೇಲೆ?

(ಪುಟ 43, 'ಕನ್ನಡಿಯ ಸೂರ್ಯ' – ಎಚ್ಎಸ್ವಿ ಹೊಸ ಕವಿತೆಗಳು; ಆನಂದಕಂದ ಗ್ರಂಥಮಾಲೆ, ಮಲ್ಲಾಡಿಹಳ್ಳಿ, 2011)

ಆಲೋಚಿಸಿದರೆ "ಹಾಗಾಗದಿದ್ದರೆ ಚೆನ್ನಾಗಿತ್ತು" ಎಂದು ನಮಗೆ ಅನ್ನಿಸುವುದು ಸಹಜ. ಇಂಥ ಆಲೋಚನೆಯು ಕವಿಗಳಿಗೆ ಬರದೆ ಇರುತ್ತದೆಯೇ? ಹಾಗೆ ಹುಟ್ಟಿದ್ದು ಎಚ್‌ಎಸ್‌ವಿಯವರ ಈ ಕವನ 'ಮಕ್ಕಳಿರಲಮ್ಮ ಮಕ್ಕಳಾಗಿ...' ಕವನ ಸುಲಭಗ್ರಾಹ್ಯವಾಗಿದೆ.

ಈ ಕವನವನ್ನು ಓದಿದಾಗ ದುರು ಹಾಗೂ ಯುಧಿ ನಮ್ಮ ಹತ್ತಿರದ ಮಕ್ಕಳು ಎಂಬ ಆಪ್ತತೆಯು ನಮಗೆ ಅರಿವಾಗದಂತೆ ಮೂಡಿಬಿಡುತ್ತದೆ. ಕವನದ ಘಟನೆಯು ಮಕ್ಕಳ ಆಟದಲ್ಲಿ ಸಾಮಾನ್ಯವಾಗಿ ನಡೆಯುವ ಘಟನೆ. ಇದನ್ನು ಕುರಿತು ದೊಡ್ಡಮ್ಮ (ಆಕೆಯ ಹೆಸರು ಕವನದಲ್ಲಿ ಬರುವುದಿಲ್ಲ) ಮತ್ತು ಕುಂತಿ ಇಬ್ಬರಲ್ಲಿ ಪರಸ್ಪರ ದೂಷಣೆಯ ಸಣ್ಣ ಸುಳಿವೂ ಕವನದಲ್ಲಿ ದೊರೆಯುವುದಿಲ್ಲ.

ದೊಡ್ಡಮ್ಮ, ಕುಂತಿಯ ಮಗ ಯುಧಿಯನ್ನು ಕೈಚಾಚಿ, ಅಂದರೆ ಅಪ್ಪಿಕೊಂಡು ಹೇಳುವ ಮಾತುಗಳು "ನೀನ್ಯಾಕೋ ಅಳುತ್ತೀ? ಇನ್ನು ಮೇಲೆ ಜಗಳವಾಡಬೇಡಿ. ತಿಳಿಯಿತಾ?" ಅವಳಿಗೆ ಮಕ್ಕಳಲ್ಲಿ ಏನೋ ನಡೆದಿದೆ ಎಂದು ಗೊತ್ತು. ಅದರ ಫಲವನ್ನು ಅನುಭವಿಸುತ್ತಿರುವವನು ಅವಳ ಮಗ ದುರು. ಆದರೂ ಮಕ್ಕಳಿಗೆ ಒಗ್ಗಟ್ಟಿನ ಮಂತ್ರವನ್ನು ಸಮಾಧಾನದಿಂದ ಹೇಳುತ್ತಾಳೆ. ಪ್ರೀತಿ ತುಂಬಿದ ಕಣ್ಣುಗಳಲ್ಲಿ ಅಳುತ್ತಿರುವ ಯುಧಿಯನ್ನು ನೋಡುತ್ತಾಳೆ.

ಕುಂತಿಯೂ ಅಷ್ಟೇ. ದುರು ಅಳುತ್ತಾ "ಬೇಡಣ್ಣಾ, ತೊಡೆ ಮುರಿದರೆ ವಿಪರೀತ ನೋಯುತ್ತೆ" ಎಂದಾಗ ಅವನ ಕಣ್ಣ ನೀರನ್ನು ಒರೆಸುತ್ತಾಳೆ. ಜೊತೆಗೆ "ನೀವು ಯಾವತ್ತೂ ಹೀಗೆ ಹೊಂದಿಕೊಂಡು ಇರಿ" ಎಂಬ ಆಸೆಯನ್ನು ವ್ಯಕ್ತಪಡಿಸುತ್ತಾಳೆ. ಅವರಿಬ್ಬರ ಮಾತುಗಳು ದಾಯಾದಿತನವನ್ನು ಹತ್ತಿರ ಬರದಂತೆ ತಡೆಯುವ ಪ್ರಯತ್ನಗಳಾಗಿ ತೋರುತ್ತವೆ.

ನೂರೈದು ಮಕ್ಕಳು ಆಟವಾಡುತ್ತಿದ್ದರೂ ಕವನದಲ್ಲಿ ಬರುವುದು ಮೂವರು ದುರು, ಯುಧಿ ಹಾಗೂ ಭೀಮ. ಸಾಮಾನ್ಯವಾಗಿ ಆಟವಾಡುವಾಗ ಯಾರಿಗಾದರೂ ಗಾಯವಾದರೆ ಮಕ್ಕಳೆಲ್ಲರಿಗೂ ಆತಂಕ. ಏಟು ತಿಂದ ಮಗು ಅಳುತ್ತದೆ; ಇಲ್ಲಿ ದುರು ಅಳುತ್ತಾನೆ. ಸ್ವಲ್ಪ ಭಾವಕನಾದ ಮತ್ತೊಂದು ಮಗುವು ಅನುಭೂತಿಯಿಂದ (ಎಂಪತಿ) ಜೊತೆಗೆ ಅಳುತ್ತದೆ; ಇಲ್ಲಿ ಯುಧಿ. ಏಟು ಬೀಳಲು ಕಾರಣವಾದ ಮಗುವು 'ಏನಾಗಿಹೋಯಿತೋ' ಎಂದು ಅಂಜಿಕೆಯಿಂದ ಹಿಂದೆ ಬರುತ್ತದೆ; ಇಲ್ಲಿ ಭೀಮ.

ಈ ಕವನದಲ್ಲಿ ನಡೆದಿರುವ ಘಟನೆಯ ನಿರೂಪಣೆಗೆ ಕವಿ ಫ್ಲಾಶ್‌ಬ್ಯಾಕ್ ತಂತ್ರವನ್ನು ಬಳಸಿದ್ದಾರೆ. ಮೊದಲು ತಿಳಿಯುವುದು ದುರುವಿಗೆ ಕಾಲು ಮುರಿದಿದೆ ಎಂದು. ಯಾಕೆ, ಹೇಗೆ ಎನ್ನುವುದು ಅಲ್ಲಿ ಇಲ್ಲ. ಅನಂತರ 'ಭೀಮನ ಜೊತೆ ಆಡಬೇಡಿ' ಎಂದು ಅಳುತ್ತ ದುರು ಹೇಳುವಾಗ, ಕಾಲು ಮುರಿತಕ್ಕೆ ಕಾರಣ ಭೀಮ ಎಂದು ಹೊಳೆಯುತ್ತದೆ. 'ನಾಳೆ ನೀನು ನೂಕು, ಮರದಿಂದ ನಾನು ಬೀಳುತ್ತೇನೆ' ಎಂದಾಗ ನಡೆದಿರುವ ಘಟನೆಯ ಚಿತ್ರಣ ಸಂಪೂರ್ಣವಾಗುತ್ತದೆ.

ವಾರಗಿತ್ತಿಯರಲ್ಲಿ ಪರಸ್ಪರ ಪ್ರೀತಿ, ಅಣ್ಣ ತಮ್ಮಂದಿರಲ್ಲಿ ಮತ್ತೊಬ್ಬರಿಗೆ ನೋವಾದರೆ ಮರುಗುವ ಭಾವ ಎಲ್ಲವೂ ಇತ್ತು. ಕೌರವ ಪಾಂಡವರ ಶೈಶವದಲ್ಲಿ ಆಡಿದ ಆಟದ ಚಿತ್ರ ಕವನದಲ್ಲಿ ಬಹಳ ಧ್ವನಿಪೂರ್ಣವಾಗಿ ವ್ಯಕ್ತವಾಗಿದೆ. ಆದರೆ ಮಕ್ಕಳು ಬೆಳೆಯುತ್ತಾ ಮಹಾಭಾರತವೇ ನಡೆದುಹೋಯಿತು. ಅದರ ಕೊನೆಗೆ ದುರ್ಯೋಧನನ ತೊಡೆ ಮುರಿಯುವ ಕತೆಗೆ ಇದು ಹಿನ್ನೆಲೆಯಾಗಿ ಕವನದಲ್ಲಿ ವ್ಯಕ್ತವಾಗಿದೆ.

ಇಷ್ಟಂತೂ ನಿಜ; ಅಣ್ಣತಮ್ಮಂದಿರು ಬೆಳೆದು ದಾಯಾದಿಗಳಾದಾಗ ಮಹಾಭಾರತದ ಯುದ್ಧ ನಡೆದುಹೋಯಿತು. ಹಾಗಾಗಬಾರದಿತ್ತು ಎಂಬ ಭಾವನೆಯಲ್ಲಿ ಈ ಕವನವೂ ಬಂತು. ಅದರೆ ಎಷ್ಟು ಮಾರ್ಮಿಕವಾಗಿ ಯುದ್ಧ ಮಾಡದೆ, ತೊಡೆಯನ್ನು ಮುರಿಸಿಕೊಳ್ಳದೆ, ಪರಸ್ಪರ ಪ್ರೀತಿ, ವಿಶ್ವಾಸ, ಸಹಾನುಭೂತಿಗಳನ್ನು ಬೆಳೆಸಿಕೊಂಡು ಶಾಂತಿಯಿಂದ ಸಹಬಾಳ್ವೆ ನಡೆಸುವುದು ನಮ್ಮ ಮನೋಧರ್ಮವನ್ನು ಅವಲಂಬಿಸಿದೆ ಎಂದು ಕವಿತೆ ಸಾರಿ ಹೇಳುತ್ತದೆ.


ಇದನ್ನು ಅರಿತು ಮಕ್ಕಳಾಗೇ ಇರುವುದನ್ನು ನಾವು ಅಭ್ಯಾಸ ಮಾಡಿಕೊಳ್ಳೋಣ. ***

(ಈ ಲೇಖನವು 28.06.2025ರ ವಿಜಯ ಕರ್ನಾಟಕ ಪತ್ರಿಕೆಯ 'ಬೋಧಿವೃಕ್ಷ' ಪುರವಣಿಯಲ್ಲಿ ಪ್ರಕಟವಾಗಿದೆ)

ಪಂಪನ ವಿಕ್ರಮಾರ್ಜುನ ವಿಜಯ

ತಿಳಿಗನ್ನಡ ಅವತರಣ (ಮಕ್ಕಳಿಗಾಗಿ ಪಂಪ)

– ಗಣಪತಿ ಹೆಗಡೆ



'ಎಚ್ಚೆಸ್ವಿ' ಎನ್ನುವ ಮೂರಕ್ಷರದಿಂದ, ಸಾಹಿತ್ಯ ವಲಯದಲ್ಲಿ ವಿಜೃಂಭಿಸಿದ 'ಹೊದಿಗೆರೆ ಶ್ರೀನಿವಾಸ ವೆಂಕಟೇಶ್ವರ ಮೂರ್ತಿಯವರು' ಶಿವಮೊಗ್ಗದ ಚನ್ನಗಿರಿ–ಹೊದಿಗೆರೆಯಲ್ಲಿ ೨೩ ಜೂನ್ ೧೯೪೪ರಂದು ಜನಿಸಿದವರು.

ಪ್ರವಾಸ ಸಾಹಿತ್ಯ, ಪುರಾಣ ಸಾಹಿತ್ಯ, ಅನುವಾದ ಸಾಹಿತ್ಯ, ವಿಮರ್ಶಾ ಸಾಹಿತ್ಯ, ಸ್ತ್ರೀ ಸಾಹಿತ್ಯ, ಬಂಡಾಯ ಸಾಹಿತ್ಯ, ದಲಿತ ಸಾಹಿತ್ಯ ಹೀಗೆ ಮುಂತಾಗಿ ಸಾಹಿತ್ಯವನ್ನು ವಿಂಗಡಿಸುತ್ತಾರೆ. ಇವೆಲ್ಲಾ ಸಾಹಿತಿಗಳ ಜೀವನಾನುಭವದಿಂದ ಹೊರಹೊಮ್ಮಿದ ಭಾವತರಂಗಗಳನ್ನು ಕ್ರೋಢೀಕರಿಸಿದಾಗ ಸಂಭವಿಸುವ ಕೃತಿಗಳು. ಇವು ಎಲ್ಲರಿಗೂ ಸಮಾನವಾಗಿ ಸಹ್ಯವಾಗಬೇಕೆಂದೇನೂ ಇಲ್ಲ. ಆದರೆ ಸಮಾನ ಮನಸ್ಕರನ್ನು ತಲುಪುತ್ತವೆ.

ಆದರೆ ಮಕ್ಕಳ ಸಾಹಿತ್ಯ ಇದೆಯಲ್ಲ, ಇದು ಕೇವಲ ಜೀವನಾನುಭವ ಹಾಗೂ ಅಧ್ಯಯನದಿಂದ ಸಿದ್ಧಿಸುವುದಲ್ಲ. ಶೈಶವವನ್ನು ದಾಟಿ ಪ್ರೌಢನಾಗಿ ಸ್ವಾನುಭವವನ್ನು ಹಂಚುವಾಗ, ಮಕ್ಕಳ ಮನಸ್ಸಿನೊಳಗೆ ಪರಕಾಯ ಪ್ರವೇಶ ಮಾಡಿ, ಅವರಿಗೆ ಸಮಾಧಾನ ಹಾಗೂ ಆನಂದ ಉಂಟು ಮಾಡುವ ಹಾಗೆ ಬರೆಯುವದಿದೆಯಲ್ಲ ಇದು ಕೆಲವೇ ಕೆಲವರಿಗೆ, 'ಎಚ್ಚೆಸ್ವಿ' ಅಂಥವರಿಗೆ ಮಾತ್ರ ಸಾಧ್ಯ.

'ಮಕ್ಕಳ ಚಿತ್ರ' ಅಂತ ಗುರುತಿಸಿಕೊಂಡ 'ಚಿನ್ನಾರಿ ಮುತ್ತದ' ಯಶಸ್ಸಿಗೆ, ಸಿನೆಮಾಕ್ಕೆ ಬಳಸಿಕೊಂಡ "ಮಣ್ಣಲ್ಲಿ ಬಿದ್ದೋನು, ರೆಕ್ಕೆ ಇದ್ದರೆ ಸಾಕೆ, ಹೇಗಿದ್ದ ಹೇಗಾದ" ಮುಂತಾದ ಪದ್ಯಗಳು ಹಾಗೂ ಹಾಡಿದ ಗಾಯಕರೇ ಮೂಲ ಕಾರಣ ಎನ್ನುವುದನ್ನು ಯಾರೂ ಅಲ್ಲಗಳೆಯಲಿಕ್ಕಿಲ್ಲ. ಹೌದು. ಎಚ್ಚೆಸ್ವಿಯವರನ್ನು ಬಿಟ್ಟು ಈ ಮಕ್ಕಳ ಸಿನೇಮಾವನ್ನು ಊಹಿಸಿಕೊಳ್ಳುವುದು ಸಾಧ್ಯವಿಲ್ಲ.

ಸಾಹಿತಿ ಪಂಡಿತನಾದಷ್ಟೂ ಅವನಿಂದ ರಚಿತವಾದ ಕಾವ್ಯ ಪಾಮರರ ಕಡೆ ವಾಲುವುದು ಕಷ್ಟ ಎನ್ನುತ್ತಾರೆ. ಆದರೆ ಎಚ್ಚೆಸ್ವಿಯವರ ಆಪ್ತಗೀತೆ, ಅನಾತ್ಮಕಥನ, ಕುಮಾರವ್ಯಾಸ ಕಥಾಂತರ, ಉತ್ತರಾಯಣ, ಬುದ್ಧಚರಿತ, ಋತು ವಿಲಾಸ ಮುಂತಾದ ಪ್ರೌಢ ಕಾವ್ಯಗಳನ್ನು ಗಮನಿಸಿದವರಿಗೆ ಈ ಕವಿ ಮಕ್ಕಳ ಮನಸ್ಸನ್ನು ಹೇಗೆ ಪ್ರವೇಶಿಸಬಹುದು ಅಂತ ಅನಿಸದೇ ಇರದು.

ಆದಿಕವಿ ಪಂಪನ 'ವಿಕ್ರಮಾರ್ಜುನ ವಿಜಯ'ವನ್ನು ಅರಗಿಸಿಕೊಳ್ಳುವುದು ಸಾಹಿತ್ಯವನ್ನು ಅರಗಿಸಿಕೊಂಡ ಎಂಟೆದೆಯ ಬಂಟರಿಗೇ ಕಷ್ಟಸಾಧ್ಯ. ಆದರೆ ಈ ಕೃತಿಯನ್ನು ಕನ್ನಡ ನಾಡಿನ ಮಕ್ಕಳಿಗೆ ತಲುಪಿಸುವ ಮನಸ್ಸು ಮಾಡಿದ್ದು ಎಚ್ಚೆಸ್ವಿಯವರಿಗೆ ಮಕ್ಕಳ ಮೇಲಿನ ಮಮತೆಯನ್ನು ತೋರಿಸುತ್ತದೆ. ಇದಕ್ಕೆ ಆರಿಸಿಕೊಂಡ ದಾರಿ ಪಂಪ ಭಾರತದ ಕೇವಲ ಸರಳ ಕನ್ನಡಾನುವಾದ ಅಲ್ಲ. ಎಚ್ಚೆಸ್ವಿ ಅವರೇ ಹೇಳುವ ಹಾಗೆ 'ತಿಳಿಗನ್ನಡ ಅವತರಣ'.

ಮೂಲ ಕಾವ್ಯವನ್ನು ಹೇಗೆ ಅವತರಣ ಮಾಡಿದ್ದಾರೆ ಅಂತ ಈ ಕೆಳಗಿನ ಉದಾಹರಣೆಗಳಿಂದ ತಿಳಿಯಬಹುದು.

ಪಂಪ:

ಶ್ರೀಯನರಾತಿ ಸಾಧನ ಪಯೋನಿಧಿಯೊಳ್ ಪಡೆದುಂ ಧರಿತ್ರಿಯಂ। ಜೀಯೆನೆ ಬೇಡಿಕೊಳ್ಳದೆ ವಿರೋಧಿ ನರೇಂದ್ರರನೊತ್ತಿಕೊಂಡುಮಾ। ತ್ರೀಯ ಸುಪುಷ್ಪಪಟ್ಟಮನೊಡಂಬಡೆ ತಾಳ್ದಿಯುಮಿಂತುದಾತ್ತ ನಾ। ರಾಯಣನಾದ ದೇವನೆಮಗೀಗರಿಕೇಸರಿ ಸೌಖ್ಯಕೋಟಿಯಂ ॥೧॥

ಎಚ್ಚೆಸ್ವಿ:

ಶ್ರೀಯನ್ನು ಶತ್ರುಸೇನೆಯೆಂಬ ಪಯೋನಿಧಿಯಲ್ಲಿ ಪಡೆದೂ ಧರಿತ್ರಿಯನ್ನು।
ಜೀಯಾ ಎಂದು ಬೇಡಿಕೊಳ್ಳದೆ ವಿರೋಧಿ ನರೇಂದ್ರರನ್ನೊತ್ತಿ ಕೊಂಡೂ ಆ ।
ತ್ರೀಯ 'ಸುಪುಷ್ಪಪಟ್ಟ'ವನು ಒಡಂಬಡೆ ತಾಳಿಯೂ, ತಾನು ಉದಾತ್ತ ನಾ।
ರಾಯಣನಾದ ದೇವ ಅರಿಕೇಸರಿಯು ನಮಗೆ ಸೌಖ್ಯ ಕೋಟಿಯನ್ನೀಯಲಿ॥

ಪಂಪ:

ಬಗೆ ಪೊಸತು ಅಪ್ಪುದಾಗಿ ಮೃದುಬಂಧದೊ ಳೊಂದುವುದೊಂದಿ ದೇಸಿಯೊಳ್। ಪುಗುವುದು ಪೊಕ್ಕ ಮಾರ್ಗದೊಳೆ ತಳ್ವುದು ತಳ್ತೊಡೆ ಕಾವ್ಯಬಂಧಮೊ॥ ಪ್ಪುಗುಮೆಳಮಾವು ಕೆಂದಳಿರ ಪೂವಿನ ಬಿಣ್ಪೊರೆಯಿಂ ಬಟಲ್ದು ತುಂ। ಬಿಗಳಿನೆ ತುಂಬಿ ಕೋಗಿಲೆಯ ಬಗ್ಗಿಸೆ ಸುಗ್ಗಿಯೊಳೊಪ್ಪುವಂತೆವೋಲ್॥

ಎಚ್ಚೆಸ್ವಿ:

ಬಗೆ ಹೊಸದಾಗೆ ಮೃದು ಬಂಧ ಹೊಂದುವುದು ಹೊಂದಿ ದೇಸಿಯನು।
ಹೊಗುವುದು ಹೊಕ್ಕು ಮಾರ್ಗದಲ್ಲಿ ತಳ್ವುದು ತಳ್ತಾಗ ಕಾವ್ಯ ಬಂಧವು।
ಒಪ್ಪುವುದು ಮಾಮರವು, ಕೆಂದಿರಿಳಿನ, ಹೂವಿನ ಭಾರದಿಂದ ಬಳಲಿ, ತುಂ।
ಬಿಯಿಂದ ತುಂಬಿ, ಕೋಗಿಲೆಗಳು ಬಗ್ಗಿಸಲು, ಸುಗ್ಗಿಯಲ್ಲೊಪ್ಪುವ ಹಾಗೆ॥

ಪಂಪ:

ಕಟ್ಟಿದ ಪಟ್ಟಮೆ ಸರವಿಗೆ।
ನೆಟ್ಟನೆ ದೊರೆ ಪಿಡಿದ ಬಿಲ್ಲೆ ದಂಟಿಂಗೆಣೆ ಕ॥
ಣ್ಗೆಟ್ಟ ಮುದುಪಂಗೆ ಪಗೆವರ।
ನಿಟ್ಟೆಲ್ವಂ ಮುಱಿವೊಡೆನಗೆ ಪಟ್ಟಂಗಟ್ಟಾ॥

ಎಚ್ಚೆಸ್ವಿ:

ಕಟ್ಟುವುದೆಂದರೆ ಇವರಿಗೆ ಪಟ್ಟ ಬಿದುರಿನಟ್ಟ ಕಟ್ಟಿದ ಹಾಗೆ!।
ಇನ್ನಿವರ ಬಿಲ್ಲೋ ಬರೀ ಲಡ್ಡು! ಜೋಳದ ದಂಟಿನ ಹಾಗೆ।
ಕಂಗೆಟ್ಟ ಮುದಿಯಗೆ ಪಟ್ಟಗಟ್ಟಿದರೆ ಸಾಧಿತವಾದೀತೆ ಗೆಲುವು?।
ಹಗೆಗಳ ನಿಟ್ಟೆಲುವ ಮುರಿಯ ಬೇಕೇ ನನಗೆ ಪಟ್ಟವ ಕಟ್ಟು!॥

ಪಂಪ:

ಕತೆ ಪಿರಿದಾದೊಡಂ ಕತೆಯ ಮೆಯ್ಗಿಡಲೀಯದೆ ಮುಂ ಸಮಸ್ತ ಭಾ। ರತಮನಪೂರ್ವಮಾಗೆ ಸಲೆ ಪೇಟ್ದ ಕವೀಶ್ವರರಿಲ್ಲ ವರ್ಣಕಂ॥ ಕತೆಯೊಳೊಡಂಬಡಂ ಪಡೆಯೆ ಪೇಟ್ವೊಡೆ ಪಂಪನೆ ಪೇಟ್ಗುಮೆಂದು ಪಂ। ಡಿತರೆ ತಗುಳ್ದು ಬಿಚ್ಚಟಿಸೆ ಪೇಟಲೊಡರ್ಚಿದೆನೀ ಪ್ರಬಂಧಮಂ॥

ಎಚ್ಚೆಸ್ವಿ:
ಕತೆಯು ಪಿರಿದಾದರೂ ಅದರ ಮೈಗೆಡದಂತೆ, ಈ ಮುನ್ನ ಸಮಸ್ತ ಭಾ।
ರತವ ಅಪೂರ್ವವಾಗಿ ಹೇಳ್ದ ಯಾವ ಕವೀಶ್ವರನೂ ಇಲ್ಲ, ವರ್ಣಕವು।
ಕತೆಯಲ್ಲಿ ಒಡಂಬಡುವಂತೆ ಹೇಳಿದರೆ ಪಂಪನೇ ಹೇಳಬೇಕೆಂದು ಪಂ।
ಡಿತರೇ ಬಹಳ ಒತ್ತಾಯಿಸಲು, ಹೇಳಲು ತೊಡಗಿದೆನೀ ಪ್ರಬಂಧವನ್ನು॥

ಪಂಪ:
ವ್ಯಾಸಮುನೀಂದ್ರ ರುಂದ್ರ ವಚನಾಮೃತವಾರ್ಯನಿಸುವೆಂ ಕವಿ। ವ್ಯಾಸನೆನೆಂಬ ಗರ್ವಮೆನಗಿಲ್ಲ ಗುಣಾರ್ಣವನೊಳ್ಪು ಮನ್ಮನೋ। ವಾಸಮನೆಯ್ದೆ ಪೇಳ್ದಪೆನದಲ್ಲದೆ ಗರ್ವಮೆ ದೋಷಮಳ್ತಿಗಂ। ದೋಷಮೆ ಕಾಣೆನೆನ್ನವ ಮಾಳ್ಕೆಯ ಪೇಳ್ವೆನಿದಾವ ದೋಷಮೋ।।

ಎಚ್ಚೆಸ್ವಿ:
ವ್ಯಾಸಮುನೀಂದ್ರ ರುಂದ್ರ ವಚನಾಮೃತ ವಾರ್ಧಿಯನು ಈಜುವೆ ಕವಿ।
ವ್ಯಾಸನೆ ನಾನು ಎಂಬ ಗರ್ವ ನನಗಿಲ್ಲ ಗುಣಾರ್ಣವನೊಳ್ಳೆತನ ಮನೋ॥
ವಾಸವ ಐದಲು ನುಡಿವೆನು. ಗರ್ವವು ದೋಷ. ಪ್ರೀತಿಗೆ ದೋಷವೇ?।
ಕಾಣೆನು. ಬಲ್ಲಷ್ಟನ್ನು ಬಲ್ಲಂತೆ ಹೇಳುವೆನು. ಇದರಲ್ಲೇನು ದೋಷ?.॥

ಪಂಪ:
ಬಂದು ಸುರನದಿಯ ನೀರೊ। ಳ್ಮಿಂದಿನನಂ ನೋಡಿ ನಿನ್ನ ದೊರೆಯನೆ ಮಗನ। ಕ್ಕೆಂದಾಹ್ವಾನಂಗೆಯ್ಯಲೊ। ಡಂ ದಲ್ ಧರೆಗಿೞಿದನಂದು ದಶಶತಕಿರಣಂ।।

ಎಚ್ಚೆಸ್ವಿ:
ಬಂದು ಸುರನದೀ ಜಲದಲಿ।
ಮಿಂದು ಸೂರ್ಯನ ನೋಡಿ ನಿನ್ನಂಥ ಮಗನೇ ಆಗ॥
ಲೆಂದು ಕರೆಯಲು ಕೂಡಲೆ।
ಬಂದನಾಗಸದಿಂದ ಧರೆಗೆ ದಶಶತಕಿರಣನಾಗ॥

ಪಂಪ:
ವಚನ।। ಅಂತು ನಭೋಭಾಗದಿಂ ಭೂಮಿಭಾಗಕ್ಕಿೞಿದು ತನ್ನ ಮುಂದೆ ನಿಂದರವಿಂದ ಬಾಂಧವನಂ ನೋಡಿ ನೋಡಿ–

ಎಚ್ಚೆಸ್ವಿ:
ವಚನ: ಹಾಗೆ ನಭೋಮಂಡಲದಿಂದ ಭೂಭಾಗಕ್ಕಿಳಿದು ತನ್ನ ಮುಂದೆ ನಿಂತ ಅರವಿಂದ ಬಾಂಧವನ ನೋಡಿ ನೋಡಿ

ಎಚ್ಚೆಸ್ವಿಯವರ 'ಆಪ್ತಗೀತೆ' ಸಂಸ್ಕೃತ ಮೂಲದ ಭಗವದ್ಗೀತೆಯ ಅವತರಣ. ಇಲ್ಲಿಯ ಅನುವಾದ ಅಂದರೆ ಭಾಷಾಂತರದ ಹಾಗೆ. ಆದರೆ ವಿಕ್ರಮಾರ್ಜುನ ವಿಜಯದ ಕನ್ನಡೀಕರಣ ಒಂದು ಹೊಸ ಕಲ್ಪನೆ. ಇದು ಭಾಷಾಂತರವಲ್ಲ. ಹಳಗನ್ನಡ ಕಾವ್ಯದ ಸರಳ ಭಾವಾನುವಾದವೂ ಅಲ್ಲ. ತಿಳಿಗನ್ನಡದಲ್ಲಿ, ಹಳಗನ್ನಡದ ಕಾವ್ಯವನ್ನು ಸರಿಸುಮಾರು ಯಥಾವತ್ತಾಗಿ ಇಳಿಸಿ ಹಳೆಯ ಕಾವ್ಯದ ಕಲ್ಪನೆಯನ್ನು ಮಕ್ಕಳಿಗೆ ತಿಳಿಸುವ ನವೀನ ಪ್ರಯತ್ನ. ಇದರಲ್ಲಿ ಎಚ್ಚೆಸ್ವಿಯವರು ಗೆಲುವನ್ನು ಸಾಧಿಸಿದ್ದಾರೆ.

ಎಚ್ಚೆಸ್ವಿಯವರ ಈ 'ತಿಳಿಗನ್ನಡ ಅವತರಣ' ಚಿಕ್ಕಮಕ್ಕಳಿಗೆ ಮಾತ್ರವಲ್ಲ, ನಮ್ಮಂತಹ, ಹಳಗನ್ನಡದ ಪಂಪಭಾರತವನ್ನು ಅರಗಿಸಿಕೊಳ್ಳಲು ತಿಣುಕಾಡುವ 'ಪ್ರೌಢ ಮಕ್ಕಳಿಗೂ' ಸಹಾಯಕಾರಿ. ಇಂತಹ ಕಾವ್ಯವನ್ನು ಕನ್ನಡಿಗರಿಗೆ ಕಟ್ಟಿಕೊಟ್ಟ ಎಚ್ಚೆಸ್ವಿಯವರು ಕನ್ನಡ ಸಾಹಿತ್ಯ ಲೋಕದಲ್ಲಿ ಶಾಶ್ವತ ಸ್ಥಾನ ಪಡೆದವರು.

***

ಡಾ.ಎಚ್ಚೆಸ್ವಿಯವರಿಂದ 'ಪಲ್ಲಟ' ಕಾದಂಬರಿ ಮುಖಪುಟ ಬಿಡುಗಡೆ







ಚಿತ್ರದಲ್ಲಿ ಶ್ರೀ ಎಚ್.ಎಸ್.ವೆಂಕಟೇಶ ಮೂರ್ತಿಯವರೊಂದಿಗೆ:
ಹೆಚ್.ಎಲ್: ಗುರುಪ್ರಸಾದ್, ಪರಶಿವಪ್ಪ, ಶ್ರೀಮತಿ ಶಾಂತಿ ವಾಸು, ಕೆ.ಎನ್. ಮಹಾಬಲ, ಜಿ.ವಿ. ಅರುಣ, ಗುರುರಾಜ ಶಾಸ್ತ್ರಿ, ಬೆಂ.ಶ್ರೀ.ರವೀಂದ್ರ

ಎಚ್ಚೆಸ್ವಿ ರಚಿಸಿದ ಚಲನಚಿತ್ರ ಗೀತೆಗಳು

– ಕೆ.ಆರ್.ವೆಂಕಟೇಶ್ (ಮನೋಹಂಸ)

ಎಚ್ಚೆಸ್ವಿಯವರು ಸಾಹಿತ್ಯದ ನಾನಾ ಪ್ರಕಾರಗಳಲ್ಲಿ ಕೃಷಿ ಮಾಡಿರುವ ಹಿನ್ನೆಲೆಯಲ್ಲಿ ಚಲನಚಿತ್ರ ಗೀತೆಗಳ ಸಾಹಿತ್ಯವೂ ಒಂದು ಪ್ರಮುಖ ಭಾಗವಾಗಿದೆ.

ಈ ವಿಷಯ ಕುರಿತಂತೆ ಇಂದಿನ ನನ್ನ ಪ್ರಸ್ತುತಿಯನ್ನು ವಾಚನ ಮಾಡುವಾಗ ಅಲ್ಲಲ್ಲಿ ಕೆಲವು ಹಾಡುಗಳ ಎರಡು ಸಾಲನ್ನು ಸಂಗೀತದೊಂದಿಗೆ ಗುನುಗಲು ಬಯಸುತ್ತೇನೆ. ಏಕೆಂದರೆ ಸಂಗೀತದ ಮೆರುಗಿಲ್ಲದೆ ಸಾಹಿತ್ಯವನ್ನು ಹೆಚ್ಚು ಆಸ್ವಾದಿಸಲಾಗದು.

ಮೊದಲನೆಯದಾಗಿ

ಮಣ್ಣಲ್ಲಿ ಬಿದ್ದನು, ಮುಗಿಲಲ್ಲಿ ಎದ್ದನು
ಕತ್ಲಲ್ಲಿ ಇದ್ದನು ಬಂಗಾರ ಗೆದ್ದನು
ಹೇಗಿದ್ದ ಹೇಗಾದ ಗೊತ್ತಾ
ನಮ್ಮ ಚಿನ್ನಾರಿಮುತ್ತ

ಹೌದು. ೧೯೯೩ರಲ್ಲಿ ತೆರೆಕಂಡ ಚಿನ್ನಾರಿ ಮುತ್ತ ಚಲನಚಿತ್ರದ ಈ ಪ್ರಸಿದ್ಧ ಗೀತೆ ಯಾವ ಕನ್ನಡಿಗನಿಗೆ ಗೊತ್ತಿಲ್ಲ? ಇದು ಈ ಚಲನಚಿತ್ರದ ಶೀರ್ಷಿಕೆ ಗೀತೆ ಕೂಡಾ. ಎಷ್ಟು ಅರ್ಥಪೂರ್ಣವಾಗಿದೆ. ಈ ಹಾಡು ಹೇಗೆ ಸೃಷ್ಟಿಯಾಯಿತು ಎಂದು ಎಚ್ಚೆಸ್ವಿಯವರು ತಮ್ಮ ಮಾತುಗಳಲ್ಲೇ ಸಂದರ್ಶನವೊಂದರಲ್ಲಿ ಹೇಳಿದ್ದಾರೆ. ಚಿತ್ರ ನಿರ್ದೇಶಕ ಟಿ.ಎಸ್.ನಾಗಾಭರಣ ಹಾಗೂ ಸಂಗೀತ ನಿರ್ದೇಶಕ ಸಿ.ಅಶ್ವತ್ಥ್ ಎಚ್ಚೆಸ್ವಿಯವರ ಮನೆಗೆ ಬಂದು ನಮಗೆ ಒಂದು ಮಕ್ಕಳ ಚಿತ್ರಕ್ಕೆ ಚಿತ್ರಕಥೆ, ಸಂಭಾಷಣೆ ಹಾಗೂ ಹಾಡುಗಳನ್ನು ಎರಡು ವಾರದಲ್ಲಿ ಬರೆದುಕೊಡಿ ಎಂದಾಗ ಎಚ್ಚೆಸ್ವಿಯವರು ಅದು ಸಾಧ್ಯವಾಗದ ಮಾತು, ಒಂದು ತಿಂಗಳಾದರೂ ಬೇಕು ಎಂದರು. ಅವರು ಒಪ್ಪಿದರು. ಆದರೆ ಮೂರು ವಾರವಾದರೂ ಏನೂ ಹೊಳೆಯದೆ ನಂತರ ಇದ್ದಕ್ಕಿದ್ದಂತೆ ಒಂದು ರಾತ್ರಿ ತಮ್ಮ ಬಾಲ್ಯ ನೆನಪಾಗಿ ಇಡೀ ರಾತ್ರಿ ಕೂತು ಚಿತ್ರಕಥೆ, ಸಂಭಾಷಣೆ ಹಾಗೂ ಹಾಡುಗಳನ್ನು ಬೆಳಗಿನ ಜಾವದ ಹೊತ್ತಿಗೆ ಬರೆದು ಮುಗಿಸಿದರು.

“ಚಿನ್ನಾರಿ ಮುತ್ತ” ಚಲನಚಿತ್ರಕ್ಕೆ ಎಚ್ಚೆಸ್ವಿ ಒಟ್ಟು ೧೧ ಹಾಡುಗಳನ್ನು ಬರೆದಿದ್ದಾರೆ. ಒಂದಕ್ಕಿಂತ ಒಂದು ಸುಂದರವಾಗಿ ಸಂದರ್ಭಗಳಿಗನುಗುಣವಾಗಿ ಹೊರಹೊಮ್ಮಿವೆ. ಸರಳ ಸಾಹಿತ್ಯ ಸುಂದರ ಹಾಗೂ ಪೂರಕ.

೧೧ ಹಾಡುಗಳಲ್ಲಿ ಶೀರ್ಷಿಕೆ ಗೀತೆಯ ಜೊತೆಗೆ ಇನ್ನೆರಡು ಹಾಡುಗಳು ಪ್ರಸಿದ್ಧವಾಗಿವೆ. ಅವು –

“ರೆಕ್ಕೆ ಇದ್ದರೆ ಸಾಕೆ ಹಕ್ಕಿಗೆ ಬೇಕು ಬಾನು
ಬಯಲಲಿ ತೇಲುತ ತಾನು ಮ್ಯಾಲೆ ಹಾರೋಕೆ"

"ಎಷ್ಟೊಂದ್ ಜನ ಇಲ್ಲಿ ಯಾರು ನನ್ನೋರು,
ಎಷ್ಟೊಂದ್ ಮನೆ ಇಲ್ಲಿ ಎಲ್ಲಿ ನಮ್ಮನೆ
ಎಲ್ಲಿ ಎಲ್ಲಿ ಎಲ್ಲಿ ನಮ್ಮನೆ".

ಈ ಹಾಡು ಎಚ್ಚೆಸ್ವಿ ಅವರು ಬೆಂಗಳೂರಿಗೆ ಮೊದಲಬಾರಿ ಬಂದಾಗ ಅವರಿಗಾದ ಅನುಭವವನ್ನು ಆಧಾರಿಸಿ ಬರೆದಿದ್ದು ಎಂದು ಅವರೇ ಹೇಳಿಕೊಂಡಿದ್ದಾರೆ. ಈ ಚಲನಚಿತ್ರಕ್ಕೆ ರಾಷ್ಟ್ರಪ್ರಶಸ್ತಿ ರಜತಕಮಲ ಹಾಗೂ ಕರ್ನಾಟಕ ಸರ್ಕಾರದ ನಾಲ್ಕು

ಪ್ರಶಸ್ತಿಗಳು ಲಭಿಸಿದುವು. ಆದರೆ ದುಃಖಕರ ಸಂಗತಿಯೆಂದರೆ ಚಿತ್ರಕಥೆ, ಸಂಭಾಷಣೆ ಹಾಗೂ ಅಷ್ಟೂ ಹಾಡುಗಳನ್ನು ಬರೆದ ಎಚ್ಚೆಸ್ವಿಗೆ ಯಾವ ಪ್ರಶಸ್ತಿಯೂ ಲಭಿಸಲಿಲ್ಲ.

ಇದಕ್ಕೂ ಮೊದಲು ಎಚ್ಚೆಸ್ವಿ ೧೯೮೮ರಲ್ಲಿ ತೆರೆಕಂಡ ಶ್ರೀನಾಥ್ ಹಾಗೂ ಅನಂತನಾಗ್ ಅಭಿನಯದ ಬಾಳೊಂದು ಭಾವಗೀತೆ ಚಲನಚಿತ್ರದಲ್ಲಿ "ಕಾಮನಬಿಲ್ಲಿನ ಮೇಲೆ" ಎಂಬ ಹಾಡನ್ನು ಬರೆದಿದ್ದರು. ಆದರೆ ಆ ಚಿತ್ರದಲ್ಲಿ ಈ ಹಾಡು ಕಾಣಿಸಿಕೊಳ್ಳಲಿಲ್ಲ.

ನಂತರ ೧೯೯೪ರಲ್ಲಿ ತೆರೆಕಂಡ ನಾಗತಿಹಳ್ಳಿ ಚಂದ್ರಶೇಖರ್ ನಿರ್ದೇಶನದ "ಕೊಟ್ರೇಶಿ ಕನಸು" ಎಂಬ ಮಕ್ಕಳ ಚಲನಚಿತ್ರಕ್ಕೆ ಒಂಬತ್ತು ಹಾಡುಗಳನ್ನು ಬರೆದಿದ್ದಾರೆ. ಅದರಲ್ಲಿ

"ಏನಾಗ್ತಾನೆ ಮಗ ಏನಾಗ್ತಾನೆ ಏನಾಗಿ ತಾನಾಗಿ ಏನಾಗ್ತಾನೆ.
ಧಣಿಯಾಗ್ತಾನೆ ದೊಡ್ಡ ಧಣಿಯಾಗ್ತಾನೆ
ಧಣಿಯಾಗಿ ದೇಶ ದೇಶಾನೇ ಸಾಕ್ತಾನೆ "

ಎಂಬ ಗೀತೆ ಜನಪ್ರಿಯ. ಈ ಚಲನಚಿತ್ರಕ್ಕೆ ರಾಷ್ಟ್ರಮಟ್ಟದ ಸ್ಥಳೀಯ ಉತ್ತಮ ಚಿತ್ರ ಹಾಗೂ ಉತ್ತಮ ಬಾಲಕಲಾವಿದ ಎಂಬ ಎರಡು ರಾಷ್ಟ್ರಪ್ರಶಸ್ತಿಗಳು ಲಭ್ಯವಾದವು. ಇದರಲ್ಲೂ ಎಚ್ಚೆಸ್ವಿಯವರಿಗೆ ಯಾವ ಪ್ರಶಸ್ತಿಯೂ ಬರಲಿಲ್ಲ.

೧೯೯೭ರಲ್ಲಿ ತೆರೆಕಂಡು ರಾಷ್ಟ್ರಮಟ್ಟದ ಉತ್ತಮ ಸ್ಥಳೀಯ ಚಲನಚಿತ್ರ ಎಂಬ ಪ್ರಶಸ್ತಿ ಪಡೆದ "ಅಮೆರಿಕಾ ಅಮೆರಿಕಾ" ಚಲನಚಿತ್ರದ ಮೊದಲ ಹಾಡು–

ಬಾನಲ್ಲಿ ಓಡೋ ಮೇಘ
ಗಿರಿಗೋ ನಿಂತಲ್ಲೇ ಯೋಗ
ಎಲ್ಲುಂಟು ಒಲವಿರದ ಜಾಗ
ಬಾ ಬಾ ಗೆಳೆಯ ಬೇಗ"

ಕರ್ನಾಟಕದ ಕರಾವಳಿಯ ಪ್ರಕೃತಿ ರಮ್ಯ ತಾಣದಲ್ಲಿ ಚಿತ್ರಿಸಿರುವ ಈ ಗೀತೆಯನ್ನು ಎಚ್ಚೆಸ್ವಿ ಬರೆದಿದ್ದಾರೆ. ಮನ ಸೆಳೆಯುವ ಸಾಲುಗಳು. ನಾಗತಿಹಳ್ಳಿ ಚಂದ್ರಶೇಖರರ ನಿರ್ದೇಶನದ ಹಾಗೂ ಮನೋಮೂರ್ತಿಯವರ ಚೊಚ್ಚಲ ಸಿನಿಮಾ ಸಂಗೀತದ ಚಿತ್ರ. ಬಹಳ ಯಶಸ್ಸು ಕಂಡಿತು.

ಮುಂದೆ ೨೦೦೧ ರಲ್ಲಿ ಟಿ.ಎನ್.ಸೀತಾರಾಮ್ ಅವರ ನಿರ್ದೇಶನದ ರಾಷ್ಟ್ರಪ್ರಶಸ್ತಿ ಪಡೆದ "ಮತದಾನ" ಚಲನಚಿತ್ರದ –

ನಾಯಿ ತಲೆಮ್ಯಾಲಿನ ಬುತ್ತಿ ಈ ಸಂಸಾರ, ಬಲು ದುಸ್ಸಾರ
ಇದನ್ನರಿತು ಅರಿತು ಮಂದಿ ಬಿದ್ದಾರ ಹಿಂದ ಬಿದ್ದಾರ

ಎಂಬ ಗೀತೆಯನ್ನು ಬರೆದಿದ್ದಾರೆ. ಬದುಕಿನ ವಾಸ್ತವತೆಯನ್ನು ಬಲು ಪರಿಣಾಮಕಾರಿಯಾಗಿ ಬಿಂಬಿಸುವ ಹಾಡು.

೨೦೧೫ರಲ್ಲಿ "ಮೈತ್ರಿ" ಎಂಬ ಚಲನಚಿತ್ರಕ್ಕೆ 'ಇದು ಯಾವ ಲೋಕವೋ' ಎಂಬ ಗೀತೆ ಬರೆದಿದ್ದಾರೆ, ಎಚ್ಚೆಸ್ವಿಯವರು. ೨೦೧೬ರಲ್ಲಿ ಬಿಡುಗಡೆಯಾದ ಇಂಜಿನಿಯರಿಂಗ್ ಯುವವಿದ್ಯಾರ್ಥಿಗಳ ಕಾಲೇಜು ಜೀವನಕ್ಕೆ ಸಂಬಂಧಿಸಿದ ಚಿತ್ರ "ಕಿರಿಕ್ ಪಾರ್ಟಿ"ಯಲ್ಲಿ ಇವರು ಈ ಹಿಂದೆಯೇ ಬರೆದ ಭಾವಗೀತೆ –

ತೂಗು ಮಂಚದಲ್ಲಿ ಕೂತು
ಮೇಘ ಶ್ಯಾಮ ರಾಧೆಗಾತು

ಇದನ್ನು ಚಲನಚಿತ್ರಕ್ಕೆ ಅಳವಡಿಸಿದ್ದಾರೆ. ಸ್ವತಃ ಎಚ್ಚೆಸ್ವಿಯವರು ಒಂದು ಸಂದರ್ಶನದಲ್ಲಿ ಈ ರೀತಿ ಹೇಳಿದ್ದಾರೆ– "೨೦೧೬ರ ಮೊದಲಲ್ಲಿ ಕಿರಿಕ್ ಪಾರ್ಟಿ ಚಲನಚಿತ್ರದ ನಿರ್ದೇಶಕ ರಿಶಬ್ ಶೆಟ್ಟಿ ಹಾಗೂ ರಕ್ಷಿತ್ ಶೆಟ್ಟಿ ನನ್ನನ್ನು ಭೇಟಿಮಾಡಿ, ಅವರು ಬರೆದ 'ತೂಗು ಮಂಚದಲ್ಲಿ ಕೂತು' ಹಾಡನ್ನು ಚಲನಚಿತ್ರದಲ್ಲಿ ಬಳಸುತ್ತೇವೆ ಅನುಮತಿ ನೀಡಿ ಎಂದು ಕೇಳಿದರು. ಆಗ ನಾನು ಖಂಡಿತ. ಆದರೆ ಸಿ.ಅಶ್ವತ್ಥ್ ಅವರಿಗೆ ಸಿನಿಮಾ ಮತ್ತು ಆಡಿಯೋ ಟ್ರ್ಯಾಕ್ಸ್ ನಲ್ಲಿ ಕ್ರೆಡಿಟ್ ಕೊಡಬೇಕು ಎಂದು ಹೇಳಿದೆ. ಅವರು ಒಪ್ಪಿಕೊಂಡರು" ಎಂದು.

೨೦೧೮ರಲ್ಲಿ ಸ್ವತಃ ಎಚ್ಚೆಸ್ವಿಯವರೇ ನಿರ್ದೇಶಿಸಿದ ಚಲನಚಿತ್ರ "ಹಸಿರು ರಿಬ್ಬನ್"ನಲ್ಲಿ ಎಚ್ಚೆಸ್ವಿಯವರು ಬರೆದ 'ಸಕ್ಕರೆಯ ಪಾಕದಲಿ ಅದ್ದಿದ ಜಾಮೂನು' ಹಾಡಿಗೆ ದಕ್ಷಿಣ ಭಾರತದ ಫಿಲ್ಮ್‌ಫೇರ್ ಅವಾರ್ಡ್ಸ್ ಅಡಿಯಲ್ಲಿ ಉತ್ತಮ ಗೀತಸಾಹಿತಿಯ ಪ್ರಶಸ್ತಿ ದೊರೆಯಿತು.

ಕಡೆಯದಾಗಿ ೨೦೨೩ರಲ್ಲಿ "ಸಪ್ತಸಾಗರದಾಚೆಯೆಲ್ಲೋ ಸೈಡ್ ಬಿ" ಈ ಚಲನಚಿತ್ರಕ್ಕಾಗಿ ಇವರು ಇದಾಗಲೇ ಬರೆದ ಭಾವಗೀತೆ ಯೂಟ್ಯೂಬಿನಲ್ಲಿ ಲೋಕಾರ್ಪಣೆಗೊಂಡು ಬಹಳ ಜನಪ್ರಿಯತೆ ಗಳಿಸಿದ ಹಾಡು–

ಇರಬೇಕು ಇರುವಂತೆ ತೊರೆದು ಸಾವಿರ ಚಿಂತೆ
ಮಳೆ ಸುರಿಸಿ ಹಗುರಾದ ಮುಗಿಲಿನಂತೆ

ಇದನ್ನು ಚಲನಚಿತ್ರದಲ್ಲಿ ಹಿನ್ನೆಲೆ ಹಾಡಾಗಿ ಅಳವಡಿಸಿ ಕೊಂಡಿದ್ದಾರೆ.

ಒಟ್ಟಿನಲ್ಲಿ ಚಲನಚಿತ್ರಗಳ ಹಾಡುಗಳಿಗೂ ಎಚ್ಚೆಸ್ವಿಯವರು ಗೀತಸಾಹಿತಿಯಾಗಿ ಜನರ ಮನ ಗೆದ್ದಿದ್ದಾರೆ ಎಂದು ನಿಸ್ಸಂದೇಹವಾಗಿ ಹೇಳಬಹುದು.

***

ಎಚ್ಚೆಸ್ವಿ ವಿರಚಿತ ಚಿತ್ರಗೀತೆ

ಸಕ್ಕರೆಯ ಪಾಕದಲಿ...

ಸಕ್ಕರೆಯ ಪಾಕದಲಿ ಅದ್ದಿರುವ ಜಾಮೂನು
ನಿದ್ದೆ ಮಾಡುತಲಿರುವ ಮುದ್ದು ಮಗಳು
ಕಿರುಗೊಳದ ಮೇಲೆ ಬಾಗಿರುವ ಮಳೆಬಿಲ್ಲು
ಬಣ್ಣಗನಸಿನ ಅಮ್ಮ ಕೂತಿರುವಳು

ಯಾರೂ ತಿಳಿಯದ ಭಾಷೆ ಅದರ ಅಕ್ಷರದಂತೆ
ಮಗಳ ಹಣೆಯಲಿ ಮುಂಗುರುಳ ಸುರುಳಿ
ಹೊಸದಾಗಿ ಅಕ್ಷರವ ತಿದ್ದೊ ಮಕ್ಕಳ ಹಾಗೆ
ಕುರುಳ ತಿದ್ದುವ ಅಮ್ಮ ಮರಳಿ ಮರಳಿ

ಕ್ಷಣ ಕ್ಷಣಕು ಬದಲಾಗೊ ಅಕ್ಷರದ ಆಕಾರ
ಅದನು ತಿದ್ದುವ ಹಟದ ತಾಯ ಬೆರಳು
ವಾತ್ಸಲ್ಯ ಎನ್ನುವ ಕರುಳ ಬಳ್ಳಿಯ ಭಾಷೆ
ಮುದ್ದು ಶಾರದೆ ಬರೆದ ಮಮತೆಯೋಲೆ


****

ಗೀತ ರಚನೆ: ಎಚ್.ಎಸ್.ವೆಂಕಟೇಶಮೂರ್ತಿ
ಸಂಗೀತ: ಉಪಾಸನಾ ಮೋಹನ್
ಮೂಲ ಗಾಯನ: ಎಂ.ಡಿ.ಪಲ್ಲವಿ
ಚಲನಚಿತ್ರ: ಹಸಿರು ರಿಬ್ಬನ್

****

ಹೇಗಿದ್ದ ಹೇಗಾದ ಗೊತ್ತಾ ನಮ್ಮ ಚಿನ್ನಾರಿ ಮುತ್ತ

– ಧೀರೇಂದ್ರ ಎಸ್



ಡಾ. ಟಿ.ಎಸ್.ನಾಗಾಭರಣ ನಿರ್ದೇಶನದ ಜನಪ್ರಿಯ ಮಕ್ಕಳ ಚಿತ್ರ "ಚಿನ್ನಾರಿ ಮುತ್ತ"ದ ಕತೆಗಾರರು ನಮ್ಮ ಎಚ್ಚೆಸ್ವಿ ಅವರು. ಈ ಚಿತ್ರದ ಹಾಡುಗಳನ್ನು ಬರೆದವರೂ ಅವರೇ. ಈ ಚಲನಚಿತ್ರಕ್ಕೆ 1994ರ ದ್ವಿತೀಯ ಅತ್ಯುತ್ತಮ ಚಿತ್ರ ಎಂದು ರಜತಕಮಲ ಪ್ರಶಸ್ತಿ ಬಂದಿದೆ. ಅತ್ಯುತ್ತಮ ಮಕ್ಕಳ ಚಿತ್ರ, ಅತ್ಯುತ್ತಮ ನಿರ್ದೇಶಕ, ಅತ್ಯುತ್ತಮ ಬಾಲನಟ, ಅತ್ಯುತ್ತಮ ಸಂಗೀತ, ಅತ್ಯುತ್ತಮ ಹಿನ್ನೆಲೆ ಗಾಯಕ ರಾಜ್ಯ ಪ್ರಶಸ್ತಿಗಳೂ ಬಂದಿವೆ. ಹಳ್ಳಿಯ ಬಡ ಹುಡುಗನೊಬ್ಬ ಉತ್ತಮ ತರಬೇತುದಾರನ ಕಣ್ಣಿಗೆ ಬಿದ್ದು ಒಳ್ಳೆಯ ಓಟಗಾರನಾಗುವುದು ಈ ಕಥೆಯ ತಿರುಳು. ಅಂತರರಾಷ್ಟ್ರೀಯ ಚಲನಚಿತ್ರೋತ್ಸವಗಳಲ್ಲಿ ಇಂಡಿಯನ್ ಮನೋರಮಾ ವಿಭಾಗದಲ್ಲಿ ಪ್ರದರ್ಶಿಸಲ್ಪಟ್ಟಿದೆ. ಎಚ್ಚೆಸ್ವಿ ಅವರು ಈ ಸಿನಿಮಾದಲ್ಲಿ ತಮ್ಮನ್ನು ಹೇಗೆ ತೊಡಗಿಸಿಕೊಂಡರು ಎಂಬ ಸ್ವಾರಸ್ಯವನ್ನು ನೋಡೋಣ ಬನ್ನಿ.

ಆಗ ನಾಗಾಭರಣ ಸುದ್ದಿಯಲ್ಲಿದ್ದ ಜನಪ್ರಿಯ, ಪ್ರತಿಭಾವಂತ, ಯಶಸ್ವೀ ಚಲನಚಿತ್ರ ನಿರ್ದೇಶಕ. ಚಿಕ್ಕ ವಯಸ್ಸಿನಲ್ಲೇ ಅನೇಕ ರಾಷ್ಟ್ರ ಮತ್ತು ರಾಜ್ಯ ಪ್ರಶಸ್ತಿಗಳನ್ನು ಗಳಿಸಿಕೊಂಡವರು. ಎಚ್ಚೆಸ್ವಿ ಕೂಡ ಅವರ "ಸಂತ ಶಿಶುನಾಳ ಶರೀಫ" ಮತ್ತು "ಮೈಸೂರು ಮಲ್ಲಿಗೆ" ಚಿತ್ರಗಳನ್ನು ನೋಡಿ ಬಹುವಾಗಿ ಮೆಚ್ಚಿಕೊಂಡವರು. ಆದರೆ ವೈಯಕ್ತಿಕ ಪರಿಚಯವಿರಲಿಲ್ಲ.

ಹೀಗಿರಲು, 1993ರ ಒಂದು ಸಂಜೆ ಎಚ್ಚೆಸ್ವಿ ಅವರ ಮನೆಗೆ ಅವರ ಆಪ್ತ ಮಿತ್ರ ಖ್ಯಾತ ಸಂಗೀತ ನಿರ್ದೇಶಕ ಹಾಗೂ ಗಾಯಕ ಸಿ ಅಶ್ವಥ್ ಬಂದರು. ಅವರೊಡನೆ ನಾಗಾಭರಣರೂ ಇದ್ದರು. ಅದಾಗಲೇ ಅಶ್ವಥ್, ಎಚ್ಚೆಸ್ವಿ ಅವರ ಕವನಗಳ "ಕೆಂಗುಲಾಬಿ" ಮತ್ತು "ಬಣ್ಣದ ಹಕ್ಕಿ" ಎಂಬ ಧ್ವನಿಸುರುಳಿಗಳನ್ನು ತಂದು ಜನಪ್ರಿಯಗೊಳಿಸಿದ್ದರು. ಅಶ್ವಥ್ ಅವರು ತಮ್ಮ ಎಂದಿನ ಧಾಟಿಯಲ್ಲಿ "ಭರಣ ಒಂದು ಮಕ್ಕಳ ಚಿತ್ರ ಮಾಡಬೇಕೆಂದಿದ್ದಾರೆ, ಅದಕ್ಕೆ ನೀವೇ ಕಥೆ ಮತ್ತು ಹಾಡುಗಳನ್ನು ಬರೆದು ಕೊಡಬೇಕು" ಎಂದರು. ನಾಗಾಭರಣ ಮಾತು ಮುಂದುವರೆಸಿ, "ನಾನು ಒಂದು ಮಕ್ಕಳ ಚಿತ್ರ ಮಾಡಲು ಬಯಸಿದ್ದೇನೆ. ಅದಕ್ಕೆ ನೀವೇ ಕಥೆ ಮತ್ತು ಹಾಡುಗಳನ್ನು ಬರೆಯಬೇಕು, ನೀವಲ್ಲದೇ ಬೇರಾರೂ ಈ ಕಾರ್ಯ ನಿರ್ವಹಿಸಲು ಸಮರ್ಥರಲ್ಲ" ಎಂದು ಎಚ್ಚೆಸ್ವಿ ಅವರನ್ನು ಅಭಿಮಾನಪೂರ್ವಕವಾಗಿ ಆಗ್ರಹಿಸಿದರು. ಎಚ್ಚೆಸ್ವಿ ಅವರನ್ನು ಸೆಳೆದಿದ್ದು ನಾಗಾಭರಣರ ಮುಗ್ಧತೆ, ಸರಳತೆ ಮತ್ತು ಅವರ ಸ್ವಲ್ಪ ಗಿರಗಿಟ್ಟಲೆ ಹೊಡೆಯುವ ದೊಡ್ಡ ಕಣ್ಣುಗಳು. ಕೂಡಲೇ ಒಪ್ಪಿಗೆ ಕೊಟ್ಟುಬಿಟ್ಟರು. ಎಚ್ಚೆಸ್ವಿ ಅವರೇ ಹೇಳಿ ಕೊಳ್ಳುವಂತೆ ಅವರಲ್ಲಿದ್ದ ಹಳ್ಳಿಯ ಹುಂಬತನದ, ಒಂದು ಕೈ ನೋಡೇಬಿಡೋಣ ಎನ್ನುವ ಪ್ರವೃತ್ತಿ ಇದಕ್ಕೆ ಮೂಲ ಕಾರಣ.

ಇದು ಬಹಳಷ್ಟು ಸಲ ಅವರಿಗೆ ಯಶಸ್ಸನ್ನು ತಂದಿದೆ, ಹಲವಾರು ಬಾರಿ ಸಂಕಷ್ಟಕ್ಕೆ ಈಡಾದದ್ದೂ ಇದೆ. ಮಾತು ಕೊಟ್ಟ ಮೇಲೆ ಬರೆಯಲೇಬೇಕಲ್ಲ? ಆದರೆ ಹೇಗೆ ಬರೆಯುವುದು? ಕಥೆಯ ಹಂದರ ಹೊಳೆಯದೇ ಹೇಗೆ ಬರೆಯುವುದು ಎಂದು ಸಮಸ್ಯೆಯಾಯಿತು. ಇಂದು ನಾಳೆ ಎಂದು ಮುಂದೂಡುತ್ತಲೇ ಬಂದರು. ಆದರೆ ಅಶ್ವಥ್ ಹಾಗೂ ನಾಗಾಭರಣ ಬಡಪೆಟ್ಟಿಗೆ ಬಿಡುವವರಲ್ಲ. ಎಚ್ಚೆಸ್ವಿ ಅವರ ಬೆನ್ನು ಬಿದ್ದು ಒತ್ತಾಯಿಸುತ್ತಲೇ ಇದ್ದರು. ಎಚ್ಚೆಸ್ವಿ ಅವರು ಏನಾದರೂ ಹೊಳೆಯಬಹುದು ಎಂಬ ನಿರೀಕ್ಷೆಯಲ್ಲಿ ಸಾಕಷ್ಟು ಮಕ್ಕಳ ಪುಸ್ತಕಗಳನ್ನು ಓದಿದರು. ಏನೂ ಹೊಳೆಯಲಿಲ್ಲ. ಚಿಂತಾಕ್ರಾಂತರಾಗಿ ಮಲಗಿರುವಾಗ ಅವರಿಗೆ ಇದ್ದಕ್ಕಿದ್ದಂತೆ ತಮ್ಮ ಹಳ್ಳಿಯ ಪಕ್ಕದಲ್ಲಿದ್ದ ಮಾದಾಪುರದ ಮಾದವ್ವನ ಮೊಮ್ಮಗ ಮುತ್ತನ ನೆನಪಾಯಿತು. ರಾತ್ರಿ ಗಂಟೆ ಹನ್ನೊಂದು ಆಗಿತ್ತು. "ಎಲಾ ಮುತ್ತ, ಎಲ್ಲಿ ಅಡಗಿದ್ದೆಯೋ ಇಷ್ಟು ದಿನ ಎಂದು ಉದ್ಗರಿಸಿದವರೇ ಕಥೆ ಬರೆಯಲು ಕುಳಿತರು. ಒಂದು ವಾರದಲ್ಲಿ ಬರೆದು ಮುಗಿಸಿದರು. ಕಥೆಯ ಜೊತೆಯಲ್ಲೇ ಕೆಲವು ಹಾಡುಗಳನ್ನೂ ಬರೆದರು. ಬರೆದಾದ ಕೂಡಲೇ ನಾಗಾಭರಣರಿಗೆ ಫೋನಾಯಿಸಿದರು. ಅವರಿಗೆ ಆಶ್ಚರ್ಯ. ನಂಬಲಿಕ್ಕೇ ಆಗಲಿಲ್ಲ. ಆದರೂ ಕಥೆಯ ರೀಡಿಂಗ್

ಯಾವಾಗ ಇಟ್ಟುಕೊಳ್ಳೋಣ ಮೇಷ್ಟ್ರೇ ಎಂದು ಕೇಳಿದಾಗ ಎಚ್ಚೆಸ್ವಿ ಇಂದೇ ಯಾಕಾಗಬಾರದು ಎಂದಾಗ ಭರಣರಿಗೆ ಮತ್ತಷ್ಟು ಆಶ್ಚರ್ಯ. ಅಶ್ವಥ್, ಭರಣ ಮತ್ತು ದತ್ತಣ್ಣ ಮೂರೂ ಜನ ಕಥೆಯನ್ನು ಕೇಳಿದರು, ಓದಿದರು, ಬಹಳ ಇಷ್ಟಪಟ್ಟರು.

ಇಲ್ಲಿ ಅವರು ಒಂದು ಸ್ವಾರಸ್ಯಕರ ಘಟನೆ ನೆನಪಿಸಿಕೊಳ್ಳುತ್ತಾರೆ. ಮಿನರ್ವ ಕಾಮತ್ ಹೋಟೆಲಿನಲ್ಲಿ ಹಾಡುಗಳಿಗೆ ಸಂಗೀತ ಸಂಯೋಜನೆ ನಡೆದಿತ್ತು, ಬಿಸಿಬಿಸಿ ವಡೆ ಸಾಂಬಾರ್ ಸಮಾರಾಧನೆಯ ಜೊತೆಯಲ್ಲಿ. ಅಶ್ವಥ್, ಬಾಲಿ, ನಾಗಾಭರಣ, ಎನ್.ಎಸ್.ಪ್ರಸಾದ್ ಮತ್ತು ಎಚ್ಚೆಸ್ವಿ ಇದ್ದರು. ಮೂರನೇ ದಿನ ಸಂಜೆ ವೇಳೆಗೆ ಕೆಲಸ ಮುಗಿಯಿತು. ಹಾಡುಗಳು ಬಹಳ ಚೆನ್ನಾಗಿ ಬಂದಿವೆ ಎಂದು ಎಲ್ಲರೂ ಖುಷಿಯಾಗಿದ್ದರು. ಅದೇ ಖುಷಿಯಲ್ಲಿ ಮನೆಗೆ ಬಂದ ಎಚ್ಚೆಸ್ವಿ, ಅಶ್ವಥ್ ರಾಗ ಸಂಯೋಜನೆಯ ತಮ್ಮ ಹಾಡುಗಳನ್ನು ತಮ್ಮ ಸಿರಿಕಂಠದಲ್ಲಿ ಹಾಡಿ ತೋರಿಸಲು ಹೋಗಿ ಪತ್ನಿಯಿಂದ ಬೈಸಿಕೊಂಡರಂತೆ! ಮತ್ತೆ ಕಾಮತ್ ಹೋಟೇಲಿಗೆ ಬಂದಾಗ ಅಶ್ವಥ್ ತಲೆಯ ಮೇಲೆ ಕೈ ಹೊತ್ತು ಕುಳಿತಿದ್ದರು. ಯಾಕೆ, ಅಶ್ವಥ್, ಏನಾಯಿತು ಎಂದು ಕೇಳಿದಾಗ "ಇನ್ನೇನಾಗಬೇಕು? ಇನ್ನೊಂದು ಹೊಸಾ ಹಾಡು ಬೇಕು ಅಂತಿದ್ದಾನೆ ಭರಣ... ನಾಳೆ ರೆಕಾರ್ಡಿಂಗ್ ಇಟ್ಕೊಂಡಿದ್ದೀನಿ. ನೀವು ಹಾಡು ಬರೆಯೋದು ಯಾವಾಗ.., ನಾನು ಸಂಯೋಜನೆ ಮಾಡೋದು ಯಾವಾಗ... ಎಲ್ಲಾ ಚಂಬು... ಅಷ್ಟೇ... ಎಂದು ಒಂದೇ ಉಸಿರಿನಲ್ಲಿ ಹೇಳಿದರು. ಅದಕ್ಕೆ ಎಚ್ಚೆಸ್ವಿ ಅವರು "ಅಲ್ಲ, ಸಂದರ್ಭ ಏನು, ಹೇಳಿ. ಬರೆಯೋಕಾಗುತ್ತಾ ನೋಡೋಣ" ಎಂದರು. ಮುತ್ತನ ಅಜ್ಜಿಗೆ ಸ್ಟ್ರೋಕ್ ಆಗಿರುತ್ತೆ. ಆಗ ಹುಡುಗರೆಲ್ಲ ಸೇರಿ ಆಕೆಯನ್ನು ಸಂತೈಸುವ ಹಾಡು ಭರಣರಿಗೆ ಬೇಕಾಗಿತ್ತು. ಎಚ್ಚೆಸ್ವಿ ರೂಮಿನ ಒಂದು ಮೂಲೆ ಸೇರಿ, ಸ್ಟ್ರೋಕ್ ಆಗಿದ್ದ ತಮ್ಮಜ್ಜಿಯನ್ನು ಜ್ಞಾಪಿಸಿಕೊಂಡರಂತೆ. ಆಗ ಆಕೆಯನ್ನು ತಾವು ಹೇಗೆ ಸಂತೈಸಿದೆವು ಎಂದು ನೆನಪಾಯಿತು. ಕಣ್ಣುಗಳು ತುಂಬಿಬಂದವು. ಕೆಲವು ಸಾಲು ಹೊಳೆದು. ಐದು ನಿಮಿಷಗಳಲ್ಲಿ ಹಾಡು ತಯಾರಾಯಿತು. ತಮ್ಮ ಜೀವನದಲ್ಲಿ ಐದೇ ನಿಮಿಷದಲ್ಲಿ ಬರೆದ ಹಾಡು ಅದೊಂದೇ ಎನ್ನುತ್ತಾರೆ ಎಚ್ಚೆಸ್ವಿ. ನೋಡಿ, ಹಾಡು ರೆಡಿ.. ಎಂದು ಅಶ್ವಥ್ ಮುಂದೆ ಹಿಡಿದರು. ಬಾಲಿ ಕೊಟ್ಟ ಹೊಸ ರಿದಂಗೆ ರಾಗ ಸಂಯೋಜನೆ ಅಶ್ವಥ್ ಮಾಡಿದರು. ಭರಣ ಬಂದರು. ಹಾಡು ಕೇಳಿದರು. ಆಹಾ! ಅದ್ಭುತ.. ಎಂದರು. ಆ ಹಾಡೇ.– "ನಾವು ಇರುವಾಗ ನಿನಗೇನು ಚಿಂತೆ? ನಗ್ತಾ ನಗ್ತಾ ಇರು ರಾಣಿಯಂತೆ..."

ಮುತ್ತನ ಪಾತ್ರದಲ್ಲಿ ವಿಜಯ್ ರಾಘವೇಂದ್ರ, ಗೆಳೆಯನಾಗಿ ಪೂರ್ಣಚಂದ್ರ ತೇಜಸ್ವಿ ಮತ್ತು ವಿಕ್ರಮ್ ಸೂರಿ ಸೊಗಸಾಗಿ ಅಭಿನಯಿಸಿದ್ದಾರೆ ಎನ್ನುತ್ತಾರೆ ಎಚ್ಚೆಸ್ವಿ. ತರಬೇತುದಾರ ಸಾವಂತ್ ಪಾತ್ರದಲ್ಲಿ ಅವಿನಾಶ್, ಅಭಿನಯ, ಅಮೋಘ. ಚಿತ್ರದ ಎಲ್ಲಾ ಹಾಡುಗಳೂ ಎಚ್ಚೆಸ್ವಿ ಅವರಿಗೆ ಇಷ್ಟವಾಗಿದ್ದರೂ, "ಎಷ್ಟೊಂದ್ ಜನ, ಇಲ್ಲಿ ಯಾರು ನಿನ್ನೋರು?" ಮತ್ತು "ರೆಕ್ಕೆ ಇದ್ದರೆ ಸಾಕೆ" ಈ ಎರಡು ಹಾಡುಗಳಂತೂ ಅದ್ಭುತ ಎನ್ನುತ್ತಾರೆ ಎಚ್ಚೆಸ್ವಿ.

ಚಿನ್ನಾರಿ ಮುತ್ತ ಚಿತ್ರದ ಪ್ರಿವ್ಯೂಗೆ ಎಚ್ಚೆಸ್ವಿ ಅವರೇ ಹೋಗಿ ಅನಂತಮೂರ್ತಿ, ಶಿವರುದ್ರಪ್ಪ, ಕೆ.ನರಸಿಂಹಮೂರ್ತಿ, ಎಲ್.ಎಸ್. ಶೇಷಗಿರಿರಾವ್ ಮೊದಲಾದ ಹಿರಿಯ ಲೇಖಕರನ್ನು ಕರೆದುಕೊಂಡು ಬಂದರಂತೆ. ಚಿತ್ರದ ಮಧ್ಯಂತರದಲ್ಲಿ "ಭೇಷ್! ಎಷ್ಟು ಚೆನ್ನಾಗಿವೆ ಹಾಡುಗಳು, ಭೇಷ್!" ಎಂದು ಹಿರಿಯರು ಬೆನ್ನು ತಟ್ಟಿದ್ದನ್ನು ತಾವೆಂದೂ ಮರೆಯುವುದಿಲ್ಲ ಎನ್ನುತ್ತಾರೆ ಎಚ್ಚೆಸ್ವಿ.

1993 ನಿಜಕ್ಕೂ "ಚಿನ್ನಾರಿ ಮುತ್ತ"ದ ವರ್ಷ. ಈ ಚಿತ್ರ ಸಪ್ನಾ ಥಿಯೇಟರಿನಲ್ಲಿ 250 ದಿನ ಓಡಿತು. ರಾಜ್ಯಾದ್ಯಂತ 25 ಥಿಯೇಟರುಗಳಲ್ಲಿ 25 ವಾರ ಸತತವಾಗಿ ಓಡಿತು. ಆಗ ಕರ್ನಾಟಕದ ಯಾವ ಮೂಲೆಗೆ ಹೋದರೂ ಚಿನ್ನಾರಿ ಮುತ್ತದ ಹಾಡುಗಳು. ಬಸ್ಸಿನಲ್ಲೂ ಅವೇ, ಕಾರಿನಲ್ಲೂ ಅವೇ, ರೆಸ್ಟೋರೆಂಟ್ ಗಳಲ್ಲೂ ಅವೇ! ಈ ಪ್ರಮಾಣದಲ್ಲಿ ಜನರನ್ನು ಮರುಳು ಮಾಡಿದ ಹಾಡುಗಳನ್ನು ತಾವು ಮುಂದೆ ಬರೆಯಲಿಲ್ಲ ಎಂದಿದ್ದಾರೆ ಎಚ್ಚೆಸ್ವಿ.

'ಹೇಗಿದ್ದ ಹೇಗಾದ ಗೊತ್ತಾ ನಮ್ಮ ಚಿನ್ನಾರಿ ಮುತ್ತ' ಸಾಲುಗಳು ಹಳ್ಳಿಯ ಪರಿಸರದಿಂದ ವಾಮನನಂತೆ ನಗರಕ್ಕೆ ಬಂದು ತ್ರಿವಿಕ್ರಮನಂತೆ ಬೆಳೆದ ಎಚ್ಚೆಸ್ವಿ ಅವರಿಗೇ ಹೆಚ್ಚು ಅನ್ವಯಿಸುತ್ತವೆ.

ಇಂಥ ಮಾಯದ ಮೋಡಿ ಮಾಡಿದ ಕವಿ ಎಚ್ಚೆಸ್ವಿ ಅವರಿಗೆ ಹೃದಯಾಂತರಾಳದ ನುಡಿ ನಮನಗಳು.

***

ಹೆಚ್ಚೆಸ್ವಿಯವರ ಭಾವಗೀತೆ

"ಆ ಕಪ್ಪು ಹುಡುಗಿ"~ ನಾ ಕಂಡಂತೆ

– ಎನ್.ವಿ.ರಘುರಾಂ

ಆ ಕಪ್ಪು ಹುಡುಗಿ

ಆ ನೀಲಿ ಕೊಳವನ್ನು ಪ್ರೀತಿಸುವೆ ನಾನು
ಅಲ್ಲೆ ಕಂಡಳು ನನಗೆ ಆ ಕಪ್ಪು ಹುಡುಗಿ ।। ಪಲ್ಲವಿ ।।

ಆ ಹೊನ್ನೆ ಮರವನ್ನು ಪ್ರೀತಿಸುವೆ ನಾನು
ಅಲ್ಲೆ ನಲಿದಾಡಿತ್ತು ಆ ಕಪ್ಪು ಹುಡುಗಿ ।। ೧ ।।

ಆ ಮುರುಕು ಮಂಟಪವ ಪ್ರೀತಿಸುವೆ ನಾನು
ಅಲ್ಲೆ ಒಲಿದಿತ್ತು ನನ್ನ ಆ ಕಪ್ಪು ಹುಡುಗಿ ।। ೨ ।।

ಆ ದೇವಕಣಿಗೆಲೆಯ ಪ್ರೀತಿಸುವೆ ನಾನು
ಅಲ್ಲೆ ಮಲಗಿದ್ದಾಳೆ ಆ ಕಪ್ಪು ಹುಡುಗಿ ।। ೩ ।।

ಶ್ರೀಯುತ ಹೆಚ್.ಎಸ್.ವಿ.ಯವರು ಅನೇಕ ಭಾವಗೀತೆಗಳನ್ನು ರಚಿಸಿದ್ದಾರೆ. ಅದರಲ್ಲಿ ನನಗೆ ಇಷ್ಟವಾದ ಕೃತಿಗಳಲ್ಲಿ "ಆ ಕಪ್ಪು ಹುಡುಗಿ" ಕೂಡ ಒಂದು. ಇದು ನನ್ನ ಗಮನ ಸೆಳೆಯಲು ಮುಖ್ಯ ಕಾರಣ ಅದರ ಸರಳ ರಚನೆ. ಇದೊಂದು 'ಕವಿಮನ' ಅರಿಯುವ ಪ್ರಯತ್ನ.

ಮೊದಲಿಗೆ ಶೀರ್ಷಿಕೆಯೇ "ಆ ಕಪ್ಪು ಹುಡುಗಿ" ಎಂದಿದೆ. "ಆ" ಹುಡುಗಿ ಎಂದರೆ, ಕವಿಯ ಮನಸ್ಸಿನಲ್ಲಿರುವ ಒಂದು ನಿರ್ದಿಷ್ಟ ಹುಡುಗಿ. ಆ ನಿರ್ದಿಷ್ಟ ಹುಡುಗಿಯ ಬಣ್ಣ "ಕಪ್ಪು" ಎಂದು ಮೊದಲಿಗೆ ಅರ್ಥಮಾಡಿಕೊಳ್ಳಬಹುದು. ಇಲ್ಲಿ ಗಮನ ಸೆಳೆಯುವುದು ಸೌಂದರ್ಯವೆಂದರೆ ಬಿಳಿಪಿನ ಮೈ ಚರ್ಮ ಎಂದು ಸಾಮಾನ್ಯವಾಗಿ ಅನೇಕರು ಅಂದುಕೊಂಡಿರುವ ಸಮಯದಲ್ಲಿ ಕವಿ 'ಕಪ್ಪು' ಬಣ್ಣದ ಹುಡುಗಿಯ ಬಗ್ಗೆ ಹೇಳಲು ಹೊರಟಿರುವುದು ಗಮನ ಸೆಳೆಯುತ್ತದೆ.

ಆ ನೀಲಿ ಕೊಳವನ್ನು ಪ್ರೀತಿಸುವೆ ನಾನು
ಅಲ್ಲೆ ಕಂಡಳು ನನಗೆ ಆ ಕಪ್ಪು ಹುಡುಗಿ ।। ಪಲ್ಲವಿ ।।

ಪಲ್ಲವಿಯಲ್ಲಿ ಬರುವ ಮೊದಲ ಸಾಲನ್ನು ನೋಡೋಣ. ಇಲ್ಲಿ ಕೊಳ ಎಂದರೆ ಕೆರೆ ಎಂದುಕೊಳ್ಳಬಹುದು. ಈ ಕೊಳ ಶುದ್ಧವಾಗಿದ್ದರೆ, ಆ ಕೊಳದಲ್ಲಿ ಆಕಾಶದ ನೀಲಿ ಬಣ್ಣ ಪ್ರತಿಫಲಿಸಿ ಇಡೀ ಕೊಳವೇ ನೀಲಿ ಕೊಳದ ತರಹ ಕಾಣುತ್ತದೆ. ಇಲ್ಲಿ ಆಕಾಶ ಕೂಡ ಯಾವುದೇ ಮೋಡಗಳಿಲ್ಲದೆ ಶುದ್ಧ ನೀಲಿ ಬಣ್ಣವನ್ನು ತಳೆದಿರುತ್ತದೆ. ಆ ಕಪ್ಪು ಹುಡುಗಿ ಅಲ್ಲೇ ಕಂಡಿರುವುದರಿಂದ, ಆ ನೀಲಿ ಕೊಳವನ್ನು ಪ್ರೀತಿಸುತ್ತೇನೆ ಎಂದು ಕವಿ ಹೇಳಿರುವುದು ಮೊದಲ ನೋಟಕ್ಕೆ ಕಂಡುಬರುತ್ತದೆ. ಮೊದಲಿಗೆ ನಮ್ಮ ಪ್ರೀತಿಪಾತ್ರರು ಕಂಡ ಸ್ಥಳವನ್ನು ನೆನಪಿಟ್ಟುಕೊಂಡು ಆ ಸ್ಥಳದ ಬಗ್ಗೆ ಪ್ರೀತಿ ಇಟ್ಟುಕೊಳ್ಳುವುದು ಸಾಮಾನ್ಯ. ಆದರೆ ಇನ್ನೊಮ್ಮೆ ನೋಡಿದರೆ, ಕವಿ ಆ ಶುದ್ಧವಾದ ಕೊಳದಲ್ಲಿ ಆಕೆಯನ್ನು ನೋಡಿದ್ದಾರೆ. ಅಂದರೆ ಆಕೆ ಕೂಡ ಅಷ್ಟೇ ಶುದ್ಧ ಎಂದು ಹೇಳಲು ಈ ರೂಪಕ ಬಳಿಸಿದ್ದಾರೆ. ಆಕೆ ಹೊರಗೆ ಕಪ್ಪಾದರೂ ಒಳಗೆ ಶುದ್ಧ ಎಂದು ಹೇಳಿರುವುದು ಇಲ್ಲಿ ಕಾಣುತ್ತದೆ.

ಆ ಹೊನ್ನೆ ಮರವನ್ನು ಪ್ರೀತಿಸುವೆ ನಾನು
ಅಲ್ಲೆ ನಲಿದಾಡಿತ್ತು ಆ ಕಪ್ಪು ಹುಡುಗಿ ।। ೧ ।।

ಹೊನ್ನೆ ಮರ ಸಾಮಾನ್ಯವಾಗಿ ವಸಂತ ಮಾಸದಲ್ಲಿ ಹೊಸ ಚಿಗುರು ಬಂದು, ನಂತರ ಜೂನ್–ಆಗಸ್ಟ್ ತಿಂಗಳಲ್ಲಿ ಸುವಾಸಿತ ಹಳದಿಯ ಹೂಗೊಂಚಲುಗಳಿಂದ ಕೂಡಿರುತ್ತದೆ. ಆ ಜಾಗದಲ್ಲಿ ಆ ಹುಡುಗಿ ನಲಿದಾಡಿತ್ತು ಎಂದಿದ್ದಾರೆ. ಸಾಮಾನ್ಯವಾಗಿ ಅನೇಕ ಕವಿಗಳು "ಹೊಂಗೆ" ಮರವನ್ನು ತಮ್ಮ ಕವನಗಳಲ್ಲಿ ಬಳಸಿಕೊಂಡಿರುವುದನ್ನು ನಾವು ನೋಡಿದ್ದೇವೆ. ಆದರೆ ಈ ಕವನದಲ್ಲಿ "ಹೊನ್ನೆ" ಮರವನ್ನು ಬಳಸಿರುವುದರ ವಿಶೇಷವೇನು ನೋಡೋಣ. ಸಾಮಾನ್ಯವಾಗಿ ಬೀಟೆ ಮರವನ್ನು ಮನೆಯ ಮೊದಲ ಬಾಗಿಲಿಗೆ ಉಪಯೋಗಿಸುತ್ತಾರೆ. ಒಳಗಡೆ ಬಾಗಿಲುಗಳಿಗೆ ಹೊನ್ನೆ ಮರವನ್ನು ಉಪಯೋಗಿಸುತ್ತಾರೆ. ಮನೆಯ ಒಳಗಡೆ ಬಾಗಿಲು ಎಂದರೆ ಮನದ ಒಳಗೆ ಬಂದು ನಲಿದಾಡಿದ್ದಾಳೆ ಎಂದು ಅರ್ಥಮಾಡಿಕೊಳ್ಳಬಹುದು.

ಆ ಮುರುಕು ಮಂಟಪವ ಪ್ರೀತಿಸುವೆ ನಾನು
ಅಲ್ಲೆ ಒಲಿದಿತ್ತು ನನ್ನ ಆ ಕಪ್ಪು ಹುಡುಗಿ ।। ೨ ।।

ಮುರುಕು ಮಂಟಪಕ್ಕೆ ಸಾಮಾನ್ಯವಾಗಿ ಊರಿಗೆ ಬಂದ ಭಿಕ್ಷುಕ, ಬಡವ, ಬೈರಾಗಿ ಈ ತರಹ ಇರುವಂತಹ ಜಾಗವೆಂದು ಅನೇಕ ಕಥೆಗಳಲ್ಲಿ ಬಂದಿರುವುದನ್ನು ನಾವು ನೋಡಿದ್ದೇವೆ. ಆದರೆ ಈ ಜಾಗದಲ್ಲಿ ಆ ಹುಡುಗಿ ಒಲಿದಿದ್ದಾಳೆ ಎಂದು ಕವಿ ಹೇಳಿದ್ದಾರೆ. ಸಾಮಾನ್ಯನಾದ 'ನನಗೂ' ಆಕೆ ಒಲಿದಿದ್ದಾಳೆ ಎಂದು ಕವಿ ಹೇಳಿದ್ದಾರೆ. ಇಲ್ಲಿ ಪ್ರಥಮ ಬಾರಿಗೆ ಕವಿ 'ನನ್ನ' ಹುಡುಗಿ ಎಂದಿದ್ದಾರೆ. ಇದು ಗಮನಾರ್ಹ.

ಆ ದೇವಕಣಿಗೆಲೆಯ ಪ್ರೀತಿಸುವೆ ನಾನು
ಅಲ್ಲೆ ಮಲಗಿದ್ದಾಳೆ ಆ ಕಪ್ಪು ಹುಡುಗಿ ।। ೩ ।।

ದೇವಕಣಿಗಿಲೆ ಹಳದಿ ಮಿಶ್ರಿತ ಬಿಳಿ ಹೂ. ಅಲ್ಲೇ ಆ ಹುಡುಗಿ ಮಲಗಿದ್ದಾಳೆ ಎಂದು ಕವಿ ಹೇಳಿದ್ದಾರೆ. ಇದು ಸಾಮಾನ್ಯ ಕಣಗಿಲೆ ಆಗಿರದೆ ದೇವ ಕಣಗಿಲೆ. ಆ ದೇವಕಣಗಿಲೆಯನ್ನು ಆಕೆಗೆ ಅರ್ಪಿಸಿದ್ದಾರೆ ಎಂದು ಕೊಳ್ಳಬಹುದು. ಇಲ್ಲಿ ಇನ್ನೊಂದು ಗಮನಿಸಬೇಕಾದ ಅಂಶವೆಂದರೆ ಹೊನ್ನೆ ಮರದ ಹೂ ಕೂಡ ಹಳದಿ. ಇದು ದೇವಕಣಿಗಲೆ ಹೂವಿನ ಬಣ್ಣದ ಹತ್ತಿರವಿದ್ದು, ಹಾಗಾಗಿ ಸಾಮ್ಯತೆ ಸಾಧಿಸಿರುವುದು ಕಾಣುತ್ತದೆ.

ಭಾವಗೀತೆಯು ವೈಯುಕ್ತಿಕ ಭಾವನೆಗಳನ್ನು ಅಭಿವ್ಯಕ್ತಿಪಡಿಸುವ ಕಿರುಕವನ ಎಂದು ಸಾಮಾನ್ಯವಾಗಿ ಹೇಳುತ್ತಾರೆ. ಈ ಕವನದಲ್ಲಿ ಕವಿ ಆ ಹುಡುಗಿಯ ಬಗೆಗಿನ ಒಂದಿಷ್ಟು ವೈಯಕ್ತಿಕ ಭಾವನೆಗಳನ್ನು ಪ್ರೀತಿಸುವೆ, ನಲಿದಾಡಿತ್ತು, ಒಲಿದಿತ್ತು, ಮಲಗಿದ್ದಾಳೆ ಮುಂತಾದ ಪದಗಳಿಂದ ವ್ಯಕ್ತಪಡಿಸಿದ್ದಾರೆ. ಈ ಕವನದಲ್ಲಿ ಮೊದಲಿಗೆ 'ಕಂಡಳು' ಅಂದರೆ 'ನೋಡಿದೆ' ಎನ್ನುವಾಗ ಭಾವವೊಂದು ಉದಯಿಸಿದಂತೆ ಕಾಣುತ್ತದೆ. 'ನಲಿದಾಡಿದಳು', 'ಒಲಿದಳು' ಪದಗಳು ಭಾವಗಳು ಹರಳುಗೊಂಡು, ಹೊಳೆಯುತ್ತಾ ಇರುವುದನ್ನು ಕಾಣಬಹುದು. ನಂತರ 'ಮಲಗಿದ್ದಳು' ಎನ್ನುವಾಗ ಭಾವಗಳು ಮಡುಗಟ್ಟಿದಂತೆ ಕಾಣುತ್ತದೆ.

ಮೇಲುನೋಟಕ್ಕೆ ಇದೊಂದು ಕಿರು ಕವನವೆಂದುಕೊಂಡರೂ, ಜೀವನದ ಅನೇಕ ಸ್ಥಿತಿಗಳನ್ನು ಅಥವಾ ಹಂತಗಳನ್ನು ಹಾಯ್ದು ಹೋಗಿರುವುದನ್ನು 'ಕಂಡಳು', ನಲಿದಾಡಿದಳು', 'ಒಲಿದಿತ್ತು', 'ಮಲಗಿದ್ದಾಳೆ' ಪದಗಳು ಸೂಚಿಸುತ್ತವೆ. ಹಾಗಾಗಿ ಈ ಕವನಕ್ಕೆ ಧೀರ್ಘಕವನದ ಮನೋಧರ್ಮ ಕೂಡ ಇದೆ. ಅಲ್ಪದಲ್ಲಿ ಕಲ್ಪವನ್ನು ಕೆತ್ತಿರುವುದನ್ನು ನಾವಿಲ್ಲಿ ಕಾಣಬಹುದು.

ಭಾವಗೀತೆಯ ಮತ್ತೊಂದು ಲಕ್ಷಣ ಅದು ಹಾಡಲು ಬರುವಂತಿರಬೇಕು. ಮೈಸೂರು ಅನಂತಸ್ವಾಮಿಯವರು ಸಂಗೀತ ಸಂಯೋಜನೆ ಮಾಡಿ ಈ ಕವನ ಹಾಡಿರುವುದು ಯೂಟ್ಯೂಬಿನಲ್ಲಿ ಲಭ್ಯವಿದೆ. ಅತ್ಯಂತ ಸುಶ್ರಾವ್ಯವಾಗಿ ಹಾಡಿದ್ದಾರೆ.

ಈ ಗೀತೆಯಲ್ಲಿ ಇಬ್ಬರು ಪಾತ್ರಧಾರಿಗಳು ಇದ್ದಾರೆ. ಮೊದಲನೇಯ ಪಾತ್ರ ಕವಿ. ಎರಡನೇ ಪಾತ್ರ ಕೇಳುಗ. ಆದರೆ ಕೇಳುಗ ಕೇವಲ ಕೇಳಿಸಿಕೊಳ್ಳುವುದು ಮಾತ್ರ, ಕೇಳುಗ ಇಲ್ಲಿ ಮಾತನಾಡುವುದಿಲ್ಲ.

ಆದರೆ 'ಆ ಕಪ್ಪು ಹುಡುಗಿ' ಯಾರು ಎಂಬ ಪ್ರಶ್ನೆಗೆ ಉತ್ತರ ನೇರವಾಗಿ ಸಿಗುವುದಿಲ್ಲ. ಇಲ್ಲಿ ಕವಿಯ ಮನೋಧರ್ಮ ತಿಳಿಯಲು ಬಹುಶಃ ಕವಿಯ ಇನ್ನಿತರ ಕೆಲವು ಕವನಗಳನ್ನಾದರೂ ನೋಡಬೇಕು ಅನಿಸಿತು. ಆಗ ಇವರ ಬಹು ಜನಪ್ರಿಯವಾದ ಒಂದು ಭಾವ ಗೀತೆ ನೆನಪಾಯಿತು.

ಲೋಕದ ಕಣ್ಣಿಗೆ ರಾಧೆಯು ಕೂಡ
ಎಲ್ಲರಂತೆ ಒಂದು ಹೆಣ್ಣು
ನನಗು ಆಕೆ ಕೃಷ್ಣನ ತೋರುವ
ಪ್ರೀತಿಯು ನೀಡಿದ ಕಣ್ಣು ॥

ಕವಿ ರಚಿಸಿದ ಈ ರೀತಿಯ ಕವನಗಳಲ್ಲಿ ರಾಧೆಯ ಮೂಲಕ ಕೃಷ್ಣನ ತಲುಪುವ ಪ್ರಯತ್ನ ಮಾಡಿದಂತೆ ಮತ್ತು ಅವರಿಬ್ಬರ ಪ್ರೀತಿಗೆ ಪ್ರಾಮುಖ್ಯತೆ ಕೊಟ್ಟಹಾಗೆ ಕಾಣುತ್ತದೆ. ರಾಧಾಕೃಷ್ಣರ ಪ್ರೀತಿ ಜಗಜ್ಜನಿತ. ಅವರಿಬ್ಬರೂ ಒಬ್ಬರ ಬಿಟ್ಟು ಇನ್ನೊಬ್ಬರಿಲ್ಲ. ಹಾಗಾಗಿ ಈ ಕವನದಲ್ಲಿ ಬರುವ "ಕಪ್ಪು" ಪದ ಮೇಘಶ್ಯಾಮನಾದ ಕೃಷ್ಣನ ಬಣ್ಣವೆಂದುಕೊಳ್ಳಬಹುದು. ಹಾಗಾದರೆ "ಹುಡುಗಿ" ಪದ ರಾಧೆಗೆ ಎಂದುಕೊಂಡಂತೆ ಆಗುತ್ತದೆ. ರಾಧೆ ಇದ್ದಲ್ಲಿ ಕೃಷ್ಣ ಇರುತ್ತಾನೆ. ಹಾಗಾಗಿ "ಆ ಕಪ್ಪು ಹುಡುಗಿ" ಕೃಷ್ಣನನ್ನು ತನ್ನೊಳಗೇ ಇಟ್ಟುಕೊಂಡಿರುವ ರಾಧೆ ಎಂದುಗೊಂಡಂತೆ ಆಯಿತು.

ಈ ಮೇಲಿನ ಭಾವನೆ ಇಟ್ಟುಕೊಂಡು ಮತ್ತೊಮ್ಮೆ ಕವನ ಓದಿದರೆ ಆ ನೀಲಿ ಕೊಳದ ಬಳಿ ಕಾಣುವ ಕಪ್ಪು ಹುಡುಗಿ ನೀರು (ಸಮುದ್ರ), ಭೂಮಿ, ಆಕಾಶ ಎಂದು ಎಲ್ಲಾ ಕಡೆ ವ್ಯಾಪಿಸಿರುವ ರಾಧೆಯ ಜೊತೆ ಇರುವ ಕೃಷ್ಣನ ಬಗ್ಗೆ ಸೂಚ್ಯವಾಗಿ ಹೇಳಿದಂತೆ ಕಾಣಿಸುತ್ತದೆ. ದೇವರೇ ಕಾಣಿಸಿಕೊಂಡು, ಮನದಲ್ಲಿ ನಲಿದಾಡಿ, ಕುಚೇಲನ ಬಳಿಗೆ ಒಲಿದುಬಂದಂತೆ (ಮುರುಕು ಮಂಟಪ), ಬಂದು ಅಲ್ಲೇ ನೆಲೆ ನಿಂತಂತೆ ಕಾಣುತ್ತದೆ.

"ಈ ಕಪ್ಪು ಹುಡುಗಿ" ಪದಗಳಲ್ಲಿ ಇರುವ ಅಮೂರ್ತತೆಗೆ ಮೂರ್ತ ರೂಪಗಳನ್ನು ಕೊಡುವ ಶಕ್ತಿ ಈ ಕವನದ ಎರಡನೇಯ ಪಾತ್ರಧಾರಿಯಾದ ಕೇಳುಗನ ಯೋಚನೆಗಳ ಮೇಲೆ ಅವಲಂಬಿತವಾಗಿರುತ್ತದೆ. ಮೊದಲಿಗೆ ಸಾಮಾನ್ಯವಾಗಿವಾಗಿರುವ ಹುಡುಗಿಯೊಬ್ಬಳು ಕಂಡಳು, ಮನದಲ್ಲಿ ನಲಿದಾಡಿದಳು, ಒಲಿದಳು ಮತ್ತು ಈಗ ಮಲಗಿದ್ದಾಳೆ ಎಂದುಕೊಳ್ಳುವುದರಿಂದ ಹಿಡಿದು ರಾಧೆ ಕೃಷ್ಣರವರೆಗೆ ರೂಪ ಕೊಡಬಹುದಾದರೆ, ಆ ಗೀತೆಯ ಶಕ್ತಿ ಅನಾವರಣವಾಗುತ್ತದೆ.

ಸುಮಾರು ಹತ್ತು, ಹನ್ನೆರಡು ವರ್ಷಗಳ ಹಿಂದೆ 'ಈTV'ಯಲ್ಲಿ ಶ್ರೀಮತಿ ಅಪರ್ಣರವರು 'ನನ್ನ ಹಾಡು ನನ್ನದು' ಎಂಬ ಕಾರ್ಯಕ್ರಮ ಮಾಡುತ್ತಿದ್ದರು. ಆದರಲ್ಲಿ ಶ್ರೀ ಅನಂತಸ್ವಾಮಿಯವರ ಮಗ ಶ್ರೀ ರಾಜು ಅನಂತಸ್ವಾಮಿಯವರು ಈ ಹಾಡನ್ನು ಹೇಳುತ್ತಾ 'ಅಲ್ಲೇ ನಲಿದಾಡಿತ್ತು' ಸಾಲುಗಳನ್ನು ಹಾಡುವಾಗ ವಿವಿಧ ರೀತಿಯ ರಸಗಳನ್ನು ತೋರಿಸುತ್ತಾ, ಈ ಕವನದ ವಿಶೇಷತೆಯನ್ನು ತೋರಿಸಿದ್ದಾರೆ. "ಅಲ್ಲೇ ನಲಿದಾಡಿತ್ತು" ಎಂಬ ಎರಡು ಪದಗಳನ್ನು ಸಾಮಾನ್ಯವಾಗಿ ಹಾಡುವುದಕ್ಕೂ, "ಅಲ್ಲೇssss ನಲಿದಾಡಿತ್ತು" ಎಂದು ಹೇಳುವ ಪ್ರಯತ್ನ ಅಮೂರ್ತತೆಯನ್ನು ಮೂರ್ತರೂಪಕ್ಕೆ ಸಂಗೀತದ ಮೂಲಕ ಅಭಿವ್ಯಕ್ತಿಗೊಳಿಸುವ ಕ್ರಿಯೆ ಆಗಿದೆ.

ಈ ಕವನದಲ್ಲಿ ಪ್ರತಿಯೊಂದು ಪದವೂ ಅವರವರ ಭಾವಕ್ಕೆ ತಕ್ಕಂತೆ ವಿಸ್ತಾರಗೊಳ್ಳಲು ಸಾಧ್ಯವಿದೆ. "ಮಲಗಿದ್ದಾಳೆ" ಪದವು ಎಂದಿನಂತೆ ಸಾಮಾನ್ಯವಾಗಿ "ವಿಶ್ರಾಂತಿಗಾಗಿ ಮಲಗಿದ್ದಾಳೆ" ಎಂದುಕೊಳ್ಳಬಹುದು. ಅದರ ಹಿಂದಿನ ಪಲ್ಲವಿಯ ಪದಗಳಾದ "ಒಲಿದಳು" ಮತ್ತು "ನನ್ನ" ಪದಗಳು ಜೊತೆ ಸೇರಿಸಿಕೊಂಡು ನೋಡಿದಾಗ, ಅಲ್ಲಿ ಪ್ರೀತಿಪಾತ್ರರಲ್ಲಿ ಒಂದು ರೀತಿಯ "ಸ್ಥಿರತೆ" ಕಾಣಬಹುದು. ಅದನ್ನೇ ರಾಧೆ-ಕೃಷ್ಣರ ರೀತಿಯಲ್ಲಿ ನೋಡಿದರೆ, ಒಲಿದ ದೈವೀಕ ಪ್ರೀತಿ ಸಮಾದಿ ಸ್ಥಿತಿಯನ್ನು ತಲುಪಿದೆಯೆಂದು ಯೋಚಿಸಬಹುದು.

ಒಂದು ರೀತಿಯಲ್ಲಿ ನೋಡುವುದಾದರೆ, ಕವಿ ಸುಂದರವಾದ ತಿಳಿ ನೀರಿನ ಕೊಳದ ಮುಂದೆ ಕುಳಿತಿದ್ದಾರೆ. ಅವರ ಕಣ್ಣೆದುರು ನೀಲಿ ಕೊಳದಿಂದ ಒಂದಿಷ್ಟು ದೂರದಲ್ಲಿ ಹೊನ್ನೆ ಮರವಿದೆ. ಅಲ್ಲಿರುವ ಕೃಷ್ಣ, ಕೊಳದ ಬಳಿ ಇದ್ದ ರಾಧೆಯನ್ನು ನೋಡಿದ್ದಾನೆ. ಕೃಷ್ಣನ ಮನದೊಳಗೆ ಬಂದು ರಾಧೆ ಅಲ್ಲಿ ಸಂತೋಷದಿಂದ ನಲಿದಾಡಿದ್ದಾಳೆ, ಒಲವನ್ನು ತೋರಿದ್ದಾಳೆ, ನಂತರ ಅಲ್ಲೇ ನೆಲೆಗೊಂಡಿದ್ದಾಳೆ. ಈ ರಾಧೆ ಮತ್ತು ಕೃಷ್ಣನ ಪ್ರೀತಿಯ ಸನ್ನಿವೇಶವನ್ನು ಆರಾಧಿಸುವ ಕವಿ, ಭಕ್ತಿಪೂರ್ವಕವಾಗಿ ದೇವಕಣಿಗೆಲೆಯನ್ನು ಅವರಿಗೆ ಅರ್ಪಿಸಿದ್ದಾರೆ. ಇಲ್ಲಿ ಕೃಷ್ಣ ಮತ್ತು ರಾಧೆಯ ಸ್ಥಳವನ್ನು ಬದಲಾಯಿಸಿ ಕೂಡ ನೋಡಬಹುದು.

ಇನ್ನೊಂದು ರೀತಿಯಲ್ಲಿ ನೋಡಿದರೆ "ರಾಧೆಯ ಜೊತೆಗೆ ಬಂದ ನನ್ನ ಒಲವಿನ ಕೃಷ್ಣ ನನ್ನ ಮನದ ಮಂಟಪದಲ್ಲಿ ನೆಲೆನಿಂತನು" ಎಂದು ಕವನದ ಮೂಲಕ ಕವಿ ಹೇಳಿದಂತೆ ಇದೆ. ನನಗೆ ಈ ರೀತಿಯ ಕಲ್ಪನೆ ಬಹುಶಃ ಸರಿ ಇರಬಹುದೆಂದು ಅನಿಸಿತು.

ಈ ರೀತಿಯಲ್ಲಿ, ಈ ಕವನ ಶುದ್ಧತೆ, ಪ್ರೀತಿ, ನೆನೆಪು, ದೇವತೆ, ಭಕ್ತಿ ಮತ್ತು ಜೀವನದ ಅನಂತ ರೂಪಗಳ ಕುರಿತು ಶ್ರೀಯುತ ಹೆಚ್.ಎಸ್.ವೆಂಕಟೇಶಮೂರ್ತಿಯವರ ಅಂತರಂಗದಿಂದ ಹರಿದುಬಂದಿರುವ ಭಾವಗೀತೆಯಾಗಿದೆ. ಓದುಗನ ಮನದೃಷ್ಟಿಯ ಮೇಲೆ ಅವಲಂಬಿತವಾಗಿರುವ ಈ ಕವನ, ತಾನೇತಾನಾಗಿ ಹಲವಾರು ಅರ್ಥಗಳನ್ನು ಪಡೆದುಕೊಳ್ಳುವ ಕವನವಾಗುತ್ತದೆ.

ಇಂತಹ ಅದ್ಭುತ ಭಾವಗೀತೆಗಳನ್ನು ಕೊಟ್ಟ ಶ್ರೇಷ್ಠ ಕವಿಗೆ ಈ ಮೂಲಕ ನನ್ನ ನಮನಗಳು.

***

ಎಚ್ಚೆಸ್ವಿ ೮೦

– ಮಹಾಬಲ

ಎಂಬತ್ತು ವಸಂತ ಕಂಡ ಸಾರಸ್ವತ ಶ್ರೀಮಂತ
ಎಲ್ಲ ಪ್ರಕಾರಗಳಲೂ ಬರೆದು ಗೆದ್ದ ಧೀಮಂತ
ಸರ್ವಜನರಿಗೂ ಮಾದರಿ ಇವರ ಕುಟುಂಬ ಪ್ರೀತಿ
ನಸುನಗೆಯಲೇ ಮಾತನಾಡಿಸುವ ಪೂರ್ವಭಾಷಿ

ಬದುಕಿನ ಏಳುಬೀಳಿನ ಹಾದಿಗಳನು ದಾಟಿ
ಭಾವಲೋಕದ ಸುಮಧುರ ತಂತಿಗಳ ಮೀಟಿ
ನಾಟಕ, ಸಿನಿಮಾ, ಕತೆ, ಕವನ ಎಲ್ಲವೂ ಪ್ರಖರ
ಬುದ್ಧಚರಣವೆಂಬ ಪ್ರಬುದ್ಧ ಮಹಾಕಾವ್ಯ ಶಿಖರ

ಅಂದಿನಿಂದ ಇಂದಿನವರೆಗಿನ ಸಾಹಿತ್ಯ ಕುರಿತು
ವೇದಿಕೆಗಳಲಿ ಹದವರಿತ ಪಾಂಡಿತ್ಯದ ಮಾತು
ವಾಣಿಜ್ಯ ವಿದ್ಯಾರ್ಥಿಗಳಲೂ ಬಿತ್ತಿ ಸಾಹಿತ್ಯಾಸಕ್ತಿ
ಅರಿವು ಮೂಡಿಸಿದಿರಿ ಸದ್ದಿಲ್ಲದೆ ಕನ್ನಡದ ಶಕ್ತಿ

ಕೃಷ್ಣನ ಪ್ರಭಾವದ ನೆರಳು ಇವರ ಬಿಟ್ಟಿಲ್ಲ, ಬಿಡದು
ಕಾವ್ಯಸೃಷ್ಟಿ ಮುಂಬರಿದು ತರಲಿ ಇನ್ನಷ್ಟು ಬೆರಗು

(ಎಚ್ಚೆಸ್ವಿಯವರಿಗೆ ೮೦ ತುಂಬಿದಾಗ ಬರೆದದ್ದು)

ಎಚ್ಚೆಸ್ವಿ ಅವರ ಭಾವಗೀತೆಗಳು

– ಶ್ರೀಲಕ್ಷ್ಮಿ

ಭಾವಗೀತೆಗಳೆಂದರೆ ನನಗೊಂದು ರೀತಿಯ ಹುಚ್ಚು. ಎಚ್ಚೆಸ್ವಿಯವರ ಭಾವಗೀತೆಗಳೂ ಬಹಳ ಮೆಚ್ಚು. ಹಾಗಾಗಿ ಒಂದು ರೀತಿಯ ರಿಸರ್ಚ್ ಕೂಡ ಆಗುತ್ತದೆ ಎಂದು ಭಾಗೀತೆಗಳ ಬಗ್ಗೆ ಮಾತನಾಡುವ ಎಂದುಕೊಂಡೆ. ತಯಾರಿ ಮಾಡಿಕೊಳ್ಳಲು ಹೊರಟಾಗ ತಿಳಿಯಿತು, ನಾನು ಸಮುದ್ರಕ್ಕೆ ಕೈಹಾಕಿರುವೆ ಎಂದು. ಅದೃಷ್ಟವೆಂದರೆ ಸಮುದ್ರಕ್ಕೆ ಯಾರು ಎಷ್ಟೇ ಬಾರಿ ಕೈ ಹಾಕಿದರೂ ಬೋಗಸೆ ತುಂಬಾ ನೀರು ಸಿಕ್ಕುತ್ತದೆ. ನನಗೂ ಸಿಕ್ಕಿತು. ಇದೂ ಇಲ್ಲಿದೆ.

ಭಾವಗೀತೆಗಳು ಸರಳ ಪದಗಳ ಭಾವಯಾನ. ಜನಸಾಮಾನ್ಯರು ತಾವು ಅನುಭವಿಸಿರಬಹುದಾದ, ಆದರೆ ಶಕ್ತವಾಗಿ ವ್ಯಕ್ತಪಡಿಸಲಾಗದ ಭಾವನೆಗಳಿಗೆ ಮಾತು ಕೊಡಬೇಕು, ಅರ್ಥಕ್ಕಾಗಿ ಪದಕೋಶ ನೋಡುವಂತಿರಬಾರದು, ಲಯವಿರಬೇಕು. ಇವೆಲ್ಲವೂ ಇದ್ದುದರಿಂದಲೇ ಎಚ್ಚೆಸ್ವಿಯವರ ಗೀತೆಗಳು ಬಹಳ ಜನಪ್ರಿಯವಾದವು.

ರಾಗದ ಹೊರತಾಗಿಯೂ ಇವರ ಕವನಗಳನ್ನು ಓದಿಕೊಳ್ಳಬಹುದು. ಹಾಡಿನಷ್ಟೆ ಹೃದಯಕ್ಕೆ ತಟ್ಟುತ್ತವೆ. ಕೆಲವೊಮ್ಮೆ ಇನ್ನೂ ಹೆಚ್ಚು. ಭಾವಕ್ಕೆ ತಕ್ಕ ಸುಸಂಸ್ಕೃತ ಪದಗಳ ಬಳಕೆ, ಪದಗಳನ್ನು ಮೀರಿದ ಅರ್ಥ, ಕಲ್ಪನಾ ವಿಲಾಸ, ಸಾಮಾನ್ಯ ನೆಲೆಗಟ್ಟಿನಿಂದ ಅಸಾಮಾನ್ಯಕ್ಕೆ ಏರುವ ರೀತಿ ಇವುಗಳಿಂದ ಎಚ್ಚೆಸ್ವಿ ಕವಿಯಾಗಿಯೂ ವಿದ್ವದ್ವಲಯದ ಗೌರವಕ್ಕೆ ಪಾತ್ರರಾದರು. ಎಚ್ಚೆಸ್ವಿಯವರ ಸುಮಾರು ಕವನಗಳು ನಮ್ಮ ಕಣ್ಣಮುಂದೆ ಒಂದು ಚಿತ್ರವನ್ನು ಕಟ್ಟಿ ಕೊಡುತ್ತವೆ.

ತೂಗುಮಂಚದಲ್ಲಿ ಕವನ ನಮ್ಮ ಮುಂದೆ ಪ್ರಶಾಂತ ಸಂಜೆ, ಕೊಳದ ಸಮೀಪದ ತೂಗುಯ್ಯಾಲೆ, ಹೂಬಳ್ಳಿಗಳು, ಮೆಲ್ಲನೆ ಹರಡುತ್ತಿರುವ ಬೆಳದಿಂಗಳು, ಏಕಾಂತದಲ್ಲಿ ರಾಧಾಮಾಧವರು ಇವುಗಳನ್ನು ಖಂಡಿತ ತರುತ್ತದೆ.

ಹುಚ್ಚುಖೋಡಿ ಮನಸು ನಾವೂ ನೀವು ನೋಡಿರುವ ಹದಿನಾರರ ಬಾಲೆಯನ್ನು ಕಣ್ಣಮುಂದೆ ನಿಲ್ಲಿಸದಿದ್ದರೆ ಕೇಳಿ. (ನಮ್ಮದೇ ಹದಿವಯಸ್ಸನ್ನು ನೆನಪಿಗೆ ತಂದರೂ ಆಶ್ಚರ್ಯವಿಲ್ಲ)

ಅಮ್ಮ ನಾನು ದೇವರಾಣೆ ಕವನ ನಮ್ಮ ಕಣ್ಮಂದೆ ಹುಸಿಕೋಪದಲ್ಲಿರುವ ಯಶೋದೆ, ಕಣ್ಣಿನಲ್ಲಿ ತುಂಟತನ ತುಳುಕಿಸುತ್ತಾ ಸಬೂಬು ಹೇಳುವ ಕೃಷ್ಣನನ್ನು ತರದಿದ್ದರೆ ನನ್ನಾಣೆ.

ಎಚ್ಚೆಸ್ವಿಯವರು ಭಾವಗೀತಾತ್ಮಕವಾಗಿ ಕೃಷ್ಣನನ್ನು ಧೇನಿಸಿದ್ದಾರೆ, ಪೂಜಿಸಿದ್ದಾರೆ. ತುಂಟ ಕೃಷ್ಣ, ರಾಧಾಮಾಧವ, ಪ್ರೇಮಿ, ಯಶೋದಾ ನಂದನ, ಗೆಳೆಯ, ಮೋಕ್ಷದಾಯಿ, ಗೋಪಾಲಕ ಎಲ್ಲಾ ರೂಪ ಗಳಲ್ಲೂ ಕೃಷ್ಣನನ್ನು ಕಂಡಿದ್ದಾರೆ.

ಅಮ್ಮ ನಾನು ದೇವರಾಣೆ
ಸಂಜೀಯಾಯಿತು
ಪ್ರೀತಿಕೊಟ್ಟ ರಾಧೆಗೆ
ಅಮ್ಮ ಯಶೋದ
ಕೈಯಲಿ ಬೆಣ್ಣೆ ಮೈಯೆಲ್ಲಾ ಮಣ್ಣು
ಎಲ್ಲರುವೆ ಘನಶ್ಯಾಮ
ಎಲ್ಲಿಗೆ ಹೋದನು ನಿಲ್ಲದೆ ಮಾಧವ

ಇವು ಕೃಷ್ಣ ಧ್ಯಾನದ ಕೆಲವು ಹೊಳಹುಗಳು ಅಷ್ಟೆ. ಕೃಷ್ಣನಿಲ್ಲದೆ ಎಚ್ಚೆಸ್ವಿಯವರ ಭಾವಗೀತೆಗಳಿಲ್ಲ. ಕೃಷ್ಣ ನೇರವಾಗಿ ಇಲ್ಲದ ಕವಿತೆಗಳಲ್ಲಿಯೂ ಪರೋಕ್ಷವಾಗಿ ಅವರನ್ನು ಪ್ರಭಾವಿಸುತ್ತಲೇ ಇರುತ್ತಾನೆ ಎನ್ನುವುದು ನನ್ನ ಭಾವನೆ. ಅಷ್ಟರಮಟ್ಟಿಗೆ ಕೃಷ್ಣ ಅವರನ್ನು ಆವರಿಸಿಕೊಂಡಿದ್ದಾನೆ.

ಪ್ರೀತಿಯಲ್ಲಿರುವಾಗ ನಲ್ಲೆಗೆ ಸಂಬಂಧಪಟ್ಟ ಎಲ್ಲವೂ ನಲ್ಲನಿಗೆ ಬಹು ಪ್ರಿಯ. ಈ ಭಾವವನ್ನು ನಾವು ಅನೇಕ ಭಾವಗೀತೆ, ಚಿತ್ರಗೀತೆಗಳಲ್ಲಿ ಕಾಣುವುದು ಬಲು ಸಾಮಾನ್ಯ. ಆದರೆ ಪ್ರತಿಭಾಶಾಲಿ ಕವಿಯ ಕೈಗೆ ಸಿಕ್ಕ ಈ ಭಾವ "ಪ್ರೀತಿ ಎಂಬ ಮಾಯೆ" ಕವನವಾಗುತ್ತದೆ. ಅಂತರಂಗದ ತೆರೆ ಸರಿಸುತ್ತದೆ. ಸೃಷ್ಟಿಯೇ ತನ್ನದೆಂಬುದನ್ನು ಕಾಣಿಸುತ್ತದೆ. ಇದು ಎಚ್ಚೆಸ್ವಿಯವರ ಮಾಯೆ.

ಇನ್ನು ಎಚ್ಚೆಸ್ವಿಯವರು ಭಾಷೆ ನವುರು. ಸೂಕ್ಷ್ಮ ಕುಸುರಿ ಮಾಡಿದ ರೇಷ್ಮೆಯಂತಹ ಭಾಷೆ. ತಕ್ಷಣ ಆಕರ್ಷಿಸುವಂತದ್ದು ನಿಧಾನವಾಗಿ ನೋಡಿದಾಗ ಮತ್ತೂ ಸೊಗಸು ಎನಿಸುವಂತದ್ದು.

ಎಚ್ಚೆಸ್ವಿ ವಿರಚಿತ ಭಾವಗೀತೆ

ಹುಚ್ಚು ಕೋಡಿ ಮನಸು

-ಎಚ್.ಎಸ್.ವೆಂಕಟೇಶ ಮೂರ್ತಿ

ಹುಚ್ಚು ಕೋಡಿ ಮನಸು
ಅದು ಹದಿನಾರರ ವಯಸು ||ಪ||

ಮಾತು ಮಾತಿಗೇಕೋ ನಗು
ಮರುಗಳಿಗೆಯೇ ಮೌನ
ಕನ್ನಡಿಯ ಮುಂದಷ್ಟು ಹೊತ್ತು
ಬರೆಯದಿರುವ ಕವನ ||

ಸೆರಗು ತೀಡಿದಷ್ಟು ಸುಕ್ಕು
ಹಠ ಮಾಡುವ ಕೂದಲು
ನಿರಿಯೇಕೋ ಸರಿಯಾಗದು
ಮತ್ತೆ ಒಳಗೆ ಹೋದಳು ||

ಕೆನ್ನೆ ಕೊಂಚ ಕೆಂಪಾಯಿತೆ
ತುಟಿಯ ರಂಗು ಹೆಚ್ಚೆ
ನಗುತ ಅವಳ ಛೇಡಿಸುತಿದೆ
ಗಲ್ಲದ ಕರಿ ಮಚ್ಚೆ ||

ಬರಿ ಹಸಿರು ಬರಿ ಹೂವು
ಎದೆಯಲೆಷ್ಟೋ ಹೆಸರು
ಯಾವ ಮದುವೆ ದಿಬ್ಬಣವೋ
ಸುಮ್ಮನೆ ನಿಟ್ಟುಸಿರು ||

***

ಅವಳ ಮೊಗವ ಬೆಳಗುವಂತ ಸೂರ್ಯ ಚಂದ್ರರು
ನಮ್ಮ ಮನೆಯ ದೀಪದಷ್ಟೆ ಆಪ್ತರಾದರು.

ತನ್ನನಿತ್ತ ಕೊಳಲಿಗೆ ರಾಗ ಕೊಟ್ಟ ಮಾಧವ

ಬಯಸಿದೆ ನಿನ್ನನು ಭಾವನಾ ಮೇಳಕೆ ಹಾಡಿನಲ್ಲಿ

ಸಾಲ್ಮರದ ಕೊಂಬೆಯಲ್ಲಿ ಹಕ್ಕಿಗಳ ಗೂಡಿದೆ
ತೂಗುವ ಗೂಡಿನಲ್ಲಿ ಜೋಗುಳದ ಹಾಡಿದೆ

ನನ್ನ ಬಾಳಿನ ನೀಲಿ ನನ್ನವಳ ಕಣ್ಣಾಲಿ
ಚಂದ್ರಿಕೆಯ ಸುಧೆಯಲ್ಲಿ ತೋಯಲೇಬೇಕು

ಎಚ್ಚೆಸ್ವಿಯವರ ಪ್ರತಿ ಕವನದಲ್ಲೂ ಒಂದು ಸ್ಥಾಯೀಭಾವ ಇರುತ್ತದೆ. ಪ್ರೀತಿ, ವಿರಹ, ಬೇಡಿಕೆ, ಭಕ್ತಿ, ವೈರಾಗ್ಯ ಹೀಗೆ. ಆದಿಪ್ರಾಸ (alliteration) ಮತ್ತು ಅಂತ್ಯ ಪ್ರಾಸಗಳಬಳಕೆ ಹೇರಳವಾಗಿರುತ್ತದೆ. ಇದು ರಾಗ ಸಂಯೋಜನೆಗೆ ಚೆನ್ನಾಗಿ ಒದಗಿಬರುತ್ತದೆ.

ನನ್ನ ಓಲೆ ಓಲೆಯಲ್ಲ ಮಿಡಿವ ಒಂದು ಹೃದಯ

ಎಲ್ಲಿರುವಳೋ ನಲ್ಲೆ

ಪ್ರೇಯಸಿ ಪ್ರೀತಿಸಿ ಮರೆತೆಯಾ ಒಣಗಿಸಿ ಒಲವಿನ ಒರತೆಯ

ನಿನ್ನ ಪ್ರಿಯಕರ ನಿನ್ನ

ಇವು ವಿರಹವೇ ಸ್ಥಾಯೀಭಾವವಾದ ಕವನಗಳು.

ಎಚ್ಚೆಸ್ವಿಯವರ ಅನೇಕ ಕವನಗಳೇ ಒಂದೊಂದು ಲೇಖನ ಬರೆಯುವಷ್ಟು ಸೊಗಸಾಗಿರುತ್ತದೆ. ಅಂಥದ್ದರಲ್ಲಿ ಒಂದೇ ಸಣ್ಣ ಲೇಖನದಲ್ಲಿ ಎಲ್ಲಾ ಭಾವಗೀತೆಗಳನ್ನು ಹಿಡಿದಿಡಲಾಗುವುದೇ. ಇದು ನನಗಾಗಿ ನನ್ನ ಪ್ರಯತ್ನ.


ಅಡಿಗರು ಎಚ್ಚೆಸ್ವಿಯವರಿಗೆ ಭಾವಗೀತೆ ಬರಿಬಾರದಪ್ಪ. ಹಾಡುವವರು ಎನನ್ನು ಬೇಕಾದರೂ ಚೆನ್ನಾಗಿ ಹಾಡುತ್ತಾರೆ. ಕಳಪೆ ಕವನವೂ ಪ್ರಸಿದ್ದವಾಗುತ್ತದೆ ಎಂದಿದ್ದರಂತೆ. ಸದ್ಯ ಎಚ್ಚೆಸ್ವಿಯವರು ಅಡಿಗರ ಮಾತು ಕೇಳಲಿಲ್ಲ. ನಮ್ಮ ಭಾವಗೀತ ಪ್ರಪಂಚ ಸಮೃದ್ದವಾಯಿತು. ನನ್ನ ಪ್ರಪಂಚವೂ ಸಮೃದ್ದವಾಯಿತು.

***

ಎಚ್ಚೆಸ್ವಿ ಕುರಿತ ಪುಸ್ತಕದ ಬಗ್ಗೆ

"ಹಾಡು ಮುಗಿಯುವುದಿಲ್ಲ"

– ಕಮಲಾಕ್ಷಿ ಸಿ.ಆರ್.



ಅಪೂರ್ವ ಭಾವಗೀತೆಗಳ ಮೂಲಕ ಚಿರಸ್ಥಾಯಿಯಾಗಿರುವ ಶ್ರೀ ಎಚ್.ಎಸ್.ವೆಂಕಟೇಶಮೂರ್ತಿಯವರ ಸ್ಮರಣೆಯ ನಿಮಿತ್ತ ಇಂದಿನ ಸಾಹಿತ್ಯ ದಾಸೋಹದಲ್ಲಿ, ಎಚ್ಚೆಸ್ವಿಯವರ ಚಿತ್ರಗೀತೆಗಳಿಗೆ ಸಂಬಂಧಿಸಿದ 'ಹಾಡು ಮುಗಿಯುವುದಿಲ್ಲ' ಎಂಬ ಪುಸ್ತಕವನ್ನು ಪರಿಚಯ ಮಾಡುವ ಪ್ರಯತ್ನ ಮಾಡಿರುವೆ.

ಕನ್ನಡದ ಹೆಸರಾಂತ ಪತ್ರಕರ್ತರು, ಅಂಕಣಬರಹಗಾರರು, ಚಲನಚಿತ್ರ ವಿಮರ್ಶಕರು ಹಾಗೂ ಲೇಖಕರೂ ಆದ ಶ್ರೀ ಎನ್.ಎಸ್. ಶ್ರೀಧರ ಮೂರ್ತಿಯವರ ಸಂಪಾದಕತ್ವದ ಪುಸ್ತಕ 'ಹಾಡು ಮುಗಿಯುವುದಿಲ್ಲ'. ಇದು ಅಂಕಿತ ಪ್ರಕಾಶನದಿಂದ 2020ರಲ್ಲಿ ಪ್ರಕಟಿತವಾಗಿದೆ. ಚೇತೋಹಾರಿ ನಗುವಿನ ಎಚ್ಚೆಸ್ವೀ ಅವರ ಭಾವಚಿತ್ರವಿರುವ ಮುಖಪುಟವು ಆಕರ್ಷಕವಾಗಿದೆ. ಸಿನಿಮಾ ಹಾಗೂ ಧಾರಾವಾಹಿಗಳ ಶೀರ್ಷಿಕೆ ಗೀತೆಗಳಿರುವ ಸಂಗ್ರಹ ಪುಸ್ತಕ ಇದಾಗಿದೆ.

ಪುಸ್ತಕದ ಮೊದಲ ಪುಟದಲ್ಲಿ ಶ್ರೀ ಕೆ.ಎಸ್.ನ, ಅವರ "ಹಾಡು ಮುಗಿಯುವುದಿಲ್ಲ, ಮುಗಿದರದು ಹಾಡಲ್ಲ" ಎಂದು ಅಚ್ಚಾಗಿರುವ ಎರಡು ಸಾಲಿನ ನುಡಿ ಎಚ್ಚೆಸ್ವೀ ಅವರಿಗೆ ನೂರು ಪ್ರತಿಶತ ಹೊಂದುತ್ತದೆ. ಅವರು ಗೀತೆಗಳ ಮೂಲಕ ನಿತ್ಯ ಹಾಡಾಗಿ ಜನಮನದಲ್ಲಿ ಚಿರಸ್ಥಾಯಿಯಾಗಿ ಇರುತ್ತಾರೆ ಎಂದು ಹೇಳುವಂತಿದೆ.

ಪುಸ್ತಕದ ಒಳಹೊಕ್ಕಾಗ ಶ್ರೀ ಕೆ.ಎಸ್.ನ. ಅವರ ನುಡಿಯ ನಂತರದಲ್ಲಿ ಎಚ್ಚೆಸ್ವೀಯವರ ಮನದ ಮಾತುಗಳಿವೆ. ಚಿಕ್ಕಂದಿನಲ್ಲಿ, ಕಾಲೇಜಿನ ದಿನಗಳಲ್ಲಿ ಸಿನಿಮಾ ನೋಡಿ ಪ್ರಭಾವಿತರಾಗಿ ಗೆಳೆಯರೊಡನೆ ಸಿನಿಮಾ ಮಾಡುವ ಕನಸು ಕಂಡಿದ್ದೆ ಎಂದಿದ್ದಾರೆ. ಬೆಂಗಳೂರಿಗೆ ಬಂದ ನಂತರ ಸಿನಿಮಾಕ್ಕೆ ಬರೆಯುವ ಅವಕಾಶಕ್ಕಾಗಿ ಹಂಬಲಿಸುತ್ತಿರುವಾಗಲೇ 'ಚಿನ್ನಾರಿ ಮುತ್ತ' ಚಿತ್ರಕ್ಕೆ ಕಥೆ, ಚಿತ್ರಕಥೆ ಹಾಗೂ ಎಲ್ಲ ಗೀತೆಗಳನ್ನು ಬರೆಯುವ ಅವಕಾಶ ಅಚಾನಕ್ಕಾಗಿ ಲಭಿಸಿತು ಎಂದು ಮುಕ್ತವಾಗಿ ಹೇಳಿಕೊಂಡಿದ್ದಾರೆ. ಫಲಾಪೇಕ್ಷೆಯ ನಿರೀಕ್ಷೆಯಿರದೆ ನಿಷ್ಠೆಯಿಂದ ನಿರ್ವಹಿಸಿದ ಕಾರ್ಯ ಸತ್ಫಲವನ್ನು ನೀಡುತ್ತದೆ ಎಂಬುದಕ್ಕೆ ಚಿನ್ನಾರಿಮುತ್ತ ಅದ್ಭುತ ಯಶಸ್ಸು ಪಡೆದದ್ದೇ ಸಾಕ್ಷಿ.

ಶ್ರೀ ಎನ್.ಎಸ್.ಶ್ರೀಧರಮೂರ್ತಿಯವರು ಸಿನಿಮಾ ಹಾಡುಗಳನ್ನು ಸಂಗ್ರಹಿಸಿದ್ದರ ಕುರಿತು ಎಚ್ಚೆಸ್ವೀಯವರ ಮಾತುಗಳಲ್ಲಿ ಓದುವುದೇ ಸೊಗಸು.

ಪುಸ್ತಕದ ಸಂಪಾದಕರಾದ ಶ್ರೀಧರಮೂರ್ತಿಯವರು ಏಳು ಪುಟಗಳಲ್ಲಿ 'ಎಚ್ ಎಸ್ ವೀ ಹಾಡಿನ ಜಾಡ ಹಿಡಿದು' ಶೀರ್ಷಿಕೆಯಡಿ ಆಪ್ತವಾದ ಪ್ರಸ್ತಾವನೆ ಬರೆದಿದ್ದಾರೆ. 'ಎಚ್ಚೆಸ್ವೀಯವರು ಸಾಹಿತ್ಯದಿಂದ ಚಿತ್ರರಂಗಕ್ಕೆ ಬರುವಾಗ ಅಲ್ಲಿನ ಸಾಂಸ್ಕೃತಿಕ ಕಾಳಜಿಗಳನ್ನು ಚಿತ್ರರಂಗಕ್ಕೆ ತಂದು, ಅನನ್ಯತೆಗಳನ್ನು ಉಳಿಸಿಕೊಂಡವರು' ಎಂದು ಅಭಿಮಾನಪೂರ್ವಕವಾಗಿ ಹೇಳಿದ್ದಾರೆ.

ಹಾಡುವ ಗುಣ ಕಾವ್ಯದ ಹಿರಿಮೆಯನ್ನು ತಗ್ಗಿಸುತ್ತದೆ ಎಂಬುದಕ್ಕೆ ವ್ಯತಿರಿಕ್ತವಾಗಿ ಎಚ್ಚೆಸ್ವೀಯವರ ಸಿನಿಮಾ ಗೀತೆಗಳು ಸದಾ ಕಾಡುತ್ತವೆ ಹಾಗೂ ರೋಮಾಂಚನಗೊಳಿಸುತ್ತವೆ ಎಂದಿದ್ದಾರೆ. ಶ್ರೀಧರಮೂರ್ತಿಯವರ ಸಂಪಾದಕೀಯ ನುಡಿಗಳೆಲ್ಲವೂ ಗೀತೆಗಳ ಸಮಗ್ರ ಪರಿಚಯವನ್ನು ನೀಡುತ್ತವೆ. ಅದನ್ನು ಓದಿಯೇ ಸವಿಯಬೇಕು.

ಬೆನ್ನುಡಿಯಲ್ಲಿ ನಾಡೋಜ ಶ್ರೀ ಚೆನ್ನವೀರ ಕಣವಿಯವರು ಸುಗಮ ಸಂಗೀತ ಗಾಯಕರು, ಸಂಯೋಜಕರು, ನಿರ್ದೇಶಕರು, ಮೂರ್ತಿಯವರಂತಹ ಮುಕ್ತ ಪ್ರಜ್ಞೆಯ ಕವಿಗಳಿಂದ ಪಡೆದಿರುವ ಪ್ರಯೋಜನ ಅಷ್ಟಿಷ್ಟಲ್ಲ, ಅನೇಕ ವಿಧದಲ್ಲಿ ಸಾಂಸ್ಕೃತಿಕ ಲೋಕದ ಮಾಧುರ್ಯವನ್ನು ಹೆಚ್ಚಿಸಿದ ಕವಿ ಎಚ್ಚೆಸ್ವಿಯವರನ್ನು ಶ್ಲಾಘಿಸಿದ್ದಾರೆ.

ಗೀತೆಗಳತ್ತ ನೋಡುವುದಾದರೆ, ಇದರಲ್ಲಿ ಒಟ್ಟು 65 ಗೀತೆಗಳಿದ್ದು 60 ಸಿನಿಮಾ ಗೀತೆಗಳು ಹಾಗೂ 5 ಧಾರಾವಾಹಿಯ ಶೀರ್ಷಿಕೆ ಗೀತೆಗಳಾಗಿವೆ. ಚಿನ್ನಾರಿ ಮುತ್ತದ ಹತ್ತು ಗೀತೆಗಳಿದ್ದು, ಸಿನಿಮಾದ ಪೂರ್ಣ ಕಥೆಯನ್ನು ಕಣ್ಣಮುಂದೆ ನಿಲ್ಲಿಸುತ್ತದೆ. ಗೆಳೆಯರೊಡನೆ ನಲಿಯುವ, ಅಜ್ಜಿ ಮೊಮ್ಮಗನಿಗೆ ಸಾಂತ್ವನ ಹೇಳುವ, ದೊಡ್ಡ ನಗರ ಸೇರಿ ಪರಿತಪಿಸುವ, ಕಳ್ಳರ ಗುಂಪಿಗೆ ಹೋಗುವ, ಬಳಿಕ ಸಾಧಕನಾಗುವ ಎಲ್ಲ ಸನ್ನಿವೇಶಗಳಿಗೂ ಗೀತೆಗಳಿವೆ. ಚಿತ್ರಕಥೆಯೂ ಎಚ್ಚೆಸ್ವೀಯವರದೇ ಆಗಿರುವುದರಿಂದ, ಗೀತೆಗಳು ಕಥೆಯೊಂದಿಗೆ ಮಿಳಿತವಾಗಿ ಸಿನಿಮಾವನ್ನು ಅದ್ಭುತ ಎನಿಸುವಂತೆ ಮಾಡಿದೆ.

ಬಾಳೊಂದು ಭಾವಗೀತೆ ಸಿನಿಮಾದ 'ಕಾಮನ ಬಿಲ್ಲಿನ ಮೇಲೆ ಕೂಗುತ ಸಾಗುವ ರೈಲಿದೆ' ಎಂದು ಮಕ್ಕಳಿಗಾಗಿ ಬರೆದ ಪ್ರವಾಸ ಗೀತೆಯಾಗಿದೆ.

ವಿಜಯೋತ್ಸವ ಚಿತ್ರದ 'ಐದು ಬೆರಳು ಕೂಡಿ ಒಂದು ಮುಷ್ಟಿಯು' ಭಾವೈಕ್ಯತೆಯನ್ನು ಸಾರುವ ಜನಪ್ರಿಯ ದೇಶಭಕ್ತಿಯಾಗಿ ಜನಪ್ರಿಯವಾಗಿದೆ.

ಜಂಬೂ ಸವಾರಿಯ ಚಿತ್ರ, ಒಂದೂರಲ್ಲಿ ಹಾಗೂ ಸಾಹೇಬ ಚಿತ್ರಗಳ ಶಿಶು ಗೀತೆಗಳು ಗುನುಗುನಿಸುವಂತಿವೆ.

ಕೊಟ್ರೇಶಿ ಕನಸು ಚಿತ್ರದ ಎಂಟು ಗೀತೆಗಳಲ್ಲಿ ತೇರು ಹೊಂಟೈತೆ ತಂಗಿ, ಯಾಕಿಂಗೆ ಕುಂತ್ಯೋ ತಿಪ್ಪಣ್ಣ ಜಾನಪದ ಶೈಲಿಯಲ್ಲಿವೆ.

ಐದು ಬೆರಳು ಕೂಡಿ ಒಂದು ಮುಷ್ಟಿಯು

– ಎಚ್.ಎಸ್. ವೆಂಕಟೇಶಮೂರ್ತಿ

ಐದು ಬೆರಳು ಕೂಡಿ ಒಂದು ಮುಷ್ಟಿಯು
ಹಲವು ಮಂದಿ ಸೇರಿ ಈ ಸಮಷ್ಟಿಯು
ಬೇರೆ ಬೇರೆ ಒಕ್ಕಲು ಒಂದೆ ತಾಯ ಮಕ್ಕಳು
ಕೂಡಿ ಹಾಡಿದಾಗ ಗೆಲುವು ಗೀತೆಗೆ
ಭರತ ಮಾತೆಗೆ ಭರತ ಮಾತೆಗೆ
ಮೊಳಗಲಿ ಮೊಳಗಲಿ ನಾಡಗೀತವೂ
ಮೂಡಲಿ ಮೂಡಲಿ ಸುಪ್ರಭಾತವೂ

ಹಿಮಾಲಯದ ನೆತ್ತಿಯಲ್ಲಿ ಕಾಶ್ಮೀರದ ಬಿತ್ತಿಯಲ್ಲಿ
ಅಸ್ಸಾಮಿನ ಕಾಡಿನಲ್ಲಿ ಐದು ನದಿಯ ನಾಡಿನಲ್ಲಿ
ಹೊತ್ತಿಯುರಿವ ಬೆಂಕಿಯಾರಿ ತಣ್ಣಗಾಗಲಿ
ಬಂಜರಲ್ಲೂ ಹಚ್ಚ ಹಸಿರು ಬೆಳೆದು ತೂಗಲಿ
ಗಂಗೆ ತಂಗಿ ಕಾವೇರಿಯ ತಬ್ಬಿಕೊಳ್ಳಲಿ

ಲಡಾಕ್ ಖನಿಫಾ ಗಡಿಗಳಲ್ಲಿ ಯಂತ್ರಾಲಯ ಗುಡಿಗಳಲ್ಲಿ
ಭತ್ತ ಗೋಧಿ ಬೆಳೆಯುವಲ್ಲಿ ಪ್ರೀತಿಯು ಮೈ ತಳೆಯುವಲ್ಲಿ
ದುಡಿವ ಹಿಂದು ಮುಸಲ್ಮಾನರೊಂದುಗೂಡಲಿ
ಆರದಿರಲಿ ಪ್ರೀತಿ ದೀಪ ಕಣ್ಣ ಗೂಡಲಿ
ಎದೆಯ ಕೊಳೆಗಳನ್ನು ಅಶ್ರು ಧಾರೆ ತೊಳೆಯಲಿ

***

ಅಮೆರಿಕಾ ಅಮೆರಿಕಾದ 'ಬಾನಲ್ಲಿ ಓಡೋ ಮೇಘ' ಗೀತೆಗೆ ಭಾವಗೀತೆಯ ಮೆರುಗಿದ್ದು, ಮೇಘ ಮಳೆಯಾಗಿ ಮಣ್ಣನ್ನೇ ಸೇರಬೇಕು ಎಂಬ ಸಾಲು ಗೀತೆಯಲ್ಲಿ ಪ್ರಾತಿನಿಧ್ಯ ಪಡೆಯುತ್ತದೆ.

ಮತದಾನದ 'ನಾಯಿ ತಲೆ ಮ್ಯಾಲಿನ ಬುತ್ತಿ ಸಂಸಾರ' ಗೀತೆಯು ಸಂಸಾರ ಬಲುಘೋರ ಎನ್ನುತ್ತ ವಿಪರ್ಯಾಸಗಳನ್ನು ಉಲ್ಲೇಖಿಸಿದರೆ, ಮ್ಯಾಜಿಕ್ ಅಜ್ಜಿ ಚಿತ್ರದ 'ಕಾರಿಗೆ ಗೋಲಿ ಮಾರೋ' ಗೀತೆಯು ಅಪ್ಪಟ ಶಿಶುಗೀತೆಯಾಗಿದ್ದು ಎಚ್ಚೆಸ್ವೀಯವರು ಮಕ್ಕಳ ಮನಸ್ಸಿಗೆ ಕನ್ನಡಿ ಹಿಡಿದಂತಿದೆ.

ಹಸಿರು ರಿಬ್ಬನ್ ಚಿತ್ರದಲ್ಲಿ ಒಂದು ಶ್ರೀಲಕ್ಷ್ಮೀಗೆ, ಭೂಮಿ ತಾಯಿಗೆ ರಚಿಸಿರುವ ಭಕ್ತಿಗೀತೆ ಸ್ತುತಿಸುವಂತಿದ್ದು, ಉಳಿದವು ಭಾವಗೀತೆಯಂತಿದೆ. ಮಗಳನ್ನು ಪಾಕದಲಿ ಅದ್ದಿರುವ ಜಾಮೂನಿಗೆ ಹೋಲಿಸಿರುವುದು ಆಪ್ತವಾಗುತ್ತದೆ.

ಅರ್ಘ್ಯಂ, ಅಮೃತವಾಹಿನಿ ಎರಡೂ ಗೀತೆಗಳು ಭಾವಗೀತೆಯಾಗಿ ಮನದಲ್ಲಿ ಬಹುಕಾಲ ಕಾಡುತ್ತವೆ. ಕ್ರೇಜಿ ಕುಟುಂಬದ 'ಅಮ್ಮ ನಾನು ದೇವರಾಣೆ' ಗೀತೆಯಲ್ಲಿ ಕೃಷ್ಣನ ತುಂಟಾಟವನ್ನು, ಕಿರಿಕ್ ಪಾರ್ಟಿಯ 'ತೂಗು ಮಂಚದಲ್ಲಿ ಕೂತು' ಗೀತೆಯಲ್ಲಿ ರಾಧೆ ಶ್ಯಾಮರನ್ನು ಕಣ್ಣೆದುರು ತಂದುಬಿಡುತ್ತಾರೆ. ಏಪ್ರಿಲ್‌ನ ಹಿಮಬಿಂದುವಿನ 'ಇಷ್ಟು ಕಾಲ ಒಟ್ಟಿಗಿದ್ದು' ಭಾವಗೀತೆಯಾಗಿ ಕಾಡುತ್ತದೆ. ಹತ್ಯಾರ ಚಿತ್ರದ ಕಲ್ಲಾಗು ಕಲ್ಲಾಗು, ಚೌಕಾಬಾರ ಚಿತ್ರದ ಗೀತೆಗಳು ಆಕ್ರೋಶ ಹಾಗೂ ನೋವನ್ನು ಅನುಭವಿಸಿದಂತೆ ರಚಿಸಿರುವ ಗೀತೆಗಳಾಗಿವೆ.

ನಮ್ಮ ರಾಜ್ಯದ ಚಂದನ ವಾಹಿನಿಯ ನಾಡಿನ ನಾಡಿ ಚಂದನ, ಮಗಳು ಜಾನಕಿಯ ಊರ ಸೇರಬಹುದೇ, ಮುಕ್ತ ಧಾರವಾಹಿಯ ಮಣ್ಣ ತಿಂದು, ಅರುಂಧತಿಯ ಹೂವು ಬಾಡಿದರು, ಮುತ್ತಿನ ತೆನೆಯ ಕಾದ ಹಾಲು ಆರಿದಾಗ ಇವೆಲ್ಲವೂ ಧಾರಾವಾಹಿಗಳ ಶೀರ್ಷಿಕೆ ಗೀತೆಗಳಾಗಿವೆ. ಶೀರ್ಷಿಕೆ ಗೀತೆಗಳೇ ವೇದಿಕೆಯಲ್ಲಿ ಕೇಳಿ ಹಾಡಿಸಿಕೊಳ್ಳುವಷ್ಟು ಜನಪ್ರಿಯತೆ ಪಡೆದವು.


ಎಚ್ಚೆಸ್ವೀಯವರು ಭಾವಗೀತೆ, ಜಾನಪದ, ತತ್ವಗೀತೆ, ಶಿಶುಗೀತೆಗಳನ್ನು ಸಿನಿಮಾ ಗೀತೆಗಳಾಗಿಸಿರುವುದು ಸದಭಿರುಚಿಯ ಗೀತಪ್ರಿಯರಿಗೊಲಿದ ಭಾಗ್ಯವೆಂದೇ ಹೇಳಬೇಕು.

***

ಎಚ್ಚೆಸ್ವಿ ಕುರಿತ ಪುಸ್ತಕದ ಬಗ್ಗೆ

' ಎಚ್‌ಎಸ್‌ವಿ ವಾಚಿಕೆ '

– ಸುಜಾತಾ ರವೀಶ್, ಮೈಸೂರು



ಸಂಪಾದಕರು – ರಾಘವೇಂದ್ರ ಪಾಟೀಲ
ಪ್ರಕಾಶಕರು – ನುಡಿ ಪುಸ್ತಕ ಬೆಂಗಳೂರು
ಪ್ರಥಮ ಮುದ್ರಣ – 2012
ಬೆಲೆ ರೂ . 125

ವಾಚಿಕೆಗಳು ಎಂದರೆ ಒಬ್ಬ ಲೇಖಕನ ಆಯ್ದ ಕೃತಿಗಳ ಸಂಪಾದನೆ. ಇವುಗಳು ಲೇಖಕನೊಬ್ಬನ ಸಮಗ್ರ ಸಾಹಿತ್ಯದ ಬಗ್ಗೆ ಆಸಕ್ತಿ ಮತ್ತು ಕುತೂಹಲ ಮೂಡಿಸಲು ನೆರವಾಗುವ ಕೈಮರ ಮಾತ್ರ. ವಿಸ್ತೃತ ಓದಿಗಾಗಿ ಲೇಖಕರು ಬರೆದ ಸಂಪೂರ್ಣ ಕೃತಿಗಳ ಪಟ್ಟಿಯನ್ನು ಆಯಾಯಾ ವಾಚಿಕೆಗಳಲ್ಲಿ ನೀಡುವ ಮೂಲಕ ಓದುಗರು ಅವುಗಳನ್ನು ಸಂಗ್ರಹಿಸಿ ಓದಲು ಅನುವು ಮಾಡಿಕೊಟ್ಟಿರುತ್ತದೆ.

ಶ್ರೀ ರಾಘವೇಂದ್ರ ಪಾಟೀಲರ ಸಂಪಾದಕತ್ವದಲ್ಲಿ 'ನುಡಿ ಪುಸ್ತಕ, ಬೆಂಗಳೂರು; ಪ್ರಕಟಿಸಿರುವ "ಎಚ್ ಎಸ್ ವಿ ವಾಚಿಕೆ"ಯಲ್ಲಿ ಎಚ್ಎಸ್ವಿ ಅವರ 18 ಕವನಗಳು, 9 ಭಾವಗೀತೆಗಳು, 9 ಮಕ್ಕಳ ಕವಿತೆಗಳು, 6 ಕಥಾಪ್ರಬಂಧಗಳು. ಒಂದು ನಾಟಕ ಹಾಗೂ ಸಂದರ್ಶನಗಳಿವೆ. ಅಲ್ಲದೆ ಅಪರೂಪದ ಕೆಲವು ಛಾಯಾಚಿತ್ರಗಳನ್ನು ಸಹ ಇದು ಹೊಂದಿದೆ.

ಇಲ್ಲಿ ಕೆಲವು ಕಥನಕಾವ್ಯಗಳು ಎನಿಸುವ ದೀರ್ಘ ಕೃತಿಗಳಿವೆ. 'ಸಹನೌ' ಕವನದಲ್ಲಿ ಸೊಕ್ಕಿನಿಂದ ಬೆಳೆದು ನಿಂತ ವಿಂಧ್ಯ ಪರ್ವತವನ್ನು ಅಡಗಿಸುವ ಅಗಸ್ತ್ಯನ ಕಥೆ ಇದೆ. ಎಲ್ಲಾ ಕಾಲಕ್ಕೂ ಎಲ್ಲರಿಗೂ ಅನ್ವಯಿಸುವಂತಹ ಈ ಸಾಲುಗಳು ತುಂಬಾ ಮನತಟ್ಟಿದುವು.

ಈ ಅರಿವಿನೊಂದಿಗೆ ಬೆಳಿ, ನೀನನ್ನರ ಬೆಳವಿಗೆ ಒಡ್ಡದೆ ತಡೆಯ
ಗತಿಗಿದೆ ನಿಯತಿ, ಹೀಗೆ ತಡೆಯದಿರು ಕಾಲವರ್ತಿಗಳ ನಡೆಯ.

ಮತ್ತೊಂದು ನನಗೆ ಮನಸ್ಸಿಗೆ ನಾಟಿದ ಕವನವೆಂದರೆ 'ಉತ್ತರಾಯಣ'. ಮಡದಿಯ ದೇಹಾಂತ್ಯದ ನಂತರದ ಪತಿಯ ಭಾವನೆಗಳನ್ನು ತುಂಬಾ ಚೆನ್ನಾಗಿ ಕಣ್ಣಿಗೆ ಕಟ್ಟುವಂತೆ ಚಿತ್ರಿಸಲಾಗಿದೆ. ಮನಸ್ಸಿನ ದಾರುಣ ಯಾತನೆಯನ್ನು ಪದಗಳಿಗೆ ಹೀಗೆ ಇಳಿಸುತ್ತಾರೆ, ಕವಿ.

ಕಣ್ಣಿಂದ ನೀರು ಸುರಿಯುತ್ತದೆ ತನಗೆ ತಾನೇ, ಗಂಟಲಲ್ಲಿ
ಬೆಂಕಿ ಉರಿಯುತ್ತದೆ ತನಗೆ ತಾನೇ, ಶುರುವಾಗಿದೆ ಬಟ್ಟಂಬಯಲಿನಲ್ಲಿ
ನಿರಂತರ ನೆಪ್ಪಿನ ನಾಟಕ, ಶಬ್ದದ ಹಂಗಿಲ್ಲದ ಮಾತು
ಬಣ್ಣದ ಹಂಗಿಲ್ಲದ ರೂಪ, ಗಾಳಿಯ ಹಂಗಿಲ್ಲದ ಉಸಿರಾಟ

ಒಟ್ಟು 24 ಪ್ಯಾರಾಗಳಲ್ಲಿರುವ ಈ ದೀರ್ಘ ಕವನ ಓದುವಾಗ ಕಣ್ಣುಗಳಿಂದ ತನ್ನಿಂತಾನೆ ನೀರು ಸುರಿಯುವುದಂತೂ ಖಚಿತ.

ವಿದಾಯ ಹೇಳಬಹುದೇ ಇಷ್ಟು ಸುಲಭಕ್ಕೆ ನಿನಗೆ?
ಕಣ್ಣಿಗಂಟಿದ ಕನಸೇ... ಅರಿವಲ್ಲಿಂಗಿದ ಜಿನುಗು ಬೆವರೇ
ಬಾಯೊಳಗುಳಿದ ನಾಲಿಗೆಯೆಂಜಿಲ ಮೈಲಿಗೆ ಮುತ್ತೆ.... – ಎಂತಹ ಹೃದಯ ವಿದ್ರಾವಕ ಸಾಲುಗಳು.

ಹಾಗೆಯೇ 'ಒಂದೇ ಮಧ್ಯಾಹ್ನ' ಕವಿತೆಯಲ್ಲಿ ಶ್ರೀರಾಮನು ಶಬರಿಯ ಸೇವೆ ಕೈಗೊಳ್ಳಲು ಬರುವ ಮಧ್ಯಾಹ್ನದ ವರ್ಣನೆ ಇದೆ. ಚಿಕ್ಕ ಚೊಕ್ಕ ಈ ಕವಿತೆಯ ಉಪಸಂಹಾರ ಎಷ್ಟು ಸುಂದರವಾಗಿದೆ ನೋಡಿ–

ಶಬರಿಯ ಬದುಕಿನ ಒಂದು ಮಧ್ಯಾಹ್ನ ರಾಮನ ಬದುಕಿನ ಒಂದು ಮಧ್ಯಾಹ್ನ ಒಂದಾದದ್ದು ....
ಒಂದು ಮಧ್ಯಾಹ್ನ ಮಾತ್ರ

ಇನ್ನು ಎರಡನೆಯ ಭಾಗ ಭಾವಗೀತೆಗಳಾಗಿ ಪ್ರಸಿದ್ಧಿಹೊಂದಿದ ಅವರ ಕವನಗಳು. ಬಹಳ ಜನಪ್ರಿಯವಾದ "ಇಷ್ಟು ಕಾಲ" ಕವನದ ಸದಾ ಪ್ರಸ್ತುತವಾದ ನಮ್ಮನ್ನು ನಾವೇ ಕೇಳಿಕೊಳ್ಳಬೇಕಾದ ಸಾಲುಗಳು–

ಇಷ್ಟು ಕಾಲ ಒಟ್ಟಿಗಿದ್ದು ಎಷ್ಟು ಬೆರೆತರೂ
ಅರಿತೆವೇನು ನಾವು ನಮ್ಮ ಅಂತರಾಳವ?'

'ಅಮ್ಮ ನಾನು ದೇವರಾಣೆ' ಹಾಡಿನಲ್ಲಿ ಯಶೋಧೆ ಮತ್ತು ಕೃಷ್ಣರ ನಡುವಿನ ಸಂವಾದ ಕೃಷ್ಣನ ತುಂಟಾಟ, ತಾಯಿಯ ವಾತ್ಸಲ್ಯ ಗೀತೆಯಲ್ಲಿ ಒಡಮೂಡಿದ ರೀತಿ ಅದರ ಸಾರ್ವಕಾಲಿಕ ಜನಪ್ರಿಯತೆಗೆ ಸಾಕ್ಷಿ. ಅಂತೆಯೇ ಅವರ 'ಲೋಕದ ಕಣ್ಣಿಗೆ' ಹಾಗೂ 'ಹುಚ್ಚುಖೋಡಿ ಮನಸ್ಸು' ಕವಿತೆಗಳು ಕನ್ನಡಿಗರ ಮನ ಸಾಮ್ರಾಜ್ಯದಲ್ಲಿ ಸದಾ ರಾರಾಜಿಸುವಂತಹವು.

ಅವರ ಕಥನ ಪ್ರಬಂಧಗಳು ನಿಜಕ್ಕೂ ಗದ್ಯ ಕಾವ್ಯಗಳೆ ಸರಿ. ಅವುಗಳ ಕಾವ್ಯತ್ಮಕತೆ ಭಾವನಾತ್ಮಕ ವಿವರಣೆಗಳು ಓದುಗರ ಮನಸ್ಸಿಗೆ ನಾಟಿ ಎದೆಯ ಅಂತರಂಗದ ಕದಗಳನ್ನು ದಾಟಿ ಒಳನುಗ್ಗಿ ಬಿಡುತ್ತವೆ.

"ನೀನೆಲ್ಲಿ ಈಗ" ಪ್ರಬಂಧದಲ್ಲಿ ಮೊಟ್ಟಮೊದಲಿಗೆ ತಮ್ಮ ಮದುವೆಯ ಸಮಯದಲ್ಲಿ ಪತ್ನಿಯನ್ನು ನೋಡಿದ ಸಂದರ್ಭ ಇವುಗಳನ್ನೆಲ್ಲ ವಿವರಿಸುತ್ತಾ ಮೊದಲ ರಾತ್ರಿಯ ಸಂದರ್ಭದಲ್ಲಿ ತಮ್ಮ ಪತ್ನಿ ತಮ್ಮೆಲ್ಲ ಒಡವೆಗಳನ್ನು ಬೇರೆಯವರದು ಎಂದು ಹೇಳಿ ಜೋಪಾನವಾಗಿಡಲು ಬಿಚ್ಚಿಡುವುದಕ್ಕೆ ಇವರು ಸಹಾಯ ಮಾಡುತ್ತಾರೆ. ಕಡೆಗೆ ರಾತ್ರಿಯೇ ಕಳೆದು ನೀವು ಸ್ವಲ್ಪ ಮಲಗಿ ಎನ್ನುವ ಹೆಂಡತಿಯ ಮಾತನ್ನು ನೆನೆಸಿಕೊಳ್ಳುತ್ತಾರೆ. ಇಷ್ಟೇ ಆಗಿದ್ದರೆ ಇದು ಒಂದು ಲಘು ಹಾಸ್ಯ ಪ್ರಬಂಧವಾಗಿ ಉಳಿದುಬಿಡುತ್ತಿತ್ತು. ಆದರೆ 40 ವರ್ಷಗಳ ನಂತರ ಇವರ ಪತ್ನಿ ಲಿವರ್ ಸಿರೋಸಿಸ್ ಕಾಯಿಲೆಗೆ ತುತ್ತಾಗಿ ಸ್ವಲ್ಪಮಟ್ಟಿಗೆ ಮಾನಸಿಕ ಅಸಮತೋಲನವನ್ನು ಹೊಂದಿದ ಸಂದರ್ಭದಲ್ಲಿ ಡಾಕ್ಟರ್ ಬಳಿಗೆ ತಪಾಸಣೆಗೆ ಹೋಗಲು ಮದುವೆ ಮನೆಗೆ ಹೊರಟ ಹಾಗೆ ಜರಿ ಸೀರೆ ಮತ್ತು ಇದ್ದಬದ್ದ ಆಭರಣಗಳನ್ನೆಲ್ಲ ತೊಟ್ಟು ಹೋಗುತ್ತಾರೆ. ನಂತರ ಬಂದವರು ಆಯಾಸ ಗೊಂಡು ಮಲಗಿಬಿಡುತ್ತಾರೆ .ಆಗ ನಿಧಾನವಾಗಿ ಇವರೇ ಅವರ ಒಂದೊಂದು ಆಭರಣಗಳನ್ನು ಕಳಚಿಡುತ್ತಾರೆ. ಇನ್ನು ಅವರ ಪತ್ನಿಯ ಆಯಸ್ಸು ಆರು ತಿಂಗಳು ಮಾತ್ರ ಎಂದು ತಿಳಿದಿದ್ದರೂ ಪತ್ನಿಗೆ, ಮನೆಯವರಿಗೆ ತಿಳಿಸದೆ ಆ ದುಖವನ್ನೆಲ್ಲ ಎದೆಯಲ್ಲಿ ತುಂಬಿಕೊಂಡಿದ್ದ ಕವಿಗಳು ಆಗ ತಮ್ಮ ಪ್ರಥಮ ರಾತ್ರಿಯಲ್ಲಿ ನೀವು ಇನ್ನು ಮಲಗಿ ಎಂದ ಹೆಂಡತಿಯ ಮಾತುಗಳನ್ನು ಮತ್ತೆ ಸ್ಮರಣೆಗೆ ತಂದುಕೊಳ್ಳುತ್ತಾರೆ ನಿಜಕ್ಕೂ ಕಣ್ಣಲ್ಲಿ ನೀರು ತುಂಬಿಕೊಂಡು ಮುಂದಿನದನ್ನು ಓದಲು ಸಾಧ್ಯವಾಗಲಿಲ್ಲ. ಎರಡು ಒಂದೇ ರೀತಿಯ ಸಂದರ್ಭಗಳು ಆದರೆ ಮನಸ್ಸಿನ ಭಾವನೆಗಳು ಮಾತ್ರ ಎಷ್ಟು ಬದಲಾಗಿರುತ್ತದೆ.

ಹಾಗೆಯೇ "ಭದ್ರಕ್ಕನ ಅಜ್ಞಾತ ಪರ್ವ" ಕಥನದಲ್ಲಿಯೂ ಅಷ್ಟೇ. ಹಳ್ಳಿಯ ಭದ್ರಕ್ಕ ಆರು ಅಡಿಯ ಆಜಾನುಬಾಹು ಹಾಗೂ ಹೆಣ್ಣಿನ ಕೋಮಲತೆಗಳು ಇರದ ಹೆಂಗಸು. ಒಂದು ರೀತಿಯಲ್ಲಿ ತೃತೀಯ ಲಿಂಗಿ ಇರಬಹುದು ಎಂದುಕೊಳ್ಳಬಹುದು. ಇವರ ಅಜ್ಜಿಯ ಆಪ್ತ ಗೆಳತಿ ಅವಳು. ಅವಳೊಂದಿಗೆ ಕಳೆದ ಕೆಲವೊಂದು ಸಂದರ್ಭಗಳು, ಸಿನಿಮಾ ನೋಡಲು ಊರವರೆಲ್ಲ ಹೋಗುವುದು ಇದನ್ನೆಲ್ಲ ವರ್ಣಿಸುತ್ತಾ ಗೊಂಬೆಗಳನ್ನು ಕಟ್ಟಿಸುವ ಅವಳ ಅಭ್ಯಾಸವನ್ನು ಹೇಳುತ್ತಾರೆ. ಒಮ್ಮೆ ಭದ್ರಕ್ಕನ ಸ್ಥಿತಿ, ಚಿಂತಾಜನಕವಾಗಿದೆ. ಕಡೆಯಬಾರಿ ಗೊಂಬೆಮೇಳ ಕಟ್ಟಿಸುತ್ತಿದ್ದಾಳೆಂದು ಬರಲು ಇವರಿಗೆ ಆಹ್ವಾನ ಬಂದಾಗ ಹೋಗುತ್ತಾರೆ.

ಅಂದು ಊರ್ವಶಿ ಪ್ರಸಂಗ ಇರುತ್ತದೆ. ಯಾವಾಗಲೂ ಆ ಪ್ರಸಂಗದಲ್ಲಿ ಅರ್ಜುನ ಹೆಣ್ಣಾಗುವ ಸಂದರ್ಭದಲ್ಲಿ ಬಿಕ್ಕಿಬಿಕ್ಕಿ ಅಳುವ ಭದ್ರಕ್ಕ ನಮ್ಮ ಮನಸ್ಸಿನೊಳಗೆ ಗಾಢವಾಗಿ ಪ್ರಭಾವ ಬೀರುತ್ತಾಳೆ. ಅದನ್ನು ನಿರೂಪಿಸಿರುವ ಶೈಲಿ ನಿಜಕ್ಕೂ ಗ್ರೇಟ್.

ಅಂತೆಯೇ ಮಲ್ಲಾಡಿಹಳ್ಳಿಯಲ್ಲಿ ತಮ್ಮ ಶಿಷ್ಯನಾಗಿದ್ದ ತಮ್ಮದೇ ಹೆಸರಿನ ಮೂರ್ತಿ ಎಂಬಾತ ನಂತರ ಡಾಕ್ಟರ್ ಆಗಿದ್ದು, ಇವರ ಪತ್ನಿಯ ಚಿಕಿತ್ಸೆ ಅವನೇ ಮಾಡುತ್ತಿರುತ್ತಾನೆ. ನಂತರ ಇವನು ಸಹ ಲಿವರ್‌ನ ಒಂದು ಕಾಯಿಲೆಗೆ ತುತ್ತಾಗಿ ಬಹಳ ಬೇಗ ಸತ್ತು ಹೋದಾಗ ಅವನ ಒಡನಾಟದ ನೆನಪುಗಳನ್ನು ದಾಖಲಿಸುವ ಪ್ರಯತ್ನವೇ 'ಮೂರ್ತಿಗೆ ಕೊನೆಯ ಪತ್ರ' ಲೇಖನ.

ಇದರಲ್ಲಿನ ಕಥನ ಪ್ರಬಂಧಗಳೆಲ್ಲ ವಿಷಾದದಲ್ಲೇ ಕೊನೆಯಾಗುವುದು ಒಂದು ವಿಶೇಷ. ತುಂಬಾ ಗಾಢ ಪರಿಣಾಮ ಬೀರುವುದು ಈ ಕಾರಣದಿಂದಲೇ ಎಂದೆನಿಸುತ್ತದೆ.

'ಉರಿಯ ಉಯ್ಯಾಲೆ' ನಾಟಕ ದ್ರೌಪದಿಯ ಸ್ವಗತ. ಅವಳ ಬಾಲ್ಯದಿಂದ ಕಡೆಯವರೆಗಿನ ಘಟನಾವಳಿಗಳು ಇಲ್ಲಿ ಅವಳ ಮಾತುಗಳಲ್ಲಿ ನಿರೂಪಿತವಾಗಿದೆ. ಎಚ್‌ಎಸ್‌ವಿ ಅವರು ನಾಟಕಗಳ ಕಡೆ ಹೊರಳಿಕೊಂಡದ್ದು ತುಂಬಾ ತಡವಾಗಿಯೇ ಆದರೂ ಅವು ಬೀರುವ ಪರಿಣಾಮ ಮಾತ್ರ ಅಸದಳ.

ಈ ಕೃತಿಯ ಸಂಪಾದಕರಾದ ರಾಘವೇಂದ್ರ ಪಾಟೀಲ ಅವರೇ ಎಚ್‌ಎಸ್‌ವಿ ಅವರನ್ನು ಸಂದರ್ಶಿಸಿದ ಸಂದರ್ಶನದ ಪೂರ್ಣ ಪಾಠವೂ ಇದರಲ್ಲಿದೆ. ಅದರಲ್ಲಿ ಸಂದರ್ಶಕರ 'ಸಾಹಿತ್ಯದ ಕುರಿತಂತೆ ನಿಮ್ಮ ಮುಂದಿನ ಯೋಜನೆ' ಎಂಬ ಪ್ರಶ್ನೆಗೆ ಎಚ್‌ಎಸ್‌ವಿ ಅವರ ಉತ್ತರ ಇದು– ''ಸಾಹಿತ್ಯ ಎನ್ನುವುದು ಒಂದು ಅಂತರಂಗದ ನಿರ್ವಚನ. ಹೊರಗೆ ಕಟ್ಟಲಾಗುವ ವಾಸ್ತುಶಿಲ್ಪವಲ್ಲ ಎನ್ನುವುದೇ ಸದ್ಯದ ನನ್ನ ದೃಢ ನಂಬಿಕೆ. ಇದು ಮನಸ್ಸಿನ ಆಕಾಶದ ಪುನರ್ ಯೋಜನೆ, ಹೊಸ ಲೋಕಗಳನ್ನು ಒಳಗೊಳ್ಳುವ ದುರ್ಭರ ಸಾಹಸ, ಮನೋಭೂಮಿಕೆಯಲ್ಲಿ ಹಸಿರು ಮರ ಬೆಳೆಸಿ ಕೋಗಿಲೆಯ ಆಗಮನಕ್ಕೆ ಕಾಯುವ ಕೇವಲ ವಿನಯ ಮತ್ತು ಧ್ಯಾನ ಪೂರ್ಣ ನಿರೀಕ್ಷೆಯ ನಿರಂತರ ಕಾಯಕ''

ಎಂತಹಾ ಮಾತು!


***

ಡಾ. ಎಚ್ಚೆಸ್ವಿಯವರ ನಾಟಕ

"ಉರಿಯ ಉಯ್ಯಾಲೆ" ~ ಒಂದು ಇಣುಕು ನೋಟ

– ಶ್ರೀರಂಗರಾಜನ್

"ಕಾವ್ಯೇಷು ನಾಟಕಂ ರಮ್ಯಂ." ಡಾ. ಎಚ್.ಎಸ್.ವೆಂಕಟೇಶ ಮೂರ್ತಿ ಯವರು ನಮ್ಮ ಕಾಲದ ಅತ್ಯಂತ ಸಂವೇದನಾಶೀಲ ಕವಿ, ಕಥೆ-ಕಾದಂಬರಿಕಾರರು, ವಿಮರ್ಶಕರು, ನಾಟಕಕಾರರು ಹೀಗೆ ಬಹುಮುಖ ವಿದ್ವಾಂಸರು.



'ಉರಿಯ ಉಯ್ಯಾಲೆ' ಅವರ ಅತ್ಯಂತ ಜನಪ್ರಿಯ ನಾಟಕಗಳಲ್ಲೊಂದು. ಇದರ ಮುಖ್ಯ ಪಾತ್ರ ದ್ರೌಪದಿ. ಇದು ಏಕವ್ಯಕ್ತಿ ನಾಟಕ. ಎಚ್ಚೆಸ್ವಿಯವರೇ ಹೇಳುವಂತೆ 'ಉರಿಯ ಉಯ್ಯಾಲೆ' ವಾಸ್ತವವಾಗಿ ದ್ರೌಪದಿ ಒಬ್ಬಳ ನಾಟಕವಾಗುವುದಿಲ್ಲ. ದ್ರೌಪದಿ ನಿರೂಪಣೆಯ ಅಗತ್ಯಕ್ಕೆ ತಕ್ಕಂತೆ, ಸುಭದ್ರೆ ಆಗುತ್ತಾ, ಹಿಡಂಬೆ ಆಗುತ್ತಾ, ಕುಂತಿಯಾಗುತ್ತಾ, ದ್ರುಪದ, ಯುಧಿಷ್ಠಿರ, ಭೀಮ, ಅರ್ಜುನರಾಗುತ್ತ ರಂಗದ ಎಲ್ಲಾ ಖಾಲಿ ಜಾಗಗಳನ್ನು ತುಂಬುತ್ತಾ ಹೋಗುತ್ತಾಳೆ.

ಸಿ.ಆರ್.ಸಿಂಹ ಅಭಿನಯದ ಕೈಲಾಸಂ, ಕುವೆಂಪು ಅವರ ಬಗೆಗಿನ ಏಕವ್ಯಕ್ತಿ ರಂಗ ಪ್ರಯೋಗ, ಒಡಲಾಳದ ಉಮಾಶ್ರೀರವರ ಅಭಿನಯದ ನಂತರ ಈ ನಾಟಕ ದ್ರೌಪದಿಯಾಗಿ ಶ್ರೀಮತಿ ಬಿ ಜಯಶ್ರೀರವರ ಅಭಿನಯದಲ್ಲಿ ಅನಾವರಣಗೊಂಡಿತು.

ಕಥೆ, ಕಾದಂಬರಿಗಳು ವಿಶಾಲವಾದ ಜಾಗದಲ್ಲಿ ಮೂಡುತ್ತವೆ. ಕಾಡು, ನಾಡು, ಜಲಪಾತ, ಬಸ್ಸು, ಕಾರು, ವಿಮಾನ ಹೀಗೆ ಎಲ್ಲಾ ಕಡೆಯ ವರ್ಣನೆಯೂ ಸಾಧ್ಯ. ಆದರೆ ನಾಟಕ ಮಾತ್ರ ದೊರೆತ ರಂಗದ ಮೇಲೆಯೇ ನಡೆಯಬೇಕಾಗುತ್ತದೆ. ಎಲ್ಲಾ ಪಾತ್ರಗಳು ಅದೇ ಜಾಗದಲ್ಲಿ ಬಂದು ಹೋಗುತ್ತವೆ. ಆದರೆ ನಾಟಕದಲ್ಲಿ ಧ್ವನಿಗಳ ಏರಿಳಿತದಲ್ಲಿ, ಬಣ್ಣಬಣ್ಣದ ವಸ್ತ್ರಗಳಲ್ಲಿ, ರಂಗುರಂಗಿನ ದೀಪದ ಬೆಳಕಿನಲ್ಲಿ, ಅಭಿನಯ ಕೌಶಲ್ಯದಲ್ಲಿ ವೀಕ್ಷಕರನ್ನು ಬೇರೆಯೇ ಲೋಕಕ್ಕೆ ಅಥವಾ ನಾಟಕದ ಸನ್ನಿವೇಶದೊಳಗೆ ಕರೆದು ಕೊಂಡು ಹೋಗುವ ಸಾಧ್ಯತೆ ಇದೆ. ನಾಟಕಕಾರನಿಗೆ ಈ ಸಾಧ್ಯತೆಗಳ ಅರಿವು ಇರಬೇಕಾಗುತ್ತದೆ. ನಾಟಕವು ತೆರೆದುಕೊಳ್ಳುತ್ತಾ ಸಾಗುವ ಕಲ್ಪನೆ ಇರಬೇಕಾಗುತ್ತದೆ. ಎಚ್ಚೆಸ್ವಿಯವರ ಈ ಶಕ್ತಿ ನಾಟಕದ ಶುರುವಿನಲ್ಲಿ ಅವರು ಬರೆದಿರುವ ವಿವರಣೆಗಳಿಂದ ನಮಗೆ ವ್ಯಕ್ತವಾಗುತ್ತದೆ.

ರಂಗದ ಮೇಲೆ ಒಂದು ದೊಡ್ಡ ನಿಲುವುಗನ್ನಡಿ.. ಮೂರು ಚಿತ್ರಿಕೆಗಳಿವೆ. ಒಂದು ದ್ರೌಪದಿಯ ಸ್ವಯಂವರದ ಚಿತ್ರ, ಇನ್ನೊಂದು ವಸ್ತ್ರಾಪಹರಣದ ಚಿತ್ರ, ಮತ್ತೊಂದು ವೇಣಿಸಂಹಾರದ ಚಿತ್ರ. ಈ ಚಿತ್ರಗಳು ಅನೇಕ ವ್ಯಕ್ತಿಗಳು, ವಿವರಗಳು ಇಡಿಕಿರಿದಿರುವ ಮೈಸೂರಿನ ಹಳೆಯ ಬಣ್ಣದ ಚಿತ್ರಗಳ ಮಾದರಿಯಲ್ಲಿ ಇರಬೇಕು. ಕುಸುರಿ ಕೆಲಸ ಮಾಡಿರುವ ಒಂದು ಚೌಕಟ್ಟನ್ನು ಪರ್ಯಾಯವಾಗಿ ಬಳಸಬೇಕು. ದ್ರೌಪದಿಯ ಪ್ರವೇಶದ ಮೊದಲು ಆಸನದ ಮೇಲಷ್ಟೇ ಬೆಳಕು. ಆಮೇಲೆ ರಂಗದ ಮೇಲೆಲ್ಲಾ ಬೆಳಕು. ಅನಂತರವೇ ದ್ರೌಪದಿಯ ಪ್ರವೇಶ. ಇದು ನಾಟಕಕಾರ ನಟನಾಗಿ, ನಿರ್ದೇಶಕನಾಗಿ, ಕಲಾ ನಿರ್ದೇಶಕನಾಗಿ ಪರಕಾಯ ಪ್ರವೇಶ ಮಾಡಿದಾಗ ಮಾತ್ರ ಸಾಧ್ಯವಾಗುತ್ತದೆ.

ನಾಟಕದ ಪ್ರಾರಂಭದಲ್ಲಿ ಮಧ್ಯ ವಯಸ್ಸಿನ ದ್ರೌಪದಿ ಬಂದು ಉದ್ದದ ಕನ್ನಡಿಯ ಮುಂದೆ ನಿಂತು ತನ್ನನ್ನು ತಾನು ನೋಡಿಕೊಳ್ಳುವುದರ ಮೂಲಕ, ಹಾಗೆಯೇ ನೋಡಿಕೊಳ್ಳುತ್ತಾ ತನ್ನ ಅಂತರಂಗದ ಭಾವನೆಗಳನ್ನು ಬಿಚ್ಚಿ ಹೇಳುತ್ತಾ ಹೋಗುತ್ತಾಳೆ.

"ನಂಗೆ ಮೊದಲಿಂದಲೂ ಅಷ್ಟೆ! ಮುಡಿ ಕಟ್ಟೋದು ಅಂದ್ರೆ ಬೇಜಾರು... ತಲೆ ಹಿಂದೆ ಹಾಗೇ ಕೂದಲು ಹರಡಿಕೊಂಡು ನವಿಲಿನ ಥರ ಓಡಾಡೋದು ಅಂದ್ರೆ ತುಂಬಾ ಇಷ್ಟ. ಅಮ್ಮ ಅಂತಿದ್ಲು ಹೆಂಗಸ್ರು ಹಾಗೆ ಕೂದಲು ಬಿಚ್ಚಿಕೊಂಡು ಓಡಾಡಬಾರದು, ಕೂದಲು ಬಿಚ್ಚಿಕೊಂಡು ಓಡಾಡಿದ್ರೆ ಮನೆಗೆ ಒಳ್ಳೆಯದಾಗಲ್ವಂತೆ...!"

ಎಚ್ಚೆಸ್ವಿಯವರು ಮಹಾಭಾರತ ಯುದ್ಧ ದ್ರೌಪದಿಯ ಮುಡಿ ಕಳಚಿದ್ದರಿಂದ ಆಯಿತು ಎಂಬುದನ್ನು ಸಾಂಕೇತಿಕವಾಗಿ ನುಡಿದು ನಾಟಕವನ್ನು ಪ್ರಾರಂಭಿಸುತ್ತಾರೆ. ಮುಂದೆ ದ್ರೌಪದಿ ಹೇಳುತ್ತಾಳೆ, "ಈ ಕೂದಲ ಕಥೆ ಬಹಳ ದೊಡ್ಡದು ಬಿಡಿ. ದ್ರೌಪದಿ ಈ ಕೂದಲು ಬಿಚ್ಚಿದಾಗ ಭಾರತದ ಕಥೆ ಶುರುವಾಯ್ತು. ಕೂದಲು ಕಟ್ಟಿದಾಗ ಈ ಭಾರತದ ಕಥೆ ಮುಗೀತು ಅಂತ ಕೃಷ್ಣ ಆಗಾಗ ಹೇಳ್ತಾನೆ. ಏನ್ಕಥೇನೋ ಏನೋ, ಕಟ್ಟಿದ ಕೂದಲು ಕಟ್ಟಿದ ಹಾಗೇ ಇರಲ್ಲ, ಬಿಚ್ಚಬೇಕಾಗುತ್ತದೆ. ಬಿಚ್ಚಿದ ಕೂದ್ಲು ಬಿಚ್ಚಿದ ಹಾಗೇ ಇರಲ್ಲ, ಕಟ್ಟಬೇಕಾಗುತ್ತೆ. ಕಟ್ಟೋದು, ಬಿಚ್ಚೋದು ದಿನಾ ದಿನಾ ನಡೀತಾನೇ ಇರೋವಾಗ ಕಥೆ ಮುಗಿಯೋದೆಲ್ಲಿಂದ ಬಂತು." ಜೀವನದ ಜಂಜಾಟವನ್ನು ಈ ಸಾಲುಗಳಲ್ಲಿ ಎಷ್ಟೊಂದು ಮಾರ್ಮಿಕವಾಗಿ ನುಡಿಸಿದ್ದಾರೆ ಎಚ್ಚೆಸ್ವಿಯವರು.

ದ್ರೌಪದಿ ಕನ್ನಡಿಯಲ್ಲಿ ತನ್ನ ಬಿಳೀ ಕೂದಲು ನೋಡಿಕೊಂಡು, "ಕೃಷ್ಣೆ, ನೀನು ಮುದುಕಿ ಆದೆ! ಆಕಾಶ ಮುದುಕ ಆಗುತ್ತಾ? ಭೂಮಿ ಮುದುಕಿ ಆಗ್ತಾಳಾ? ಎಷ್ಟೋ ವರ್ಷಗಳಿಂದ ಹೀಗೇ.. ಒಂದೇಸಮ್ನೆ ತುಂಬಿಕೊಂಡು ಹರಿಯುತ್ತಿರೋ ನಮ್ಮ ಯಮುನೆ ಮುದುಕಿ ಆಗ್ತಿದ್ದಾಳ? ಕೃಷ್ಣೆ ಏಕಪ್ಪಾ ಮುದುಕಿ ಆಗ್ಬೇಕು?" ಮಾನವ ಸಹಜ ಭಾವನೆಗಳನ್ನು ಸುಂದರ ಉದಾಹರಣೆಗಳೊಂದಿಗೆ ನುಡಿಸಿರುವುದು ಎಚ್ಚೆಸ್ವಿಯವರ ಹೆಗ್ಗಳಿಕೆ.

ದ್ರೌಪದಿ ತನ್ನ ಮೊದಲ ರಾತ್ರಿಯಲ್ಲಿ ಯುಧಿಷ್ಠಿರ, ಭೀಮ ಮತ್ತು ಅರ್ಜುನರ ವರ್ತನೆಯ ಬಗ್ಗೆ ಹೇಳುತ್ತಾಳೆ. "ಐದು ಜನರ ಹತ್ರ ಮಲಗೋದು ಸುಲಭ ಅಲ್ಲ. ಭೀಮನ ಜೊತೆ ಇರುವಾಗ ಉಳಿದವರೆಲ್ಲ ನನ್ನ ಭಾವ, ಮೈದುನರು. ಕಾಮನೆ ದೃಷ್ಟಿಯಿಂದ ಅವರನ್ನು ನೋಡಬಾರದು. ಹಾಗೆ ನಾನು ನೋಡಲಿಲ್ಲ ಅಂತಲೇ ನಾನು ಪತಿವ್ರತೆ." ಜಿ ಎನ್ ರಂಗನಾಥರಾವ್ ಇದರ ಬಗ್ಗೆ ಬರೆಯುತ್ತಾ, 'ಯುಧಿಷ್ಠಿರನಿಗೆ ಗಂಡು ಹೆಣ್ಣಿನ ಸಂಯೋಗ ಒಂದು ಪವಿತ್ರ ಆಚರಣೆ, ಭೀಮನಿಗೆ ಹೆಣ್ಣೊಂದು



ಕಾಮ್ಯ ಕವನ, ಅರ್ಜುನನಿಗೆ ಹೆಣ್ಣು ವಿವಿಧ ರಾಗಗಳಲ್ಲಿ ತೆರೆದುಕೊಳ್ಳುವ ಸಂಗೀತ. ಇಲ್ಲಿ ದ್ರೌಪದಿಯ ಸ್ವಯಂ ಘೋಷಣೆಯೊಂದಿಗಿನ ಜೊತೆಗೆ ಲೋಕದ ನಡಾವಳಿಯ ವ್ಯಂಗ್ಯವೂ ಇದೆ' ಎನ್ನುತ್ತಾರೆ.



ದ್ರೌಪದಿ ವಸ್ತ್ರಾಪಹರಣವನ್ನು ಅಭಿನಯಿಸುತ್ತಾ, "ಇದೇ ಆ ಸೀರೆ. ನನ್ನ ಮಾನ ಪ್ರಾಣ ಕಾಪಾಡಿದ ಸೀರೆ ಇದು. ಅದಕ್ಕೆ ಇದನ್ನು ಬಳಸದೆ ಹಾಗೆ ಜೋಪಾನಮಾಡಿ ಇಟ್ಟಿದ್ದೀನಿ. ಇದರ ಒಂದು ತುದಿ ನಮ್ಮಣ್ಣ ಕೃಷ್ಣ ಹಿಡಿದಿದ್ದ. ಒಂದು ತುದಿ ಆ ಪಾಪಿ ಮುಂಡೇಮಗ ದುಶ್ಶಾಸನ ಹಿಡಿದಿದ್ದ. ಇಬ್ಬರೂ ಗಂಡಸರೇ.. ಆದರೆ ಎಷ್ಟು ವ್ಯತ್ಯಾಸ..., ಮಾನ ಕಾಯುತ್ತೀನಿ ಅಂತ ಒಬ್ಬ, ಮಾನ ತೆಗೀತೀನಿ ಅಂತ ಒಬ್ಬ. ಕೊಡೋನೊಬ್ಬ. ಕೀಳೋನೊಬ್ಬ... ನಡುವೆ ಈ ಹೆಂಗಸು. ದ್ರೌಪದಿ ಸೀರೇನ ಆ ನೀಚ ದುಶ್ಶಾಸನ ಸೆಳೆದು ಹಾಕುತ್ತಿದ್ದರೆ ಬೆತ್ತಲೆ ಆಗುತ್ತಿದ್ದದ್ದು ಬರೀ ದ್ರೌಪದಿ ಅಲ್ಲ. ಆಸ್ಥಾನದಲ್ಲಿ ಕುಳಿತಿದ್ದ ಜನರೆಲ್ಲ ಬೆತ್ತಲೆಯಾಗಿದ್ರು. ಕೃಷ್ಣ ಅಕ್ಷಯ ವಸ್ತ್ರ ಕೊಟ್ಟಿದ್ದು ನನಗೆ ಮಾತ್ರ. ನನ್ನ ಮಾನ ಉಳೀತು. ಒಂದು ಸಂಸ್ಕೃತಿ, ಒಂದು ಯುಗ, ಒಂದು ಸಮಾಜ ಬೆತ್ತಲಾಗಿ ನಿಲ್ತಾ ಇದ್ದದನ್ನ ಕೃಷ್ಣ ಅಕ್ಷಯ ವಸ್ತ್ರ ನೀಡಿ ತಪ್ಪಿಸಿದ.'' ಎಂತಹ ಮಾರ್ಮಿಕವಾದ ನುಡಿಗಳು. ಇದು ಎಚ್ಚೆಸ್ವಿಯವರ ಲೇಖನಿಯ ಸತ್ವ.

ಪ್ರೀತಿಯ ಬಗ್ಗೆ ಎರಡು ಸಾಲುಗಳಲ್ಲಿ ಅತ್ಯಂತ ಸುಂದರವಾಗಿ ಬರೆದಿದ್ದಾರೆ. "ಪ್ರೀತಿ ಅನ್ನೋದು ಸುರಿಯೋ ಮಳೆ ಅಲ್ಲ, ಕರೆಯೋ ಹಾಲು!" ಪ್ರೀತಿ ಸುಮ್ಮನೆ ಸಿಗುವುದಿಲ್ಲ. ಅದನ್ನು ಸಂಪಾದಿಸಬೇಕು!

ದ್ರೌಪದಿ ಒಂದೆಡೆ ತಾನು ಐದು ಜನರಿಗೆ ಹೆಂಡತಿಯಾಗಬೇಕಾದ ಸಂದರ್ಭವನ್ನು ನೆನಪಿಸಿಕೊಳ್ಳುತ್ತಾ ಕುಂತಿಯ ಬಗ್ಗೆ ಹೀಗೆ ನುಡಿಯುತ್ತಾಳೆ "ಅವರನ್ನೆಲ್ಲಾ ಒಟ್ಟಿಗೇ ಹಿಡಿದಿಡೋಕೆ ನಾನೊಂಥರ ರಜ್ಜುಬಂಧ ಅಂತ ಅವರಮ್ಮ ಕುಂತಿ ಯೋಚ್ನೆ ಮಾಡಿದಳಾ ಅಥವಾ ತಾನು ನಾಕುಮಂದಿ ಪುರುಷರನ್ನ ಒಳಗೆ ತಕ್ಕೊಂಡು ಸುಖಪಟ್ಟಿದ್ದಳಲ್ಲ ಅದರ ಸಮರ್ಥನೇನಾ ನೈತಿಕವಾಗಿ ಹೀಗೆ ಮಾಡಿಕೊಂಡ್ಳೋ?'' ಕುಂತಿಯ ನಿಯೋಗಕ್ಕೂ, ಕೃಷ್ಣೆಯ ಪಂಚಪಾಂಡವರಿಗೂ ನಾಟಕಕಾರ ತನ್ನ ಭಾವನೆಗಳನ್ನು ಹೇಳಿಸಿರುವ ರೀತಿ ನಮ್ಮನ್ನು ಯೋಚಿಸುವಂತೆ ಮಾಡುತ್ತದೆ.

ದ್ರುಪದನ ಜೊತೆಯ ಸಂಭಾಷಣೆಯಲ್ಲಿ ಅವನು ನುಡಿಯುತ್ತಾನೆ, "ದ್ರೋಣನ ಮೇಲಿನ ದ್ವೇಷಕ್ಕೆ ಅರ್ಜುನನನ್ನು ಅಳಿಯನನ್ನಾಗಿ ಮಾಡಿಕೊಂಡು ದ್ರೋಣನ ಕೊರಳು ಕತ್ತರಿಸಿ ಬಿಸಾಕ್ಬೇಕು. ಹೀಗೆ ದ್ವೇಷಕ್ಕಾಗಿ ಹುಟ್ಟಿದವಳು ನೀನು. ಅದಕ್ಕೆ ಅಗ್ನಿಪುತ್ರಿ ಅಂತ ನಿನ್ನನ್ನು ಕರೆಯೋದು''. "ಅಯ್ಯಯ್ಯೋ ಪ್ರಳಯಕ್ಕೆಂತಲೇ ಆದ ಸೃಷ್ಟಿ ನಾನು! ನನ್ನ ಹುಟ್ಟಿನ ಅಸ್ತಿವಾರ ದ್ವೇಷ! ಅಪ್ಪ ಅಮ್ಮನ ಪ್ರೀತಿ ಅಲ್ಲ!" ಈ ಮನಸ್ಸಿನ ವೇದನೆ, ದ್ರೌಪದಿಯನ್ನು ಮತ್ತೊಂದು ಸ್ತರಕ್ಕೆ ಒಯ್ದು ನಿಲ್ಲಿಸುತ್ತದೆ.

'ಉರಿಯ ಉಯ್ಯಾಲೆ' ಹೆಸರೇ ತುಂಬಾ ಧ್ವನಿ ಪೂರ್ಣವಾದದ್ದು ಹಾಗೂ ಅರ್ಥದ ಹಲವಾರು ಆಯಾಮಗಳಿಗೆ ಚಾಚಿಕೊಳ್ಳುವಂತದ್ದು. ದ್ರೌಪದಿ ಬೆಂಕಿಯ ಮಗಳೇ ಆದ್ದರಿಂದ 'ಉರಿ' ಇಲ್ಲಿ ಸಾರ್ಥಕ ಪ್ರತಿಮೆ ಆಗುತ್ತದೆ ಎಂದು ರಂಗನಾಥ ರಾವ್ ಬರೆಯುತ್ತಾರೆ.

ಕೊನೆಗೆ ಸ್ವರ್ಗರೋಹಣದ ಸಮಯ,
ಯಾರೂ ನಿಲ್ಲಲಿಲ್ಲ
ಈ ಭೂಮಿಯಲ್ಲಿ ಯಾರೂ ನಿಲ್ಲೋದಿಲ್ಲ
ಎಲ್ಲ ಬಿಟ್ಟು ಹೋಗೋಕೆ
ಕೊನೆಗೆ ಉಳಿದಿದ್ದು ಭೂಮಿ ಒಂದೇ
ವಸುಂಧರೆ ದ್ರೌಪದಿಯ ಪ್ರತೀಕವಾಗಿ ಉಳಿಯುತ್ತಾಳೆ.

ದ್ರೌಪದಿಯ ಅಂತರಂಗದ ಹೊಯ್ದಾಟಗಳ ಸಮರ್ಪಕ ಅಭಿಯಕ್ತಿ ಉಯ್ಯಾಲೆ. 'ಉರಿಯ ಉಯ್ಯಾಲೆ' ಜೀಕಿದಂತೆಲ್ಲ ಅವಳ ಅಂತರಂಗದ ನೋವು, ಸಂಕಟ, ಕೋಪ–ತಾಪ, ದ್ವೇಷ–ಪ್ರೀತಿ ಅಂತಃಕರಣ ಸಾಲುಸಾಲಾಗಿ ಉರಿಯ ಬೆಳಕಲ್ಲಿ ಲೋಕವಿದಿತವಾಗುತ್ತಾ ಹೋಗುತ್ತದೆ. ದ್ರೌಪದಿ ರಣಚಂಡಿಯಾದ ಬೆಂಕಿಯ ಮಗಳಷ್ಟೇ ಅಲ್ಲ, ಕೊನೆಗೆ ಅಂತರಂಗದ ಬೇಗುದಿಯೆಲ್ಲ ನೀಗಿದಂತೆ ಈಗ ಅವಳಲ್ಲಿನ ಬೆಂಕಿ ಸುಡುವ ಉರಿಯಲ್ಲ, ಜೀವನಾವಶ್ಯಕಗಳಲ್ಲೊಂದಾದ ಬೆಚ್ಚನೆಯ ಅಗ್ನಿ, ಬೆಳಕು. ಜಿ ಎನ್ ರಂಗನಾಥ ರಾವ್ ಅವರ ಅನಿಸಿಕೆ ಸೂಕ್ತವಾಗುತ್ತದೆ.


ದ್ರೌಪದಿಯ ಪಾತ್ರ ಕಾಡುತ್ತಾ ಮನದಲ್ಲಿ ನಿಂತುಬಿಡುತ್ತದೆ. ಇದು ನಾಟಕಕಾರ ಎಚ್ಚೆಸ್ವಿ ಅವರ ಅಗ್ಗಳಿಕೆ. ಅವರ ಅಗಲಿಕೆ ಕನ್ನಡ ಸಾರಸ್ವತ ಲೋಕದ ನಷ್ಟ.

(ಚಿತ್ರಗಳು: ಕೃಪೆ ಅಂತರ್ಜಾಲ)

***

ಎಚ್ಚೆಸ್ವಿ ಬಾಲ್ಯ, ಶಿಶು ಸಾಹಿತ್ಯ ಕೃಷಿ

- ವಿಠ್ಠಲ. ಇಜೇರಿ



ಎಚ್.ಎಸ್.ವೆಂಕಟೇಶ ಮೂರ್ತಿಯವರು ದಾವಣಗೆರೆ ಜಿಲ್ಲೆ, ಹೊದಿಗೆರೆ ಗ್ರಾಮದಲ್ಲಿ 23ನೇ, ಜೂನ್, 1944ರಂದು ಜನಿಸಿದರು (ಆಗ ಶಿವಮೊಗ್ಗ ಜಿಲ್ಲೆ). ತಾಯಿ ಶ್ರೀಮತಿ ನಾಗರತ್ನಮ್ಮ, ತಂದೆ ನಾರಾಯಣ ಭಟ್ಟರು. ಪ್ರಾಥಮಿಕ ಶಿಕ್ಷಣ ತಮ್ಮ ಗ್ರಾಮದಲ್ಲಿ ನಂತರ ಹೊಳಲ್ಕೆರೆಯಲ್ಲಿ ಮುಗಿಸಿ, ಕಾಲೇಜು ಶಿಕ್ಷಣ ಚಿತ್ರದುರ್ಗದಲ್ಲಿ ಪೂರೈಸಿದರು. ಭದ್ರಾವತಿಯಲ್ಲಿ ಡಿಪ್ಲೋಮ ಪಡೆದು ಮಲ್ಲಾಡಿಹಳ್ಳಿಯ ಪ್ರೌಢ ಶಾಲೆಯಲ್ಲಿ ಕ್ರಾಫ್ಟ್ ಶಿಕ್ಷಕರಾದರು. ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಸ್ನಾತಕೋತ್ತರ ಅಧ್ಯಯನ ಮಾಡಿದರು.

ಎಚ್ಚೆಸ್ವಿ ಎಂದೇ ಪ್ರಸಿದ್ಧರಾದ ವೆಂಕಟೇಶ ಮೂರ್ತಿಯವರ ಮನೆಯಲ್ಲಿ ಸಾಂಸ್ಕೃತಿಕ ಹಿನ್ನೆಲೆ ಇತ್ತು. ಬಾಲ್ಯದಲ್ಲಿ ಕುಮಾರವ್ಯಾಸ ಭಾರತ, ಜೈಮಿನಿ ಭಾರತ, ಯಕ್ಷಗಾನ, ಬಯಲಾಟ ಹೀಗೆ ಕಲೆ, ಸಾಹಿತ್ಯದ ಹಿನ್ನೆಲೆಯಲ್ಲಿ ಬೆಳೆದ ಅವರು ಪ್ರೌಢಶಾಲೆಯಲ್ಲಿ ಇರುವಾಗಲೇ ಕವನಗಳನ್ನು ಬರೆಯುತ್ತಿದ್ದರು. ಅವರು ಕಾಲೇಜಿನಲ್ಲಿರುವ ಸಮಯದಲ್ಲಿ ಒಮ್ಮೆ ಪ್ರಖ್ಯಾತ ಕವಿ ನಿಸಾರ್ ಅಹಮ್ಮದ್ ಅವರನ್ನು ಭೇಟಿಯಾದಾಗ ತಮ್ಮ ಕವನಗಳನ್ನು ತೋರಿಸಿದರು. ನಿಸಾರ್ ಅಹಮ್ಮದ್ ಅವರು ಎಚ್ಚೆಸ್ವಿ ಅವರ ಕವನಗಳನ್ನು ಮೆಚ್ಚಿ ಅವಶ್ಯವಿರುವಲ್ಲಿ ತಿದ್ದಿ, ಉತ್ತಮ ಕವನ ಬರೆಯುವ ಬಗ್ಗೆ ಮಾರ್ಗದರ್ಶನ ನೀಡಿದರಲ್ಲದೆ ಪತ್ರಿಕೆಗಳಿಗೆ ಪ್ರಕಟಣೆಗೆ ಕಳಿಸಿ ಎಂದು ಹೇಳಿದರು. ಅದು ವೆಂಕಟೇಶ ಮೂರ್ತಿಯವರಿಗೆ ನಾನೂ ಬರೆಯಬಲ್ಲೆ ಎಂಬ ಆತ್ಮವಿಶ್ವಾಸವನ್ನು ಹೆಚ್ಚಿಸಿತು. ಮಲ್ಲಾಡಿಹಳ್ಳಿಯಲ್ಲಿ ಕ್ರಾಫ್ಟ್ ಶಿಕ್ಷಕರಾಗಿ ಸೇವೆ ಸಲ್ಲಿಸುವಾಗ ಅವರ ಮೊದಲ ಕವನ ಸಂಕಲನ 'ಪರಿವೃತ್ತ' ಪ್ರಕಟವಾಯಿತು. ನಂತರ ಕರ್ನಾಟಕ ವಿಶ್ವವಿದ್ಯಾನಿಲಯದಿಂದ ಬಿ.ಎ. ಮತ್ತು ಬೆಂಗಳೂರು ವಿಶ್ವವಿದ್ಯಾನಿಲಯದಿಂದ ಎಂ.ಎ. ಪಾಸು ಮಾಡಿದರು. "ಕನ್ನಡದಲ್ಲಿ ಕಥನ ಕವನಗಳು" ಮಹಾಪ್ರಬಂಧವನ್ನು ರಾಷ್ಟ್ರಕವಿ ಜಿ.ಎಸ್.ಶಿವರುದ್ರಪ್ಪನವರ ಮಾರ್ಗದರ್ಶನದಲ್ಲಿ ಬರೆದು ಪಿ.ಎಚ್.ಡಿ. ಪಡೆದರು.

ಎಚ್ಚೆಸ್ವಿಯವರು ಸುಮಾರು ಒಂದು ನೂರು ಕೃತಿಗಳನ್ನು ರಚಿಸಿದ್ದಾರೆ. ಅವು ಕವನ ಸಂಕಲನ, ಭಾವಗೀತೆಗಳು, ಕಥಾ ಸಂಕಲನ, ವ್ಯಕ್ತಿ ಚಿತ್ರಗಳು, ಕಾಳಿದಾಸನ ಋತು ಸಂಹಾರದ ಅನುವಾದ, ನಾಟಕ, ವಿಮರ್ಶೆ ಇತ್ಯಾದಿ. ಮಕ್ಕಳ ಸಾಹಿತ್ಯದ ಬಗ್ಗೆ ವಿಶೇಷ ಆಸಕ್ತಿಯಿಂದ ಮಕ್ಕಳ ಸಾಹಿತ್ಯ ರಚನೆ ಮಾಡಿದ್ದಾರೆ. ತಮ್ಮ ಬಾಲ್ಯದಲ್ಲಿ ಪಂಜೆ ಮಂಗೇಶರಾಯರು, ಜಿ.ಪಿ. ರಾಜರತ್ನಂ, ಕುವೆಂಪು, ವಿ.ಸೀ., ಸಿದ್ದಯ್ಯ ಪುರಾಣಿಕ ಹೀಗೆ ಅನೇಕ ಪ್ರಸಿದ್ಧ ಸಾಹಿತಿಗಳ ಕವನಗಳನ್ನು ಓದಿ ಪುಳಕಿತಾರಾದ ಅವರು 1950-70ರ ಅವಧಿಯಲ್ಲಿ ಮಕ್ಕಳ ಮನಸ್ಸನ್ನು ಹಿಡಿದಿಡುವ ಸಾಹಿತ್ಯ ಕಡಿಮೆ ಇದ್ದುದನ್ನು ಕಂಡು ನಾವು ಮಕ್ಕಳ ಸಾಹಿತ್ಯ ಪರಂಪರೆ ಮುಂದುವರಿಸುವುದು ಬೇಡವೇ? ಎಂದು ಮಕ್ಕಳ ಸಾಹಿತ್ಯ ರಚನೆಗೆ ಮೊದಲು ಮಾಡಿದರು. ಅವರ ಮಕ್ಕಳ ರಚನೆಯಲ್ಲಿ ಅವರ ಇಷ್ಟದ ಕವನ ಗುಬ್ಬಿಯ ಗೂಡು. ಅದು ಗುಬ್ಬಿಯ ಸಂಸಾರ, ಗುಬ್ಬಿಯ ತಂದೆ, ತಾಯಿ, ಗುಬ್ಬಿಯ ಶಾಲೆ, ಅಲ್ಲಿಯ ಟೀಚರ್ ಕೂಡ ಗುಬ್ಬಿ. ಮುಗ್ಧ ಮಕ್ಕಳಿಗೆ ಗುಬ್ಬಿಗಳ ಮನರಂಜಿಸುವ ಕವನ. ಅದಲ್ಲದೆ ಅವರು ಮಕ್ಕಳಿಗಾಗಿ ಹೂವಿನ ಶಾಲೆ, ಸೋನಿ ಪದ್ಯಗಳು, ರಾಮಾಯಣ ಮತ್ತು ಸುಣ್ಣದ ಸುತ್ತು, ಹುವಿ ಮತ್ತು ಸಂಧಾನ, ಮುದಿದೊರೆ ಮತ್ತು ಮೂವರು ಮಕ್ಕಳು (ನಾಟಕ) ಬರೆದಿದ್ದಾರೆ.

ಎಚ್.ಎಸ್.ವೆಂಕಟೇಶ ಮೂರ್ತಿಯವರು ಕಲ್ಬುರ್ಗಿಯಲ್ಲಿ ನಡೆದ 85ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಆ ಸಮಯದಲ್ಲಿ ಬಿ.ಆರ್.ಲಕ್ಷ್ಮಣರಾವ್ ಅವರನ್ನು ಸಂದರ್ಶಿಸಿದಾಗ ಅವರು ಹೇಳಿದ ಒಂದೆರಡು ಮಾತುಗಳನ್ನು ಪ್ರಸ್ತಾಪಿಸಿ ಈ ಲೇಖನ ಮುಗಿಸುವೆ.

"ಸುತ್ತಲಿನ ಜಗತ್ತು ಮತ್ತು ಕವಿ ವ್ಯಕ್ತಿತ್ವದ ನಡುವೆ ಗಾಢವಾದ ಸಂಬಂಧ ಇರುವುದು ಅತ್ಯಗತ್ಯ. ಲೋಕವಿಮುಖಿಯಾದ ಮನಸ್ಸು ಸೃಜನಶೀಲತೆಯ ಲೀಲೆಯಲ್ಲಿ ಆಸಕ್ತಿಯನ್ನು ಕಳೆದುಕೊಳ್ಳುತ್ತದೆ. ಜೀವನ ಬೇಸರ ಅನಿಸಿದಾಗ ಬರೆಯುವ ಹುಮ್ಮಸ್ಸು ಎಲ್ಲಿಂದ ಬರುತ್ತದೆ."

"ಹಿಂದಿನ ಯಾನ (ಸಾಹಿತ್ಯದ ಹಿನ್ನೋಟ ಕುರಿತು) ನಾವೇ ಕಂಡರಿಸಿದ ಹಾದಿ, ಮುಂದಿನ ಹಾದಿ ಕಂಡುಕೊಳ್ಳಬೇಕಾದ ಹಾದಿ. ಹಿಂದಿನ ಹಾದಿಯನ್ನು ಅವಲೋಕಿಸಿದಾಗ ಮುಂದಿನ ಕಾಣದಿರುವ ಮಂಜು ಮುಸುಕಿನ ಹಾದಿಯನ್ನು ಭೇದಿಸುವ ಆಸೆ ಮೂಡುತ್ತದೆ. "

"ಸಾನೆಟ್, ಶಿಶುಗೀತೆ ಮೊದಲಾದವು ಕೂಡ ನಾವು ಸಾಧಿಸಬೇಕಾದ ಮುಖ್ಯ ಕಾವ್ಯ ಪ್ರಭೇದಗಳು. ಮಕ್ಕಳಿಗಾಗಿ ಬರೆಯುವುದು ಕೂಡ ನಮ್ಮ ಕರ್ತವ್ಯ."

"ಅಂತರ್ಮುಖತೆ ಎನ್ನುವುದು ಸಾಹಿತ್ಯ ರಚನೆಗೆ ಅವಶ್ಯ ಸಾಮಗ್ರಿ".

"ಸಾಹಿತಿಗಳಲ್ಲಿ ಜಾತಿ ಮತ್ತು ಪಕ್ಷಗಳನ್ನು ನೋಡಬಾರದು. ಅವರ ಸಾಹಿತ್ಯ ಪ್ರತಿಭೆ ಮತ್ತು ಕೃತಿಯ ಮೌಲ್ಯವನ್ನು ನೋಡಬೇಕು''.

"ಭಾರತೀಯ ಸಂಸ್ಕೃತಿಯ ಹೃದಯ ಸ್ಪಂದನ ಕಾವ್ಯವಾಗಿದೆ. ಆದುದರಿಂದ ಕವಿತೆಗಳನ್ನು ಓದದವರೂ, ಹಾಡು ಕೇಳಿದಾಗ ಸಂತೋಷಪಡುತ್ತಾರೆ.

ಇಂದಿನ ದಾಸೋಹದಲ್ಲಿ ಎಚ್ಚೆಸ್ವಿ ಅವರಂಥ ಹಿರಿಯ ಸಾಹಿತಿಗಳನ್ನು ಕುರಿತು ಹೇಳಲು ದೊರೆತ ಆರು ನಿಮಿಷಗಳಲ್ಲಿ ಅವರ ವ್ಯಕ್ತಿತ್ವದ ಅತೀ ಕಿರುಚಿತ್ರವನ್ನು ಮಾತ್ರ ನೀಡಬಹುದು.

***

ಡಾ. ಎಚ್ಚೆಸ್ವಿ ಅವರ ಅನುವಾದಿತ ಕೃತಿ

'ಬೆಂಗಾಲಿ ಕವಿತೆಗಳು'


– ಹ.ವಾ. ಶ್ರೀಪ್ರಕಾಶ್

ಎಚ್.ಎಸ್.ವೆಂಕಟೇಶಮೂರ್ತಿಯವರು ಕನ್ನಡಕ್ಕೆ ಅನುವಾದಿಸಿರುವ ಬೆಂಗಾಲಿ ಕವಿತೆಗಳು ಕೃತಿಯನ್ನು 2023 ನವೆಂಬರಿನಲ್ಲಿ ಸಪ್ನ ಬುಕ್ ಹೌಸ್ ಪ್ರಕಟಿಸಿದೆ.

1993ರ ಮಾರ್ಚ್ ತಿಂಗಳಲ್ಲಿ ಕನ್ನಡ ಮತ್ತು ಬೆಂಗಾಲಿ ಲೇಖಕರು ಭಾಗವಹಿಸಿದ್ದ 15 ದಿವಸದ ಕಾವ್ಯಾನುವಾದ ಕಮ್ಮಟವು ಡಾ.ಸುಮತೀಂದ್ರ ನಾಡಿಗರ ನಿರ್ದೇಶನದಲ್ಲಿ ಬೆಂಗಳೂರಿನಲ್ಲಿ ನಡೆದಿತ್ತಂತೆ. ಪ್ರತಿಯೊಬ್ಬ ಬೆಂಗಾಲಿ ಕವಿ ಜೊತೆ ಒಬ್ಬರು ಕನ್ನಡ ಕವಿ. ಎಚ್ಎಸ್ವಿ ಅವರೊಂದಿಗೆ ಬೆಂಗಾಲಿ ಕವಯತ್ರಿ ಕೃಷ್ಣಭೋಸು ಜೊತೆಯಾಗಿದ್ದರಂತೆ. ಆಗ ಹದಿನೈದು ಕವನಗಳನ್ನು ಅನುವಾದಿಸಿದ್ದರಂತೆ.

'ಬೆಂಗಾಲಿ ಕವಿತೆಗಳು' ಕೃತಿಯಲ್ಲಿ ಗೀತಾಂಜಲಿಯ 32 ಕವನಗಳು ಮತ್ತು ವಿವಿಧ ಕವಿಗಳ 27 ಕವನಗಳಿವೆ "ಮೂಲದ ಎಲ್ಲ ಸೊಬಗನ್ನು ಈ ಕವನಗಳು ಧಾರಣೆ ಮಾಡಿವೆ ಎಂದು ಹೇಳುವ ಧೈರ್ಯ ನನಗಿಲ್ಲ" ಎಂದು ಎಚ್ಚೆಸ್ವಿಯವರು ಹೇಳಿದ್ದರೂ ಇಲ್ಲಿರುವ ಎಲ್ಲ ಪದ್ಯಗಳೂ ಸೊಗಸಾಗಿವೆ

ಎಚ್ಚೆಸ್ವಿಯವರು ಬೆಂಗಾಲಿ ಕವನಗಳನ್ನು ಸಮರ್ಥವಾಗಿ ಅನುವಾದಿಸಿದ್ದರು ಎಂಬದನ್ನು ಹೇಳುವುದು ನನ್ನ ಉದ್ದೇಶ. ಅದಕ್ಕಾಗಿ ಮೂರು ಪದ್ಯಗಳ ಆಯ್ದ ಭಾಗ ಓದುತ್ತೇನೆ.



1. ಬುದ್ಧದೇವ್ ದಾಸ್ ಗುಪ್ತ ಅವರ ಕವನ–

'ಹ್ಯಾಂಗರ್'

ಮಾಡಲಿಕ್ಕೆಂತದು ಕಸುಬಿಲ್ಲದಿದ್ದಾಗ ಅವನ ಖಾಯಿಷ್ ಕೆಲಸ ಇಷ್ಟೇ.
ಅಲ್ಮೆರ ತೆಗೆದು ಸುಮ್ಮನೆ ಒಳಗೆ ನೋಡುವುದು
ನೋಡುತ್ತಾ ನೋಡುತ್ತಾ ನೋಡುತ್ತಾ ನಿಲ್ಲುವುದು
ರಾತ್ರಿ ಯಾಕೋ ನಿದ್ದೆ ಬರಲಿಲ್ಲ ಎನ್ನಿ
ಆಗಲು ಮಾಡುವುದು ಅಷ್ಟೇ ಕೆಲಸ
ಅಲ್ಮೆರ ತೆಗೆಯುವುದು
ಗಂಟೆಗಟ್ಟಲೆ ಅದನ್ನೇ ನೋಡುತ್ತಾ ನಿಲ್ಲುವುದು
ಕೊನೆಗೊಂದು ದಿನ ಈತ ಬಾಗಿಲನ್ನು ತೆರೆದಾಗ
ಶರ್ಟ್ ಒಂದು ಧುತ್ ಎಂದು ಚಾಚಿ ತೋಳನ್ನು
ಅವರನ್ನು ಬಾಚಿ ಎಳಕೊಂಡಿತ್ತು ಅಲ್ಮೆರಾದೊಳಗೆ !
ಒಳಗಿದ್ದ ಹಲವು ಬಣ್ಣದ ಅಂಗಿ ಕಲಿಸಿಕೊಟ್ಟವು ಪಾಠ
ದಿನಗಟ್ಟಲೆ ತಿಂಗಳುಗಟ್ಟಲೆ ಹೇಗೆ ನೇತಾಡುವುದು
ಒಂದು ಹ್ಯಾಂಗರಿಗೊಂದು ಜೋತುಬಿದ್ದು

ಇದೊಂದು ಧ್ವನಿಪೂರ್ಣವಾದ ಕವನ. ನಾವೂ ಯಾವುದೋ ಹ್ಯಾಂಗರ್‌ಗೆ ನೇತುಹಾಕಿಕೊಂಡಿರುತ್ತೇವೆ . ಹೆಚ್ಚಿನ ವಿಶ್ಲೇಷಣೆ ಅನಗತ್ಯ.

2. ಪ್ರಣಬೇಂದ್ರ ದಾಸಗುಪ್ತರ ಕವನ:

ಮನೆಗಳ ಬಗ್ಗೆ

ಮನೆಗಳ ಬಗ್ಗೆ
ನನಗೆ ಏನೇನು ಗೊತ್ತಿಲ್ಲ
ನನಗೆ ಮನೆಯೂ ಇಲ್ಲ
ನಿನ್ನೊಳಗೆ ನನಗೊಂದು ಖೋಲಿ ಸಿಕ್ಕಿದರೆ
ಗೃಹಪ್ರವೇಶಕ್ಕೆ ನೀನು ಮಾವಿನ ಎಲೆ ಹೊಂಚಿದರೆ
ಪ್ರೀತಿ ತುಂಬಿದ ರೆಪ್ಪೆ ಬಾಗಿಲನು ತೆರೆದರೆ
ನಾನು ಯೋಚಿಸಬಲ್ಲೆ
ಒಂದೆರಡು ದಿನ ಅಲ್ಲಿ ಬಂದು ನಿಲ್ಲುವ ಬಗ್ಗೆ

ಬೇರೆ ಮನೆ ನನಗಿಲ್ಲ
ನನಗೆ ಮನೆಗಳ ಬಗ್ಗೆ ಇರುವ ಅರಿವು ಕೂಡ
ಅಷ್ಟರಲ್ಲೇ ಇದೆ.

ಮೇಲಿನದು ಕವನದ ಕೊನೆಯ ಭಾಗ. ಮನೆಗಳ ಬಗ್ಗೆ ಹೇಳುತ್ತಲೇ ಪ್ರೀತಿಯ ನಿವೇದನೆ ಸೊಗಸಾಗಿದೆ.

3. ರವೀಂದ್ರನಾಥ ಟ್ಯಾಗೋರರ 'ಗೀತಾಂಜಲಿ'

ಟ್ಯಾಗೋರರ 'ಗೀತಾಂಜಲಿ' ಸಂಕಲನದಲ್ಲಿರುವ ಕವನಗಳನ್ನು ಅನೇಕರು ಅನುವಾದಿಸಿದ್ದಾರೆ. ಎಚ್ಚೆಸ್ವಿಯವರೂ ಹಲವು ಕವನ ಅನುವಾದಿಸಿದ್ದಾರೆ. ಅದರಲ್ಲೂ ಅವರ ಪ್ರಸಿದ್ಧ ಕವನ– 'ವೇರ್ ದಿ ಮೈಂಡ್ ಈಸ್ ವಿತೌಟ್ ಫಿಯರ್' ಕವನವನ್ನು ಎಚ್ಚೆಸ್ವಿಯವರು 'ಎಲ್ಲಿ ಮನಕೆ ಭೀತಿ ಇರದೋ' ಎಂದು ಅನುವಾದಿಸಿದ್ದಾರೆ. ('ಎಲ್ಲಿ ಮನಕಳುಕಿರದೋ– ಎಂಬುದನ್ನು ನೀವೆಲ್ಲ ಕೇಳಿರುತ್ತೀರಿ). ಇಲ್ಲಿ ಎಚ್ಚೆಸ್ವಿಯವರು ಅನುವಾದಿಸಿದ ಟ್ಯಾಗೋರರ ಎರಡು ಕವನಗಳ ಕೆಲವು ಸಾಲುಗಳನ್ನು ಓದುತ್ತೇನೆ.

'ಕಾಯುತಿರುವೆನು'

ನಾನು ಏನು ಹಾಡಬೇಕು ಎಂದು ಹುಟ್ಟಿ ಬಂದೆನೋ,
ಆ ಹಾಡನ್ನು ಹಾಡಲಿಲ್ಲ ಇಂದಿನ ತನಕ
ಇಡೀ ಬಾಳು ಕಳೆದು ಹೋಯಿತು
ನಾನು ನನ್ನ ವಾದ್ಯಕೆ ತಂತಿಯ ಬಿಗಿ ಮಾಡುತ
ಸಡಿಲಗೊಳಿಸುತ

'ಕಡಲತಡಿಯಲ್ಲಿ'

ತಡಿಯಲಿ ಆಡುವ ಮಕ್ಕಳಿಗೆ
ನೀರಲಿ ಈಜುವುದು ಗೊತ್ತಿಲ್ಲ
ನೀರಿನಲ್ಲಿ ಆಡುವ ಜಲಚರಕೆ

ಬಲೆ ಬೀಸುವುದು ತಿಳಿದಿಲ್ಲ
ಆಳದ ಮುತ್ತುಗಳ ಅರಸುತ್ತ
ಮುಳುಗುವುದು ಅರಿತಿಲ್ಲ
ಕಡಲ ನಿಧಿಯತ್ತ ಮನವಿಲ್ಲ
ಆಯುವರು ಕಲ್ಲುಗಳ
ಅಲೆ ಹಾಡುತ್ತಿವೆ ಹಾಡುಗಳ
ಈ ಮಕ್ಕಳಿಗಾಗಿ...
ಮೊರೆವ ಬಿರುಗಾಳಿ ಬಾನಲ್ಲಿ
ಮಕ್ಕಳಿಗರಿವಿಲ್ಲ..
ಸಾವು ಎಲ್ಲೋ ಇದೆ ದೂರದಲ್ಲಿ
ಮಕ್ಕಳು ಆಡುತಿವೆ
ತೊಟ್ಟಿಲ ತೂಗಿದೆ ಕಡಲ ಅಲೆ
ಮಕ್ಕಳು ಆಡುತಿವೆ

ಸ್ವತಃ ಉತ್ತಮ ಕವಿಯಾದ ಎಚ್.ಎಸ್.ವೆಂಕಟೇಶ ಮೂರ್ತಿಯವರು ಕನ್ನಡಕ್ಕೆ ಅನುವಾದಿಸಿರುವ ಖ್ಯಾತ ಬೆಂಗಾಲಿ ಲೇಖಕರ ಕವನಗಳು ಗಮನ ಸೆಳೆಯುತ್ತವೆ. ಅವರ 'ಬೆಂಗಾಲಿ ಕವಿತೆಗಳು' ಕಾವ್ಯಾಸಕ್ತರು ಕೊಂಡು ಓದಬಹುದಾದ ಕೃತಿ.

***

ಡಾ. ಎಚ್ಚೆಸ್ವಿ ಕೃತಿ ಪರಿಚಯ

ಎಚ್ಚೆಸ್ವಿ ಅನಾತ್ಮ ಕಥನ

– ಬೆಂಶ್ರೀ ರವೀಂದ್ರ

ಪುಸ್ತಕದ ಹೆಸರೇ ಆಕರ್ಷಿಸುತ್ತದೆ, "ಅನಾತ್ಮ ಕಥನ". 'ಓಹ್ ಹಾಗಾದರೆ ಈ ಪುಸ್ತಕ ಆತ್ಮಕಥೆಯಲ್ಲವೇ' ಎಂಬ ಪ್ರಶ್ನೆ ನಿಮಗೆ. ಲೇಖಕರೇ ಪುಸ್ತಕದ ಜೋಡುಕಟ್ಟು ಸಾಲುನಲ್ಲಿ (Tag line) "ಆತ್ಮಕಥನಕ್ಕೊಂದು ಹೊಸ ರೂಪ" ಎಂದು ನಿಮ್ಮ ಸಮಸ್ಯೆಯನ್ನು ತಗ್ಗಿಸಿದ್ದಾರೆ.

ಕೃತಿ ; ಎಚ್ಚೆಸ್ವಿ ಅನಾತ್ಮ ಕಥನ
ಲೇಖಕರು ; ಡಾ ಎಚ್ಚೆಸ್ ವೆಂಕಟೇಶಮೂರ್ತಿ
ಪ್ರಕಾಶಕರು ; ಅಂಕಿತ ಪುಸ್ತಕ
ಮೊದಲ ಮುದ್ರಣ ; ೨೦೧೦
ಪುಟಗಳು ; ೨೧೬, ಬೆಲೆ ; ₹೧೫೦/–

"ಅವಧಿ" ಅಂತರ್ಜಾಲ ಪತ್ರಿಕೆಯಲ್ಲಿ ಅಂಕಣ ರೂಪವಾಗಿ ಹರಿದು ಬಂದ ಈ ಲೇಖನಗಳನ್ನು "ಆತ್ಮಕತೆ ಎಂದು ಕರೆಯುವುದಕ್ಕಿಂತ ಆತ್ಮಕಥನಾತ್ಮಕ ಪ್ರಬಂಧಗಳೆಂದು ಕರೆಯುವುದು ಸೂಕ್ತ"ವೆಂದು ಲೇಖಕರ ಮಿತ್ರರು ಅಭಿಪ್ರಾಯಪಟ್ಟಿದ್ದಾರೆ ಎಂದರೆ ಇದೊಂದು ರೀತಿಯ ಆತ್ಮಕಥೆಯೇ ಆಗಿದೆ.

ಸಾಮಾನ್ಯವಾಗಿ, ಆತ್ಮಕಥೆಯೆಂದರೆ ಒಬ್ಬ ವ್ಯಕ್ತಿಯ ಹುಟ್ಟಿನಿಂದ ಕಥನದ ತನಕ ಮೂಡಿಬರುವ ಘಟನಾವಳಿಗಳು. ತನ್ಮೂಲಕ ವ್ಯಕ್ತಿಯು ಆ ಘಟನೆಗಳನ್ನು ಆವರಿಸಿದ ಕಾಲಘಟ್ಟದ ಚಿತ್ರಣವನ್ನೂ ತೆರೆದಿಡುತ್ತಾನೆ. ಅಲ್ಲಿ ಸಾಮಾಜಿಕ, ಧಾರ್ಮಿಕ, ಕೌಟುಂಬಿಕ, ಆರ್ಥಿಕ ಆಯಾಮಗಳು ಇರುತ್ತವೆ. ಒಟ್ಟಿನಲ್ಲಿ ಆತ್ಮಕಥೆಗಳು ಸಮಾಜದ ಒಂದು ಕಾಲದ ತುಣುಕಿನ ಚೂರು.

ಮುಖ್ಯವಾಗಿ, ಈ ಕೃತಿಯಲ್ಲಿ ಕಥೆಯು ಎರಡು ನೆಲೆಗಳಲ್ಲಿ ನಡೆಯುತ್ತದೆ. ಒಂದು ಎಚ್ಚೆಸ್ವಿ ಅವರ ಹೋದಿಗೆರೆ ಮತ್ತು ಕುಟುಂಬ, ಎರಡು ಅವರ ಔದ್ಯೋಗಿಕ ಮತ್ತು ಸಾಮಾಜಿಕ ಪರಿಸರ. ಒಟ್ಟು ೩೫ ಬಿಡಿ ಲೇಖನಗಳ ಈ ಕೃತಿಯಲ್ಲಿ ಹೆಚ್ಚು ಆವರಿಸಿಕೊಳ್ಳುವ ಹೋದಿಗೆರೆ ಮತ್ತು ಎಚ್ಚೆಸ್ವಿ ಅವರ ಬಾಲ್ಯದ ಪರಿಸರ ಕುಟುಂಬ ಮತ್ತು ಗೆಳೆಯರದು ಪ್ರಮುಖ ಪಾತ್ರ.

ಬರೆಹವು ಅತ್ಯಂತ ಆಕರ್ಷಣೀಯ. ಆತ್ಮೀಯವಾಗಿ ನಡೆಯುವ ಮಾತುಕತೆಯಂತೆ ಕಾವ್ಯಮಯ. ಎಚ್ಚೆಸ್ವಿ ಮೂಲತಃ ಕವಿ. ಅವರೇ ಹೇಳುವಂತೆ "ಪದ್ಯವು ಹಾಡು ಕವಿತೆಯಾದರೆ, ಗದ್ಯವು ಆಡು ಕವಿತೆ". ಈ ಮಾತು, ಕೃತಿಯ ಪ್ರತಿಪದದಲ್ಲಿ ಸಾಕ್ಷಾತ್ಕಾರವಾಗಿದೆ. ಆಡುಗಬ್ಬದ ಈ ಭಾವರಸವು ಓತಪ್ರೋತವಾಗಿ ಹರಿದು ಓದುಗರನ್ನು ಅಕ್ಷರಕ್ಷರದಲ್ಲಿ ತಣಿಸುತ್ತದೆ.

ಪುಸ್ತಕದ ಬರೆಹ ಕುರಿತು ಶ್ರೀ ಜಿಎಸ್ಎಸ್ ಈ ರೀತಿ ಹೇಳಿದ್ದಾರೆ– "ಬರವಣಿಗೆಯಲ್ಲಿ ಮಾಸ್ತಿ, ಗೊರೂರು, ಮೂರ್ತಿರಾಯರ ಮನೋಧರ್ಮದ ಹದವಾದ ಪಾಕದ ಪುನರ್ಭವಗೊಂಡಿದೆ. ಬರವಣಿಗೆ ಚೇತೋಹಾರಿಯಾಗಿದೆ". ಶ್ರೀ ಜಿ.ಎನ್. ರಂಗನಾಥರಾಯರು "ಮನುಷ್ಯ ಸಂಬಂಧಗಳನ್ನು ಕರಸ್ಥಳಕ್ಕೆ ಆವಾಹಿಸಿ, ಅವರವರ ದ್ರವ್ಯ, ಅವರವರ ಹತಾರಗಳ ಮುಖೇನ ಆಪ್ತ ನೆಲೆಯಲ್ಲಿ ಅನಾವರಣಗೊಳಿಸುತ್ತಾ ಮುಖಾಬಿಲೆ ಮೂಡಿಸುವ ಪರಿ ಡಿವಿಜಿ ಅವರ ಜ್ಞಾಪಕ ಚಿತ್ರಶಾಲೆಯನ್ನು ನೆನಪಿಗೆ ತರುತ್ತದೆ' ಅನ್ನುತ್ತಾರೆ. ಈ ಗಮನಿಕೆಗಳು ದೊಡ್ಡ ಪ್ರಮಾಣಪತ್ರವೇ ಆಗಿದೆ.

ಈ ಪ್ರಬಂಧ ಕಥನಗಳಲ್ಲಿ ತಮ್ಮ ಬದುಕಿನೊಂದಿಗೆ ಅಮ್ಮ, ಅಜ್ಜಿ, ಮುತ್ತಜ್ಜಿ, ಮಡದಿ ಮತ್ತು ಬಾಲ್ಯಕಾಲದ ಗೆಳೆಯರು, ವಿದ್ಯಾರ್ಥಿಗಳು, ಸಹೋದ್ಯೋಗಿಗಳು, ಸಾಹಿತ್ಯದ ಸಂಗಾತಿಗಳು, ಮೇರು ಸದೃಶರಾದ ಹಾಡುಗಾರರು... ಮೊದಲಾದವರ ವ್ಯಕ್ತಿತ್ವಗಳನ್ನು, ಘಟನಾವಳಿಗಳನ್ನು ಕಥೆಕಟ್ಟುವ ರೀತಿಯಲ್ಲಿ ಹೇಳುವ ಎಚ್ಚೆಸ್ವಿ ಆಯಾಕಾಲವನ್ನು ಹಾಗೇಯೇ ಅಚ್ಚೊತ್ತಿದಂತೆ ಹಿತವಾದ ಕಾವ್ಯಭಾಷೆಯಲ್ಲಿ ಶಿಲ್ಪಿಯಂತೆ ಕೆತ್ತಿಡುತ್ತಾರೆ. ಓದುವುದೇ ಸೊಗಸು.



ಮೊದಲ ಪ್ರಕರಣದಲ್ಲಿ, ಮಲ್ಲಾಡಿಹಳ್ಳಿಯಲ್ಲಿ "ತಿರುಕ'ರ ಪುಸ್ತಕಗಳನ್ನು ಓದಿರುವ ವಿಷಯ ತಿಳಿಸಿ, ಕೆಲಸ ಗಿಟ್ಟಿಸಿದ ಬಗೆಯನ್ನು ನವಿರಾಗಿ ಹೇಳಿ, ಅಲ್ಲಿಗೆ ಬರುತ್ತಿದ್ದ ಸಾಹಿತಿಗಳು ವಿಶೇಷವಾಗಿ ಪುತಿನ, ಗೊರೂರು, ಅನಂತಮೂರ್ತಿ ಮೊದಲಾದವರ ಬಗ್ಗೆ ತಮ್ಮ ನೆನಪುಗಳನ್ನು ಕೆದಕುತ್ತಾರೆ. ಅಲ್ಲಿನ ವಾಚಾನಾಲಯವು ಎಚ್ಚೆಸ್ವಿ ಅವರ ಓದುವ ಹಸಿವನ್ನು ಸ್ವಲ್ಪಮಟ್ಟಿಗೆ ತಣಿಸುತ್ತದೆ.

ಎಚ್ಚೆಸ್ವಿ, ಬಹಳ ಒಳ್ಳೆಯ ಭೋಧಕರು. ವಿದ್ಯಾರ್ಥಿಗಳು ಸಹಜವಾಗಿ ಎಚ್ಚೆಸ್ವಿ ಮಾತಿನ ಮೋಡಿಗೆ ಒಳಗಾಗುತ್ತಿದ್ದರು. ಮಲ್ಲಾಡಿಹಳ್ಳಿಯಲ್ಲಿ ಇವರ ಶಿಷ್ಯರಾಗಿದ್ದ ಡಾ. ಹೆಚ್.ಎಸ್.ವೆಂಕಟೇಶ ಮೂರ್ತಿಯವರು ಆಜೀವ ಇವರ ಒಡನಾಟದಲ್ಲಿ ಇದ್ದರು. ಎಚ್ಚೆಸ್ವಿ ಅವರ ಅರ್ಧಾಂಗಿ ಶ್ರೀಮತಿ ರಾಜಲಕ್ಷ್ಮಿ ಅವರನ್ನು ಕೊನೆಗಾಲದವರೆಗೂ ನೋಡಿಕೊಳ್ಳುತ್ತಾರೆ. ನಂತರ ಅವರೇ ಕ್ಯಾನ್ಸರ್‌ಗೆ ಒಳಗಾಗಿ ಸಾವನಪ್ಪುತ್ತಾರೆ. ಈ ಪ್ರಕರಣ ಮನಮಿಡಿಯುವಂತಿದೆ.

ಹಿರಿಯ ಉದ್ಯಮಿ ಮೋಹನದಾಸ್ ಪೈ ಅವರು ಹಿಂದಿ ತರಗತಿಗಳನ್ನು ತಪ್ಪಿಸಿ ಎಚ್ಚೆಸ್ವಿ ಅವರ ಕನ್ನಡ ತರಗತಿಗಳಿಗೆ ಹಾಜರಾಗುತ್ತಿದ್ದರಂತೆ. ವಿಶ್ವದಾದ್ಯಂತ ಅಪಾರ ಶಿಷ್ಯರನ್ನು ಗಳಿಸಿದ್ದಲ್ಲದೆ, ಅವರ ವಾತ್ಸಲ್ಯವನ್ನು ಗಳಿಸಿದ ಎಚ್ಚೆಸ್ವಿ, ನಿಜವಾಗಿ ಆದರ್ಶ ಉಪಾಧ್ಯಾಯರು. ವೇಣು ಎಂಬ ಹುಡುಗಿ (ಮಲ್ಲಾಡಿಹಳ್ಳಿ) ಮತ್ತು ಪ್ರಿಯ (ಸೆಂಟ್ ಜೋಸೆಫ್ ಕಾಲೇಜು) ಅವರುಗಳ ಪ್ರಕರಣವನ್ನು ಬಹು ವಿನೋದವಾಗಿ ಅಷ್ಟೇ ಆತ್ಮೀಯವಾಗಿ ನಿರೂಪಿಸಿರುವುದು ಮನಸ್ಸಿಗೆ ತಟ್ಟುತ್ತದೆ.

ಹೋದಿಗರೆಯ ಪ್ರಸಂಗಗಳು ಮತ್ತೆ ಮತ್ತೆ ಮೆಲಕು ಹಾಕುವಂತಿದೆ. ಎಚ್ಚೆಸ್ವಿ ಬರೆದ ಮೊದಲ ಕವಿತಾ ಸಂಗ್ರಹ "ದಾಸವಾಳ". ಪ್ರೀತಿಯಿಂದ "ಈಶಬುಡ್ಡಿ" ಎಂದು ಕರೆಯುವ ಕಥೆಗಾರ ಈಶ್ವರಚಂದ್ರ ಮತ್ತು ಎಚ್ಚೆಸ್ವಿ, ಇಬ್ಬರೂ ಸೇರಿ ಮರದ ಪೊಟರೆಯೊಳಗೆ ಕೂತು ಬರೆದ ಪತ್ತೇದಾರಿ ಕಾದಂಬರಿ ಪ್ರಸಂಗ ನಗೆ ತರುತ್ತದೆ. ಈಶಬುಡ್ಡಿ ಗೆಳತಿಗೆ ಕೊಟ್ಟಿದ್ದ ಆ ಕೈ ಬರೆಹದ ಕಾದಂಬರಿ ಕಳೆದುಹೋಗುತ್ತದೆ. ಪಾಪ, ಆ ಹುಡುಗಿ ಎರಡು ರೂಪಾಯಿ ಕೊಟ್ಟಳಂತೆ! ಅದುವೇ ಸಾಹಿತ್ಯದಿಂದ ನಾನು ಸಂಪಾದಿಸಿದ ಮೊದಲ ಸಂಭಾವನೆ ಅನ್ನುತ್ತಾರೆ ಎಚ್ಚೆಸ್ವಿ.

ತಮ್ಮ ಬಾಲ್ಯಕಾಲದ ಗೆಳೆಯರನ್ನು ಎಚ್ಚೆಸ್ವಿ ನೆನಪಿಸಿಕೊಳ್ಳುವುದು ಮಹದಾನಂದ ತರುತ್ತದೆ. ಅವರ ಇನಿಷಿಯಲ್ಸ್ ಸಹ ಪುಸ್ತಕದಲ್ಲಿ ಬರೆದಿದ್ದಾರೆ. ಕಿಟ್ಟಿ, ಯಂಟ, ಮಲ್ಲಿ, ನಾಗಪ್ಪ, ರುದ್ರ, ದಳವಾಯಿ, ಫಿಲಿಪ್ಸು, ಈಶ.. ಇವರುಗಳು. ಹರಿತವಾದ ಉಗುರು ಬೆಳೆಸಿ, ಸದಾ ಓದಿನಲ್ಲಿ ಮಗ್ನನಾದ ಈಶ, ಮಾವಿನ ಮರಕ್ಕೆ ಕಲ್ಲು ಹೊಡೆಯುವ ಎಕ್ ಸ್ ಪರ್ಟ್ ಕಾಳಾಚಾರಿ, ಮುಳ್ಳಿನ ಕಾರೆ ಗಿಡದಲ್ಲಿ ಹಣ್ಣು ಕೀಳುವ ಎಕ್ಸ್‌ಪರ್ಟ್ ಟಿ.ಕೆಂಚಪ್ಪ, ನೆರಲೆ ಎಕ್ ಸ್ ಪರ್ಟ್ ಕೆಟಿ ಯಂಟಣ್ಣ... ಇವರುಗಳ ಬಗ್ಗೆ ಹಣ್ಣುಗಳು, ರಸದಷ್ಟೆ ಪರಿಣಾಮಕಾರಿ ನಿರೂಪಣೆ ಲೇಖಕರದು. ಈ ಅಧ್ಯಾಯದ ತುಂಬಾ ಹಳ್ಳಿಯ ಹಣ್ಣುಗಳ ರುಚಿಯ ವರ್ಣನೆ ಅಬ್ಬಾ ಅನ್ನಿಸುತ್ತದೆ.

ಎಚ್ಚೆಸ್ವಿ ಅವರು ಹೊಸದುರ್ಗದ ಮದುವೆಯಲ್ಲಿ ನೋಡಿ ಇಷ್ಟಪಡುವ ಕಳಸಗಿತ್ತಿ ರಾಜಲಕ್ಷ್ಮಿಯನ್ನು ಮದುವೆಯಾಗುತ್ತಾರೆ. ಆಗ ಬರೆದ 'ಮರೆಯಲಾಗದ ಓಕುಳಿ ಸಂಜೆ' ಮತ್ತು ರಾಜಲಕ್ಷ್ಮಿ ಅವರ ಅಗಲಿಕೆಯ ನಂತರ ಬರೆದ "ನೀನೆಲ್ಲಿ ಈಗ", ಎರಡೂ ಬೇರೆ ಬೇರೆ ರೀತಿಯಲ್ಲಿ ಮನಸ್ಸನ್ನು ಅಪ್ಪುತ್ತವೆ.

ಲೇಖಕರ ಊರಿನ ಕೆಲವು ಪ್ರಸಂಗಗಳು, ಪಿಳ್ಳೆ ಪಂಡಿತರ ಪ್ರಕೋಪ, ಮಳೆಗಾಗಿ ಹಾಳುಗುಡಿಯ ಹನುಮನಿಗೆ ಮೆಣಸಿನ ಖಾರ ಹಚ್ಚುವುದು (ಒಡೆಯದ ಒನಪು), ಸೀತಜ್ಜಿಗೆ ಮೈ ತೂಗುವುದು (ದೆವ್ವಗಳ ಬೀಡಿನಲ್ಲಿ ಒಂದು ರಾತ್ರಿ). ಇಂತಹ ಪ್ರಸಂಗಗಳನ್ನು ಓದಿದಾಗ ಕೆಲವು ಗ್ರಾಮ್ಯ ಆಚರಣೆಗಳು ಎಷ್ಟು ವಿಶಿಷ್ಟ ಅನಿಸುತ್ತದೆ. ಆದರೆ ಆ ಆಚರಣೆಗಳ ಫಲ ಸಿಕ್ಕಿತು ಎಂದು ಲೇಖಕರು ಸೂಚಿಸಿದಾಗ ಆಶ್ಚರ್ಯವಾಗುತ್ತದೆ.

ತಮ್ಮ ವೃತ್ತಿ ಜೀವನದ ಕೆಲವು ಘಟನೆಗಳನ್ನು ಸ್ವಾರಸ್ಯಕರವಾಗಿ ಹಲವು ಪ್ರಬಂಧಗಳಲ್ಲಿ ಎಚ್ಚೆಸ್ವಿ ರೂಪಿಸುತ್ತಾರೆ. ವಿಶೇಷವಾಗಿ ಕಥೆಗಾರ ಎನ್.ಎಸ್.ಚಿದಂಬರ ರಾವ್ ಬಗೆಗಿನ ಬರೆಹ ನಮ್ಮ ನೋವಿನ ಎಳೆಯನ್ನು ಮೀಟುತ್ತದೆ.

ಬೆಂಗಳೂರಿನಲ್ಲಿ ಸಂಸಾರ ಹೂಡಿದ ಸಂದರ್ಭದ ಘಟನೆಗಳು ಹಿತವಾದ ವಿನೋದಗಳಾಗಿವೆ.

ಎಚ್ಚೆಸ್ವಿ ಅವರು ಹಾಡುಗಾರ ಅಶ್ವತ್ಥ ಮತ್ತು ಮೈಸೂರು ಅನಂತಸ್ವಾಮಿಯವರನ್ನು ಬಹು ಪ್ರೀತಿ ಮತ್ತು ಅಭಿಮಾನದಿಂದ ಸ್ಮರಿಸಿಕೊಂಡಿದ್ದಾರೆ. ಅಶ್ವತ್ಥರ "ಕನ್ನಡವೇ ಸತ್ಯ" ಕಾರ್ಯಕ್ರಮದ ಗಾನ ಸಾಹಸದ ಬಗ್ಗೆ ಬರೆಯುವ ಎಚ್ಚೆಸ್ವಿ, ಅಶ್ವತ್ಥರ ಹಾಗೂ ಅನಂತಸ್ವಾಮಿ ಅವರ ಕೊನೆದಿನಗಳನ್ನು ಕೂಡಾ ಮನಮಿಡಿಯುವಂತೆ ಚಿತ್ರಿಸುತ್ತಾರೆ.

ಒಂದು ಸಂದರ್ಭದಲ್ಲಿ ಎಚ್ಚೆಸ್ವಿ ಅವರ ಲೋಕವಿಖ್ಯಾತವಾದ ಹಾಡುಗಳು... ಲೋಕದ ಕಣ್ಣಿಗೆ ರಾಧೆಯು ಕೂಡಾ, ಅಮ್ಮಾ ಯಶೋಧೆ, ಅಮ್ಮಾ ನಾನು ದೇವರಾಣೆ, ಆ ನೀಲಿ ಕೊಳದಲ್ಲಿ... ಮೊದಲಾದ ಹಲವು ಹತ್ತು ಹಾಡುಗಳು, ಇನ್ಸ್‌ಪೈರ್ ಆಗಲಿಲ್ಲವೆಂದು ಅಶ್ವತ್ಥ, ಹಾಡದೇ ವಾಪಸ್ಸು ಕೊಡುತ್ತಾರೆ. ಆದರೆ ಮಾರನೆಯ ದಿನ ಅನಂತಸ್ವಾಮಿ ಅವುಗಳನ್ನು ತೆಗೆದುಕೊಂಡು ಹೋಗಿ ಸ್ವರ ಸಂಯೋಜಿಸುತ್ತಾರೆ. ಆ ಹಾಡುಗಳು ಇಂದು ಕೋಟ್ಯಾಂತರ ಕೇಳುಗರನ್ನು ತಲುಪಿವೆ.

ಪುಸ್ತಕದ ಬಗ್ಗೆ ಹೇಳುವುದಕ್ಕೆ ಬಹಳ ಇದೆ. ಆದರೆ ಇದೊಂದು ಇಣುಕು ನೋಟ ಇಂದು ಸಾಕು. ಪುಸ್ತಕ ಕೊಂಡು ಓದಿರಿ. ಅದ್ಭುತವಾದ ಅನುಭವವನ್ನು ಆ ಓದು ನೀಡುತ್ತದೆ ಎಂಬ ಭರವಸೆಯನ್ನು ನಾನು ನೀಡುತ್ತೇನೆ.

***

ನಿಜಕವಿ ಎಚ್ಚೆಸ್ವಿ ~ ನಾ ಕಂಡಂತೆ

– ಶಾಂತಿವಾಸು

ಒಬ್ಬ ವ್ಯಕ್ತಿ ನೆನಪಿನಲ್ಲಿ ಉಳಿಯಬೇಕಿದ್ದರೆ ಆ ವ್ಯಕ್ತಿ ಬದುಕಿಗೆ ಹತ್ತಿರದವರಾಗಿರಬೇಕು. ನಾವು ಬದುಕಿರುವ ಕಾಲದುದ್ದಕ್ಕೂ ಅವರ ನೆನಪು ಹಸಿರಾಗಿರಬೇಕಿದ್ದರೆ ಹೃದಯಕ್ಕೆ ಹತ್ತಿರದವರಾಗಿರಬೇಕು ಅಥವಾ ವಿಶೇಷ ವ್ಯಕ್ತಿಯಾಗಿರಬೇಕು. ಇವೆಲ್ಲಕ್ಕೂ ಮೀರಿದ ಅಥವಾ ಕಾಡುವ ನೆನಪುಗಳೆಂದರೆ ಅವು ಕವಿತೆಗಳು. ಹೌದು. ಹೊಸ ಹೊಸ ಅರ್ಥ, ಆಳವನ್ನು ಹೊಂದಿರುವ ಹಾಗೂ ಆ ಮೂಲಕ ಹಲವು ಹೊಸ ಭಾವನೆಗಳಿಗೆ ತೆರೆದುಕೊಳ್ಳುವ ಕವಿತೆಗಳನ್ನು ರಚಿಸುತ್ತಲೇ ಭೌತಿಕವಾಗಿ ಮರೆಯಾಗುವ ಕವಿ ಮಾತ್ರ ನಮ್ಮೆಲ್ಲರ ನಡುವೆ ಬದುಕಿರಲು ಸಾಧ್ಯ.

'ಕುಳಿತು ಬರೆಯುವವರನ್ನು ಕವಿಗಳೆಂದು ಒಪ್ಪಿಕೊಳ್ಳಿ' ಎನ್ನುವ ಕೂಗಿನ ನಡುವೆ ಹರಿದಾಡುವ ವಿಶೇಷ ಕವನಗಳು ಕವಿಯನ್ನೋ ಅಥವಾ ಕವಿಯತ್ರಿಯನ್ನೋ ವಿಶೇಷವಾಗಿಸುತ್ತದೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಆ ನಿಟ್ಟಿನಲ್ಲಿ ಅತ್ಯಂತ ಸರಳ ಭಾಷೆಯಲ್ಲಿ ದೊಡ್ಡ ಪವಾಡವನ್ನೇ ಸೃಷ್ಟಿಸುವ ಕವಿಯಾಗಿ ಪ್ರೊ. ಹೆಚ್.ಎಸ್.ವೆಂಕಟೇಶಮೂರ್ತಿ (ಎಚ್ಚೆಸ್ವಿ)ಯವರು ನನಗೆ ಕಾಣುತ್ತಾರೆ.

'ಇಷ್ಟು ಕಾಲ ಒಟ್ಟಿಗಿದ್ದು ಎಷ್ಟು ಬೆರೆತರೂ ಅರಿತವೇನು ನಾವು ನಮ್ಮ ಅಂತರಾಳವ?' ಎನ್ನುವಲ್ಲಿ ಎಂಥವರಾದರೂ ಆತ್ಮಾವಲೋಕನ ಮಾಡಿಕೊಳ್ಳುವ ಸ್ಥಿತಿ ಬರದೇ ಇರಲು ಸಾಧ್ಯವಿಲ್ಲ. ಇನ್ನು 'ಸಾವಿರಾರು ಮುಖದ ಚೆಲುವ ಹಿಡಿದು ತೋರಿಯೂ ಒಂದಾದರೂ ಉಳಿಯಿತೇ? ಕನ್ನಡಿಯ ಪಾಲಿಗೆ' ಎನ್ನುವ ಸಾಲು ಹಲವು ಶೀರ್ಷಿಕೆಗಳಿಗೆ ದಾರಿ ದೀಪ. ಒಂದೊಂದು ಸಾಲಿನಲ್ಲೂ ಹಲವು ಹೊಳಹುಗಳ ಬೆಳಕು ಚೆಲ್ಲುವ ಸಾಮರ್ಥ್ಯವನ್ನು ಎಚ್ಚೆಸ್ವಿಯವರಂತಹ ಕವಿಯಲ್ಲದೆ ಇನ್ಯಾರು ಸೃಷ್ಟಿಸಲು ಸಾಧ್ಯ?

ನಾನು ಕಂಡ ನಿಜ ಕವಿ ಎಚ್ಚೆಸ್ವಿಯವರ ರಚನೆಯ 'ಲೋಕದ ಕಣ್ಣಿಗೆ ರಾಧೆಯು ಕೂಡ' ಎನ್ನುವ ಕವಿತೆಗೆ ಸರಿಸಾಟಿಯಾಗಿ ಇನ್ನೊಂದು ಕವನ ನನಗೆ ಕಾಣುವುದಿಲ್ಲ. ಕೃಷ್ಣನನ್ನು ದೇವರಂತಲ್ಲದೆ ನಮ್ಮೊಳಗಿನ ಭಾವನೆಯಾಗಿಯೂ, ಜೀವನದ ಪ್ರತಿ ಹಂತದ ಅವಿಭಾಜ್ಯ ಅಂಗವಾಗಿಯೂ ಅಳವಡಿಸಿಕೊಳ್ಳುವ ಪ್ರಬುದ್ಧತೆಗೆ ನಮ್ಮನ್ನು ಅಣಿಗೊಳಿಸುವ ಮಹಾಶಕ್ತಿ ಈ ಕವನಕ್ಕಿದೆ ಎನ್ನುವುದು ನನ್ನ ಭಾವನೆ.

ಕಾಲಕಾಲಕ್ಕೂ ಸ್ತ್ರೀಲೋಲದಂತೆ ಬಿಂಬಿಸಲ್ಪಟ್ಟ ಕೃಷ್ಣನಲ್ಲಿನ ಅಚಲ ಪ್ರೇಮವನ್ನು ರಾಧೆಯ ಮುಖೇನ ಕವಿಯು ಲೋಕಕ್ಕೆ ಸಾರಿ ಹೇಳುವ ರೀತಿಯೇ ಅನನ್ಯ. ಈ ಮೂಲಕ ಒಂದೇ ದಿಕ್ಕಿನಲ್ಲಿ ಸಾಗುವ ಆಲೋಚನೆಗೆ ಹೊಸ ಭಾಷ್ಯ ಬರೆದು ನಿರಂತರವಾಗುವ ಕವಿಯನ್ನು ನಾನು ಎಚ್ಚೆಸ್ವಿಯವರಲ್ಲಿ ಕಂಡಿದ್ದೇನೆ.

ಇನ್ನು ನಮ್ಮ ಸಮಾಜದಲ್ಲಿ ಕುಟುಂಬಕ್ಕೆ ಮೊದಲ ಆದ್ಯತೆ. ಅದರಲ್ಲಿನ ದಾಂಪತ್ಯ ಗೀತೆಗೆ ಎಲ್ಲಿಲ್ಲದ ಪ್ರಾಶಸ್ತ್ಯ. ಒಬ್ಬರನ್ನೊಬ್ಬರು ಅರಿತು ಅನ್ಯೋನ್ಯತೆಯಿಂದ ಬದುಕಿ ಜೀವನದ ಕೊನೆಗಾಲದಲ್ಲಿ ನೆಮ್ಮದಿಯಾಗಿರಲೆಂದೇ ಹಲವು ಕಷ್ಟಗಳನ್ನು ಸಹಿಸುವ ಜೋಡಿಹಕ್ಕಿಗಳಲ್ಲಿ ಉಂಟಾಗುವ ವಿಯೋಗಕ್ಕೆ ಪೋಣಿಸಿದ ಪದಗಳ "ನನ್ನ ಹಳೆಯ ಹಾಡುಗಳೇ, ನಿಮ್ಮಲಿರಲಿ ಸ್ವಲ್ಪ ದಯಾ. ನಾನು ಒಂಟಿ, ನನ್ನೊಡನಿದೆ ಚಡಪಡಿಸುವ ಹೃದಯ" ಎನ್ನುವ ಕವನ ಪ್ರಸ್ತುತ ನಾನೀಗ ನಡೆಯುತ್ತಿರುವ ಹಾದಿಯಲ್ಲಿ ಸಿಕ್ಕ ಒಂದು ಕಾರಂಜಿ. ಉಕ್ಕುವ ಭಾವನೆಗಳಿಗೆ ಪದ ಜೋಡಿಸಲು ಸಹ ಮನಸ್ಸಿಲ್ಲದೆ ನೀರಸವಾಗಿ ಜೀವನ ಸಾಗುವ ಸಂಧರ್ಭದಲ್ಲಿಯೇ ಎಚ್ಚೆಸ್ವಿಯವರು ವ್ಯಕ್ತಿಯಾಗಿ ಅಪರಿಚಿತರಾದರೂ, ಕವಿಯಾಗಿ ಅವರು ತಮ್ಮ ಮನಸ್ಸನ್ನು ಪದಗಳಲ್ಲಿ ತೆರೆದಿಡುವ ಮೂಲಕ ನನಗೆ ಚಿರಪರಿಚಿತರಾಗುತ್ತಾರೆ.

“ಇಷ್ಟು ಕಾಲ ಒಟ್ಟಿಗಿದ್ದೂ, ಎಷ್ಟು ಬೆರೆತರೂ, ಅರಿತೆವೇನು ನಾವು ನಮ್ಮ ಅಂತರಾಳವಾ?” ಎಂದು ಅವರೇ ಹೇಳುವಂತೆ ಎಷ್ಟೋ ವರ್ಷ ಕಾಲ ಜೊತೆಗಿದ್ದವರ ಮನಸ್ಸನ್ನೇ ತಿಳಿಯಲಾರೆವೆಂದಮೇಲೆ ನಾಲ್ಕೈದು ಸಲ ಫೋನಿನಲ್ಲಿ, ಒಂದೇ ಒಂದು ಸಲದ ಭೇಟಿಯಲ್ಲಿ ಎಚ್ಚೆಸ್ವಿಯವರ ಸಂಪೂರ್ಣ ವ್ಯಕ್ತಿತ್ವ ನನಗೆ ಪರಿಚಯವಾಗುವುದು ಅಸಾಧ್ಯ.

ಆದರೇನು? ನಿಜಕವಿಯ 'ನನ್ನ ಹಳೆಯ ಹಾಡುಗಳೇ' ಕವನ ನನ್ನ ಮನಸ್ಸಿನ ಬೇಗುದಿಗೆ, ತುಡಿತಕ್ಕೆ ಔಷಧವಾಗುವ ಬದಲಿಗೆ ಲೇಖನಿ ಹಿಡಿದು ನನ್ನ ಮನಸ್ಸಿನ ಮಾತನ್ನು ಹೇಳಲು ಪ್ರೇರೇಪಿಸಿದ್ದಲ್ಲದೇ, ನಾನು ಬರೆದದ್ದನ್ನು ಮತ್ತೆ ನಾನೇ ಓದುವಾಗ ಕಣ್ಣೀರು ಧಾರೆಯಾಗಿ ಹರಿಯುವುದರ ಅಪಾದನೆಯನ್ನೂ ಅವರ ಮೇಲೆ ಹೊರೆಸದೇ ವಿಧಿಯಿಲ್ಲ.

ಪದಗಳನ್ನು ಹೊಸೆದು, ನಮ್ಮನ್ನು ಭಾವನೆಗಳೊಂದಿಗೆ ಬೆಸೆದು, ಸಮಾಜದೊಂದಿಗೆ ತಮ್ಮ ಬಾಂಧವ್ಯವನ್ನು ಗಟ್ಟಿಗೊಳಿಸಿಕೊಂಡ ಕವಿ ಎಂದೆಂದಿಗೂ ಮರೆಯಾಗುವುದಿಲ್ಲ. ಸ್ಫೂರ್ತಿಯ ಸೆಲೆಯಾಗಿ ನಮ್ಮ ನಿಮ್ಮೆಲ್ಲರಲ್ಲೂ ನೆಲೆಗೊಂಡಿರುತ್ತಾರೆ ಎನ್ನುವುದೇ ಸತ್ಯ. ಹೌದು. ಅವರು ಸತ್ತಿದ್ದಾರೆ. ಆದರೆ ನಮ್ಮಲ್ಲಿ ಸ್ಫೂರ್ತಿಯನ್ನು ಬಿತ್ತಿದ್ದಾರೆ. ಅವರ ಸಾಹಿತ್ಯವನ್ನು ಓದುವ ಮೂಲಕ ಅವರ ಅಂತರಾಳವನ್ನು ಅರಿಯುವ ಪ್ರಯತ್ನ ಮಾಡೋಣ. ಹಾಗೆಯೇ ಬರೆಯುತ್ತಾ ಹಿಂಬಾಲಿಸಿ ಕಾವ್ಯ ಪರಂಪರೆಯನ್ನು ಜೀವಂತವಿರಿಸೋಣ.

ಹಲವರ ಸಾಹಿತ್ಯ ನನ್ನನ್ನು ಸೂಜಿಗಲ್ಲಿನಂತೆ ಸೆಳೆದು ಗಟ್ಟಿಯಾಗಿ ನೆಲೆ ನಿಂತಿದೆ. ಆ ಮೂಲಕ ಸಾಹಿತಿಯನ್ನು ಆರಾಧಿಸಿದ್ದೂ ಇದೆ. ಆದರೆ ಅವರಿಗೆಲ್ಲಾ ನಾನು ಅಕ್ಷರಶಃ ಅಪರಿಚಿತಳು. ಹೀಗೆ ಸಾಹಿತ್ಯದ ಮೂಲಕ ನಾನು ಮೊದಲು ಎದುರುಗೊಂಡಿದ್ದು ಪ್ರೊ.ಹೆಚ್.ಎಸ್.ವೆಂಕಟೇಶಮೂರ್ತಿ(ಎಚ್ಚೆಸ್ವಿ)ಯವರು ಹಾಗೂ ಶ್ರೀ ಎಂ.ಎಸ್.ನರಸಿಂಹಮೂರ್ತಿಯವರನ್ನು ಎನ್ನುವುದು ಸುಳ್ಳಲ್ಲ. ಇದು ನಾನು ಆರಾಧಿಸುವ ಗುರುಗಳ (ಶ್ರೀ ಸಾಯಿಬಾಬಾ) ಆಶೀರ್ವಾದ ಎನ್ನದೇ ಇರಲಾಗದು.

ನನ್ನ 'ಬಜಾರಿನ ಕನ್ನಡಿ' ಮೊದಲ ಕವನ ಸಂಕಲನದ ಬೆನ್ನುಡಿಗಾಗಿ ಬೇಡಿಕೆಯಿಟ್ಟು ಹಸ್ತಪ್ರತಿಯನ್ನು ಹೆಸರಾಂತ ಕವಿಗಳಾದ ಪ್ರೊ. ಹೆಚ್.ಎಸ್. ವೆಂಕಟೇಶಮೂರ್ತಿಯವರು ಹಾಗೂ ಮುನ್ನುಡಿಗಾಗಿ ಶ್ರೀ ಎಂ.ಎಸ್. ನರಸಿಂಹಮೂರ್ತಿಯವರಿಗೆ ಕಳಿಸಿದಾಗ ಅವರು ಓದಲಾರರು ಹಾಗೂ ಅದಕ್ಕಾಗಿ ಬರೆಯಲಾರರು ಎನ್ನುವ ಅನುಮಾನವಿತ್ತು. ಇಲ್ಲಿ ಇಬ್ಬರ ಹೆಸರನ್ನೂ ಹೇಳುವುದು ಪ್ರಸ್ತುತ ಎನಿಸುತ್ತಿದೆ. ಏಕೆಂದರೆ ನಾನು ಬೇಡಿಕೆಯಿಟ್ಟಿರುವುದು ಕನ್ನಡದ ಇಬ್ಬರು ಮೇರು ಸಾಹಿತಿಗಳಲ್ಲಿ. ಪರೀಕ್ಷೆ ನನಗೋ ಅವರಿಗೋ ತಿಳಿಯದಾಗಲಿ, ಕವನಗಳ ಬಗ್ಗೆ ಇಬ್ಬರೂ ತಮ್ಮ ಅವಲೋಕನವನ್ನು ತಿಳಿಸುವ ತನಕ ನಿಮಿಷಕ್ಕೊಂದು ಯೋಚನೆ, ಭಯ ಕಾಡಿದ್ದು ನಿಜ.

ಆದರೂ ಕವನಗಳ ಬಗ್ಗೆ ಹಲವರು ಹಲವು ಬಗೆಯಲ್ಲಿ ವಿಮರ್ಶಿಸುವಾಗ ಮನಸ್ಸಿನ ಮೂಲೆಯಲ್ಲಿ ಚಿಗುರು ಕನಸು ಜೀವಂತವಿತ್ತು. 'ಮೌಲ್ಯಯುತ ಕವನಗಳು' ಎನ್ನುತ್ತಾ ಬರೆದ ತಮ್ಮ ದೀರ್ಘ ಮುನ್ನುಡಿಯಲ್ಲಿ ಶ್ರೀ ಎಂ.ಎಸ್.ನರಸಿಂಹ ಮೂರ್ತಿಯವರು ನನ್ನೊಳಗಿನ ಸಾಹಿತ್ಯವನ್ನು ಗುರುತಿಸಿದ್ದರು. ಒಂದು ವಾರದಲ್ಲಿ ಕರೆ ಮಾಡಿದ ಎಚ್ಚೆಸ್ವಿಯವರು "ಯಾರು ಬೇಕಾದರೂ ಇಣುಕಿ ನೋಡಿ ಆತ್ಮವಿಮರ್ಶೆ ಮಾಡಿಕೊಳ್ಳಬಹುದಾದ ಕೃತಿಗೆ ನೀವಿಟ್ಟ ಬಜಾರಿನ ಕನ್ನಡಿ ಎನ್ನುವ ಹೆಸರು ಸೂಕ್ತ ಹಾಗೂ ವಿಶೇಷವಾಗಿದೆ. ಶುಭವಾಗಲಿ" ಎಂದು ಹಾರೈಸಿದಾಗಲೂ "ಅದಿರಲಿ ಸರ್. ದಯವಿಟ್ಟು ಇದೇ ಮಾತುಗಳನ್ನು ಬರೆದು ಕೊಡಿ. ನಾಲ್ಕೇ ಸಾಲುಗಳಿದ್ದರೂ ಸರಿ. ತಮ್ಮ ಸ್ವಹಸ್ತದಿಂದ ಬರೆದುಕೊಡಿ" ಎಂದೆ. ಅವರು ನಗುತ್ತಾ "ನೋಡೋಣ" ಎಂದು ಫೋನಿಟ್ಟರು. ನೆನಪಿರಲಿ, ನಾನು ಕುಂಚಕಲಾವಿದೆ ಶಾಂತಿವಾಸು ಎನ್ನುವುದನ್ನು ಹೊರತುಪಡಿಸಿ ಬೇರೇನೂ ಪರಿಚಯ ಹೇಳದೆ ಫೋನ್ ಸಂಖ್ಯೆ ಜೊತೆಗೆ ಕೇವಲ ಕವನಗಳನ್ನು ಮಾತ್ರ ಇಬ್ಬರಿಗೂ ಕಳಿಸಿದ್ದೆ. ಯಾಕೆಂದರೆ ನನ್ನ ಸಾಹಿತ್ಯ ನನ್ನನ್ನು ಅವರಿಗೆ ಪರಿಚಯಿಸಲಿ ಎನ್ನುವ ಸಣ್ಣ ನಿರೀಕ್ಷೆ. ಅದು ನನಗೆ ನಾನೇ ಒಡ್ಡಿಕೊಂಡ ಪರೀಕ್ಷೆ ಅಂದರೂ ತಪ್ಪಲ್ಲ.

ಐದಾರು ದಿನಗಳಿಂದ ಅವರಿಗೆ ಕರೆ ಮಾಡಿದ್ದರಿಂದ ಬೇಸತ್ತು ತಾವೇ ಫೋನ್ ಮಾಡಿ 'ಇವಳ ಸಹವಾಸ ಸಾಕು. ಏನೋ ಒಂದು ಹೇಳೋಣ ಅಂತ ಫೋನ್ ಮಾಡಿದರು ಅಷ್ಟೇ' ಅನ್ನುವ ಅನುಮಾನ ಕಾಡಿದ್ದು ನಿಜ. ನನಗಂತೂ ಕೃತಿಯ ಬೆನ್ನುಡಿಗೆ ಅವರಲ್ಲದೆ ಇನ್ಯಾರೂ ಬೇಡವಾಗಿತ್ತು. ಎಚ್ಚೆಸ್ವಿಯವರ ಕವನಗಳಲ್ಲಿ ಅಡಗಿರುವ ಆಳವಾದ ಅರ್ಥ, ಒಳಸುಳಿಗಳಲ್ಲಿ

ಮುಳುಗಿ ಸಾಹಿತ್ಯವನ್ನು ರೂಢಿಸಿಕೊಳ್ಳುವ ಹಂತದಲ್ಲಿದ್ದ ನನಗೆ ಈ ಮೂಲಕ ನನ್ನ ಸಾಹಿತ್ಯವನ್ನು ವಿಮರ್ಶೆಗೆ ಒಡ್ಡಬೇಕು ಅನ್ನಿಸಿದ್ದೂ ಸುಳ್ಳಲ್ಲ. ಮರೆತೆ ನೋಡಿ, 'ಏನಾದರೂ ತಪ್ಪಿದ್ದರೆ ಹೇಳಿ. ತಿದ್ದಿಕೊಳ್ಳುತ್ತೇನೆ' ಎಂದು ಒಂದು ಪ್ರತ್ಯೇಕ ಹಾಳೆಯಲ್ಲಿ ಬರೆದು ಕಳಿಸಿದ್ದೆ.

ಎಚ್ಚೆಸ್ವಿ ಅದಾಗಲೇ ಬೆನ್ನುಡಿಯನ್ನು ನನ್ನ ವಾಟ್ಸಾಪ್ಪಿಗೆ ಕಳಿಸಿಯೇ ಫೋನ್ ಮಾಡಿದ್ದನ್ನು ನೋಡಿ ನನ್ನ ಸಂಭ್ರಮ ಹೇಳತೀರದು. "ಕುಂಚ ಕಲಾವಿದರಾದ ನೀವು ಕಾವ್ಯ ಜಗತ್ತಿಗೆ ಪ್ರವೇಶಿಸಿ ಶಬ್ದ ಚಿತ್ರಗಳನ್ನು ಬರೆಯತೊಡಗಿದ್ದೀರಿ. ಈಗ ಆ ಬರವಣಿಗೆ ಒಟ್ಟುಗೂಡಿಸಿ ಕವಿತಾ ಸಂಗ್ರಹ ಪ್ರಕಟಿಸುತ್ತಿರುವಿರಿ. ನಿಮಗೆ ಶುಭವಾಗಲಿ ಎಂದು ಹಾರೈಸುತ್ತೇನೆ. ಕವಿತೆ ಎಲ್ಲರನ್ನೂ ಆಕರ್ಷಿಸುತ್ತದೆ. ಅದನ್ನು ಕೈವಶ ಮಾಡಿಕೊಳ್ಳುವುದು ಕಷ್ಟ. ನಿರಂತರ ಪರಿಶ್ರಮದಿಂದ ಕಾವ್ಯದ ಕಸುಬು ದಾರಿಕೆಯನ್ನು ವಶಪಡಿಸಿಕೊಳ್ಳಬೇಕಾಗುವುದು. ಆ ಪ್ರಯತ್ನದಲ್ಲಿ ನಿಷ್ಠೆಯಿಂದ ನೀವು ತೊಡಗಿರುವಿರಿ. ಇದು ಮೆಚ್ಚಬೇಕಾದ ಸಂಗತಿ. ಆಧ್ಯಾತ್ಮಿಕ ಕವನಗಳನ್ನೊಳಗೊಂಡು ಒಂದಕ್ಕಿಂತ ಒಂದು ಸುಂದರ ಪದ ಕಾವ್ಯವೇ. ಅದರಲ್ಲೂ ಮಡಿಕೆಯಡಿಯ ಬೆಳಕು, ಬಜಾರಿನ ಕನ್ನಡಿ, ನಾನೊಂದು ಕೆರೆ ಈ ಕವಿತೆಗಳು ಬಹುವಾಗಿ ಆಕರ್ಷಿಸುತ್ತವೆ. ಬಜಾರಿನ ಕನ್ನಡಿ, ತನ್ನ ಕಲ್ಪನೆಯಿಂದ ಪ್ರಿಯವಾಯಿತು. ನಿಮಗೆ ಶುಭ ಹಾರೈಕೆಗಳು" ಎನ್ನುವ ಮೆಚ್ಚುಗೆಗೆ ಆ ದಿನ ಮಿದುಳು ತನ್ನ ಕೆಲಸ ನಿಲ್ಲಿಸಿತ್ತೇನೋ? ಸುಮ್ಮನೆ ಮಲಗಿಬಿಟ್ಟೆ.

ನಿಜವೋ ಸುಳ್ಳೋ ಎನ್ನುವ ಅನುಮಾನ. ಅದನ್ನು ಮಕ್ಕಳಿಗೆ ಹಾಗೂ ವಾಸುರವರಿಗೆ ತೋರಿಸಿದಾಗಂತೂ ಅವರ ಸಂತೋಷ ಹೇಳತೀರದು. ನನ್ನವರು ನನ್ನನ್ನು ನೋಡಿದ ಆ ಮೆಚ್ಚುಗೆಯ ನೋಟ ಇಂದಿಗೂ ಹಸಿರು ಹಸಿರು. ಇನ್ನು ಕವನಗಳು "ಬಜಾರಿನ ಕನ್ನಡಿ" ಕೃತಿಯಾಗಿ ಹೊರಬರುವುದು ತಡವಾಗಲಿಲ್ಲ. ಹೀಗೆ ತಮ್ಮ ಬಿಡುವಿಲ್ಲದ ಕಾರ್ಯಚಟುವಟಿಕೆಯ ನಡುವೆಯೂ ನನ್ನ ಕವನಗಳ ಘನತೆ ಹೆಚ್ಚಿಸುವ ಬೆನ್ನುಡಿ ನೀಡಿ ನನ್ನ ಸಾಹಿತ್ಯ ಪ್ರಯಾಣಕ್ಕೆ ಹಸಿರು ನಿಶಾನೆ ತೋರಿದರು. ಅಲ್ಲಿಂದಲೇ ನಾನು ನನ್ನ ಬರವಣಿಗೆಯನ್ನು ಜನರ ಬಳಿ ಕೊಂಡೊಯ್ಯುವ ಧೈರ್ಯ ಮಾಡಿದ್ದೆ.

ಆದರೆ ಆ ದಿನ ಅವರು ಮರೆತು ಅಥವಾ ಉದಾಸೀನದಿಂದ ನನ್ನ ಕವನಗಳ ಬಗ್ಗೆ ಬರೆಯದೇ ಇದ್ದಿದ್ದರೆ? ಒಂದು ಕ್ಷಣ ಯೋಚಿಸಿ ನೋಡಿ. ಬಹುಶಃ ಶಾಂತಿವಾಸು ಎನ್ನುವ ಹೆಸರು ನಿಮಗೆ ಪರಿಚಯವಾಗುತ್ತಿರಲಿಲ್ಲ. ಲೇಖನಿಗೆ ಧೈರ್ಯ ಎಲ್ಲಿಂದ ಬರಬೇಕು ಹೇಳಿ? ಒಟ್ಟೂ ಕಡಿಮೆ ಬರೆದರೂ ಬರೆಯುವುದೆಲ್ಲವೂ ಮೌಲ್ಯಯುತವಾಗಿರಬೇಕು ಎನ್ನುವ ಜವಾಬ್ದಾರಿ ನೀಡಿ ನಿರ್ಗಮಿಸಿದ್ದಾರೆ. ಕಾಗದದ ಮೇಲೆ ಲೇಖನಿಯಿಂದ ಶಾಂತಿ ಹಾರೈಸದೇ ನಿಜ ಅರ್ಥದಲ್ಲಿ ಅವರನ್ನು ಅನುಸರಿಸೋಣ. ಕನ್ನಡದ ಘನತೆಯನ್ನು ಎತ್ತಿ ಹಿಡಿಯೋಣ.



ಎಚ್ಚೆಸ್ವಿಯವರಿಗೆ ತಮ್ಮ ಕೃತಿ ನೀಡುತ್ತಿರುವ ಲೇಖಕಿ ಶಾಂತಿ ವಾಸು.
ಪಕ್ಕದಲ್ಲಿರುವವರು ಪ್ರಕಾಶಕ ಶ್ರೀ ಪರಶಿವಪ್ಪ

ಮತ್ತೆ ಮತ್ತೆ ನನ್ನ ಪುನರುಚ್ಚಾರವೆಂದರೆ ಕುವೆಂಪು, ದ.ರಾ.ಬೇಂದ್ರೆ, ತ.ರಾ.ಸು, ಶಿವರಾಮ ಕಾರಂತರಂತೆ ಎಚ್ಚೆಸ್ವಿಯವರೂ ಎಂದಿಗೂ ಜೀವಂತವಿರುತ್ತಾರೆ. ಏಕೆಂದರೆ ಅವರು ಕನ್ನಡದಲ್ಲೇ ಅಲ್ಲವೇ ಬರೆದಿರುವುದು? ಕನ್ನಡದ ಮೂಲಕವೇ ಅಲ್ಲವೇ ಅವರು ಜನರನ್ನು ತಲುಪಿರುವುದು? ಹಾಗಾಗಿ ನಾವೂ ಕೂಡ ಕನ್ನಡದ ಚಂದದ ಪದಗಳನ್ನು ಹೆಕ್ಕಿ ಬರೆಯೋಣ. ಹೆಚ್ಚು ಹೆಚ್ಚು ಪುಸ್ತಕಗಳನ್ನು ಓದೋಣ. ಆ ಮೂಲಕ ಅವರಂತೆಯೇ ಜನಮಾನಸದಲ್ಲಿ ನಾವೂ ಉಳಿಯೋಣ. ಕನ್ನಡದ ಕಟ್ಟಾಳುಗಳನ್ನೂ ಗಟ್ಟಿಯಾಗಿ ಉಳಿಸಿಕೊಳ್ಳೋಣ. ಒಮ್ಮೆ ಹೇಳಿ 'ಕನ್ನಡವನ್ನು ಉಪಯೋಗಿಸೋಣ. ಉಳಿಯೋಣ' ಎಂದು.

***

ಡಾ.ಎಚ್ಚೆಸ್ವಿಯವರ ಕವಿತೆಯ ಬಗ್ಗೆ

" ಇರಬೇಕು ಇರುವಂತೆ "

– ಶೃತಿ ಕಟ್ಟಿ

क्षमा दया दानमथ प्रेम युक्तं,

त्यागो हि धर्मस्य य□ो निवृत्तिः।
सना□नो धर्म इ□ प्र□ष्ठि□ोऽयं,

मूलं सदा सर्वभजां प्रदिष्टः॥

ಕ್ಷಮೆ, ದಯೆ, ದಾನ ಮತ್ತು ಪ್ರೇಮ ಇವೆಲ್ಲವೂ ಸನಾತನ ಧರ್ಮದ ಬೇರುಗಳಾದರೆ ಇವೆಲ್ಲವುಗಳ ತಾಯಿ ಬೇರು ತ್ಯಾಗ. ಸೂಕ್ಷ್ಮವಾಗಿ ಗಮನಿಸಿದರೆ ಇಲ್ಲಿ ತಮ್ಮ ಸೌಖ್ಯ ವಲಯವನ್ನು ಬಿಟ್ಟು ಪರರಿಗಾಗಿ ಯಥಾಶಕ್ತಿ ಅರ್ಪಿಸುವ, ಬಿಟ್ಟುಕೊಡುವ ಭಾವ ಮುಖ್ಯವಾಗಿ ನಿಲ್ಲುತ್ತದೆ. ಇದನ್ನೇ ಪರ್ಯಾಯಾರ್ಥದಲ್ಲಿ ತ್ಯಾಗ ಎನ್ನುತ್ತೇವೆ. ಇಂತಹ ನಿಸ್ವಾರ್ಥ ತ್ಯಾಗದ ಮಹತಿಯನ್ನು ಸದಾ ಮನನ ಮಾಡುವ, ಹೇಳುವ-ಕೇಳುವ-ಬಾಳುವ ಈ ಸಂಸ್ಕೃತಿಯನ್ನು ಮನಸಾ ನಮಿಸುತ್ತ "ಏತತ್ ಕರ್ಮಣ ಪ್ರಧಾನ ಕವಿಗಳಾದ" ದಿವಂಗತ ಶ್ರೀ ಎಚ್.ಎಸ್.ವೆಂಕಟೇಶ ಮೂರ್ತಿಯವರ ಇದೇ ವಿಷಯವನ್ನು ಒಳಗೊಂಡ ಒಂದು ಕವಿತೆ **'ಇರಬೇಕು ಇರುವಂತೆ'** ಯನ್ನು ಪ್ರಸ್ತುತಪಡಿಸುವ ಮೂಲಕ ಕವಿನಮನ ಸಲ್ಲಿಸಲು ಇಚ್ಛಿಸುತ್ತೇನೆ.

ಇರಬೇಕು ಇರುವಂತೆ ತೊರೆದು ಸಾವಿರ ಚಿಂತೆ
ಮಳೆ ಸುರಿಸಿ ಹಗುರಾದ ಮುಗಿಲಿನಂತೆ
ಇರಬೇಕು ಇರುವಂತೆ ತೊರೆದು ಸಾವಿರ ಚಿಂತೆ
ಮಳೆ ಸುರಿಸಿ ಹಗುರಾದ ಮುಗಿಲಿನಂತೆ

ಕೊಟ್ಟು ಖಾಲಿಯಾಗುವ ಹುಚ್ಚು ಸುಖದ ವ್ಯಾಮೋಹ ಇಲ್ಲಿ ಕವಿಗೆ ತೀವ್ರವಾಗಿ ಇದ್ದಂತೆ ಕಾಣುತ್ತದೆ. ಕೊಡುವುದನ್ನು ಕೊಟ್ಟಮೇಲೆ ಅದರ ಬಗ್ಗೆ ಸಾವಿರ ಚಿಂತೆಗಳನ್ನು ಹೊತ್ತು ಬಾಳದೇ ಮಳೆ ಸುರಿಸಿ ಹಗುರಾಗಿ ಮುಂದೆ ಸಾಗುವ ಮೋಡಗಳಂತೆ ಇರಬೇಕು ಎಂಬ ಸುಭಾವ ಪಲ್ಲವಿಯಲ್ಲೇ ಕವಿ ತಿಳಿಸಿಬಿಡುತ್ತಾರೆ. ಎಚ್ಚೆಸ್ವಿಯವರ ಕವನಗಳಲ್ಲಿ ಹೊಸತನವಿದ್ದರೂ ಅವರು ಬಹಳ ನಿಗೂಢ ಒಗಟಿನಂತಹ ಕವನಗಳನ್ನು ಬರೆಯದೇ ಸರಳ ಕಲ್ಪನೆಗಳಲ್ಲೇ ಬರೆಯುತ್ತಿದ್ದುದು ಎಲ್ಲರಿಗೂ ತಿಳಿದ ವಿಷಯವೇ. ಅದೇ ಅವರ ಬರವಣಿಗೆಯ ವಿಶೇಷವೂ ಹೌದು.

ತನ್ನೊಡಲ ತಾರೆಗಳ ಗುಡಿಸಿ ರಾಶಿಯ ಮಾಡಿ
ಬೆಳಕಿನುಂಡೆಯ ಬಾನಿಗುರುಳು ಬಿಟ್ಟು
ಹೇಗೆ ಮರೆಯಾಗುವುದೊ ನಿರ್ಧನಿಕ ನಟ್ಟಿರುಳು
ಹಾಗೆ ಬಾಳಿಸು ಗುರುವೆ ಕರುಣೆಯಿಟ್ಟು

ಹಗಲು ರಾತ್ರಿಗಳ ಸೌಂದರ್ಯ ಬೇರೆ ಬೇರೆಯೇ. ಒಂದರಂತೆ ಇನ್ನೊಂದಿಲ್ಲ. ಒಂದಕ್ಕಿಂತ ಇನ್ನೊಂದು ಸುಂದರ ಅಂತಲೂ ಇಲ್ಲ. ಆದರೂ ತನ್ನಲ್ಲಿ ಅನಂತ ತಾರಾರಾಶಿಯ ಸಿರಿವಂತಿಕೆ ಇದ್ದರೂ ಹಗಲಿಗಾಗಿ ಪರ್ಯಾಯವಾಗಿ ನಮಗಾಗಿ ಸೂರ್ಯನೆಂಬ ಬೆಳಕಿನ ಉಂಡೆಯನು ಹರಿಬಿಟ್ಟು ತಾನು ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುವ ಇರುಳಿನ ತ್ಯಾಗವನ್ನು ಕವಿ ಸ್ಮರಿಸುತ್ತಾರೆ. ಹಗಲು ರಾತ್ರಿಯಾಟ ನೋಡದವರಾರು. ಆದರೆ ಅದನ್ನು ಈ ರೀತಿ ನಮಗೆ ಕವಿಗಳೇ ತೋರಿಸಬೇಕು.

ತಾನು ಬಿಸಿಲಲಿ ನಿಂತು ತನ್ನ ಬಳಿ ಬರುವವಗೆ
ತಣ್ಣಗಿನ ಆಸರೆಯ ನೆರಳ ಕೊಟ್ಟು
ಹೇಗೆ ಗೆಲುವಾಗುವುದೋ ಹಸಿರೆಲೆಯ ಹೊಂಗೆ ಮರ
ಹಾಗೆ ಬಾಳಿಸು ಗುರುವೆ ಪ್ರೀತಿಯಿಟ್ಟು

ತಾನು ಸುಖದಲ್ಲಿ ಇದ್ದಾಗ ತನಗೆ ಪ್ರಾಪ್ತವಿರುವ ವಸ್ತುಗಳಲ್ಲಿ ಒಂದಿಷ್ಟನ್ನು ದಾನಮಾಡುವುದು ಸಾಮಾನ್ಯ. ತಮ್ಮಲ್ಲಿರುವ ಕೊನೆಯ ತುತ್ತನ್ನೂ ದಾನ ಮಾಡಿ ಸಂತುಷ್ಟರಾದ ಅನೇಕ ಮಹಾನೀಯರ ಕಥೆಗಳು ನಮ್ಮ ಸಂಸ್ಕೃತಿಯಲ್ಲಿ ಕಂಡಿದ್ದೇವೆ. ತಾನು ಬಿಸಿಲಲ್ಲಿ ನಿಂತಿದ್ದರೂ ಕೂಡಾ ಹೊಂಗೆ ಮರ ತನ್ನ ಒಡಲಿನಲ್ಲಿ ನೂರಾರು ಹಕ್ಕಿಗಳಿಗೆ ಆಸರೆಯನ್ನು, ದಣಿದು ಬಂದವರಿಗೆ ನೆರಳನ್ನು ನೀಡುತ್ತದೆ. ಅಂತೆಯೇ ಬದುಕುವ ಅರ್ಹತೆಗಾಗಿ ಕವಿ ಇಲ್ಲಿ ಪ್ರಾರ್ಥಿಸುತ್ತಾರೆ.

ತಾನು ಕೆಸರಲಿ ಕುಸಿಯುತ್ತಿದ್ದರೂ ತಾವರೆಯು
ಮರಿದುಂಬಿಗಳ ಪೊರೆವ ತೊಟ್ಟಿಲಾಗಿ
ಹೇಗೆ ತಾಯ್ತನವನ್ನು.. ಪ್ರೀತಿಯಲಿ ಮೆರೆಯುವುದೋ
ಹಾಗೆ ಬಾಳಿಸು ಗುರುವೆ ಕರುಣೆಯಿಟ್ಟು.

ತ್ಯಾಗದ ಅತ್ಯುಚ್ಚ ನಿದರ್ಶನ ತಾಯಿ. ಅವಳ ಉಲ್ಲೇಖ ತ್ಯಾಗದ ಸಂದರ್ಭದಲ್ಲಿ ಕವಿ ಮರೆತಿಲ್ಲ. ತಾವರೆಯು ಕೆಸರಿನಲ್ಲಿ ತಾನು ಮುಳುಗುತ್ತಿದ್ದರೂ ದುಂಬಿಗೆ ಮಕರಂದವನ್ನು ನೀಡಲು, ತೊಟ್ಟಿಲಾಗಿ ಆಸರೆ ನೀಡಲು ಹೇಗೆ ಗಟ್ಟಿಯಾಗಿ ನಿಂತು ತನ್ನ ತಾಯ್ತನವನ್ನು ಮೆರೆಯುತ್ತದೋ ಹಾಗೆಯೇ ಪ್ರೀತಿಪೂರ್ವಕ ಬದುಕನ್ನು ಕಟ್ಟಿಕೊಳ್ಳುವ ವಿನಂತಿ ಮಾಡಿಕೊಳ್ಳುತ್ತಾರೆ ಕವಿ.

ದಾರಿಯುದ್ದಕೂ ಪೈರು ನಗುವಂತೆ ನೀರುಣಿಸಿ
ಹಾಲುತೆನೆಯಲಿ ಅಮೃತ ತುಂಬಿ ನದಿಯು
ಹೇಗೆ ದೂರದ ನೀಲಿಯಲ್ಲಿ ಕೊನೆಗೊಳ್ಳುವುದೋ
ಹಾಗೆ ಕೊನೆಗಾಣಿಸು.. ಕೃಪೆಯನಿಟ್ಟು

ನಮ್ಮ ಸಂಸ್ಕೃತಿಯಲ್ಲಿ ಯಾವುದೇ ಮಾನವಸಹಜ ಭಾವನೆಯನ್ನು ಅಲಕ್ಷಿಸಿಯೂ ಇಲ್ಲ ಮತ್ತು ಮೈಲಿಗೆ ಎಂದು ದೂರವೂ ಇಟ್ಟಿದ್ದಿಲ್ಲ. ಸಾವು, ಸಾವಿಗೂ ಮುನ್ನ ನಾವು ಪಾಲಿಸಬೇಕಾದ ನಿಯಮಗಳು ಮತ್ತು ಸಾವಿನ ನಂತರದ ವಿಚಾರಗಳನ್ನು ಸವಿಸ್ತಾರವಾಗೇ ನಮ್ಮಲ್ಲಿ ಮಾತನಾಡಲಾಗಿದೆ. ನಮ್ಮ ಬಾಳನ್ನು ತಿರುಗಿ ನೋಡಿದಾಗ ನದಿ ತಾನು ನಡೆದು ಬಂದಲ್ಲೆಲ್ಲ ದಂಡೆಗಳಿಗೆ ಅಮೃತವನ್ನು ಉಣಿಸುತ್ತಲೇ ಬಂದು ತನ್ನನ್ನು ತಾ ಸಾಗರಕ್ಕೆ ಅರ್ಪಿಸುವಂತೆ ಸಾರ್ಥಕ ಬಾಳು ನಮ್ಮದಾಗಲಿ ಎಂಬ ಕೃಪೆಯನ್ನು ಆಶಿಸುತ್ತಾನೆ ಕವಿ.

ಸಂಪೂರ್ಣ ಕವಿತೆಯನ್ನು ಕವಿ ಒಂದು ವಿನಂತಿ, ಪ್ರಾರ್ಥನಾ ಶೈಲಿಯಲ್ಲಿ ರಚಿಸಿದ್ದಾರೆ. ಇಲ್ಲಿ ಕವಿಯು ಗುರುವಿಗೆ ಕರುಣೆಯಿಟ್ಟು ,ಪ್ರೀತಿಯಿಟ್ಟು, ಕೃಪೆಯನಿಟ್ಟು ಎಂದು ಬಹುಶಃ ದೇಹದಲ್ಲಿನ ಆತ್ಮಕ್ಕೆ ಸಂಸ್ಕಾರ ನೀಡಲು ಪ್ರಾರ್ಥಿಸುತ್ತಾರೆ. ಇದೂ ಸನಾತನದ ಲಕ್ಷಣವಿಶೇಷದ ಉಲ್ಲೇಖವೇ. "ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ" ಎನ್ನುವ ನಮ್ಮಲ್ಲಿ ಗುರುವೇ ಸದ್ಗತಿಗೆ, ಸದ್ವರ್ತನೆಗೆ, ಸದ್ವಿವೇಕಕ್ಕೆ ದಾರಿ ಮಾಡಿಕೊಡುತ್ತಾನೆ. ಆ ಶಕ್ತಿ ನಮ್ಮಲ್ಲಿ ಪ್ರೀತಿಯನಿಟ್ಟಾಗ, ಕರುಣೆಯನಿಟ್ಟಾಗ, ಕೃಪೆಯನಿಟ್ಟಾಗ ಮಾತ್ರ ಸಕಾರಾತ್ಮಕ ಗುಣಗಳು ನಮ್ಮಲ್ಲಿ ಬೇರೂರಲು ಸಾಧ್ಯ ಎಂದೂ ಕವಿ ಇಲ್ಲಿ ತೋರಿಸುತ್ತಾರೆ.

ಹೀಗೆ ಅನೇಕ ಕವಿಗಳು, ಋಷಿಗಳು ಈ ಆತ್ಮಕ್ಕೆ ಸದ್ಗುಣಗಳ, ಅಧ್ಯಾತ್ಮಿಕತೆಯ ಪಥ್ಯವನ್ನು ಆಗಾಗ ಮಾಡುತ್ತಲೇ ಬಂದಿದ್ದಾರೆ. ಮೊದಮೊದಲು ದೇವಭಾಷೆಯಲ್ಲಿ ಮಂತ್ರಗಳಾಗಿ ಹೇಳಿದವರು ಕಾಲ ಕಳೆದಂತೆ ಸಾಮಾನ್ಯರ ಭಾಷೆಯಲ್ಲಿ ಕವನಗಳಾಗಿ ಹೇಳಹತ್ತಿದರು. ಇಂಥವರಿಗೆ ಕವಿಋಷಿ ಎಂಬ ಸಾರ್ಥಕ ಹೆಸರನ್ನು ನೀಡಿದರೆ ತಪ್ಪಾಗಲಿಕ್ಕಿಲ್ಲ. ಇಂಥವರು ಸದೇಹವಾಗಿ ಇದ್ದರೂ ಇಲ್ಲದಿದ್ದರೂ ಸದಾ ತಮ್ಮ ವಿಚಾರಗಳಿಂದ, ಕೃತಿಗಳಿಂದ ಚಿರಂಜೀವಿಗಳೇ. ಇತ್ತೀಚೆಗೆ ಜಾನಕಿರಾಮರ "**ಸಾಧು ಸಂತ**" ಎಂಬ ಒಂದು ಕವಿತೆಯಲ್ಲಿ ಇಂತಹ ಕವಿಗಳನ್ನು ಆಧುನಿಕ ಸಂತರು ಎಂದೇ ಭಾವಿಸಿ,

ಈಗಿಲ್ಲ ಅವನ ಹಾಡು ಗೊತ್ತಿಲ್ಲ ಅವನ ಜಾಡು
ಈ ಮಣ್ಣ ಮನಸಿನೊಳಗ, ಹಾಡ್ಯಾನ ಸಾಧುಸಂತ
ಕೂಡ್ಯಾನ ಸಾಧುಸಂತ ಎದ್ದವರ ಕಣ್ಣಿನೊಳಗ
ಹೊಸ ಬೆಳಕ ನೋಡಕೊಂತ ಹಾಡ್ಯಾನ ಸಾಧುಸಂತ

ಅವರು ಬರೆದು ತಿಳಿಸಿದ ಮೌಲ್ಯಗಳನ್ನು ಕೊಂಚವಾದರೂ ನಮ್ಮಲ್ಲಿ ಮೇಳೈಸಿಕೊಂಡು ಬದುಕಿದರೆ ಅವರು ಬರೆದದ್ದಕ್ಕೂ, ನಾವು ಅದನ್ನು ಓದಿದ್ದಕ್ಕೂ ಸಾರ್ಥಕತೆ ಬರುತ್ತದೆ. ಅದೇ ರೀತಿ ಎಷ್ಟೋ ಸದ್ಗುಣಗಳನ್ನು ಕವಿತೆಗಳ ಮೂಲಕ, ಪುಸ್ತಕಗಳ ಮೂಲಕ, ಸಾಹಿತ್ಯದ ಮೂಲಕ ತಿಳಿಸಿ ಸಾರ್ಥಕತೆಯ ಬದುಕನ್ನು ಬದುಕಿ ಈಗ ಚಿರನಿದ್ರೆಗೆ ಜಾರಿದ ದಿವಂಗತ ಶ್ರೀ ಎಚ್. ಎಸ್.ವೆಂಕಟೇಶ ಮೂರ್ತಿಯವರಿಗೆ ಒಂದು ಗುರುನಮನವನ್ನು ಸಲ್ಲಿಸುತ್ತಾ ಅವಕಾಶ ಕೊಟ್ಟ ಸ ಸ ಕ ಸ ಗುಂಪಿಗೆ ಧನ್ಯವಾದಗಳನ್ನು ತಿಳಿಸುತ್ತೇನೆ.

***

ಎಚ್ಚೆಸ್ವಿ ವಿರಚಿತ ಭಾವಗೀತೆ

ಇರಬೇಕು ಇರುವಂತೆ ತೊರೆದು ಸಾವಿರ ಚಿಂತೆ

ಇರಬೇಕು ಇರುವಂತೆ ತೊರೆದು ಸಾವಿರ ಚಿಂತೆ
ಮಳೆ ಸುರಿಸಿ ಹಗುರಾದ ಮುಗಿಲಿನಂತೆ ॥ಪ॥

ತನ್ನೊಡಲ ತಾರೆಗಳ ಗುಡಿಸಿ ರಾಶಿಯ ಮಾಡಿ
ಬೆಳಕಿನುಂಡೆಯ ಬಾನಿಗುರುಳು ಬಿಟ್ಟು
ಹೇಗೆ ಮರೆಯಾಗುವುದೊ ನಿರ್ಧನಿಕ ನಟ್ಟಿರುಳು
ಹಾಗೆ ಬಾಳಿಸು ಗುರುವೆ ಕರುಣೆಯಿಟ್ಟು ॥

ತಾನು ಬಿಸಿಲಲಿ ನಿಂತು ತನ್ನ ಬಳಿ ಬರುವವಗೆ
ತಣ್ಣಗಿನ ಆಸರೆಯ ನೆರಳ ಕೊಟ್ಟು
ಹೇಗೆ ಗೆಲುವಾಗುವುದೋ ಹಸಿರೆಲೆಯ ಹೊಂಗೆ ಮರ
ಹಾಗೆ ಬಾಳಿಸು ಗುರುವೆ ಪ್ರೀತಿಯಿಟ್ಟು ॥೨॥

ತಾನು ಕೆಸರಲಿ ಕುಸಿಯುತ್ತಿದ್ದರೂ ತಾವರೆಯು
ಮರಿದುಂಬಿಗಳ ಪೊರೆವ ತೊಟ್ಟಿಲಾಗಿ
ಹೇಗೆ ತಾಯ್ತನವನ್ನು.. ಪ್ರೀತಿಯಲಿ ಮೆರೆಯುವುದೋ
ಹಾಗೆ ಬಾಳಿಸು ಗುರುವೆ ಕರುಣೆಯಿಟ್ಟು ॥

ದಾರಿಯುದ್ದಕೂ ಪೈರು ನಗುವಂತೆ ನೀರುಣಿಸಿ
ಹಾಲುತೆನೆಯಲಿ ಅಮೃತ ತುಂಬಿ ನದಿಯು
ಹೇಗೆ ದೂರದ ನೀಲಿಯಲ್ಲಿ ಕೊನೆಗೊಳ್ಳುವುದೋ
ಹಾಗೆ ಕೊನೆಗಾಣಿಸು.. ಕೃಪೆಯನಿಟ್ಟು ॥೩॥


***

ಎಚ್ಚೆಸ್ವಿಯವರ ಕೃತಿ ಪರಿಚಯ

" ಆಪ್ತಗೀತೆ "

ತಿಳಿಗನ್ನಡದಲ್ಲಿ ಭಗವದ್ಗೀತೆಯ ಅವತರಣ

– ಡಾ. ಶುಭಶ್ರೀ ಪ್ರಸಾದ್, ಮಂಡ್ಯ



ಪ್ರಕಾಶಕರು: ಅಭಿನವ, ಬೆಂಗಳೂರು
ಮೊದಲ ಮುದ್ರಣ: 2018
ಪುಟಗಳು 220, ಬೆಲೆ: ರೂ.275

ಕನ್ನಡ ಸಾರಸ್ವತ ಲೋಕ ಕಂಡ ಆಪ್ತ ಕವಿಗಳಲ್ಲಿ ಎಚ್ಚೆಸ್ವಿ ಒಬ್ಬರು. ಅವರ ಕೃಷ್ಣನ ಗೀತೆಗಳು ಜನಮಾನಸದಲ್ಲಿ ಶಾಶ್ವತವಾಗಿ ಉಳಿದುಬಿಟ್ಟಿವೆ. ಅನೇಕ ಭಾವ ತುಂಬಿದ ಗೀತೆಗಳು ನೊಂದ ಮನಸ್ಸನ್ನು ತಣಿಸುವ ಸಾಂತ್ವನ ಗೀತೆಗಳೂ ಆಗಿವೆ. ಇವರ ಭಾವಗೀತೆಗಳು, ಸಿನಿಮಾ ಗೀತೆಗಳು ಬಹುತೇಕರಿಗೆ ಗೊತ್ತು.

ಎಚ್ಚೆಸ್ವಿಯವರ ಹೆಚ್ಚು ಗೊತ್ತಿಲ್ಲದ ಆಪ್ತಗೀತೆ ಎಂದರೆ ಕೃಷ್ಣನ ಭಗವದ್ಗೀತೆಯ ತಿಳಿಗನ್ನಡ ಅವತರಣ.

ಭಗವದ್ಗೀತೆ ಕಬ್ಬಿಣದ ಕಡಲೆ ಎಂದೂ, ಎಂದೋ ನಡೆದುಹೋದ ಯಾವುದೋ ಯುಗದ ಉಪದೇಶ ಎಂದೂ ಪರಿಗಣಿಸ ಬೇಕಾಗಿಲ್ಲ. ಅದು ಸಾರ್ವಕಾಲಿಕವಾಗಿ ಮನಶಾಸ್ತ್ರಜ್ಞನೊಬ್ಬ ಸಂತೈಸುವ, ಬೆನ್ನು ತಟ್ಟಿ ತಲೆನೇವರಿಸಿ ಆಪ್ತವಾದ ಭಾವವನ್ನು ನೀಡಿ ನಿರಾಳಗೊಳಿಸುವ ಗೆಳೆಯನ ಮಾತಿನಂತೆ.

'ಆಪ್ತಗೀತೆ' ಎನ್ನುವ ಈ ಕೃತಿಯ ಮುನ್ನುಡಿಯನ್ನು ಬರೆದಿರುವ ಶ್ರೀರಾಮ ಭಟ್ಟ ಅವರು ಎಚ್ಚೆಸ್ವಿಯವರು ಭಗವದ್ಗೀತೆಯ ತಮ್ಮ ಅನುವಾದವನ್ನು ಆಪ್ತ ಗೀತೆ ಎಂದು ಕರೆದಿದ್ದು ತೀರಾ ಹೊಸತಾಗಿದೆ, ತಾಜಾ ಆಗಿದೆ ಎನ್ನುತ್ತಾರೆ. ಮೊದಲಿಗೆ ತಾಯಿಯ ಮಾತು ಮಗುವಿಗೆ ಆಪ್ತ, ಅರಿವಿನ ಹಾದಿಗೆ ಅದೇ ಪ್ರಮಾಣ, ಅದು ತಾಯಿನುಡಿ. ಮುಂದೆ ನುಡಿಯೇ ತಾಯಿಯಾಗಿ ಸಂಭವಿಸುತ್ತದೆ.

ಬಾಯಿ ಇದ್ರೆ ತಾಯಿ ಇದ್ದ ಹಾಗೆ ಎನ್ನುವುದು ಜನಪದ ಗಾದೆ, ತಾಯಿನುಡಿ ನುಡಿ ತಾಯಿ ಇದು ಆಪ್ತತೆಯ ಪರಿಕ್ರಮ. ಬದುಕಿನ ಸೂಕ್ಷ್ಮ ಸಂಕಟ ಮತ್ತು ಪಾರಮಾರ್ಥಿಕತೆಯ ಸಂದಿಗ್ಧದಲ್ಲಿ ಬೆಳಕಾಗಬಲ್ಲ ಗೀತೆಯ ನುಡಿ ಸಮುದಾಯ ಸಹಸ್ರಮಾನಗಳಿಂದ ಈ ನಾಡಿನ ಜನತೆಗೆ ತಾಯಿಯಂತೆ ಆಪ್ತವಾಗಿದೆ. ಎಚ್ಚೆಸ್ವಿಯವರ ಭಗವದ್ಗೀತೆಯೊಂದಿಗಿನ ಒಡನಾಟ ಅದಕ್ಕೂ ನಿಡಿದಾದದ್ದು. ಅವರು ಬದುಕಿನ ದುರ್ಭರಗಳನ್ನು ದಾಟಲಿಕ್ಕಾಗಿ ಭಗವದ್ಗೀತೆಯನ್ನು ಬಗಲಿಗಿಟ್ಟುಕೊಂಡವರು. ಆದರೆ ಅದು ಕೇವಲ ಪಾರಾಯಣದ ಸರಕಾಗಲಿಲ್ಲ ಎನ್ನುವುದು ಮುಖ್ಯ. ಆಡುನುಡಿಯ ಸ್ಪರ್ಶದೊಂದಿಗೆ ಕನ್ನಡದ ಸಹಜ ಲಯ ಈ ಅನುವಾದದ ಆಪ್ತತೆಯ ಮೆರಗನ್ನು ಹೆಚ್ಚಿಸಿದೆ. ಮಹತ್ತಾದದ್ದು ಮತ್ತೆ ಮತ್ತೆ ಸಂಭವಿಸುತ್ತದೆ ಎಂದು ಬರೆದಿದ್ದಾರೆ

ಬಾಲ್ಯದಿಂದಲೂ ಭಗವದ್ಗೀತೆಯ ಒಡನಾಟ ಹೊಂದಿರುವ ಎಚ್ಚೆಸ್ವಿಯವರು ಕಾಲಕ್ರಮೇಣ ಅದರ ಓದನ್ನು ತಮ್ಮದಾಗಿಸಿಕೊಂಡರು. ಅವರೇ ಹೇಳುವ ಹಾಗೆ 'ನನ್ನ ಮನೆಯಾಕೆ ತೀರಿಕೊಂಡ ಮೇಲೆ ಪ್ರತಿ ಮುಂಜಾನೆ ಗೀತಾ ಪಾರಾಯಣ ಮಾಡುವುದು ರೂಢಿಗೆ ಬಂತು. ಈ ಅನುವಾದವು ನನ್ನನ್ನು, ಗೀತೆಯನ್ನು ನನ್ನ ಆಪ್ತ ಕೃತಿಯಾಗಿಸಿದೆ. ಯಾವುದೇ ಘನವಾದ ಬೇರೆ ಭಾಷೆಯ ಪಠ್ಯವನ್ನು ಅನುವಾದಿಸತೊಡಗಿದಾಗ ಆ ಕೃತಿಯನ್ನು ಒಳಗುಮಾಡಿಕೊಳ್ಳುವ

ಘನವಾದ ಪ್ರಕ್ರಿಯೆ ಆರಂಭವಾಗುತ್ತದೆ. ಗೀತೆಯನ್ನು ನನ್ನ ಇತಿಮಿತಿಯಲ್ಲಿ ತಿಳಿಯಬೇಕೆಂಬ ತೀವ್ರವಾದ ಮನೋಭಿಲಾಷೆಯ ಫಲವೇ ಈ ನನ್ನ ಗೀತಾ ಅನುವಾದ'.

ವೇದಗಳಂತೆ ಗೀತೆಯೂ ಒಂದು ಶಾಸ್ತ್ರ ಕಾವ್ಯವೇ. ಗೀತೆ ಎನ್ನುವ ಅದರ ಹೆಸರೇ ಅದರ ಕಾವ್ಯದ ಹೋಲುವಿಕೆಯ ಸೂಚನೆಯಾಗಿದೆ. ಇಷ್ಟಾಗಿಯೂ ಗೀತೆಯು ಕಳೆದುಹೋದ ಯುಗವೊಂದರಲ್ಲಿ ಉದ್ಭವಿಸಿದ ತಾತ್ವಿಕತೆ. ಅದನ್ನು ಸಾರಾಸಗಟಾಗಿ ಇವತ್ತಿಗೆ ಅನ್ವಯಿಸುವುದು, ಅದರ ಪ್ರತ್ಯಂಶವನ್ನು ಒಪ್ಪಲೇಬೇಕೆಂದು ಹಠ ಮಾಡುವುದು ಅಗತ್ಯವೆನಿಸುವುದಿಲ್ಲ. ನಮ್ಮ ಈವತ್ತಿನ ಸಮಾಜಕ್ಕೂ ಅಗತ್ಯವಾದ ಮಾರ್ಗದರ್ಶಿಯಾದ ಅನೇಕ ಜೀವನ ಮರ್ಮಗಳನ್ನು ಗೀತೆ ಬೋಧಿಸುತ್ತಿದೆ. ಅದನ್ನು ನಾವು ಚಿಂತಿಸಬೇಕಾಗಿದೆ. ಸರ್ವಸಮ್ಮತವಾದ ಮೌಲ್ಯಗಳನ್ನು ಒಪ್ಪಿ ಅಳವಡಿಸಿಕೊಳ್ಳಬೇಕಾಗಿದೆ. ಒಪ್ಪಿತವಾಗದ ಸಂಗತಿಗಳನ್ನು ಬದಿಗಿಡುವ ಸ್ವಾತಂತ್ರ್ಯವನ್ನು ಕೃಷ್ಣನೇ ನಮಗೆ ಕಲಿಸಿದ್ದಾನೆ. ಗೀತೆಯ ಈ ಕನ್ನಡ ಅನುವಾದರೂ ಪರಾರ್ಥಕ್ಕಾಗಿ ಖಂಡಿತ ಅಲ್ಲ. ಕೇವಲ ನನ್ನ ಆತ್ಮಸಂಸ್ಕಾರಕ್ಕಾಗಿ ನಡೆದಿರುವಂಥದ್ದು. ಇದನ್ನು ಓದುವ ಇತರರಿಗೂ ಏನಾದರೂ ಲಾಭ ಉಂಟಾಗುವುದಾದರೆ ಅದು ನನ್ನ ಪಾಲಿನ ಅಯಾಚಿತ ಭಾಗ್ಯವೆಂದೇ ಭಾವಿಸುತ್ತೇನೆ ಎಂದು ಎಚ್ಚೆಸ್ವಿ ತಮ್ಮ ಮಾತುಗಳಲ್ಲಿ ತಿಳಿಸಿದ್ದಾರೆ.

ಭಗವದ್ಗೀತೆಯಲ್ಲಿ ಬರುವ ೧೮ ಪರ್ವ ಇಲ್ಲಿಯೂ ಅದೇ ಅನುಕ್ರಮದಲ್ಲಿ ಕನ್ನಡೀಕರಿಸಲಾಗಿದೆ. ಇದು ಗದ್ಯಾನುರೂಪಿ ಭಾವಾರ್ಥವಲ್ಲ.

೧. ವಿಷಾದ ಯೋಗ
೨. ಸಾಂಖ್ಯ ಯೋಗ
೩. ಕರ್ಮ ಯೋಗ
೪. ಜ್ಞಾನ ಯೋಗ
೫. ಕರ್ಮ ಸನ್ಯಾಸ ಯೋಗ
೬. ಆತ್ಮ ಯೋಗ
೭. ಜ್ಞಾನವಿಜ್ಞಾನ ಯೋಗ
೮. ಅಕ್ಷರ ಬ್ರಹ್ಮ ಯೋಗ
೯. ರಾಜವಿದ್ಯ ರಾಜ ಗುಹ್ಯ ಯೋಗ
೧೦. ವಿಭೂತಿ ಯೋಗ
೧೧. ವಿಶ್ವರೂಪ ದರ್ಶನ ಯೋಗ
೧೨. ಭಕ್ತಿ ಯೋಗ
೧೩. ಕ್ಷೇತ್ರ ಕ್ಷೇತ್ರಜ್ಞ ವಿಭಾಗ ಯೋಗ
೧೪. ಗುಣತ್ರಯ ವಿಭಾಗ ಯೋಗ
೧೫. ಪುರುಷೋತ್ತಮ ಯೋಗ
೧೬. ದೈವಸುರ ಸಂಪತ್ ವಿಭಾಗ ಯೋಗ
೧೭. ಶ್ರದ್ಧಾತ್ರಯ ವಿಭಾಗ ಯೋಗ
೧೮. ಮೋಕ್ಷ ಸನ್ಯಾಸ ಯೋಗ

ಇದರೊಟ್ಟಿಗೆ ಗೀತೆಯ ಕೆಲವು ಮಹಾಕಾವ್ಯಗಳು ಮತ್ತು ಪರಾಮರ್ಶನ ಕೃತಿಗಳು ಎನ್ನುವ ಅನುಬಂಧಗಳಿವೆ.

ಒಟ್ಟು ೭೦೦ ಶ್ಲೋಕಗಳನ್ನು ಎಚ್ಚೆಸ್ವಿಯವರು ತಿಳಿಕನ್ನಡದಲ್ಲಿ ಅವತರಣಗೊಳಿಸಿದ್ದಾರೆ. ಎಲ್ಲ ಏಳು ನೂರು ಶ್ಲೋಕಗಳನ್ನೂ ನಾವು ಇಲ್ಲಿ ಚರ್ಚಿಸಲು ಸಾಧ್ಯವಿಲ್ಲ. ಆಗ ಇಡೀ ಪುಸ್ತಕವನ್ನೇ ಓದಿದಂತಾಗುತ್ತದೆ. ಕೆಲವೊಂದು ಅಧ್ಯಾಯದಲ್ಲಿ ಬಹು ಮುಖ್ಯವಾದ ಶ್ಲೋಕಗಳನ್ನು ನಿಮ್ಮ ಮುಂದೆ ಇಡುವ ಪ್ರಯತ್ನ ಮಾಡುತ್ತೇನೆ.

ಮೊದಲ ಅಧ್ಯಾಯ ವಿಷಾದ ಯೋಗದಲ್ಲಿನ ೩೯ನೇ ಶ್ಲೋಕದಲ್ಲಿ ಅರ್ಜುನನ ಮಾತು:

ತಿಳಿದು ತಿಳಿದೂ ನಾವು ಕೊಲೆಯ ಉದ್ಯಮದಲ್ಲಿ
ತೊಡಗಬೇಕೇ ನೀನೆ ಹೇಳು ಕೃಷ್ಣ
ಕೊಲೆಯ ಪಾತಕವನ್ನು ತಿಳಿದ ನಾವಾದರೂ
ಯುದ್ಧೋದ್ಯಮಕ್ಕೆ ವಿಮುಖರಾಗಬೇಕು

ಈ ಶ್ಲೋಕ ಇಂದಿಗೆ ಅತ್ಯಂತ ಪ್ರಸ್ತುತ ಎನಿಸುತ್ತದೆ. ಈಗ ಯುದ್ಧ ಒಂದು ಉದ್ಯಮವೇ ಆಗಿದೆ. ಜೊತೆಗೆ ಸ್ವಾರ್ಥದಿಂದ ಹಾಗೂ ಕಬಳಿಸುವಿಕೆಯ ಭೋಗ ಸಂಸ್ಕೃತಿಯ ಭಾಗವೂ ಆಗಿದೆ. ತಿಳಿಯದವರು ಮಾಡುವ ತಪ್ಪಿಗೆ ಕ್ಷಮೆ ಇದೆ. ಆದರೆ ತಿಳಿದೂ ಇಂತಹ ಅಕಾರ್ಯದಲ್ಲಿ ತೊಡಗುವುದು ಎಷ್ಟು ಸರಿ ಎನ್ನುವ ಅರ್ಜುನನ ಪ್ರಶ್ನೆ ನಮ್ಮ ಎದೆ ಬಗೆಯುವ ಪ್ರಶ್ನೆಯಾದರೆ ಮತ್ತು ಉತ್ತರ ಕಂಡುಕೊಂಡರೆ ಮನ ಮನಗಳ ಹೋರಾಟಗಳು, ಮನೆ ಮನೆಗಳ ಹೋರಾಟಗಳು, ಪಕ್ಷ ಪಕ್ಷಗಳ ಹೋರಾಟಗಳು, ದೇಶ ದೇಶಗಳ ಹೋರಾಟಗಳು ಕಡಿಮೆಯಾದಾವು. ಹಾಗೆ ಕಡಿಮೆಯಾದರೆ ಒಂದಿಷ್ಟು ಶಾಂತಿ ನೆಲೆಸೀತು.

ಎರಡನೆಯ ಅಧ್ಯಾಯ ಸಾಂಖ್ಯ ಯೋಗದಲ್ಲಿ ೧೩ನೇ ಶ್ಲೋಕ:

ದೇಹಿಗಳಿಗೊದಗುವುದು ಬಾಲ್ಯ ಯೌವನ ಮುಪ್ಪು
ಹಾಗೇನೆ ಮೃತರಿಗಿನ್ನೊಂದು ದೇಹ
ಬಲ್ಲವರು ಬಲ್ಲರು ಪರಿವರ್ತನಾ ವೃತ್ತಿ
ಮೋಹಗೊಳ್ಳರು ಧೀರಪುರುಷರದಕೆ

ಈ ಅವತರಣಿಕೆಯಲ್ಲಿ ಬದುಕಿನ ಅನೇಕ ಸತ್ಯಗಳನ್ನು ತೆರೆದಿಡಲಾಗಿದೆ. ಸಂಸ್ಕೃತದಲ್ಲಿ ಕ್ಲಿಷ್ಟವೆನಿಸಿದರೂ ಕನ್ನಡದಲ್ಲಿ ಅತ್ಯಂತ ಸರಳವಾಗಿ ವಿವರಿಸಲಾಗಿದೆ. ದೇಹ ಇದ್ದಾಗಲೇ ಬಾಲ್ಯ ಯೌವ್ವನ ಮುಪ್ಪು. ಆದರೆ ದೇಹ ಬಿಟ್ಟ ಮೇಲೆ ಮೃತರು (ಮೃತರ ಆತ್ಮ) ಮತ್ತೊಂದು ದೇಹವನ್ನು ಸೇರುತ್ತಾರೆ ಎನ್ನುವ ದರ್ಶನದ ಜೊತೆಗೆ ಹೀಗೆ ಪರಿವರ್ತನೆಯನ್ನು ಅರಿತುಕೊಂಡವರು ಮೋಹಗೊಳ್ಳರು ಎಂದು ಬರೆಯುತ್ತಾರೆ.

ಇದೇ ಅಧ್ಯಾಯದ ೧೮ನೇ ಶ್ಲೋಕವನ್ನು ಎಚ್ಚೆಸ್ವಿಯವರು ಸರಳ ಕನ್ನಡದಲ್ಲಿ –

ದೇಹಗಳಿಗೆ ವಿನಾಶ; ಚೈತನ್ಯ ಅವಿನಾಶಿ
ಅಪ್ರಮೇಯವು ಪರಮ ಆತ್ಮತತ್ವ
ದೇಹ ನಶ್ವರವೆಂದ ಮೇಲೆ ಯಾತಕೆ ಶೋಕ?
ಸನ್ನದ್ಧನಾಗಯ್ಯ ಕಾಳಗಕ್ಕೆ

ಎಂದು ಹೇಳುವಾಗ ಈ ದೇಹ ನಶ್ವರ ಎಂದು ಅರಿತ ಮೇಲೆ ದುಃಖವನ್ನು ಬಿಡಬೇಕು. ವಿನಾಶ ಎನ್ನುವುದು ದೇಹಕ್ಕೆ, ಚೈತನ್ಯಕಲ್ಲ. ಹೀಗಿರುವಾಗ ಹುಟ್ಟು ಸಾವುಗಳು ಎನ್ನುವ ಕಾಳಗಕ್ಕೆ ನಾವು ಸದಾ ಸನ್ನದ್ಧರಾಗಿರಬೇಕು. ಅದೂ ಸಮಚಿತ್ತತೆಯಿಂದ ಎಂದು ಅರ್ಥೈಸುವಂತೆ ಬರೆಯುತ್ತಾರೆ.

ಆತ್ಮ ತತ್ವದ ವಿಷಯದ ಅನೇಕ ಶ್ಲೋಕಗಳು ಈ ಅಧ್ಯಾಯದಲ್ಲಿವೆ.

ಯಾರು ಆತ್ಮನ ಕೊಲುವೆನೆಂದು ತಿಳಿಯುತ್ತಾರೋ
ಯಾರು ತಿಳಿವರೊ ಆತ್ಮ ಸತ್ತನೆಂದು
ಆ ಇಬ್ಬರೂ ಕೂಡ ನಿಜವ ತಿಳಿದವರಲ್ಲ
ಕೊಲದು ಕೊಲ್ಲಲ್ಪಡದು ಆತ್ಮತತ್ವ (೧೯)

ಈ ಆತ್ಮ ಯಾವತ್ತೂ ಹುಟ್ಟು ಪಡೆಯುವುದಿಲ್ಲ ಹಾಗೂ ಸಾಯುವುದಿಲ್ಲ ಎಂಬುದನ್ನು ಬರೆಯುತ್ತಾ, ಹುಟ್ಟೇ ಇಲ್ಲದ ನಿತ್ಯ ಸತ್ಯ ಶಾಶ್ವತ ಆತ್ಮ. ಸಾವು ದೇಹಕ್ಕಷ್ಟೇ ಆತ್ಮಕಲ್ಲ ಎಂದು ತಿಳಿಸುವ ಈ ಎರಡು ಶ್ಲೋಕಗಳನ್ನು ಸುಲಭವಾಗಿ ದಕ್ಕುವ ಹಾಗೆ ಎಚ್ಚೆಸ್ವಿ ಕನ್ನಡೀಕರಿಸಿದ್ದಾರೆ.

೬೭, ೬೮ ನೆಯ ಶ್ಲೋಕಗಳಲ್ಲಿ –

ನೀರಲ್ಲಿ ಸಾಗುತ್ತಲಿರುವ ನಾವೆಯ ಗಾಳಿ
ತನಗೆ ಬೇಕಾದ ಕಡೆ ಸೆಳೆಯುವಂತೆ
ವಿಷಯದಲಿ ತೊಡಗಿರುವ ಬುದ್ಧಿಯನ್ನಿಂದ್ರಿಯವು
ತನಗೆ ಬೇಕಾದ ಕಡೆ ಸೆಳೆದೊಯ್ಯುವುದು

ಆದಕಾರಣ ಯಾರ ಇಂದ್ರಿಯಗಳಿದ್ದಾವೊ
ವಿಷಯವಶವಾಗದಿಹ ನಿಗ್ರಹದಲಿ
ಅಂಥ ವ್ಯಕ್ತಿಯ ಬುದ್ಧಿ ಸ್ಥಿರತೆಯಲ್ಲಿರುವುದು

ಎನ್ನುತ್ತಾರೆ. ಭಗವದ್ಗೀತೆಯಲ್ಲಿ ಕೃಷ್ಣ ಹೇಳಿರುವ ಅರ್ಥವತ್ತಾದ ಶ್ಲೋಕಗಳನ್ನು ಸರಳ ಕನ್ನಡದಲ್ಲಿ ಸರಳವಾಗಿ ಅರ್ಥವಾಗುವಂತೆ ಮಹತ್ತರವಾದುದನ್ನು ಬರೆದಿದ್ದಾರೆ.

ಮೂರನೇ ಅಧ್ಯಾಯ ಕರ್ಮ ಯೋಗ. ಶ್ಲೋಕದ ಸಂಖ್ಯೆ ೬ –

ಯಾವ ಮೂಢನು ಹೊರಗೆ ಇಂದ್ರಿಯವಾಗಿ ನಿಗ್ರಹಿಸಿ
ಒಳಗೊಳಗೆ ವಿಷಯಗಳ ಧ್ಯಾನಿಸುವನೋ
ಅಂಥವನ ಲೋಕ ಮಿಥ್ಯಾಚಾರಿ ಎನ್ನುವುದು
ನಾನು ಒಪ್ಪೆನು ಅಂಥ ಡಾಂಬಿಕನನು

ಎನ್ನುವ ಈ ಸಾಲುಗಳನ್ನು ಓದುವಾಗ ನಮ್ಮ ಕಣ್ಣೆದುರು ಸಹಸ್ರ ಸಹಸ್ರ ಇಂತಹ ನಿದರ್ಶನಗಳು ಕಾಣುವಾಗ ಭಗವದ್ಗೀತೆಯ ಸಾರ ನಮ್ಮ ಬದುಕನ್ನು ಎಷ್ಟು ಸಂಸ್ಕರಿಸಬಹುದು ಎಂಬುದು ತಿಳಿಯುತ್ತದೆ

ಇಪ್ಪತ್ತನೇ ಶ್ಲೋಕದಲ್ಲಿ–

ಶ್ರೇಷ್ಠ ಪುರುಷರು ಹೇಗೆ ನಡೆಯುವರು ಹಾಗೇನೇ
ಸಾಮಾನ್ಯರು ಕೂಡ ವರ್ತಿಸುವರು
ದೊಡ್ಡವರ ನಡೆನುಡಿಯೇ ಆಗುವುದು ಮೇಲ್ಪಂಕ್ತಿ
ತಲೆಯಾಳುಗಳು ಇದನ್ನರಿಯಬೇಕು

ಎಂದು ಸರಳೀಕರಿಸಿದ್ದಾರೆ

ಎರಡು ಸಾಲಿನ ಭಗವದ್ಗೀತೆಯ ಸಂಸ್ಕೃತ ಶ್ಲೋಕವನ್ನು ತಿಳಿಗನ್ನಡದಲ್ಲಿ ಅನುವಾದಿಸುವಾಗ ನಾಲ್ಕು ಸಾಲುಗಳನ್ನಾಗಿ ಎಚ್ಚೆಸ್ವಿಯವರು ಪರಿವರ್ತಿಸಿದ್ದಾರೆ. ಇದರಲ್ಲೊಂದು ಸೊಗಸಿದೆ. ಕಡಿಮೆ ಶಬ್ದಗಳನ್ನು ಬಳಸಿ ಕ್ಲೀಷೆ ಮಾಡಿದರೆ ಸಾಮಾನ್ಯರಿಗೆ ಅರ್ಥವಾಗುವ ಸಾಧ್ಯತೆ ಕಡಿಮೆ. ಹಾಗಾಗಿ ಬಿಡಿಸಿ ಸರಳವಾಗಿ ನಾಲ್ಕು ಸಾಲುಗಳಲ್ಲಿ ಹೇಳಿದಾಗ ಮತ್ತಷ್ಟು ಸುಲಭವಾಗಿ ಮೆದುಳಿಗೆ ಹೋಗುತ್ತದೆ ಎಂಬ ತಂತ್ರವನ್ನು ಇಲ್ಲಿ ಪ್ರಯೋಗಿಸಿದ್ದಾರೆ.

ನಾಲ್ಕನೆಯ ಅಧ್ಯಾಯ ಜ್ಞಾನ ಯೋಗ. ಇದರ ಏಳನೆಯ ಶ್ಲೋಕ ಸುಪ್ರಸಿದ್ಧವಾದ –

ಯದಾ ಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ
ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹ ಂ

ಇದನ್ನು ಎಚ್ಚೆಸ್ವಿಯವರು –

ಯಾವಾಗ–ಯಾವಾಗ ಧರ್ಮಕ್ಕೆ ಗ್ಲಾನಿಯೋ
ವೃದ್ಧಿಗೊಳ್ಳುವುದೊ ಲೋಕದಲ್ಲಧರ್ಮ
ಆವಾಗ–ಆವಾಗ ಪ್ರಕಟಗೊಳ್ಳುವೆ ನಾನು
ನನ್ನ ರೂಪವ ನಾನೇ ಸೃಜಿಸಿಕೊಂಡು

'ನನ್ನ ರೂಪವ ನಾನೇ ಸೃಜಿಸಿಕೊಂಡು' ಎನ್ನುವ ಈ ಸಾಲುಗಳು ಅತ್ಯಂತ ಮಹತ್ವಪೂರ್ಣವಾಗಿದೆ. ಸಮಯ ಸಂದರ್ಭಕ್ಕೆ ತಕ್ಕಹಾಗೆ ಭಗವಂತ ತನ್ನ ರೂಪವನ್ನು ತಾನೇ ಕಂಡುಕೊಂಡು ಪ್ರಕಟವಾಗುವ ಬಗೆ ಜನಸಾಮಾನ್ಯರಿಗೆ ಪೂರ್ವಯೋಜಿತವಾಗಿ ದಕ್ಕುವಂಥದ್ದಲ್ಲ ಮತ್ತು ಅವರ ಕಲ್ಪನೆಗೆ ಮುನ್ನವೇ ಸಿಗುವಂಥದ್ದಲ್ಲ ಎಂಬುದನ್ನು ತೋರಿಸುತ್ತದೆ.

ಸಂಸ್ಕೃತದ ಶ್ಲೋಕಗಳನ್ನು ಸಮರ್ಥವಾಗಿ ಅರ್ಥೈಸಿಕೊಂಡು ನಮ್ಮಂತಹ ಶ್ರೀಸಾಮಾನ್ಯರಿಗೆ ಅರ್ಥವಾಗುವ ಹಾಗೆ ಕನ್ನಡೀಕರಿಸಿರುವ ಎಚ್‌ಎಸ್‌ವಿ ಅವರ ಈ ಕಾರ್ಯ ಪ್ರಶಂಸನೀಯ. ಎಲ್ಲರಿಗೂ ಸಂಸ್ಕೃತ ಸುಲಭವಾಗಿ ಅರ್ಥವಾಗುವುದಲ್ಲ ಆದರೆ ಎಚ್‌ಎಸ್‌ವಿಯವರು ಸಂಸ್ಕೃತವನ್ನು ಅಭ್ಯಸಿಸಿ, ಈ ಒಂದು ಕಾವ್ಯರೂಪದ ಸರಳೀಕೃತ ಕನ್ನಡ ಭಾವತರಣಿಕೆಯನ್ನು ನಮಗೆ ನೀಡಿದ್ದಾರೆ,

***



ಡಾ. ಎಚ.ಎಸ್.ವೆಂಕಟೇಶ ಮೂರ್ತಿಯವರಿಂದ ಡಾ.ಶುಭಶ್ರೀ ಪ್ರಸಾದ್ ಅವರ ಮೊದಲ ಕವನ ಸಂಕಲನ 'ಹಣತೆ ಬೆಳಕು' ಲೋಕಾರ್ಪಣೆ

ಡಾ. ಎಚ್ಚೆಸ್ವಿ ಅವರ ಶಿಶುಗೀತೆಗಳು

– ಗೌರಿ ಭಟ್ಟ

ಎಚ್ಚೆಸ್ವಿ ಎಂದೇ ಪ್ರಸಿದ್ಧರಾದ ಡಾಕ್ಟರ್ ಎಚ್.ಎಸ್.ವೆಂಕಟೇಶಮೂರ್ತಿಯವರ ಶಿಶುಗೀತೆಗಳು ಗರಿಗರಿಯಾದ ಬಿಸಿಬಿಸಿ ದಾವಣಗೆರೆಯ ಬೆಣ್ಣೆ ದೋಸೆಯಂತೆ ರುಚಿಯಾಗಿಯೂ, ಶಿವಮೊಗ್ಗೆಯ ನಿತ್ಯ ಹಸಿರಿನಂತೆ ಸವಿಯಾಗಿಯೂ ಇವೆ. ಕೃಷ್ಣನ ಬೆಣ್ಣೆಯಂತೆ ದೇವರಾಣೆಗೂ ಕಿರಿಯರಿಗಷ್ಟೇ ಅಲ್ಲ, ಹಿರಿಯರಿಗೂ ಪ್ರಿಯವಾಗುವವು. ಎಚ್ಚೆಸ್ವಿಯವರ ಪ್ರತಿ ಹಾಡೂ ತರುವುದು ಬಾಲ್ಯದ ನೆನಪುಗಳ ಚೆಂದದ ಮೆರವಣಿಗೆ.

ಹಳೆಯ ಬೆಂಬಲ ದೃಢವಾಗಿ ನಿಲ್ಲುತ್ತದೆ ಅನ್ನುವ ಮಗುವಂತಹ ಮನಸ್ಸಿನ ಮೇಷ್ಟ್ರು ಬರೆದ ಪದ್ಯಗಳು ಎಲ್ಲರ ಬಾಲ್ಯವನ್ನೂ ಆವರಿಸಿಕೊಳ್ಳುತ್ತದೆ.

ಕವನಗಳಲ್ಲಿ ಬಳಸಿರುವ ಪುರ್ ಪುರ್, ಕಣ್ ಕಣ್, ಪಿಳಿ ಪಿಳಿ, ಕಾಲ್ ಮುರೀತೀನಿ, ಬುಸ್ ಬುಸ್, ದರಿದ್ರ ಹಾವು, ಮುಂತಾದ ಪದಗಳು ವ್ಯಾಕರಣಬದ್ಧವಾಗಿದ್ದು ಕವನಕ್ಕೆ ಶಕ್ತಿ ಕೊಡುವುದರ ಜೊತೆಗೇ ಕವನದ ಆಶಯವನ್ನು ಓದುಗರಿಗೆ ಸಮರ್ಥವಾಗಿ ಬಿಂಬಿಸುತ್ತವೆ.

ಮಕ್ಕಳ ಕವಿ ಬರೆದಿರುವ ಎಲ್ಲವೂ ಸದಾಕಾಲ ಇಷ್ಟವಾಗುವ ಪದ್ಯಗಳು. ಮಕ್ಕಳಿಗೆ ಇಷ್ಟವಾಗುವ ಗುಬ್ಬಿ, ಕಾಗೆ, ಗಿಣಿ, ನಾಯಿ, ಹಾವುಗಳು, ಚಂದಮಾಮ ಅವರ ಹಾಡಿನಲ್ಲಿ ಜೀವಂತವಾಗಿವೆ. ಕಾಲಮಿತಿಯಿಂದ ನಾನು ಎಳವೆಯಿಂದ ಕೇಳಿದ, ನನಗೆ ಇಷ್ಟವಾದ, ಭಾವಗಳಿಗೆ ಜೀವತುಂಬಿದ ಕವಿಯ ಕೆಲವೇ ಗೀತೆಗಳನ್ನು ಇಂದಿನ ಪ್ರಸ್ತುತಿಗೆ ಆಯ್ದುಕೊಂಡಿದ್ದೇನೆ.

೧. ಅಮ್ಮ, ಅಮ್ಮ. ಅಮ್ಮ. ನನ್ನ ತೋಳಿಗೆ ರೆಕ್ಕೆ ಹಚ್ಚು, ಸೊಂಟಕೆ ಬೆಳ್ಳಿ ಪಟ್ಟಿ ಕಟ್ಟಿ, ಹಕ್ಕಿ ಪುಚ್ಚ ಚುಚ್ಚು

ತೆಂಗಿನ ಮರಕೂ ಮೇಲೆ ಹಾರಿ, ಮೋಡ ಮುಟ್ಟಿ ಚುಕ್ಕಿ ಹಾಡು ಕೇಳಿಕೊಂಡು, ತಿಂಗಳನೂರಿನ ಅಂಗಳ ಸೇರಿ, ಬೆಳ್ಳಿಯ ಮೊಲವನು ನೋಡಿ, ಅಲ್ಲಿರುವ ಚಿನ್ನದ ಜಿಂಕೆಯನ್ನು ಹಿಡಿದು, ಚಂದಮಾಮನ ಮನೆಗೆ ಹೋಗಿ ತಿಂಡಿ ತಿಂದು ಬರುವ ಮಗುವಿನ ಸಹಜ ಆಸೆಯಂತೆ ಅಮ್ಮನನ್ನು ಕೇಳುತ್ತಿರುವ ಸೊಗಸಾದ ಈ ಹಾಡು ನಾವೆಲ್ಲರೂ ಕಂಡುಂಡ ಸಂಗತಿಗಳ ಒಂದು ಸುಂದರ ಚಿತ್ರಕಥನವೇ ಸರಿ. ಆಹಾ! ಯಾರಿಗೂ ಬಾಲ್ಯ ನೆನಪಾಗುತ್ತದೆ.

ನನ್ನ ತೋಳಿಗೆ ರೆಕ್ಕೆ ಹಚ್ಚು

– ಎಚ್.ಎಸ್.ವೆಂಕಟೇಶ ಮೂರ್ತಿ

ಅಮ್ಮ ಅಮ್ಮ ಅಮ್ಮ
ನಮ್ಮ ತೋಳಿಗೆ ರೆಕ್ಕೆ ಹಚ್ಚು
ಸೊಂಟಕೆ ಬೆಳ್ಳಿ ಪಟ್ಟಿ ಕಟ್ಟಿ
ಹಕ್ಕಿ ಪುಕ್ಕ ಚುಚ್ಚು.(ಪ)

ಹಾರುತ್ತೀವಿ ರೆಕ್ಕೆ ಬಿಚ್ಚಿ
ತೆಂಗಿನ ಮರಕೂ ಮೇಲೆ
ಜಗಲಿ ಮೇಲೇ ನಿಂತೇ ನಮಗೆ
ಅಮ್ಮ ಟಾಟಾ ಹೇಳೇ

ಹಾಗೇ ಹಾಗೇ ಮೇಲೆ ಹೋಗಿ
ಮುಟ್ಟುತ್ತೀವಿ ಮೋಡ
ಕೇಳುತ್ತೀವಿ ಯಾರು ಕೇಳದ
ಚುಕ್ಕಿ ಹಾಡೋ ಹಾಡ

ತಿಂಗಳನೂರಿನ ಅಂಗಳ ಸೇರಿ
ಬೆಳ್ಳಿಯ ಮೊಲವನು ನೋಡಿ
ಹಿಡಿಯುತ್ತೀವಿ ಹಾರೋ ಬಣ್ಣದ
ಜಿಂಕೆಯ ಹೇಗೋ ಮಾಡಿ

ಕೊಟ್ಟೇ ಕೊಡುವನು ಚಂದಮಾಮ
ಕೆನ್ನೆ ತುಂಬ ಮುತ್ತು,
ಮುತ್ತಿಸಿ ಬೆಟ್ಟದ ತುದಿಗೆ ಇಳಿಸುವ
ಯಾರೂ ಇಲ್ಲದ ಹೊತ್ತು.

***

೨. ಓ ಪುಟಾಣಿ ನೀಲಿ ಹಕ್ಕಿ

ಮುದ್ದು ಮಗುವಿಗೆ ಮಾತಿನ ಮಲ್ಲಿ ಪುಟಾಣಿ ನೀಲಿ ಹಕ್ಕಿಯ ಹತ್ತಿರ ಹಾಡು ಹೇಳಿಸಿ ಹಾಡು ಕೇಳುವ ಆಸೆ. ಬೆಳ್ಳಕ್ಕಿ, ಹಸಿರು ಗಿಳಿಗಳೊಡನೆ ಹೊಲ, ಕೊಳಗಳಲ್ಲಿ ಆಡಲು ಆ ನೀಲಿ ಹಕ್ಕಿಗೆ ಬರಲೇಬೇಕೆಂದು ಮಗು ಆಹ್ವಾನ ಕೊಡುತ್ತೆ. ಮಕ್ಕಳಿಗೆ ಆಡಲು, ಹಾಡಲು ಎಲ್ಲರೂ ಬೇಕು.

೩. ಗುಬ್ಬಿಮರಿ ಪುರ್, ಪುರ್. ಅಂತ ಹಾರಿಬಂತು ಅಮ್ಮನ ಹತ್ರ

ಒಮ್ಮೆ ಗುಬ್ಬಿ ಮರಿ ಗೋಪುರದ ಮೇಲೆ ಕೂತ್ಕೊಂಡಿದ್ದ ತನಗಿಲ್ಲದ ಚೆಂದವನ್ನು ಪಾರಿವಾಳದಲ್ಲಿ ಕಂಡು ಬೇಜಾರು ಮಾಡಿಕೊಳ್ಳುತ್ತದೆ. ಅಮ್ಮ ಹೇಳುತ್ತಾಳೆ– "ನೋಡು ಪುಟ್ಟಾ, ನೀನೂ ಹಾಗೇ ಇದ್ದಿ ಅನ್ನೋ ಏನಾಗ್ತಿತ್ತು? ನಿನಗೂ ಆ ಪಾರಿವಾಳದಂತೇ ರೆಕ್ಕೆಗಳಿದ್ದು ಅದು ನಿನ್ನ ತೊಟ್ಟಿಲಲ್ಲಿ ಮಲಗಿದ್ರೆ, ನಿನ್ನಂತೇ ಕಾಣುವ ಆ ಪಾರಿವಾಳಕ್ಕೆ ನಿನ್ನ ಅಪ್ಪಾಜಿ ಅದರ ಕೊಕ್ಕಲ್ಲೆ, ಹಾರ್ಕೊಂಡ್ಬಂದು ತಿಂಡಿ ಇಟ್ರೆ? ನೀನೇ ಅದು ಅಂತ ಅನ್ಕೊಂಡ್ ನಾನು ಅಪ್ಪಿ ಮುತ್ತಿಕ್ಬಿಟ್ರೆ?" ಅಂತ ಹೇಳಿದಾಗ ಗುಬ್ಬಿಮರಿ ತಬ್ಬಿಬ್ಬಾಗುತ್ತದೆ. "ಚಿಂವ್, ಚಿಂವ್ ಮಾಡಿ ಕಣ್ ಕಣ್ ಬಿಟ್ಟು ನಾನ್ ನನ್ಹಾಗೆ ಇರ್ಬೇಕಪ್ಪ, ನಾನು ನಾನೆ ಅಂತ ಅಮ್ಮ ಅಪ್ಪ ನನ್ನ ತಿಳಿಬೇಕಪ್ಪ ಕನ್ನಡಿ ಗಿನ್ನಡಿ ನೋಡ್ಕೊಂಡಾಗ ನನ್ನ ಮುಖಾನೆ ಉಳಿಬೇಕಪ್ಪ" ಅಂತ ಗುಬ್ಬಿಮರಿ ಕೈಯ್ಯಲ್ಲಿ ಮಕ್ಕಳಿಗೆ ಹೇಳಿಸಿದಂತಿದೆ ಅಂತ ನನ್ನ ಅನಿಸಿಕೆ. ನನಗೆ ಇಷ್ಟವಾದ ಹಾಡುಗಳಲ್ಲಿ ಇದೂ ಒಂದು.

೪. ಕಾಗೆ ಜೋಡಿ ಆಡು ನೀನು ಕಾಲ್ಮುರಿತೀನಿ ಅಂತು ಅಮ್ಮ ಗುಬ್ಬಿ

ಕಾಗೆ ಜೋಡಿ ಆಡಿದರೆ ಕಾಲ್ಮುರೀತೀನಿ ಅಂತ ಗುಬ್ಬಿಮರಿಗೆ ಅಮ್ಮ ಹೇಳ್ದಾಗ, "ಯಾಕೆ ಅಮ್ಮ ಹಾಗ್ಹೇಳ್ತಿ? ಕಾಗೆಮರಿ ಜಾಣ, ಅದ್ರ ಜೊತೆಗೆ ಆಡಿದ್ರೇನು ತಪ್ಪು?" ಅಂತ ಪುಟಾಣಿ ಗುಬ್ಬಿಮರಿ ಕೇಳುತ್ತೆ. ಕಾಗೆ ಜೋಡಿ ಮಾಡ್ಕೋಬೇಡ ಅಂತ ಅಮ್ಮ, ಏನು ತಪ್ಪು ಅಂತ ಮರಿ ಬಹಳ ಚಂದದ ಸಂಭಾಷಣೆ.

ಕಾಗೆಮರಿ ಕಾಳ್ಗಪ್ಪು, ನೀನು ಬಿಳಿ ಮುತ್ತಂತೆ ಅದರೊಟ್ಟಿಗೆ ಆಡಿದ್ರೆ ಕರಿ ಕೊರ್ಮ ಆಗ್ತೀಯಾ ನನಗೇನು? ಅಂದಾಗ ಗುಬ್ಬಿಮರಿ. "ಅಮ್ಮ ನಾನು ಕರಿ ಕಾಗೆಯೊಟ್ಟಿಗೆ ಆಡಿ ಅದನ್ನು ಮಲ್ಲಿಗೆ ಹೂವಿನಂತೆ ಬೆಳ್ಳಗೆ ಮಾಡುತ್ತೇನೆ" ಅಂತ ಕಾಗೇ ಜೋಡಿನೇ ಪುರ್ರನೆ ಹಾರಿ ಹೋಗುತ್ತೆ. ಎಂತಹಾ ನಿಷ್ಕಲ್ಮಶ ಗೆಳೆತನ ಅಲ್ಲವೇ? ಮುಗ್ಧತೆಯ ಗೂಡು ಮಕ್ಕಳ ಮನಸ್ಸು. ಮಗುವಿನ ಮನಸ್ಸಿನವರಿಗಷ್ಟೇ ಹೀಗೆ ಬರೆಯಲು ಸಾಧ್ಯ

೫. ಎಲೆಗಳು ನೂರಾರು ಬಣ್ಣ ಬೇರೆ

ಜಾತಿ, ಭಾಷೆ, ಪಂಥ ಹಲವು, ಒಂದೇ ಒಲವು. ಅಂತ ಕವಿ ಹೇಳುತ್ತಾ, ಸೂರ್ಯ, ಚಂದ್ರ, ಲಾಂದ್ರಗಳ ಉದ್ದೇಶ ಬೆಳಕು ಕೊಡುವುದು. ನಾವೆಲ್ಲರೂ ಬೇಧ ಮರೆತು, ಒಟ್ಟಿಗೆ ಬಾಳಿ ನಾಡನು ಕಟ್ಟೋಣ. ಭಾರತಮಾತೆಗೆ ಪ್ರೀತಿ ತೋರಿಸೋಣ ಅಂತ ಹೇಳಿ ಐಕ್ಯತಾ ಭಾವ ಮೂಡಿಸುವಲ್ಲಿನ ಒಲವಿನ ಕವಿಯ ಕೆಲಸ ಶ್ಲಾಘನೀಯ.

೬. ಹಾವು ಅಂದರೆ ಮರಿ ಗುಬ್ಬಿಗೆ ಭಾರೀ ದಿಗ್ಲೇನೇ

ಪಾಪ ಹಾಡುಹಗಲೇ ಮೈ ನಡುಗುತ್ತಂತೆ. ಬುಸ್ ಬುಸ್ ಹಾವಿನ ಬಗ್ಗೆ ಅಮ್ಮನ ಹತ್ತಿರ ಕೇಳಿದಾಗ, ಕೊಕ್ಕಲ್ಲಿ ಬೆನ್ನು ತಿಕ್ಕಿಕೊಳ್ಳುತ್ತಾ ಅಮ್ಮ ಗುಬ್ಬಿ ಕಾಗೆಯ ಕಪ್ಪು, ಹೊಳೆಯುವ ಭಯಾನಕ ಕಣ್ಣಿನ ಹಾವಿನ ವರ್ಣನೆ ಮಾಡುತ್ತದೆ. ದರಿದ್ರ ಹಾವು ಹೊಟ್ಟೆಗೆ ಮೊಟ್ಟೆಯನ್ನು ಇಡಿ ಇಡಿಯಾಗಿ ನುಂಗಿಬಿಡುತ್ತೆ ಅಂತ ಹೇಳುತ್ತೆ. ಇಡೀ ಇಡೀ ಮೊಟ್ಟೆ ನುಂಗಿದಮೇಲೆ ಹೊಟ್ಟೆ ತುಂಬಾ ಹಕ್ಕಿಮರಿಗಳು ಹುಟ್ಕೊಳತ್ತೆ ಅಂತ ಪುಟಾಣಿ ಮರಿ ಅಮ್ಮನ ತೋಳಲ್ಲಿ ಕುಣಿದಾಡುತ್ತದೆಯೆಂದು ಕವಿ ಬಣ್ಣಿಸುವಾಗ ಕೇಕೆ ಹಾಕುತ್ತಾ ನೆಲ ಬಿಟ್ಟು ಕುಣಿಯುವ ಮಕ್ಕಳ ಚಿತ್ರ ಕಣ್ಣಮುಂದೆ ಬರುತ್ತೆ. "ಇಲ್ಲ ಬಂಗಾರ, ಹಾವಿನ ಹುನ್ನಾರ ನಿನಗೆ ತಿಳಿಯದು. ಹಾವಿನ ಹೊಟ್ಟೆ ಸೇರಿದ ಮೇಲೆ ಹೇಳೋದಿನ್ನೇನು ಕಂದ? ಹಾವಿನ ಮೊಟ್ಟೆ ಆಗ್ಬಿಡುತ್ತೆ ಹಕ್ಕಿ ಮೊಟ್ಟೆನೂ" ಅಂತ

ಹೇಳುವಲ್ಲಿ ದುಷ್ಟರ ಸಂಗದ ಸ್ಥೂಲ ಪರಿಚಯವನ್ನು ಮರಿಗೆ ಮಾಡಿಸುತ್ತದೆ. ತಾಯಿಯ ಮಡಿಲಲ್ಲಿ ಬೆಚ್ಚಗೆ ಮಲಗಿ ಕಣ್ಣು ಪಿಳುಕಿಸಿ ಕತೆ ಕೇಳುವ ಮಕ್ಕಳ ನೆನಪಾಗುವುದು ಖಂಡಿತ.

೭. ಏನನ್ಯಾಯ ಮಾಡಿದೆಯಮ್ಮಾ ಸರಿಯೇನಮ್ಮಾ ತಾಯಿ?

ಅನ್ನುತ್ತಾ ಪುಟಾಣಿ ತೆಂಗಿನಕಾಯಿ ದೇವಿಗೇ ಪ್ರಶ್ನೆ ಮಾಡುವ ನ್ಯಾಯ ಅನ್ಯಾಯಗಳ ವಿಮರ್ಶೆಯ ಹಾಡು ನಗು ತರಿಸುತ್ತದೆ. ಹುಡುಗರಿಗೆಲ್ಲಾ ಚಂದದ ಕ್ರಾಪು, ಹುಡುಗಿಯರಿಗೋ ಜಡೆಗಳು, "ಎಣ್ಣೆಯ ಹಚ್ಚಿ ಬಾಚಲುಬಹುದು ಮಧ್ಯಕೆ ಬೈತಲೆ ತೆಗೆದು ಜಡೆಗಳ ಹಾಕಿ ಮಲ್ಲಿಗೆ ದಂಡೆ ಮುಡಿದು ನಲಿಯಲುಬಹುದು". ಅಲೆಅಲೆಯಾಗಿ ಕೂದಲು ಬಿಚ್ಚಿಕೊಂಡು ಮೆರೆಯುವ ಅವರ ಗೆಲುವಿಗೆ ಪುಟಾಣಿ ತೆಂಗಿನಕಾಯಿಗೆ ಬೇಸರ. ''ಆ ಮಕ್ಕಳಿಗೆ ನಾಲ್ಕು ಜಡೆಗಳ ಕೊಟ್ಟು ನನಗೆ ಮಾತ್ರ ತುಂಡಾಭಟ್ಟರ ಜುಟ್ಟು ಕೊಟ್ಟೆಯಲ್ಲೇ'' ಅಂತ ದೇವಿಯನ್ನು ಮಾರ್ಮಿಕವಾಗಿ ಕೇಳುತ್ತದೆ.

೮. ಬಾನಿನಲ್ಲಿ ತುಳುಕಾಡಿದೆ ಹಂಸ, ಅಲ್ಲವೇನೋ ಅದು ತಾಯೆನಗೆ,
ಕಿರೀಟವಾಗಿದೆ ಕಾಮನಬಿಲ್ಲು ಅಮ್ಮನ ತುರುಬಿನ ಹೂಹಾಗೆ.

ಇದೊಂದು ಜಗದ ಕವಿಯ ನಿತ್ಯನೂತನವಾದ ಹಾಡು. ಇಂತಹ ಸುಂದರ ಕವಿಕಲ್ಪನೆಗೆ ಮನಸ್ಸು ಸೋತುಹೋಗುವುದು. ಹರಿಯುವ ನದಿಯ ಅಲೆಗಳು ಅಮ್ಮನ ಹರಡಿದ ಜಡೆಯಂತೆ ಕಂಡರೆ ಎಲ್ಲೆಲ್ಲೂ ತಾಯಿಯ ಸೊಬಗನ್ನು ಕಾಣುವವನಿಗೆ ಮೋಡವನ್ನು ಕಾಡುವ ಬೆಟ್ಟವು ಕೂಸ ಮಲಗಿಸುವ ತೊಡೆಯಂತೆ ಕಾಣುತ್ತದೆ. ಪೂರ್ವದ ಕೆಂಪಾದ ಸೂರ್ಯ ಅಮ್ಮನ ಮೊಗದ ಕುಂಕುಮದ ಬೊಟ್ಟು ಅನ್ನುವ ಕವಿಗೆ ಕಿಟಕಿಯಲ್ಲಿ ಇಣುಕಿದ ಸೂರ್ಯನ ಕಿರಣವು ಅಮ್ಮನಿಗೆ ಬಣ್ಣದ ನೆರಳಂತೆ.. ಮನೆಯಂಗಳವೇ ಇಡೀ ಜಗತ್ತಾಗಿರುವ ಕೂಸಿಗೆ ಅಮ್ಮನೇ ಸರ್ವಸ್ವ.

ಎಚ್ಚೆಸ್ವಿಯವರ ಕವನಗಳು ಬರೀ ಕವನಗಳಲ್ಲ, ಮಕ್ಕಳು ಇಷ್ಟಪಡುವ ಕಥಾನಕಗಳು. ಅದಕ್ಕೂ ಮಿಗಿಲಾಗಿ ಕಣ್ಣಿಗೆ ಕಟ್ಟುವಂತಿರುವ ಚಿತ್ರಕವನಗಳು.

೯. ನಮ್ಮೂರ ಪುಟಾಣಿ ಬಾ ನಮ್ಕೇರಿ ಕಟ್ಟಾಣಿ ಬಾ

"ಚಿಣ್ಣಿಕೋಲು, ಬಣ್ಣ, ಬಾಲು ಎಲ್ಲಾ ಕೊಡ್ತೇವೆ. ಸಿಟ್ಟು, ಗಿಟ್ಟು ಬಿಟ್ಟು ಬಾ ಕ್ರಿಕೆಟ್ ಆಡೋಣ, ನೀನೇ ಗೆಲ್ಲು ನಮ್ಗೇನಿಲ್ಲ, ಗೋಡ್ ಪ್ರೊಮಿಸ್ಸು ನೀನೆ ನಮ್ಮ ಮಿಸ್ಸು ಬಾಮ್ಮಾ ಮುದ್ದುಮರಿ" ಅಂತ ಕೇರಿಯ ಪುಟಾಣಿಯನ್ನು ಮುದ್ದಿನ ಮುತ್ತು ಸುರಿಸಿ ಆಟಕ್ಕೆ ಕರೆಯುವ ಮನೋಹರ ದೃಶ್ಯ ಕಣ್ಣಿಗೆ ಕಟ್ಟುತ್ತದೆ. ಕಣ್ಣುಗಳನ್ನು ಉಜ್ಜುತ್ತಾ, ತಪ್ಪಾಗಿ ಪುಟ್ಟ ಪುಟ್ಟ ಹೆಜ್ಜೆಯಿಟ್ಟುಕೊಂಡು ಚಿಣ್ಣರನ್ನು ಸೇರಲು ಓಡಿಬರುತ್ತಿರುವ ಮಗುವಿನ ನೆನಪಾಗುತ್ತದೆ.

೧೦. ಹೆಜ್ಜೆ ಮೇಲೆ ಹೆಜ್ಜೆ ಗಿಲಿ ಗಿಲಿ ಗೆಜ್ಜೆ.

ಡಾಕ್ಟರ್ ಎಚ್ಚೆಸ್ವಿ ಯವರೇ ಹೇಳುವಂತೆ ಮೂರ್ತಿ ಮಾಮನ ಈ ಹಾಡು, ಅಶ್ವಥ್ ಅಂಕಲ್ ಸಂಗೀತ ಕನ್ನಡ್ ಮಕ್ಳ್ ನೆಲ್ಲ ಸೇರ್ಸಿ ಕುಣಿಸೋ ಗೆಜ್ಜೆ ಹಾಡು ನಮ್ಮನ್ನು ಕುಣಿಯುವಂತೆ ಮಾಡುತ್ತದೆ.

"ಮಳೆ ನಿಂತರೂ ಮರದ ನೀರು ನಿಲ್ಲಲ್ಲ" ಎಂಬಂತೆ ಮಕ್ಕಳ ಕವಿ ಡಾಕ್ಟರ್ ಎಚ್ಚೆಸ್ವಿಯವರ ಗೀತೆಗಳನ್ನು ಅಶ್ವಥ್ರವರ ಸಂಗೀತ ನಿರ್ದೇಶನದಲ್ಲಿ ಶ್ರೀಮತಿ ರತ್ನಮಾಲಾ ಪ್ರಕಾಶ್, ಬಿ.ಆರ್.ಛಾಯಾ ಹಾಗೂ ಮಾಲತಿ ಶರ್ಮರವರ ದನಿಗಳಲ್ಲಿ ಕೇಳಿದರೆ ಹಾಡಿನ ಗುಂಗಿನ ನಶೆ ನಮ್ಮನ್ನು ಬಿಡದೇ ಆವರಿಸಿಯೇ ಇರುತ್ತದೆ.

***

"ಹಕ್ಕಿ ಮತ್ತು ನಳ"

– ಡಾ. ಜೆ.ಎನ್.ಜಗನ್ನಾಥ್

ಕನ್ನಡ ಕಾವ್ಯ ಲೋಕಕ್ಕೆ ಹಾಗೂ ಆತ್ಮಗೀತೆಗಳಂತಿರುವ ಭಾವಗೀತೆಗಳನ್ನು ಆಪ್ತವಾಗಿ ಆಸ್ವಾದಿಸುವ ಮನಗಳಿಗೆ ಎಚ್.ಎಸ್. ವೆಂಕಟೇಶಮೂರ್ತಿ ಚಿರಪರಿಚಿತರು.

ಶತಶತಮಾನಗಳ ಹತಾಶೆ, ಕಂಬನಿ, ಕ್ರೋಧ, ತಳಮಳಗಳ ಹೊತ್ತ ಜೀವ ಯಾವಾಗ ಬೇಕಾದರೂ ಸಿಡಿಯಬಹುದು, 'ಹೆಸರಿರದ ಹಕ್ಕಿ'ಯಂತೆ.

'ಅದರ ಉಸಿರಲ್ಲಿ ಅದರದ್ದೇ ಸ್ವಂತ ಶತಮಾನಗಳ ಹತಾಶೆ' ಅದರ ಉಸಿರು ಬಿಸಿಯಾಗಿ ಯಾವಾಗ ಬೇಕಾದರೂ ಅದು ಸಿಡಿಯಬಹುದು. ನಮ್ಮ ಚರಿತ್ರೆಯಲ್ಲಿ ಬರುವ ತಮ್ಮದೇ ಆದ ಸ್ವಂತಿಕೆಯ ಸಾಮ್ರಾಜ್ಯ ಕಟ್ಟಿಕೊಂಡು ಬೀಗಿದವರನ್ನೆಲ್ಲಾ ಕಾಲವೆಂಬ ಹಕ್ಕಿ ಹೊಡೆದುರುಳಿಸಿಲ್ಲವೆ?

ಹಕ್ಕಿ ಎಂದಾಗ ಹೆಸರಿರದ ಹಕ್ಕಿ ಈ ವಿಚಾರವನ್ನು ಧ್ವನಿಸುತ್ತದೆ.

ಹೊರಗೆ ಹುಲ್ಬಯಲಲ್ಲಿ ಇಳಿದವು ಬೆಳ್ಳಕ್ಕಿ ಎಂದು 'ಹಕ್ಕಿ ಮತ್ತು ನಳ' ಕವನ ಪ್ರಾರಂಭವಾಗುತ್ತದೆ. ಬೆಳ್ಳಕ್ಕಿ ಎಂದಾಗ ಕುವೆಂಪುರವರ ದೇವರು ರುಜು ಮಾಡಿದನು ಕವನ ನೆನಪಾಗುತ್ತದೆ. ತೇಲುತ ಬರಲ್ಕೆ ಬಲಾಕ ಪಂತಿ ಪಂಕ್ತೀ ಎನ್ನುವ ಕವಿವಾಣಿ. ಅಂತೆಯೇ ಸುಬ್ಬಣ್ಣ ರಂಗನಾಥ ಎಕ್ಕುಂಡಿ ಸಮುದ್ರ ಮತ್ತು ಬೆಳ್ಳಕ್ಕಿ ಪ್ರೀತಿಸುವ ರೀತಿ ನೆನಪಾಗುತ್ತದೆ ಬೆಳ್ಳಕ್ಕಿಯು ಅಪಾರದಲ್ಲಿ ಹಾರುವಾಗ ಒಮ್ಮೆ ಮುತ್ತಿನ ಹಾರದಂತೆ, ಒಮ್ಮೆ ಮಲ್ಲಿಗೆಯ ಹಾರದಂತೆ, ಮತ್ತೊಮ್ಮೆ ಬೆಳಕಿನ ಸರಪಳಿಯಂತೆ ಹತ್ತು ಹಲವು ಪಾತ್ರ ಸೃಷ್ಟಿಯ ಮೂಕ ವೀಕ್ಷಕರಾಗುತ್ತಾರೆ. ಎಕ್ಕುಂಡಿ ಅವರ ಕಾವ್ಯಕ್ಕೆ ಬೆಳ್ಳಕ್ಕಿಯ ರೆಕ್ಕೆಗಳಿವೆ. ಅಂತೆಯೇ ವೆಂಕಟೇಶಮೂರ್ತಿಗಳು ತಮ್ಮ 'ಹಕ್ಕಿ ಮತ್ತು ನಳ' ಕವನದಲ್ಲಿ 'ರೆಕ್ಕೆ ಮಡಿಸಿ ಬಿಡಿಸಿ ಮಾಡುತ್ತಾ ನೆಲಕ್ಕೆ ಇಳಿಯುವ ವಿಧಾನ ಚಂದವೋ ಚಂದ' ಎನ್ನುತ್ತಾರೆ.

ನಳನು ಹಂಸದ ಸಹಾಯದಿಂದ ರಾಜ ಭೀಮನ ಮಗಳು ದಮಯಂತಿಯನ್ನು ಮದುವೆಯಾಗುತ್ತಾನೆ. ತಮ್ಮನೊಡನೆ ಜೂಜಾಡಿ ರಾಜ್ಯ ಕಳೆದುಕೊಂಡು ಕಾಡು ಸೇರುತ್ತಾನೆ.

'ಬೆಳ್ಳಕ್ಕಿ ಇಳಿದರೆ ಚುಕ್ಕಿ ಕೂಡಿಸುವಷ್ಟು ಬಾಕಿ ಮೆಲ್ಲಗೆ ಬಿಚ್ಚುತ್ತಾನೆ ನಳ ಉಟ್ಟಿದ್ದ ಒಂದೇ ಬಟ್ಟೆ, ಮುಂಜಾವಿನ ಚಳಿ ಮತ್ತು ನಾಚಿಕೆಗೆ ಮೈಯಲ್ಲ ಮುಳ್ಳು'. ಅಸಹಾಯಕ ಆರ್ಥಿಕ ಸ್ಥಿತಿಯ ನಳ ಬೆತ್ತಲೆ ನಿಂತ ದುಃಸ್ಥಿತಿಯಿಂದ ಮೈಯಲ್ಲ ಮುಳ್ಳು ಎಂದು ಕವಿಯ ಅನಿಸಿಕೆ.

'ಹಕ್ಕಿ ಹಿಡಿದು ಮಾರಿದರೆ ಹುಟ್ಟಿದರೂ ಹುಟ್ಟಬಹುದು ಹೊಟ್ಟೆಗೆ ಹಿಟ್ಟು' ಎಂಬ ಸಾಲುಗಳು, ನಳ ಮಹಾರಾಜನ ವಸ್ತು ಸ್ಥಿತಿ ಎಷ್ಟು ಹದವಾಗಿ ತೋರಿದೆ. ನಿಸ್ಸಹಾಯಕ ಸ್ಥಿತಿಯಲ್ಲಿಯೂ ಅರಿವೆಯ ಅರಿವಿಲ್ಲದೆ ಮಡದಿಯನ್ನು ನೋಡಿಕೊಳ್ಳುವ ನೆವದಿ ನಡೆವ ಹಕ್ಕಿ ಹಿಡಿಯೋ ವಸ್ತ್ರದ ಪ್ರಯತ್ನ ನಳನ ಧೀಮಂತ ಪಾತ್ರವನ್ನು ತೋರುತ್ತದೆ.


'ಹಾರಿದವು ಹಕ್ಕಿ ಬಟ್ಟೆಯ ಸಮೇತ ಆಕಾಶಕ್ಕೆ' ಎನ್ನುವ ಚಿತ್ರಣ ಮನಕಲಕುವಂತಾಗುತ್ತದೆ. ಕವಿಯ ಸೃಜನಶೀಲತೆಯ ಮೂಲ ಧ್ಯಾನದ ಅರಿವಾಗುತ್ತದೆ. ಅಪೂರ್ವ ಅನುಭವದ ಕೊಳದಲಿ ಮಿಂದು ಎದ್ದ ಪದಗಳ ಸೋಪಾನ ಮತ್ತು ಭಾವದಲೆಗಳನ್ನು ಹೊದ್ದುಕೊಂಡು ಅರ್ಥಗಳ ಸ್ಫುರಣ ಕಾಣುತ್ತದೆ. 'ಬಿಸಾಕಿ ಕೇವಲ ನೆರಳ ನೆಲಕ್ಕೆ ಹಂಬಲ ಮತ್ತು ಹಳಹಳಿಕೆಗಳ ನೆರಳು ನಮ್ಮ ಮೇಲೆ ಬೀಳುವ ಕ್ಷಣವನ್ನು ಕವಿಯು 'ಪೊದೆಯ ಹಿಂದೆ ಮೆಲ್ಲಮೆಲ್ಲಗೆ ಸರಿಯುವ ನಳನ ಹೊಂಬಣ್ಣದ ಶರೀರ ಕಾಮನಬಿಲ್ಲು' ಎಂದು ಚಿತ್ರಿಸುವ ಕವಿಯ ವರ್ಣನೆ, ಪದ ಲಾಲಿತ್ಯ, ಕವಿಯ ಮೇಲೆ ಗೌರವ ಮೂಡಿಸುತ್ತದೆ.

***

ಡಾ. ಎಚ್ಚೆಸ್ವಿಯವರ ಪುಸ್ತಕದ ಬಗ್ಗೆ

" ನದೀತೀರದಲ್ಲಿ "

- ಶೀಲಾ ಅರಕಲಗೂಡು



ಕನ್ನಡದ ಹಿರಿಯ ಕವಿಯಾಗಿ, ಜನಮಾನಸದಲ್ಲಿ ತಮ್ಮ ಸ್ಥಾನವನ್ನು ದೃಢೀಕರಿಸಿ, ಇತ್ತೀಚೆಗಷ್ಟೇ ಪ್ರಪಂಚವನ್ನು ತೊರೆದ, ನಮ್ಮೆಲ್ಲರ ನೆಚ್ಚಿನ ಡಾ. ಎಚ್.ಎಸ್.ವೆಂಕಟೇಶ ಮೂರ್ತಿಯವರ ಅನೇಕ ಕೃತಿಗಳಲ್ಲಿ ಒಂದಾದ 'ನದೀತೀರದಲ್ಲಿ' ಎಂಬ ಕವನ ಸಂಕಲನದ ಬಗ್ಗೆ ಒಂದೆರಡು ಮಾತುಗಳನ್ನು ಬರೆಯಲು, ಆಡಲು ಅವಕಾಶ ದಕ್ಕಿರುವುದು ನನ್ನ ಭಾಗ್ಯವೇ ಸರಿ. ಈ ಅವಕಾಶದಿಂದಾಗಿ ಈ ಪುಸ್ತಕದ ಸ್ಥೂಲ ಪರಿಚಯ ಮಾಡಿಕೊಡುವುದರ ಮೂಲಕ ಡಾ. ಎಚ್ಚೆಸ್ವಿ ಅವರನ್ನು ಮತ್ತಷ್ಟು ಅರಿಯುವ ಪ್ರಯತ್ನ ಮಾಡುತ್ತಿದ್ದೇನೆ, ತನ್ಮೂಲಕ ಅವರಿಗೆ ಹೃತ್ಪೂರ್ವಕ ನಮನವನ್ನು ಸಲ್ಲಿಸುತ್ತಿದ್ದೇನೆ.

'ನದೀತೀರದಲ್ಲಿ' ಪುಸ್ತಕ ತನ್ನ ಮೊದಲ ಮುದ್ರಣವನ್ನು ೨೦೦೪ರಲ್ಲಿ ಕಂಡಿದೆ. ಅಂಕಿತ ಪುಸ್ತಕದವರು ಇದರ ಪ್ರಕಾಶಕರು. ಕಲೆ ಸೃಜನ್ ಅವರದು. ಹಿಂಬದಿಯ ಸುಂದರ ಭಾವಚಿತ್ರ ಬಿ.ಆರ್.ಶಂಕರ್ ಮಾಡಿದ್ದು, ಅಕ್ಷರ ಜೋಡಣೆ ಶ್ರೀಧರ್ ಅವರಿಂದಾಗಿದೆ. ಬೆನ್ನುಡಿಯನ್ನು ಖ್ಯಾತ ಕವಿ ಚನ್ನವೀರ ಕಣವಿಯವರು ಬರೆದಿದ್ದಾರೆ. ಇದು ೧೦೪ ಪುಟಗಳ ಪುಟ್ಟ ಪುಸ್ತಕ. ಬೆಲೆ ರೂ.೬೦/-.

ಡಾ.ಎಚ್ಚೆಸ್ವಿಯವರು ತಮ್ಮ ೬೦ನೇ ವಯಸ್ಸಿನಲ್ಲಿ ಹೊರತಂದ ಈ ಪುಸ್ತಕದಲ್ಲಿ ನದೀ ಎಂಬ ತಮ್ಮ ಬದುಕಿನ ತೀರದಲ್ಲಿ ಕುಳಿತು ಆಲೋಚಿಸಿ, ಮಂಥಿಸಿ, ಹೊರಸೂಸಿದ ಭಾವನೆಗಳನ್ನು ಕವನಗಳನ್ನಾಗಿ ಬರೆದಂತಿದೆ. ತಮ್ಮ ಬದುಕನ್ನು ಅದೆಷ್ಟು ಹತ್ತಿರದಿಂದ ನೋಡಿರಬಹುದು ಎಂದರೆ ಶೀರ್ಷಿಕೆಯಾದ ನದೀ ತೀರದಲ್ಲಿ ಎಂಬ ಎರಡು ಪದಗಳನ್ನು ಸೇರಿಸಿ ಒಂದೇ ಪದದಂತೆ ಬರೆದಿದ್ದಾರೆ. ಮುನ್ನುಡಿಯನ್ನು ಅವರು W.H.Auden ಅವರ ಒಂದು ಹೇಳಿಕೆಯ ಮೂಲಕ ಪ್ರಾರಂಭಿಸುತ್ತಾರೆ. ಅದು ಹೀಗಿದೆ,

In the deserts of the heart
Let the healing foundation start

ತಮ್ಮ ಕವನಗಳ ಮೂಲಕ ಎಚ್ಚೆಸ್ವಿಯವರು ಮರಳುಗಾಡಿನಂತಹ ನಮ್ಮೆಲ್ಲ ಓದುಗರ ಎದೆಯಲ್ಲಿ ಭಾವಕಾರಂಜಿಯನ್ನು ಚಿಮ್ಮಿಸುತ್ತ ಒಂದು ಹೊಸ ಭಾವಲೋಕವನ್ನೇ ಸೃಷ್ಟಿಸುತ್ತಾರೆ. ನದೀತೀರದಲ್ಲಿ ಎನ್ನುವ ಶೀರ್ಷಿಕೆಯೇ ಅತ್ಯಾಕರ್ಷಕವಾಗಿದ್ದು, ನಮ್ಮಲ್ಲಿ ಕವನಗಳನ್ನೋದಲು ಆಸಕ್ತಿ ಕೆರಳಿಸುತ್ತದೆ. ಎಚ್ಚೆಸ್ವಿಯವರು ತಮ್ಮ ಕವನಗಳ ಮೂಲಕ ನಾವು ಬದುಕನ್ನು ನೋಡಬೇಕಾದ ರೀತಿಯನ್ನು ಪರೋಕ್ಷವಾಗಿ ತಿಳಿಸಿದ್ದಾರೆ ಎನಿಸುತ್ತದೆ.

'ನದೀತೀರದಲ್ಲಿ' ಎನ್ನುವ ಈ ಕವನ ಸಂಕಲನದಲ್ಲಿ ಒಟ್ಟು ೪೬ ಕವನಗಳಿದ್ದು, ಕಡೆಯಲ್ಲಿ ಎರಡು ಅನುಬಂಧಗಳೂ ಇವೆ. ಮೊದಲನೆಯ ಅನುಬಂಧದಲ್ಲಿ ಕವನಗಳನ್ನು ಅರ್ಥ ಮಾಡಿಕೊಳ್ಳಲು ಸಹಾಯಕವಾಗುವ ಟಿಪ್ಪಣಿಗಳಿವೆ. ಅವುಗಳ ಮೂಲಕ ನಮಗೆ ಕವನಗಳ ಅಂತಃಸತ್ವ ಹೆಚ್ಚು ಸ್ಫುಟವಾಗಿ ಕಂಡುಬರುತ್ತದೆ. ಎರಡನೆಯ ಅನುಬಂಧದಲ್ಲಿ ಅವರ ೧೫

ಕವಿತಾ ಸಂಗ್ರಹಗಳ ಹೆಸರುಗಳಿವೆ. ೪೬ ಕವನಗಳಲ್ಲಿ ೧೧ ಕವನಗಳನ್ನು ಹೊರತುಪಡಿಸಿ, ಉಳಿದ ೩೫ಕ್ಕೂ ಸೃಜನ್ ಅವರ ಚಿತ್ರಗಳಿವೆ.
ಕವನ ಸಂಕಲನದಲ್ಲಿನ ಎಲ್ಲ ಕವನಗಳೂ ವಿಶಿಷ್ಟವಾಗಿದ್ದು, ಬೇರೆಬೇರೆ ವಿಚಾರಗಳನ್ನು ವಿಭಿನ್ನ ದೃಷ್ಟಿಯಿಂದ ಪ್ರತಿಪಾದಿಸುತ್ತವೆ ಹಾಗೂ ನಮ್ಮನ್ನು ಬೆರಗುಗೊಳಿಸುತ್ತವೆ. ಸಮಯದ ಅಭಾವದಿಂದಾಗಿ ಕೇವಲ ಮೂರು ನಾಲ್ಕು ಕವನಗಳನ್ನು ಉದಾಹರಿಸುತ್ತಾ ನನ್ನ ಈ ಮಾತನ್ನು ದೃಢೀಕರಿಸಲು ಇಚ್ಛಿಸುತ್ತೇನೆ.

'ಕಂಬನಿಲಿಂಗ' ಎನ್ನುವುದು ಮೊದಲ ಕವನ. ಇದರಲ್ಲಿ ಹೊಸ ಯುಗಕ್ಕೆ ಆರಾಧ್ಯವೆನಿಸುವ ದೈವ ಸ್ವರೂಪದ ಬಗೆಗಿನ ಚಿಂತನೆ ಇದೆ. ಕವಿ ಆಯುಧಗಳನ್ನು ಹಿಡಿದ ದೇವರುಗಳಿಗಿಂತ ಗಾನ ಮಾಡುತ್ತಾ, ವೇಣು ನುಡಿಸುತ್ತಾ, ಸಂಜೀವಿನಿ ಪರ್ವತವನ್ನೆತ್ತುವಂತಹ ದೇವರುಗಳನ್ನು ಮನೆಯೊಳಗೆ ಕರೆತರಲು ಇಚ್ಛಿಸುತ್ತಾರೆ, ಶಸ್ತ್ರಗಳನ್ನು ಹೊತ್ತ ದೇವರುಗಳನ್ನಲ್ಲ.. ಕವನವನ್ನು ಜೋರಾಗಿ ಓದಿಕೊಂಡಾಗ ಭಾವಸ್ಫುರಣೆ ಹಾಗೂ ಅರ್ಥಸ್ಫುರಣೆ ಮತ್ತಷ್ಟು ಸ್ಫುಟವಾಗುತ್ತದೆ.

'ಪಂಚವಾಳ' ಎಂಬ ಎರಡನೆಯ ಕವಿತೆ ಕೌಟುಂಬಿಕ ಚೌಕಟ್ಟಿನ ಕವಿತೆ. ಕುಟುಂಬ ವ್ಯವಸ್ಥೆ ಪರಿಪೂರ್ಣತೆ ಕಾಣುವುದು ಕನಸಾದರೂ, ಆ ದಿಕ್ಕಿನಲ್ಲಿ ಚಲಿಸುವ ಅವಿರತ ಹೋರಾಟವೇ ಬದುಕಿನ ಪರಮಗಂತವ್ಯ ಎಂಬುದನ್ನು ತಮ್ಮ ಸಾಲುಗಳ ಮೂಲಕ ತಿಳಿಸುತ್ತಾರೆ.

ಪ್ರೀತಿ ತುಂಬಿರಬೇಕು ಕಣ್ಣಲ್ಲಿ. ಪಾತ್ರೆಯಲ್ಲ-
ರ್ಧದಷ್ಟೇ ಇರಲಿ ಮೇಲೋಗರ!

ಎನ್ನುವ ಮಾತಿನಲ್ಲಿ, ಅಡುಗೆ ಮಾಡುವ ಮನೆಯಾಕೆ ಯಾವ ಭಾವದಲ್ಲಿ ಅಡುಗೆ ಮಾಡಬೇಕೆಂಬುದನ್ನು ತಿಳಿಸುತ್ತಾರೆ. ಬಡಿಸುವವರನ್ನು ಕಂಡಾಗ ಅವರು,

ಆಕೆ ಹೆಂಡತಿಯಲ್ಲ-ಮಗಳಲ್ಲ-ಸೊಸೆಯಲ್ಲ
ಸಾಕ್ಷಾತ್ತು ಹೊರನಾಡಿನನ್ನಪೂರ್ಣೆ!

ಎಂಬ ಭಾವವನ್ನು ವ್ಯಕ್ತಪಡಿಸುತ್ತಾರೆ. ಒಂದು ಸುಂದರವಾದ ಕೌಟುಂಬಿಕ ಚಿತ್ರವನ್ನು ಕಟ್ಟಿಕೊಡುತ್ತದೆ ಈ ಕವನ.

೨೩ನೆಯ ಕವನವಾದ 'ಉಡುಪಿ ಕೃಷ್ಣನ ಸ್ವಗತ್ತು' ಒಂದು ಪುಟ್ಟ ಕವನವಾದರೂ, ಮನಸ್ಸನ್ನು ಆವರಿಸಿಕೊಳ್ಳುವ ಸುಂದರ ಸುನೀತವಿದು. ಹದಿನಾಲ್ಕು ಸಾಲಿನ ಈ ಕವನದಲ್ಲಿ, ಕನಕನಂತಹ ಭಕ್ತ ಕೃಷ್ಣನಿಗಾಗಿ ಮೊರೆ ಇಟ್ಟಾಗ, ಶ್ರೀಕೃಷ್ಣ ಕರಗಿ ಗೋಡೆಯಲ್ಲಿ ಬಿರುಕು ಮೂಡಿಸಿ ದರ್ಶನ ನೀಡುತ್ತಾನೆ. ನಂತರ ಸಾವಿರಾರು ವರ್ಷಗಳು ಕಳೆದರೂ, ಕಿಂಡಿಯ ಮೂಲಕ ಸಹಸ್ರಾರು ಕೋಟಿ ಮುಖಗಳು ಕಂಡುಬಂದರೂ, ಮತ್ತೊಬ್ಬ ಕನಕ ಕಾಣದೆ ಕೊರಗುತ್ತಿದ್ದಾನೆ ಶ್ರೀಕೃಷ್ಣ. ಆತ ಹೇಳುವುದು ಹೀಗೆ-

"ನಾನಂತೂ ಶಬರಿಗಣ್ಣಲ್ಲಿ ಕಾದಿದ್ದೇನೆ ಈ ತನಕ ಮತ್ತೆ ಕಂಡೀತೆ ಕಂಡಿತೇನು ಅಂಥ ಮುಖ?!"

ಎಂತಹ ವಿಭಿನ್ನ ದೃಷ್ಟಿಯ ಕವನವನ್ನು ರಚಿಸಿದ್ದಾರೆ ಡಾಕ್ಟರ್ ಹೆಚ್ ಎಸ್ ವಿ ಅವರು ಅಲ್ಲವೇ?

'ಅರುವತ್ತು ತುಂಬಿದ ಇರುಳು' ಎನ್ನುವ ಕವನದಲ್ಲಿ, ಕವಿ ದೇವರನ್ನು ಪ್ರಶ್ನೆ ಮಾಡಿದ ಬಗೆ ತಮಾಷೆಯಾಗಿದೆ. ತಮ್ಮ ಇಂದ್ರಿಯಗಳ ಶಕ್ತಿಯನ್ನು ಹಿಂದಕ್ಕೆ ಪಡೆದುದ್ದಕ್ಕೆ ಪ್ರತಿಯಾಗಿ ಮತ್ತೇನು ಕೊಟ್ಟೆ ಹೇಳಿ ಹೋಗೆಂದು ದೇವರನ್ನು ಕೇಳುತ್ತಾರೆ.

ಕಣ್ಣು ಮಂಕಾದ ಮೇಲೆ ತಾನೆ ನೋಡಿದ್ದು ನೀನು ನನ್ನ
ಕಿವಿಯು ಮಂದವಾದಾಗ ತಾನೆ ಕೇಳಿದ್ದು ನೀನು ನನ್ನ

ಕಣ್ಣೇ ಇಲ್ಲದೆ ಹೇಗೆ ನೋಡಿದೆ? ಕಿವಿಯೇ ಇಲ್ಲದೆ ಹೇಗೆ ಕೇಳಿದೆ?"
ಎಂದುತ್ತರಿಸಿದ ದೇವರನ್ನು ಮಹಾ ಕಿಲಾಡಿ ಎನ್ನುತ್ತಾರೆ ಎಚ್ಚೆಸ್ವಿಯವರು. ಹಾಸ್ಯದ ಲೇಪನ ಮಾಡಿದ ಆಧ್ಯಾತ್ಮಿಕ ಕವನವಿದು. ಸಂಕಲನದ ಕಡೆಯ ಕವನವಾದ 'ಸೃಜನಗೀತೆ' ಉಳಿದ ಕವನಗಳಿಗಿಂತ ದೀರ್ಘವಾಗಿದ್ದು, ೧೩ ಚರಣಗಳನ್ನು ಹೊಂದಿದೆ. ಸೃಷ್ಟಿಶೀಲತೆ, ಬದುಕಿನ ಜೀವಂತಿಕೆ ಮತ್ತು ಸಾತತ್ಯವನ್ನು ಕಾಯ್ದುಕೊಳ್ಳಲು ನಮಗೆ ದೊರೆತಿರುವುದು ಮಹತ್ವದ ಜೀವನ. ಇದು ಯೋಗವೆಂಬ ನಂಬಿಕೆಯ ತಳಹದಿಯ ಮೇಲೆ ಬದುಕನ್ನು ಕಟ್ಟಿಕೊಳ್ಳಬೇಕೆನ್ನುತ್ತದೆ ಈ ಕವನ.

ಹೀಗೆ, ಪ್ರತಿಯೊಂದು ಕವನವೂ ಮಧುರಾನುಭೂತಿ ನೀಡುತ್ತಾ, ಮತ್ತೆ ಮತ್ತೆ ಓದಿಸಿಕೊಳ್ಳುತ್ತವೆ. ಈ ಪುಸ್ತಕ ನನಗೊಂದು ನಿಧಿಯಂತೆ ಕಂಡು ಬಂದಿದೆ. ಎಲ್ಲರೂ ಓದಿ, ವಾಚಿಸಿ, ಅರ್ಥೈಸಿ ಆನಂದಿಸಲೇಬೇಕಾದ ಪುಸ್ತಕವಿದು.

***

ರೆಕ್ಕೆ ಇದ್ದರೆ ಸಾಕೆ...

-ಎಚ್.ಎಸ್. ವೆಂಕಟೇಶ ಮೂರ್ತಿ

ರೆಕ್ಕೆ ಇದ್ದರೆ ಸಾಕೆ? ಹಕ್ಕಿಗೆ ಬೇಕು ಬಾನು
ಬಯಲಲಿ ತೇಲುತ ತಾನು ಮ್ಯಾಲೆ ಹಾರೋಕೆ॥
ಕಲೊಂದಿದ್ದರೆ ಸಾಕೆ? ಚಿಗರೆಗೆ ಬೇಕು ಕಾನು
ಗಾಳಿಯ ಮೇಲೆ ತಾನು ಜಿಗಿದು ಓಡೋಕೆ

ಹೂ ಒಂದಿದ್ದರೆ ಸಾಕೆ, ಬ್ಯಾಡವೆ ಗಾಳಿ?
ನೀವೆ ಹೇಳಿ ಕಂಪ ಬೀರೋಕೆ
ಮುಖ ಒಂದಿದ್ದರೆ ಸಾಕೆ, ದುಂಬಿಯ ತಾವ
ಬ್ಯಾಡವೆ ಹೂವ? ಜೇನ ಹೀರೋಕೆ

ನೀರೊಂದಿದ್ದರೆ ಸಾಕೆ, ಬ್ಯಾಡವೆ ಹಳ್ಳ
ಬಲ್ಲವ ಬಲ್ಲ ತೊರೆಯು ಹರಿಯೋಕೆ
ಮೋಡ ಇದ್ದರೆ ಸಾಕೆ, ಬ್ಯಾಡವೆ ಭೂಮಿ?
ಹೇಳಿ ಸ್ವಾಮಿ ಮಳೆಯು ಸುರಿಯೋಕೆ

ಕಣ್ಣೊಂದಿದ್ದರೆ ಸಾಕೆ, ಬ್ಯಾಡವೆ ಮಂದೆ?
ಕಣ್ಣಿನ ಮುಂದೆ ನಿಮಗೆ ಕಾಣೋಕೆ
ಕೊರಳೊಂದಿದ್ದರೆ ಸಾಕೆ, ಬ್ಯಾಡವೆ ಹಾಡು?

***

ಡಾ.ಎಚ್ಚೆಸ್ವಿಯವರ ಕವಿತೆಯ ಬಗ್ಗೆ

' ಲೋಕದ ಕಣ್ಣಿಗೆ ರಾಧೆಯು ಕೂಡ '

- ರಾಧಿಕಾ ವಿ. ಗುಜ್ಜರ್

ಪ್ರಪಂಚದಾದ್ಯಂತ ಪ್ರೀತಿ ಎಂದರೆ ಒಬ್ಬರನ್ನೊಬ್ಬರು ಪಡೆಯುವುದು ಅಥವಾ ಕಳೆದುಕೊಳ್ಳುವುದಾಗಿದೆ. ಪ್ರೀತಿಸಿದವರು ಒಬ್ಬರನ್ನೊಬ್ಬರು ಬಿಟ್ಟಿರಲಾಗದೆ ಬೇರೆಯಾದ ಸಂದರ್ಭದಲ್ಲಿ ಆತ್ಮಹತ್ಯೆ ಮಾಡಿಕೊಂಡ ನಿದರ್ಶನಗಳಂತೂ ಹೇರಳ. ಇವೆಲ್ಲವುಗಳಿಗಿಂತಲೂ ಮಿಗಿಲಾದ ಪ್ರೇಮದ "ಅಮೂರ್ತ ಭಾವ" ವಿರುವುದನ್ನು ಅರಿತವರು ಬಹಳ ಕಡಿಮೆ. ಇದನ್ನು ಸಾವಿರಾರು ವರ್ಷಗಳ ಹಿಂದೆಯೇ ಕೃಷ್ಣ-ರಾಧೆಯರು ಭಾರತೀಯರಾದ ನಮಗೆ ಪರಿಚಯಿಸಿದ್ದಾರೆ. ಕೃಷ್ಣ-ರಾಧೆಯರ ಕುರಿತು ಅಂದಿನಿಂದಲೂ ಎಲ್ಲರೂ ಬರೆಯುತ್ತಲೇ ಇದ್ದಾರೆ. ನಾವು ಸಹ ಓದುತ್ತಲೇ ಇದ್ದೇವೆ ಮತ್ತು ಪ್ರೇಮದ ಆರಾಧನಾ ಭಾವದ ಆರಾಧಕರಾಗಿದ್ದೇವೆ.

ಹಾಗಾದರೆ ಕವನದಲ್ಲಿ ವಿಭಿನ್ನವಾಗಿ ಏನಿದೆ? ಮತ್ತೇನು ಹೊಸದನ್ನು ಹೊಸೆದಿದ್ದಾರೆ ಕವಿ? ಎಂದು ನೀವು ಪ್ರಶ್ನಿಸಬಹುದು. ಉತ್ತರವಾಗಿ ಸಿಗುವ ಇಡಿಯ ಭಾವಮಾಲೆಯೇ ಈ ಕವನ. ಕವನವು ಕೃಷ್ಣ-ರಾಧೆಯರ ಪ್ರೇಮದ ವಿವರಗಳನ್ನು ತಿರುವಿ ಹಾಕುವುದಿಲ್ಲ. ಬದಲಿಗೆ, ಇಂದಿಗೂ ಅವರಿಬ್ಬರೂ ಉಳಿಸಿಹೋಗಿರುವ ಪ್ರೇಮಾಮೃತವು ಹೇಗೆ ನಿತ್ಯ ನೂತನವಾಗಿ ಜಗದೆಲ್ಲೆಡೆ ಪ್ರವಹಿಸುತ್ತಿದೆ ಎಂಬುದನ್ನು ಮನದಟ್ಟು ಮಾಡುತ್ತದೆ. ದೈಹಿಕವಾಗಿ ಅದೆಂದೋ ಅಳಿದು ಹೋಗಿರುವವರು ಇಂದಿಗೂ ಹೇಗೆ ಜೀವಂತವಿದ್ದಾರೆ ಎಂಬುದನ್ನು ತೋರಿಸುತ್ತದೆ.

ಇಷ್ಟು ಹೇಳಿ "ಲೋಕದ ಕಣ್ಣಿಗೆ ರಾಧೆಯು ಕೂಡ ಎಲ್ಲರಂತೆ ಒಂದು ಹೆಣ್ಣು" ಕವನವನ್ನು ನನಗೆ ತಿಳಿದಷ್ಟರ ಮಟ್ಟಿಗೆ ವಿಶ್ಲೇಷಿಸುವ ಪ್ರಯತ್ನವನ್ನು ಮಾಡುತ್ತಿದ್ದೇನೆ.

ಕವನದ ಆರಂಭದ ಸಾಲು:

ಲೋಕದ ಕಣ್ಣಿಗೆ ರಾಧೆಯು ಕೂಡ ಎಲ್ಲರಂತೆ ಒಂದು ಹೆಣ್ಣು
ನನಗೋ ಆಕೆ ಕೃಷ್ಣನ ತೋರುವ ಪ್ರೀತಿಯು ನೀಡಿದ ಕಣ್ಣು

ಕೃಷ್ಣನನ್ನು ಭಗವಂತನೆಂದು ನಂಬಿರುವ ನಮಗೆ ರಾಧೆ ಒಬ್ಬ ಗೊಲ್ಲರ ಸಾಮಾನ್ಯ ಹೆಣ್ಣಾಗಿ ಕಾಣುತ್ತಾಳೆ. ಈ ಎಲ್ಲರಂತಿನ ಒಬ್ಬ ಹೆಣ್ಣು ನಮಗೆ ತನ್ನ ದೃಷ್ಟಿಕೋನದ ಮೂಲಕ ಕೃಷ್ಣನನ್ನು ಬೇರೊಂದು ಆಯಾಮದಲ್ಲಿ ಪರಿಚಯಿಸುತ್ತಾಳೆ. ಕರ್ತವ್ಯದ ಕರೆಗೆ ಓಗೊಟ್ಟು, ಬದುಕಿನ ಆದ್ಯತೆಯನ್ನು ಅನುಸರಿಸಿ ತನ್ನನ್ನು ತೊರೆದು ಹೊರಟ ಕೃಷ್ಣನ ವಿರಹದ ಸಂಕಟವನ್ನು ಅರಿತು; ತಾನು ಜೀವಿಸಿರುವವರೆಗೂ ಆತನನ್ನು ಪ್ರೀತಿಸುತ್ತಲೇ ಆತನ ನಿರ್ಗಮನವನ್ನು ಕ್ಷಮಿಸಿದ್ದಾಳೆ. ಪ್ರೇಮವನ್ನು ಹಿಂದಿಕ್ಕಿ ಬರಲು ಆಗ್ರಹಿಸುವ ಕಾರ್ಯವೊಂದು ಬದುಕಿನಲ್ಲಿ ಎದುರಾಗಿ ಕರೆದರೆ ಆಯ್ಕೆ ಸುಲಭವಲ್ಲ. ಹೀಗೆ ಲೋಕ ಕಲ್ಯಾಣಕ್ಕಾಗಿ ಹೊರಟ ಕೃಷ್ಣನಿಗೆ ತನ್ನ ಅಕ್ಷೀಣ ಪ್ರೀತಿಯ ಬುತ್ತಿಯನ್ನು ಮೀಸಲಾಗಿಟ್ಟವಳು ಆಕೆ. ತನ್ಮೂಲಕ ಆದ್ಯತೆಗಳ ಆಯ್ಕೆಯಲ್ಲಿ ಪ್ರಿಯಕರನಿಗೆ ಪ್ರಿಯೆಯು ನೀಡಬೇಕಾದ ಸ್ವಾತಂತ್ರವನ್ನು ತಿಳಿಸಿ ಹೇಳಿದ್ದಾಳೆ ಆಕೆ. ತೊರೆದು ಹೊರಟ ಕೃಷ್ಣನನ್ನು ನಾವಾರೂ ದ್ವೇಷಿಸದಂತೆ; ಆರಾಧನೆ ಮತ್ತು ವಿರಹವನ್ನೇ ಪ್ರೇಮದ ಉನ್ನತ ಭಾವವೆಂದು ಸಾರಿದ್ದಾಳೆ. ಪ್ರೇಮದ ಈ ಆಯಾಮವನ್ನು ತೋರುವ ರಾಧೆ ನಮಗೆ ಕೃಷ್ಣನನ್ನು ಪ್ರೀತಿಸುವ ಕಣ್ಣುಗಳನ್ನು ನೀಡಿದ್ದಾಳೆ ಎಂದಿದ್ದಾರೆ ಕವಿ.

ಮೊದಲ ಚರಣ:

ತಿಂಗಳ ರಾತ್ರಿ ತೊರೆಯ ಸಮೀಪ ಉರಿದರೆ ಯಾವುದೋ ದೀಪ
ಯಾರೋ ಮೋಹನ ಯಾವ ರಾಧೆಗೋ ಪಡುತಿರುವನು ಪರಿತಾಪ

ಹುಣ್ಣಿಮೆಯ ತಂಪು ರಾತ್ರಿಯಲ್ಲಿ, ತಂಪಾದ ತೊರೆಯ ಬಳಿ ಯಾವುದಾದರೂ ದೀಪ ಉರಿಯುತ್ತಿದ್ದರೆ, ಪ್ರೇಮಿಯೊಬ್ಬ ತನ್ನ ಪ್ರೇಮಿಕೆಗಾಗಿ ವಿರಹತಾಪದಿಂದ ಹಲುಬಿದರೆ ಅದು ಮೋಹನನೇ. ಬದುಕಿನಲ್ಲಿ ನಾವು ಎಲ್ಲವನ್ನೂ ನಮ್ಮವರಿಗಾಗಿ ಮಾಡುತ್ತಿರುತ್ತೇವೆ. ಪ್ರೀತಿ ಮಾತ್ರ ಕೇವಲ ನಮ್ಮ ಆಯ್ಕೆಯಾಗಿರುತ್ತದೆ. ಎಲ್ಲ ಸುಖಗಳ ನಡುವೆಯೂ ಪ್ರೀತಿಯನ್ನು ನೆನೆದು ವಿರಹದಲ್ಲುರಿಯುವ ಪ್ರತಿಯೊಬ್ಬರೂ ರಾಧೆಗಾಗಿ ಪರಿತಪಿಸುವ ಕೃಷ್ಣರೇ ಎನ್ನುತ್ತಾರೆ ಕವಿ.

ಎರಡನೆಯ ಚರಣ:

ನಾನು ನನ್ನದು ನನ್ನವರೆನ್ನುವ ಹಲವು ತೊಡಕುಗಳ ಮೀರಿ
ಧಾವಿಸಿ ಸೇರಲು ಬೃಂದಾವನವ ರಾಧೆ ತೋರುವಳು ದಾರಿ

ಕೃಷ್ಣನ ಬೃಂದಾವನವನ್ನು ಸೇರುವುದು ಸುಲಭವಲ್ಲ. ಜೀವಕ್ಕೆ ಅಂಟಿಕೊಂಡ ಪ್ರೀತಿಯೊಡನೆ ಜೀವವನ್ನೇ ತೊರೆದು ಹೊರಟಾಗಲೂ, ಜೀವ ತೊರೆದುದೇ ಅಂತರಾತ್ಮದಿಂದ ಕೇವಲ ನಿನ್ನ ಸೇರಲು ಎಂಬ ದಾರಿಯನ್ನು ನಡೆದು ತೋರಿದವಳು ರಾಧೆ ಎನ್ನುತ್ತಾರೆ ಕವಿ. ಬೃಂದಾವನವೆಂಬ ಬದುಕಿನ ಅಂತಿಮ ಸತ್ಯವನ್ನು ಸೇರಲು ನಾನು, ನನ್ನದು, ನನ್ನವರೆನ್ನುವ ಬದುಕಿನ ಹಲವು ತೊಡಕುಗಳನ್ನು ಮೀರಬೇಕು. ಇವನ್ನು ಮೀರುವುದು ನಿಧಾನವಾದಷ್ಟೂ ಬೃಂದಾವನದ ಮಾರ್ಗ ದೂರ. ಧಾವಿಸಿ ಸೇರುವುದೊಂದೇ ದಾರಿ. ಅದು ರಾಧೆಯು ತೋರಿದ ದಾರಿ.

ಮೂರನೆಯ/ಕೊನೆಯ ಚರಣ:

ಮಹಾ ಪ್ರವಾಹ
ಮಹಾ ಪ್ರವಾಹ ತಡೆಯುವರಿಲ್ಲ
ಪಾತ್ರವಿರದ ತೊರೆ ಪ್ರೀತಿ
ತೊರೆದರು ತನ್ನ ತೊರೆಯದು ಪ್ರಿಯನ,
ರಾಧೆಯ ಪ್ರೀತಿಯ ರೀತಿ
ಇದು ರಾಧೆಯ ಪ್ರೀತಿಯ ರೀತಿ

ಈ ನಿರಂತರ ಹರಿವ ಪ್ರೀತಿಗೆ ಯಾವುದೇ ಪಾತ್ರವಿಲ್ಲ. ಹೀಗೆಯೇ ಹರಿಯಬೇಕೆಂಬ ದಾರಿಯ ಗುರುತಿಸುವವರಾಗಲೀ, ಪಾತ್ರ ಅಥವಾ ದಡವನ್ನು ಕಟ್ಟುವವರಾಗಲಿ ಇಲ್ಲ. ಇದು ಎಲ್ಲರಲ್ಲೂ, ಎಲ್ಲ ಪ್ರೀತಿಸುವ ಎದೆಗಳ ಪಾತ್ರದಲ್ಲೂ ಹರಿವ ತೊರೆ. ಮಹಾ ಪ್ರವಾಹವಿದು. ಪ್ರತೀ ಜೀವವನ್ನು ತಟ್ಟುವ, ತನ್ಮೂಲಕ ತನ್ನೊಳಗೆ ಸೆಳೆದುಕೊಳ್ಳುವ ಮಹಾಪ್ರವಾಹ. ಪ್ರೀತಿಸುವುದನ್ನು ಮರೆಮಾಚಿ ಆತ್ಮವಂಚನೆ ಮಾಡಿಕೊಳ್ಳದೆ, ಅಷ್ಟೂ ಪ್ರೀತಿಯನ್ನು ಪ್ರೀತಿಸುವವರ ಮೇಲೆ ಧಾರೆಯಾಗಿ ಸುರಿದು ಖಾಲಿಯಾಗುವ ಪಾತ್ರವೇ ರಾಧೆ. ಕಾಯವನ್ನು ತೊರೆದು ಹೊರಟರೂ ಪ್ರೀತಿಸುವವನಲ್ಲಿ ತನ್ನ ಪ್ರೀತಿಯು ಮನೆಮಾಡಿ ನೆಲಸುವಂತೆ ಮಾಡಿರುವುದೇ ರಾಧೆಯ ಪ್ರೀತಿಯ ರೀತಿ ಎಂದಿದ್ದಾರೆ ಕವಿ.

ಅತ್ಯಂತ ಪ್ರಶಾಂತ ಸಾಗರದ ಆಳವೆಂದರೆ ಅದು ಅತ್ಯಂತ ವಿರಳಾತಿ ವಿರಳ ಮುತ್ತು, ಹವಳಗಳ ಆಗರ. ಅಂತೆಯೇ ಎಚ್ಎಸ್ ವಿ ಅವರ ಈ ಕವನ. ಭಾವನೆಗಳ ಗುಣಮಟ್ಟಕ್ಕೊಂದು ಮಾನದಂಡವನ್ನು ಗುರುತಿಸಿದರೆ, ಆ ಮಾನದಂಡದ ಶ್ರೇಷ್ಠತೆಯ ಗೆರೆಯನ್ನು ಎಲ್ಲಿ ಗುರುತಿಸಬೇಕೆಂದು ನಮಗೆ ತಿಳಿಯಲಾರದ ಎತ್ತರವೊಂದನ್ನು ಸಾಧಿಸಿರುವ ಶ್ರೀಮಂತ ಭಾವಗೀತೆ ಅಥವಾ ಕವನ ಇದಾಗಿದೆ. ಕವನದ ಸಾಲುಗಳಲ್ಲಿ ಪ್ರೇಮದ ಔನ್ನತ್ಯದ ಅಭಿವ್ಯಕ್ತಿಯ ಗುತ್ಸವಿದೆ. ಅತ್ಯಂತ ಸಹಜ, ಸುಂದರ, ಸರಳ ಅರ್ಥವನ್ನು ಸಾರುವ ಕವನದ ಪ್ರಶಾಂತತೆಯು; ಅಷ್ಟೇ ಆಳವಾಗಿಳಿದು ಪ್ರೇಮದ ಮೂಲವನ್ನು ಶೋಧಿಸಿದೆ.

***

ಡಾ.ಎಚ್ಚೆಸ್ವಿಯವರ ಕವಿತೆಯ ಬಗ್ಗೆ

'ಕೃಷ್ಣನ ಶ್ಯಾಮಲ ವಕ್ಷದ ಮೇಲೆ"

ಕವನದ ರಾಚನಿಕ ಸೌಂದರ್ಯ

- ಶಾಂತಾ ನಾಗಮಂಗಲ

ಇದು ಎಚ್. ಎಸ್. ವೇಂಕಟೇಶಮೂರ್ತಿಗಳ ಪ್ರಸಿದ್ಧ ಕವನ. ಭಾವಗೀತೆಯಾಗಿಯಂತೂ ಜನಪ್ರಿಯ. ಇದರ ಜನಪ್ರಿಯತೆಗೆ ಕಾರಣ ಏನಿರಬಹುದು?

ರಾಗಬದ್ಧವಾಗಿ ಎಲ್ಲರನ್ನು ತಲುಪಿದ್ದು ಮುಖ್ಯ ಕಾರಣ ಎನ್ನಬಹುದು. ಅದನ್ನು ಮೀರಿದ ಕಾರಣವೂ ಇದರಲ್ಲಿ ಕಂಡು ಬರುತ್ತದೆ. ಮೊದಲನೆಯದಾಗಿ ಕವನ ಸರಳವಾಗಿದೆ. ಎರಡನೆಯದಾಗಿ ಜನಪ್ರಿಯವಾದ ಕೃಷ್ಣ-ರಾಧೆಯರ ಪ್ರೇಮದ ರೂಪಕವನ್ನು ವಸ್ತುವನ್ನಾಗಿ ಇಟ್ಟುಕೊಂಡಿದೆ.

ರಾಧೆಯ ಪ್ರಸಂಗ ಅಥವಾ ರಾಧೆ ಎನ್ನುವ ಹೆಸರಿನ ಪಾತ್ರವು ಮೂಲ ಭಾಗವತದಲ್ಲಿ ಇಲ್ಲವಾದರೂ, ಆನಂತರದ ಉತ್ತರಭಾರತದ ಭಕ್ತ ಕವಿಗಳು ಇವಳನ್ನು ಹೆಚ್ಚು ಬೆಳೆಸಿದ್ದಾರೆ. ಇವಳು ಕೃಷ್ಣನಿಗಿಂತ ವಯಸ್ಸಿನಲ್ಲಿ ಸ್ವಲ್ಪ ದೊಡ್ಡವಳು, ಗೋಕುಲದ ವೃಷಭಾನುವಿನ ಮಗಳು ಎಂಬ ವಿವರಗಳೊಂದಿಗೆ ಕೆ.ಎಂ.ಮುನ್ಶಿಯವರು ತಮ್ಮ ಕೃಷ್ಣಾವತಾರದಲ್ಲಿ ಮತ್ತೂ ರೋಚಕವಾಗಿ ರಾಧಾ-ಕೃಷ್ಣರ ಪ್ರಣಯವನ್ನೂ ಮತ್ತಷ್ಟು ವಿಸ್ತರಿಸಿದ್ದಾರೆ. ರಾಧೆಯ ಸಮರ್ಪಿತ ಪ್ರೇಮವನ್ನೂ, ಅವಳಿಗೆ ತಾನು ಕೃಷ್ಣನ ಮೇಲೆ ಏಕಾಧಿಪತ್ಯವನ್ನು ಹೊಂದಬೇಕೆಂಬ ಹಂಬಲವನ್ನೂ ತೋರಿಸಿದ್ದಾರೆ. ಕೃಷ್ಣನಿಗೂ ರಾಧೆಯ ಮೇಲೆ ವಿಶೇಷ ಒಲವಿದ್ದುದ್ದನ್ನು ಕಾಣಿಸಿದ್ದಾರೆ. ಇವೆಲ್ಲ ಗೋಕುಲದಲ್ಲಿದ್ದಾಗಿನ ಕಥೆ.

ಅಧ್ಯಾತ್ಮದ ದೃಷ್ಟಿಯಿಂದ ರಾಧೆಯನ್ನು ಜೀವಾತ್ಮ ಎಂದೂ ಪರಿಗಣಿಸಲಾಗುತ್ತದೆ.

ಪ್ರಸ್ತುತ ಕವನ "ಕೃಷ್ಣನ ಶ್ಯಾಮಲ ವಕ್ಷದ ಮೇಲೆ" ಕವನದ ಆರಂಭದ ಸಾಲೇ ಕವನದ ಹೆಸರೂ ಆಗಿದೆ. ಹಾಗೂ, ಗಂಡು ಹೆಣ್ಣಿನ ನಡುವಣ ಪ್ರೇಮ- ಅದನ್ನು ಹಿಂಬಾಲಿಸಿ ಬರುವ ಮತ್ಸರ, ನೋವು, ವಿಷಾದಗಳ ಶ್ರುತಿಯನ್ನು ಹಿಡಿದು ಸಾಗಿದೆ. ನಾವು ಈ ಕವನದ ಆಸ್ವಾದನೆಗೆ ಒಂದು ಪರಿವೇಶವನ್ನು/ ಆವರಣವನ್ನು ಕಲ್ಪಿಸಿಕೊಳ್ಳಬೇಕಾಗುತ್ತದೆ.

ಕೃಷ್ಣನನ್ನು ಕಾಣಲು ತನ್ನ ಸಖಿಯರೊಡನೆ ರಾಧೆ ಬಂದಿದ್ದಾಳೆ. ಅವಳ ಕಣ್ಣಿಗೆ ಕೃಷ್ಣ ಕಂಡಿದ್ದಾನೆ. ಆದರೆ ಕಂಡ ಬಗೆಯು ಅವಳು ಅಂದುಕೊಂಡಂತೆ ಇರಲಿಲ್ಲ, ಅದರಿಂದ ಅವಳ ಮನಸ್ಸಿನಲ್ಲಿ ಆದ ಭಾವಪ್ರಕ್ಷುಬ್ಧತೆ ಏನು ಎಂಬುದನ್ನು ಕವಿಗೆ ಹೇಳಬೇಕಾಗಿದೆ. ಹೇಳಿದ್ದಾರೆ. ಹಾಗೆ ಹೇಳುವಲ್ಲಿ ಕವನವು ಒಂದು ವಿಶೇಷ ಬಗೆಯ ಮಾತಿನ ರೀತಿಯನ್ನು ಬಳಸಿಕೊಂಡಿದೆ. ಇದನ್ನು ಉಕ್ತಿವೈಚಿತ್ರ್ಯ ಎಂದು ಕರೆಯುತ್ತಾರೆ. ಅದನ್ನೀಗ ನೋಡೋಣ-

ಕೃಷ್ಣಶ್ಯಾಮಲ ವಕ್ಷದ ಮೇಲೆ
ಕಾಳನಾಗರವು ಹರಿಯುತಿದೆ !
ನಾಗರವಲ್ಲ ! ನಾಗವೇಣಿಯ
ನೀಳ್ಜಡೆ ಮೆರೆಯುತಿದೆ-
ನೋಡು- ನೀಳ್ಜಡೆ ಮೆರೆಯುತಿದೆ.

ಕೃಷ್ಣನ ಶ್ಯಾಮಲ ವಕ್ಷದ ಮೇಲೆ

- ಡಾ.ಎಚ್.ಎಸ್.ವೆಂಕಟೇಶಮೂರ್ತಿ

ಕೃಷ್ಣನ ಶ್ಯಾಮಲ ವಕ್ಷದ ಮೇಲೆ
ಕಾಳನಾಗರವು ಹರಿಯುತಿದೆ ।
ನಾಗರವಲ್ಲ ನಾಗವೇಣಿಯ
ನೀಳ್ಜಡೆ ಮೆರೆಯುತಿದೆ- ನೋಡು-
ನೀಳ್ಜಡೆ ಮೆರೆಯುತಿದೆ ॥

ಕೃಷ್ಣನ ನೈದಿಲೆ ಕೆನ್ನೆಯ ಮೇಲೆ
ರಕ್ತದ ಬಿಂದುವು ಕಾಣುತಿದೆ ।
ರಕ್ತವು ಅಲ್ಲ! ಬಿಂಬಾಧರೆಯ
ಬಿಂದಿಯು ಮೆರೆಯುತಿದೆ- ನೋಡು-
ಬಿಂದಿಯು ಮೆರೆಯುತಿದೆ ॥

ಕೃಷ್ಣನ ಚಾಚಿದ ತೋಳಿನ ಮೇಲೆ
ಹೆದೆಯಿಲ್ಲದ ಕಾಮನ ಬಿಲ್ಲು ।
ಬಿಲ್ಲದು ಅಲ್ಲ! ಮಾನಿನಿ ಅಲ್ಲೇ
ಮೇಲುದು ಮರೆತಿಹಳು- ನೋಡು -
ಮೇಲುದು ಮರೆತಿಹಳು ॥

ಕೃಷ್ಣನ ಪಾದಾಂಬುಜಗಳ ಮೇಲೆ
ಮಂಜಿನ ಹನಿಗಳು ಹೊಳೆಯುತಿವೆ ।
ಇಬ್ಬನಿಯಲ್ಲ- ಶ್ರೀ ಹರಿಪಾದವ
ರಾಧೆಯ ಕಂಬನಿ ತೊಳೆಯುತಿದೆ
ರಾಧೆಯ ಕಂಬನಿ ತೊಳೆಯುತಿದೆ ॥

***

ಇಲ್ಲಿ ಮೊದಲು ಕೃಷ್ಣನ ಎದೆಯ ಮೇಲೆ ಕಾಳನಾಗರ ಹರಿಯುತಿದೆ.. ಅಂತಾ ಹೇಳಿಕೆ, ಸ್ಟೇಟ್ಮೆಂಟ್.. ಅದೂ ಆಶ್ಚರ್ಯ ಸೂಚಕ ಚಿಹ್ನೆಯೊಡನೆ.. ಅಚ್ಚರಿಯ ಹೇಳಿಕೆ. ಮರುಕ್ಷಣವೇ ಅದೇ ಹೇಳಿಕೆಯನ್ನು ಇಲ್ಲ ಅಂತಾ ಅಲ್ಲಗಳೆದಿದ್ದಾರೆ. ....ನಾಗರವಲ್ಲ!

ಮತ್ತೇನು? ಪ್ರಶ್ನೆ ಬರುವುದು ಸಹಜ.

ಉತ್ತರ: ನಾಗವೇಣಿಯ ನೀಳ್ಜಡೆ ಮೆರೆಯುತಿದೆ.. ನೋಡು... ನೀಳ್ಜಡೆ ಮೆರೆಯುತಿದೆ. ಇಲ್ಲಿ ನೋಡು, ಅಂತಾ ಒಬ್ಬಳು ಇನ್ನೊಬ್ಬಳಿಗೆ ಹೇಳುವಂತಹ ಸಂವಾದದ ತಂತ್ರ. ಜೊತೆಗೆ ನೀಳ್ಜಡೆ ಮೆರೆಯುತಿದೆ... ಈ phrase- ಪದಪುಂಜವನ್ನು ಎರಡು ಬಾರಿ ಬಳಸಿರೋದು.. ದ್ವಿರುಕ್ತಿ.

ಇವೆಲ್ಲವೂ ಕವನವು ಒಟ್ಟಾರೆ ಉಂಟು ಮಾಡಿರುವ ಪರಿಣಾಮದ ರಮಣೀಯತೆಗೆ ಕೊಡುಗೆಯನ್ನು ಕೊಟ್ಟಿವೆ. ವೀಪ್ಸಾಯಾಂ ದ್ವಿರುಕ್ತಿಃ.. ಅಂತಾ ಒಂದು ಸೂತ್ರವಿದೆ. ಅಂದರೆ ಯಾವುದನ್ನಾದರೂ ಒತ್ತಿ ಒತ್ತಿ ಹೇಳಬೇಕೆಂದಾಗ ದ್ವಿರುಕ್ತಿ ಪ್ರಯೋಗ.

ಇಡಿಯ ಚರಣದ ರಚನಾ ಶಿಲ್ಪವು ಕೃಷ್ಣನ ಜೊತೆ ಬೇಟಕ್ಕೋ, ಆಟಕ್ಕೋ ಸಖಿಯೊಡನೆ ಬಂದ ರಾಧೆಗೆ ಆದ ನಿರಾಸೆ, ವಿಷಾದಗಳನ್ನು ಬಹಳ ಗಾಢವಾಗಿ ಕಟ್ಟಿಕೊಡುತ್ತದೆ. ಹೀಗೆ ಇರುವೊಂದು ಸ್ಥಿತಿಯನ್ನು/ ಪದಾರ್ಥವನ್ನು/ ಅಂಶವನ್ನು ಅಲ್ಲಗಳೆದು ಇನ್ನೊಂದು ಯಾವುದೋ ಇರುವಂತೆ ಕಲ್ಪಿಸುವ ಉಕ್ತಿವೈಚಿತ್ರ್ಯವನ್ನು ಲಾಕ್ಷಣಿಕರು/ ಆಲಂಕಾರಿಕರು 'ಅಪಹ್ನುತಿ' ಅಲಂಕಾರ ಎಂದು ಹೆಸರಿಸಿದ್ದಾರೆ. ಅಪಹ್ನುತಿ ಎಂದರೆ ಮರೆಮಾಡುವುದು- concealment ಎಂದರ್ಥ.

ಈ ಕವನದ ಮಿಕ್ಕ ಮೂರೂ ಚರಣಗಳಲ್ಲೂ ಇದೇ ತಂತ್ರವನ್ನು ಕಾಣಬಹುದು. ಕೃಷ್ಣನ ಕೆನ್ನೆ ಮೇಲೆ ಇರೋದು ರಕ್ತದ ಬಿಂದು ಅಲ್ಲ, ಬಿಂಬಾಧರೆಯ ಅಂದರೆ ತೊಂಡೆತುಟಿಯವಳ ಹಣೆಯಬಿಂದಿ ಅಂತ. ಕೃಷ್ಣನ ತೋಳಿನ ಮೇಲೆ ಕಾಣುತ್ತಿರುವುದು ಹೆದೆಯಿಲ್ಲದ ಕಾಮನಬಿಲ್ಲು ಅಲ್ಲ... ಮಾನಿನಿಯು ಅಲ್ಲೇ ಮರೆತು ಬಿಟ್ಟುಹೋಗಿರುವ ಸಪ್ತವರ್ಣದ ಮೇಲುದ..

ಹೀಗೆ. ಕೊನೆಯ ಚರಣವೂ ಇದೇ ಶಿಲ್ಪವನ್ನು ಅನುಸರಿಸಿದೆಯಾದರೂ, ಅದು ಕವನಕ್ಕೆ ಒಂದು ಅನಿರೀಕ್ಷಿತ ತಿರುವನ್ನು, ಭಾವಸಾಂದ್ರತೆಯನ್ನು ತಂದುಕೊಡುತ್ತದೆ. ಇದೇ ಕವನದ ಕೇಂದ್ರ ಆಶಯವಾಗಿದೆ.

ಕೃಷ್ಣನ ಅಡಿದಾವರೆಗಳ ಮೇಲೆ ಹೊಳೆಯುತ್ತಿರುವುದು ಮಂಜಿನ ಹನಿಗಳಲ್ಲ.. ರಾಧೆಯ ಕಂಬನಿಯ ಹನಿಗಳು ಎನ್ನುವಾಗ.. ಹಗಲು ಮುಂಜಾನೆಯೇ ಕೃಷ್ಣನನ್ನು ನೋಡಲು ಬಂದಿರಬಹುದಾದ ರಾಧೆಗೆ, ಇರುಳಿನ ಅಭಿಸಾರಿಕೆಯರು ಕೃಷ್ಣನಲ್ಲಿ ಬಿಟ್ಟು ಹೋದ ಚಿಹ್ನೆಗಳು ಕಂಡಾಗ ಆದ ನೋವು, ವಿಷಾದ, ನಿರಾಸೆ, ಮತ್ಸರ, ಅಸಹಾಯಕತೆ, ಮುಂತಾದ ಸಾತ್ವಿಕ ಭಾವಗಳು ಒಡ್ಡುಹರಿದು ಕಂಬನಿಯಾಗಿ ಉರುಳಿರಬಹುದಾದ ಶೃಂಗಾರದೊಂದು ರಸಮಯವಾದ ಚಿತ್ರಣವನ್ನು ಕೊಡುವಲ್ಲಿ ಈ ಎಲ್ಲ ರಾಚನಿಕ ತಂತ್ರಗಳು ಕೆಲಸಮಾಡಿವೆ.

ಒಂದು ಕವನ ತನ್ನ ವಸ್ತು-ತಂತ್ರ ಎರಡನ್ನೂ ಸಮರ್ಥವಾಗಿ ಬಳಸಿಕೊಂಡಾಗ ಹೇಗೆ ಅದ್ಭುತವಾದ ಪರಿಣಾಮವನ್ನು ಬೀರಬಲ್ಲುದು ಎಂಬುದಕ್ಕೆ ಈ ಕವನ ಒಂದು ನಿದರ್ಶನ.

ನಾನು ಇಲ್ಲಿ ಹೇಳಿರುವ ಅಪಹ್ನುತಿ ಅಲಂಕಾರ, ಉಕ್ತಿವೈಚಿತ್ರ್ಯ, ದ್ವಿರುಕ್ತಿಗಳ ಪ್ರಯೋಗ, ಚತುರ್ಮಾತ್ರಾ, ಪಂಚಮಾತ್ರಾ, ತ್ರಿಮಾತ್ರೆಗಳ ಮಿಶ್ರಲಯ... ಎಲ್ಲವೂ ಭಾರತೀಯ ಕಾವ್ಯಮೀಮಾಂಸೆಯು ಎಂದೋ ಕಂಡು ವಿಚಾರಮಾಡಿರುವ ಸಂಗತಿಗಳು. ಇವು ಸತ್ಕಾವ್ಯದ ಚೆಲುವನ್ನು-ನಿಲುವನ್ನು ನಮ್ಮ ಮುಂದೆ ತೆರೆದಿಟ್ಟಾಗ ಅವು ಯಾಕೆ ಇಷ್ಟು ಚೆಲುವಾಗಿವೆ ಅಥವಾ ಹೇಗೆ ಎಂದು ನಿರ್ಧರಿಸುವ ಅಳತೆಗೋಲುಗಳು. ರುಚಿಯಾದ ತಿನಿಸನ್ನು ತಿಂದಾದ ಮೇಲೆ ಆ ತಿನಿಸಿಗೆ ಆ ರುಚಿ ಬರಲು ಕಾರಣಗಳು ಯಾವವು.. ಎಂದು ಹುಡುಕುವಂತೆ. ಇವು ಸಂಸ್ಕೃತ ಕಾವ್ಯಗಳಿಗೆ ಮಾತ್ರ ಸೀಮಿತವಾದವುಗಳಲ್ಲ. ಸಾರ್ವಕಾಲಿಕ ವಾದವುಗಳು., ಸಾರ್ವದೇಶೀಯವಾದವುಗಳು. ಹೇಳಬೇಕೆಂದರೆ ಭಾರತೀಯ ಭಾಷೆಗಳಲ್ಲಿ ಬರೆಯದ ಕಾವ್ಯಗಳಿಗೂ ಈ ಮಾನದಂಡಗಳು ಅನ್ವಿತವಾಗುತ್ತವೆ. ಒಳ್ಳೆಯ ರಸನಿಷ್ಠನಾದ ಕವಿಗಳ ರಚನೆಯಲ್ಲಿ ಅವು ಎಲ್ಲ ಕಾಲದಲ್ಲಿಯೂ ಸಹಜವಾಗಿಯೇ ಮೂಡಿ ಬಂದಿರುತ್ತವೆ.

ಅಲ್ಲದೆ ಯಾವೊಬ್ಬ ಕವಿಯೂ ಲಕ್ಷಣಗಳನ್ನು ಗಮನಿಸಿ ಲೆಕ್ಕಾಚಾರ ಹಾಕಿಕೊಂಡು, ಇಲ್ಲಿಗೆ ಈ ಅಲಂಕಾರವನ್ನು ತರಬೇಕು, ಈ ಉಕ್ತಿವೈಚಿತ್ರ್ಯವನ್ನು ಬಳಸಬಹುದು ಎಂದು ಕೊಂಡು ಪದ್ಯವನ್ನೋ ಗದ್ಯವನ್ನೋ ಬರೆಯುವುದಿಲ್ಲ. ಅದು ಸಾಧ್ಯವೂ ಅಲ್ಲ. ಅವು ವಸ್ತು ಮತ್ತು ಭಾವಗಳನ್ನು ಅನುಸರಿಸುತ್ತಾ, ತಾವಾಗಿಯೇ ಬಂದಾಗ ಆ ಮಾನದಂಡದಲ್ಲಿ ಕವನಗಳು ಗೆಲ್ಲುತ್ತವೆ. ಕಾಲವನ್ನು ಮೀರಿ ರಸಿಕರ ಹೃದಯದಲ್ಲಿ ನೆಲೆ ನಿಲ್ಲುತ್ತವೆ.

ಕವಿ ಹೆಚ್.ಎಸ್.ವೆಂಕಟೇಶಮೂರ್ತಿಗಳ ಈ ಕವನವೂ ಹಾಗೆಯೇ. ಅವರು ದಂಡಿ ಯನ್ನೊ, ಚಂದ್ರಾಲೋಕವನ್ನೊ, ಅಪ್ಪಯ್ಯ ದೀಕ್ಷಿತರನ್ನೊ ನೋಡಿಕೊಂಡು ಈ 'ಅಪಹ್ನುತಿ' ಅಲಂಕಾರವನ್ನು ಬಳಸಿದ್ದಾರೆ ಅಂತಲ್ಲ. ಮೂಲದಲ್ಲಿ ಅಲ್ಲವಾದರೂ ಅನುವಾದದಲ್ಲಿ ಈ ಶಾಸ್ತ್ರಗ್ರಂಥಗಳನ್ನು ಓದಿರಲೂಬಹುದು. ಆದರೆ ಅವರು ಕವನಗಳನ್ನು ಬರೆಯುವಾಗ ಆ ಲೆಕ್ಕಾಚಾರ ಗಳಾಗಲೀ, ಶಾಸ್ತ್ರಪಾಂಡಿತ್ಯವಾಗಲೀ ಒದಗಿಬರುವಂಥದಲ್ಲ. ಅದು ತನ್ನಿಂದತಾನೆ, ಆ ರಾಧಾ–ಮಾಧವರ ಪ್ರಣಯದ, ಕೃಷ್ಣ–ಗೋಪಿಕೆಯರ ಸಾಂಗತ್ಯದ ಹಿನ್ನೆಲೆಯಲ್ಲಿ ತಾನಾಗೇ ಮೂಡಿ ಬಂದಿದೆ. ಮತ್ತು ಅದರಿಂದ ಕವನದ ಪರಿಣಾಮ, ರಮಣೀಯತೆಗೆ ತನ್ನದೇ ಆದ ಕಾಂತಿ ಬಂದಿದೆ. ಸಾಹಿತ್ಯದಲ್ಲಿ ಅಲಂಕಾರದ ಕೆಲಸವೂ ಅಷ್ಟೆ. ಅದು 'ಕಾವ್ಯಶೋಭಾಕರ ಧರ್ಮ. ಅಂದರೆ ಕಾವ್ಯಕ್ಕೆ ಶೋಭೆಯನ್ನು ತರುವ ಗುಣವಾಗಿ ಒದಗಿಬರಬೇಕು.

ಇವರ ಮತ್ತು ಇನ್ನೂ ಅನೇಕ ಒಳ್ಳೆಯ ಕವಿಗಳ ಕವನಗಳನ್ನು ಹೀಗೆ ಭಾರತೀಯ ಕಾವ್ಯಮೀಮಾಂಸೆಯ ದೃಷ್ಟಿಯಿಂದಲೂ ನೋಡಿ ಸವಿಯಬಹುದು ಎಂಬುದರ ಒಂದು ಸಣ್ಣ ಪ್ರಯತ್ನ ಇದು.

ಇದೇ ರೀತಿ... ಇದೇ ಉತ್ತರಾಯಣ ಮತ್ತು.... ಸಂಕಲನದ 'ವನಮಾಲಿಯನು' ಕವನದಲ್ಲಿ, ಲೀಲಾಶುಕ ಕವಿಯ ಕೃಷ್ಣಕರ್ಣಾಮೃತದ ಪದ್ಯವೊಂದರ ಅನುರಣನವನ್ನು ಕಾಣಬಹುದು.

***

ಡಾ.ಎಚ್ಚೆಸ್ವಿಯವರ ಕವಿತೆಯ ಬಗ್ಗೆ

" ಶ್ರೀಸಂಸಾರಿ "

'ಉತ್ತರಾಯಣ ಮತ್ತು....'. ಸಂಕಲನದ ಕವನ

– ಪೂರ್ಣಿಮ ಭಗವಾನ್

ಶ್ರೀಯುತ ಎಚ್.ಎಸ್.ವೆಂಕಟೇಶ ಮೂರ್ತಿ ಅವರ **'ಉತ್ತರಾಯಣ ಮತ್ತು....'** ಎನ್ನುವ ಕವಿತೆಗಳ ಸಂಕಲನದ ಮೊದಲ ಕವಿತೆ **'ಶ್ರೀಸಂಸಾರಿ'**. ಈ ಕವಿತೆಯ ಶೀರ್ಷಿಕೆಯೇ ಒಂದು ರೀತಿ ಆಕರ್ಷಕವಾಗಿದೆ. ಕವಿತೆಯನ್ನು ಓದುತ್ತಾ ಹೋದಂತೆ, ಪಾತ್ರಗಳು ಕಣ್ಣಮುಂದೆ ಬರುತ್ತವೆ. ಯಾಕಿರಬಹುದು ಎನ್ನುವ ಕುತೂಹಲ ಕೆರಳುತ್ತದೆ. ಮತ್ತಷ್ಟು ಚಿಂತನೆಗೆ ಪುಷ್ಟಿ ನೀಡುತ್ತದೆ. ಹಾಗಾಗಿ ನಾನು ಶ್ರೀಸಂಸಾರಿ ಕವಿತೆಯನ್ನು ಆಯ್ಕೆ ಮಾಡಿಕೊಂಡಿದ್ದೇನೆ.

ಹಿಂದೂಗಳು ಪೂಜಿಸುವ ಎಲ್ಲಾ ದೇವರ ಚಿತ್ರಪಟಗಳನ್ನೂ, ದೇವಾಲಯದ ಮೂರ್ತಿಗಳನ್ನೂ ಗಮನಿಸಿ ಶ್ರೀಯುತರು ಈ ಕವನವನ್ನು ರಚಿಸಿರಬಹುದು. ಬೇರೆಲ್ಲಾ ದೇವತಾ ಮೂರ್ತಿಗಳಲ್ಲಿ ಒಬ್ಬರನ್ನೇ ಕಾಣಬಹುದು. ದಂಪತಿ ಸಮೇತವಾಗಿ ಇರಬಹುದು, ಕೆಲವೊಮ್ಮೆ ಕುಟುಂಬ ಸಮೇತರಾಗಿರಬಹುದು. ಆದರೆ ಶ್ರೀರಾಮನು ತಾನೊಬ್ಬನೇ ಎಲ್ಲೂ ಪೂಜೆಗಳನ್ನು ಕಂಡಿಲ್ಲ, ಯಾವುದೇ ಊರಿನಲ್ಲಿ ರಾಮನ ದೇವಸ್ಥಾನಕ್ಕೆ ಹೋದರೂ, ಮನೆಯ ಗೋಡೆಯ ಮೇಲಿನ ಚಿತ್ರಪಟವನ್ನು ನೋಡಿದರೂ, ರಾಮನು ಒಬ್ಬನೇ ಕಾಣಿಸುವುದಿಲ್ಲ, ಎಂದೂ, ಎಲ್ಲೂ ರಾಮನು ಒಬ್ಬನೇ ಬಾರನು ಪೂಜೆಯ ಮಣೆಗೆ ಎನ್ನುತ್ತಾರೆ. ಈಶ್ವರ, ವಿಷ್ಣು, ಶ್ರೀಕೃಷ್ಣ, ಗಣೇಶ, ಶ್ರೀನಿವಾಸ, ಚಂಡಿ, ಚಾಮುಂಡಿ, ಲಕ್ಷ್ಮಿ, ದುರ್ಗೆ, ಸರಸ್ವತಿ, ಹೀಗೆ ಹಲವು ದೇವತಾ ಮೂರ್ತಿಗಳನ್ನು, ಒಬ್ಬರನ್ನೇ ಪೂಜಿಸಲ್ಪಡುವುದನ್ನು ನಾವು ಕಾಣುತ್ತೇವೆ. ಆದರೆ ಶ್ರೀರಾಮನ ವಿಷಯದಲ್ಲಿ ಹಾಗಲ್ಲ. ರಾಮ ಸಕುಟುಂಬ ಸಪರಿವಾರ ಸಮೇತ ಪೂಜಿಸಲ್ಪಡುತ್ತಾನೆ. ಎಡಗಡೆಗೆ ಸೀತೆ, ಬಲಗಡೆ ಲಕ್ಷ್ಮಣ, ಕಾಲ ಕೆಳಗಡೆ ಹನುಮಂತ. ಇನ್ನೂ ಕೆಲವು ಚಿತ್ರಗಳಲ್ಲಿ ಚಾಮರ ಹಾಕುವ ಶತ್ರುಘ್ನ, ಕೊಡೆ ಹಿಡಿದ ಭರತ ಇದ್ದರೆ, ಮತ್ತೆ ಕೆಲವು ಚಿತ್ರಗಳಲ್ಲಿ ವಿಭೀಷಣ, ಜಾಂಬವಂತ, ಸುಗ್ರೀವ, ಮಾಂಡವಿ, ಊರ್ಮಿಳೆ, ಶ್ರುತ ಕೀರ್ತಿ ಎಲ್ಲರನ್ನೂ ಒಟ್ಟಾಗಿ ಕಾಣಬಹುದು.

ರಾಮನ ಪೂಜೆಯು, ಅದೊಂದು ಕುಟುಂಬದ ಪೂಜೆ. ವಿಶಾಲ, ವಿಸ್ತೃತ. ಶ್ರೀರಾಮನ ಸಂಸಾರ ತಾನಾಯಿತು, ತನ್ನ ಕಣ್ಣೊಂಬೆ ಆಯಿತು ಎನ್ನುವ ಸಂಕುಚಿತತೆಗೆ, ಸಣ್ಣ ಪರಿಧಿಗೆ ಒಳಪಟ್ಟಿಲ್ಲ. ಅದು ವಿಶಾಲವಾದ ಭ್ರಾತೃಪ್ರೇಮ, ಮಾತೃಪ್ರೇಮ ಮತ್ತು ಎಲ್ಲ ಒಡನಾಡಿಗಳ, ಆತ್ಮೀಯರ ಬೆಸುಗೆಯನ್ನು ತೋರಿಸುತ್ತದೆ.

ರಾಮನ ಸಂಸಾರ, ಒಟ್ಟು ಸಂಸಾರ. ತಮ್ಮಂದಿರು, ನಾದಿನಿಯರು, ತಾಯಿ, ಆಳುಕಾಳುಗಳು, ಗೆಳೆಯರು, ಜೊತೆಗೆ ಭಕ್ತರಿಗೂ ಕೂಡ ಮನ್ನಣೆ ಇದೆ.

ಸಂಸಾರದ ಈ ಸಾರವ್ಯವಸ್ಥೆ ಪೂಜೆಗೊಳ್ಳುವುದು ಈ ನೆಲದಲ್ಲಿ ಎನ್ನುವ ಸಾಲಿನಲ್ಲಿ ಭಾರತೀಯ ಸಂಸ್ಕೃತಿಯನ್ನು ಪ್ರತಿಬಿಂಬಿಸಿದ್ದಾರೆ. ನಿತ್ಯಾರಾಧನೆ, ನಿತ್ಯ ನೈವೇದ್ಯ, ರಾಮನ ಪೂಜೆಯ ನೆಪದಲ್ಲಿ. ವರ್ಗ, ವರ್ಣ, ವೈಷಮ್ಯ ಯಾವುದನ್ನೂ ಲೆಕ್ಕಿಸದೆ ಪೂಜೆಗೊಳ್ಳುತ್ತಿದೆ ರಾಮನ ಸಂಸಾರ. ಸ್ವರ್ಗ ಅನ್ನುವುದು ಇಲ್ಲೇ, ನಮ್ಮ ಕಾಲಡಿಯ ನೆಲದಲ್ಲಿಯೇ ಇದೆ ಎಂದು ಬಹಳ ಸುಂದರವಾಗಿ ಮಾರ್ಮಿಕವಾಗಿ ಅರ್ಥೈಸಿದ್ದಾರೆ.

ಆ ಕೌಟುಂಬಿಕ ಗೋಷ್ಠಿಯ ಪಟದಲ್ಲಿ ಕಾಣಿಸುವ ಪಾತ್ರಗಳನ್ನು ಪರಿಚಯಿಸುವ ನೆಪದಲ್ಲಿ ಹಾಸ್ಯದ ಎಳೆಯನ್ನೂ ತರುತ್ತಾರೆ. ಗೋಷ್ಠಿಯ ಪಟದಲ್ಲಿ ಸ್ನೇಹ, ಮೋಹ, ತಿಕ್ಕಾಟಗಳು, ತಮ್ಮ ತಮ್ಮ ಗಂಡಂದಿರ ಪಕ್ಕ ನಿಂತು ಕಿರುನಗೆ ಬೀರುವ ಹೆಣ್ಣುಗಳು, ಜಾಂಬವಂತ, ಭರತರು ಹೆಗಲಿಗೆ ಹೆಗಲು ಕೊಟ್ಟು ಸ್ನೇಹದಿಂದ ನಿಂತಿರುವ ಪರಿಯನ್ನು ವಿವರಿಸುತ್ತಾರೆ. ಇನ್ನು ತಿರುವು

ಮೂತಿ ಹನುಮಂತನಿಗೆ ಚಿತ್ರಪಟದ ಅಂದಾಜೇ ಇಲ್ಲ ಎಂದು ಹನುಮಂತನ ಮೂತಿಯನ್ನು ನವಿರಾದ ಹಾಸ್ಯದಲ್ಲಿ ಹೇಳುತ್ತಾರೆ.

ಶ್ರೀ ಸಂಸಾರಿ

–ಎಚ್.ಎಸ್. ವೆಂಕಟೇಶಮೂರ್ತಿ

ಶ್ರೀರಾಮನು ತಾನೊಬ್ಬನೆ ಎಲ್ಲೂ ಪೂಜೆಗೊಳ್ಳುವುದು ಕಂಡಿಲ್ಲ
ಹೋಗಿ ನೋಡಿ ನೀವ್ಯಾವುದೆ ಊರಿನ ಯಾವುದೆ ರಾಮನ ಗುಡಿಗೆ
ಯಾವುದೇ ಮನೆಯ ಗೋಡೆಯ ಮೇಲಿನ ಪಟವನ್ನಾದರು ನೋಡಿ
ರಾಮನೊಬ್ಬನೇ ಎಂದೂ ಎಲ್ಲೂ ಬಾರನು ಪೂಜೆಯ ಮಣೆಗೆ

ಎಡಕ್ಕೆ ಸೀತ, ಬಲಕ್ಕೆ ಲಕ್ಷ್ಮಣ. ಕಾಲ ಕೆಳಗೆ ಹನುಮಂತ
ಕೆಲವು ಪಟದಲ್ಲಿ ತಮ್ಮ ಶತ್ರುಘ್ನ ಚಾಮರ ಹಾಕುವ ಭಂಗಿ
ಹಿಂದೆ ಕೊಡೆ ಹಿಡಿದ ಭರತ, ವಿಭೀಷಣ–ಜಾಂಬವ–ದೊರೆ ಸುಗ್ರೀವ
ಕೆಲವು ಪಟದಲ್ಲಿ ಮಾಂಡವಿ, ಊರ್ಮಿಳೆ, ನಗುತ್ತಿರುವ ಶ್ರುತಕೀರ್ತಿ

ಉಳಿದ ದೇವರೆಂತೆಂದಿಗು ರಾಮ ಒಬ್ಬನೆ ಪೂಜೆಯ ಕೊಳ್ಳನು
ರಾಮಪೂಜೆ ಬರಿ ರಾಮನ ಪೂಜೆಯೆ? ಅದೊಂದು ಕುಟುಂಬ ಪೂಜೆ
ಎಷ್ಟು ವಿಶಾಲ... ಎಷ್ಟು ವಿಸ್ತೃತ... ಶ್ರೀರಾಮನ ಈ ಸಂಸಾರ !
ಇದು ತಾನಾಯಿತು ತನ್ನ ಕಣ್ಗೊಂಬೆ ತಾನಾಯಿತು– ಚೌಕಟ್ಟಿಲ್ಲ

ರಾಮ ಸಂಸಾರ ಒಟ್ಟು ಸಂಸಾರ, ತಮ್ಮಂದಿರು ನಾದಿನಿ ತಾಯಿ
ಆಳುಕಾಳಿಗೂ ಮನ್ನಣೆಯುಂಟು, ಜೊತೆಗೆ ಗೆಳೆಯರಿಗು ಕೂಡ
ಅಯೋಧ್ಯೆಯಲ್ಲೇ ಲಂಕೆ–ಕಿಷ್ಕಿಂಧ–ಗುಡ್ಡುಗಾಡು ಸೇರಿರಲು
ಆರ್ಯ–ದ್ರಾವಿಡ–ಆದಿವಾಸಿಗೂ ರಾಮಪೂಜೆಯಲಿ ಪಾಲು

ಸಂಸಾರದ ಈ ಸಾರ ವ್ಯವಸ್ಥೆ ಪೂಜೆಗೊಳ್ಳುವುದೀ ನೆಲದಲ್ಲಿ
ನಿತ್ಯಾರಾಧನೆ ನಿತ್ಯ ನೈವೇದ್ಯ ರಾಮನ ಪೂಜೆಯ ನೆವದಲ್ಲಿ
ವರ್ಗ ವರ್ಣ ವೈಷಮ್ಯ ಲೆಕ್ಕಿಸದೆ ಪೂಜೆಗೊಳ್ಳುತಿದೆ ಸಂಸಾರ
ಸ್ವರ್ಗವೆನ್ನುವುದು ಇನ್ನೆಲ್ಲಿರುವುದು – ಇಲ್ಲೇ ಕಾಲಡಿ ನೆಲದಲ್ಲೆ

ಈ ಕೌಟುಂಬಿಕ ಗೋಷ್ಠಿ ಪಟದಲ್ಲಿ ಸ್ನೇಹ ಮೋಹ ತಿಕ್ಕಾಟಗಳು !
ತಮ್ಮ ತಮ್ಮ ಗಂಡಂದಿರ ಪಕ್ಕ ಬೀಗುವವರೆನಗೆ ಹೆಣ್ಣುಗಳು !
ಹೆಗಲಿಗೆ ಹೆಗಲನು ತಾಗಿಸಿ ನಿಂತಿದ್ದಾನೆ ಜಾಂಬವನು ಭರತನಿಗೆ
ಚಿತ್ರಪಟದ ಅಂದಾಜೇ ಇಲ್ಲ ತಿರುವುಮೂತಿ ಹನುಮಂತನಿಗೆ

ಕರಿಯ ಮುಸುಕಲ್ಲಿ ಬಿಂಬಗ್ರಾಹಿ ಮಂದ್ರದಲ್ಲಿ ಗೊಣಗಿದ ಹೀಗೆ:
"ಹೆಗಲ ಬಿಲ್ಲ ಕೆಳಗಿಳಿಸಿರಿ ಸ್ವಾಮಿ, ಜಾಗ ಉಂಟು ಇನ್ನೊಬ್ಬರಿಗೆ!"
ಥಟ್ಟನೆ ನೆನಪು ಸೇತುರಾಮನಿಗೆ ಮರಳು ಸೇವೆಯ ಅಳಿಲುಮರಿ !
ರಾಮ ಧ್ಯಾನಿಸಿದ, ಮರುಕ್ಷಣದಲ್ಲಿ ಅಳಿಲಿದೆ ಅವನ ಹೆಗಲಲ್ಲಿ.

***

ಬಿಂಬಗ್ರಾಹಿಯೋ, ತನ್ನ ಕರಿಯ ಮುಸುಕಿನಲ್ಲಿ ಮೆಲ್ಲಗೆ ಹೀಗೆ ಇತರರಿಗೆ ಕೇಳಿಯೂ ಕೇಳಿಸದಂತೆ ತನ್ನಲ್ಲೇ ಗೊಣಗುತ್ತಾನೆ. "ಹೆಗಲಬಿಲ್ಲ ಕೆಳಗಿಳಿಸಿರಿ ಸ್ವಾಮಿ, ಜಾಗ ಉಂಟು ಇನ್ನೊಬ್ಬರಿಗೆ, ಎನ್ನುತ್ತಾ ಬಿಲ್ಲನ್ನು ಕೆಳಗಿಳಿಸಿದರೆ ಚಿತ್ರಪಟದಲ್ಲಿ ಇನ್ನೊಬ್ಬರು ನಿಲ್ಲಬಹುದು ಎಂದು. ಅಷ್ಟರಲ್ಲೇ ಸೀತಾರಾಮನು ನೆನೆಸಿಕೊಂಡ ತಕ್ಷಣ ಮರಳು ಸೇವೆಯ ಅಳಿಲುಮರಿ ರಾಮನ ಹೆಗಲಿನಲ್ಲಿ ಕೂತಿರುತ್ತದೆ.

ನಾಲ್ಕು ಯುಗಗಳು ಸತ್ಯಯುಗ, ಕೃತ ಯುಗ, ತ್ರೇತಾಯುಗ, ದ್ವಾಪರಯುಗ, ಕಲಿ ಯುಗ. ಸತ್ಯಯುಗದಲ್ಲಿ ವಿಷ್ಣು ಒಬ್ಬನೇ ದೇವರು. ಆಗ ಧರ್ಮವು ನಾಲ್ಕು ಕಾಲುಗಳಲ್ಲಿ ನಿಂತಿತ್ತು ಎಂದು ಪುರಾಣಗಳು ಹೇಳುತ್ತವೆ. ದುಷ್ಟ ಶಿಕ್ಷಣ, ಶಿಷ್ಟ ರಕ್ಷಣೆಗಾಗಿ ತ್ರೇತಾಯುಗದಲ್ಲಿ ವಿಷ್ಣು ತನ್ನ ಐದನೆಯ ಅವತಾರ, ರಾಮಾವತಾರವನ್ನು ತಳೆಯುತ್ತಾನೆ. ತ್ರೇತಾಯುಗದಲ್ಲಿ ಧರ್ಮವು ಮೂರು ಕಾಲುಗಳಲ್ಲಿ ನಿಂತಿರುತ್ತದೆ.

ರಾಮನು ಆದರ್ಶ ವ್ಯಕ್ತಿ. ಮರ್ಯಾದಾ ಪುರುಷೋತ್ತಮ ಎಂದೇ ಪ್ರಸಿದ್ಧನಾಗಿದ್ದಾನೆ. ಜೀವನದ ಎಲ್ಲಾ ರಂಗಗಳಲ್ಲೂ ಆದರ್ಶವನ್ನು ಮೆರೆಸಿದವನು. ಒಂದು ಯುಗಧರ್ಮದ ಸಂಕೇತವೋ ಎನ್ನುವಂತೆ. ತಾವು ನಂಬಿದ ತತ್ವದ ಅನುಸರಣೆಗಾಗಿ ತ್ಯಾಗಕ್ಕೆ ಸಿದ್ಧರಾದ ಒಂದು ಜನಾಂಗವನ್ನು ಪ್ರತಿನಿಧಿಸುತ್ತದೆ ರಘುವಂಶ. ಕೌಟುಂಬಿಕ ಮೌಲ್ಯಗಳನ್ನು ಎತ್ತಿಹಿಡಿಯುತ್ತದೆ. ಬಹುಶಃ ಅದಕ್ಕಾಗಿಯೇ ರಾಮನೊಬ್ಬನನ್ನೇ ಪೂಜಿಸದೆ,

ವನವಾಸದ ಸಮಯದಲ್ಲಿ ರಾಜಭೋಗ್ಯಗಳನ್ನು ಬಿಟ್ಟು ರಾಮನ ಜೊತೆಯಲ್ಲಿ ವನವಾಸಕ್ಕೆ ನಡೆದ ಪತಿವ್ರತಾಶಿರೋಮಣಿ ಸೀತಾದೇವಿ, ತನ್ನ ಸಾಂಸಾರಿಕ ಸುಖವನ್ನು ತ್ಯಜಿಸಿ ಅಣ್ಣನನ್ನು ನೆರಳಿನಂತೆ ಅನುಸರಿಸಿ ವನವಾಸದಲ್ಲಿ ಜೊತೆಗೂಡಿ ಅಣ್ಣನ ಆಜ್ಞೆಯನ್ನು ಶಿರಸಾ ವಹಿಸಿ ಪಾಲಿಸಿದ ಲಕ್ಷ್ಮಣ, ಭಕ್ತಾಗ್ರೇಸರನಾದ ಹನುಮಂತ ಎಲ್ಲರನ್ನೂ ಒಟ್ಟಾಗಿ ಪೂಜಿಸುವ ಸಂಪ್ರದಾಯ ಬೆಳೆದಿರಬಹುದು.

ರಾಮನೊಬ್ಬನನ್ನೇ ಹುಡುಕಿದರೆ ಸಿಗುವುದಿಲ್ಲ. ಇನ್ನು ಶ್ರೀರಾಮ ಪಟ್ಟಾಭಿಷೇಕದ ನಂತರದ ಚಿತ್ರಗಳಲ್ಲಿ ಭರತ, ಶತ್ರುಘ್ನರು, ಜಾಂಬವಂತ ಮತ್ತಿತರರೂ ಜೊತೆಗೂಡುತ್ತಾರೆ. ರಾಮಾಯಣ ದಲ್ಲಿ ಪ್ರತಿಯೊಂದು ವ್ಯಕ್ತಿಯ ಪಾತ್ರವೂ ತನ್ನದೇ ಆದ ಮಹತ್ವವನ್ನು ಹೊಂದಿದೆ. ರಾಮ ಜನ್ಮಭೂಮಿ ಅಯೋಧ್ಯೆಯ ದೇವಾಲಯದಲ್ಲಿ ಮಾತ್ರವೇ ಬಾಲರಾಮನನ್ನು ಪೂಜಿಸುತ್ತಾರೆ.

'ಉತ್ತರಾಯಣ ಮತ್ತು....' ಪುಸ್ತಕದಲ್ಲಿ ಹಲವಾರು ಬೇರೆ ಬೇರೆ ಕವನಗಳಿವೆ. **ಶ್ರೀ ಸಂಸಾರಿ, ರಾಮನವಮಿಯ ರಾತ್ರಿ** ಮತ್ತಿತರ ಕವನಗಳು, ಓದುಗರನ್ನು ಒಂದು ಹೊಸಲೋಕಕ್ಕೆ ಕರೆದೊಯ್ಯುತ್ತವೆ. ಮೂರ್ತಿಯವರ ಸುಂದರ ಅಭಿವ್ಯಕ್ತಿಗೆ ಹಲವು ಕವನಗಳು ಉತ್ತಮ ಉದಾಹರಣೆಗಳಾಗಿವೆ. ಶ್ರೀಸಾಮಾನ್ಯರು ನಿರ್ಜೀವ ಎಂದು ಭಾವಿಸುವ ಹಲವಾರು ವಸ್ತುಗಳಿಗೆ ಜೀವತುಂಬಿ ಹೊಸ ಹೊಳಹು ನೀಡುವ ಪರಿ ಅವರ್ಣನೀಯ. ಹೆಚ್‌ಎಸ್.ವಿ.ಯವರ ಕಾವ್ಯಗಳ ಜನಪ್ರಿಯತೆ ಒಟ್ಟು ಕನ್ನಡ ಕಾವ್ಯ ಪರಂಪರೆಗೆ, ಭಾವಗೀತೆಗಳ ಲೋಕದಲ್ಲಿ ಹೊಸ ಸಂಚಲನ ಮೂಡಿಸಿವೆ.

ರಾಮನವಮಿಯ ರಾತ್ರಿ

ಶ್ರೀಯುತ ಎಚ್‌ಎಸ್ ವೆಂಕಟೇಶಮೂರ್ತಿಯವರು ರಾಮನವಮಿಯ ರಾತ್ರಿ ಕವನವನ್ನು ಬರೆದು ಅರ್ಚನಾ ಉಡುಪರಿಗೆ ಕಳಿಸಿದಾಗ ಅರ್ಚನಾರು ಆ ಕಥನಕ್ಕೆ ರಾಗ ಸಂಯೋಜನೆ ಮಾಡಿ, ಕವಿಯ ಭಾವಕ್ಕೆ ಚ್ಯುತಿ ಬರದಂತೆ, ಹೆಚ್ಚು ವಾದ್ಯಗಳನ್ನು ಉಪಯೋಗಿಸದೆ, ಹಾಡಿ ಕಳುಹಿಸಿದಾಗ ಎಚ್‌ಎಸ್ ವೆಂಕಟೇಶಮೂರ್ತಿ ಅವರು ಅದಕ್ಕೆ ಮೆಚ್ಚುಗೆ ಸೂಚಿಸಿದ್ದರು. ನಂತರ ಆ ಹಾಡು ಹೆಚ್ಚು ಜನಪ್ರಿಯತೆ ಗಳಿಸಿತು.


ಪೂಜಾ ವಿಗ್ರಹಗಳನ್ನು ಶ್ರೀಸಾಮಾನ್ಯರು ನಿರ್ಜೀವ ವಸ್ತು ಎಂದು ಭಾವಿಸುವ ಕಲ್ಲಿನಿಂದ ಕೆತ್ತಲ್ಪಟ್ಟಿದ್ದರೂ, ಅವುಗಳಿಗೆ ಜೀವ ಭಾವ ತುಂಬಿ ಯೋಚನಾಲಹರಿಯನ್ನು ಹರಿಯ ಬಿಟ್ಟಿರುವುದು, ಅಭಿಷೇಕದ ಜಲವನ್ನು ಸೀತಾಮಾತೆಯ ಕಣ್ಣೀರಿಗೆ ಹೋಲಿಸಿರುವುದು ಎಲ್ಲವೂ ಅಗೋಚರ ಸರ್ವವ್ಯಾಪಿಯ ಇರುವಿಕೆಯನ್ನು ಸಾಂಕೇತಿಕವಾಗಿ ಸ್ಪಷ್ಟಪಡಿಸುತ್ತದೆ.

***

ಎಚ್ಎಸ್‌ವಿ ಅವರ ಪುಸ್ತಕದ ಬಗ್ಗೆ

"ಎಲ್ಲ ನೆನಪಾಗುತಿದೆ – ಅನಾತ್ಮಕಥನ"

– ಸಿ.ಆರ್. ಸೀತಾರಾಘವ



ಪ್ರಕಾಶಕರು: ಅಂಕಿತ ಪುಸ್ತಕ
2ನೆಯ ಮುದ್ರಣ: 2019 (ವಿಸ್ತೃತ ಆವೃತ್ತಿ)
ಬೆಲೆ: ರೂ. 350

ಡಾ, ಎಚ್ಚೆಸ್ವಿಯವರ ಎಲ್ಲ ನೆನಪಾಗುತಿದೆ' ಕೃತಿಯು ಎಚ್ಎಸ್‌ವಿ ಅವರೇ ಹೇಳುವಂತೆ, ಅವರ ೨೧ 'ಆತ್ಮಕಥನ' ಸ್ವರೂಪದ ಬರಹ"ಗಳನ್ನು ಒಳಗೊಂಡಿದೆ. ಇದೊಂದು ನಿಜವಾಗಲೂ ವಿಶಿಷ್ಟ ಬಗೆಯ ಆತ್ಮಕಥನ. ಇಡೀ ಕಥಾನಕದೊಳಗೆ ಎಚ್ಎಸ್‌ವಿ ಅವರು ಪ್ರಖರವಾಗಿ ಕಾಣಿಸಿಕೊಳ್ಳದೆ, ತಮ್ಮ ಸಾರ್ಥಕ ಬದುಕನ್ನು ರೂಪಿಸಿದ ವಿವಿಧ ಜೀವನ ದ್ರವ್ಯಗಳ ಬಗ್ಗೆ ಆಪ್ತವಾಗಿ ದಾಖಲಿಸುವ ಮೂಲಕವೇ ಕಾಣಿಸಿಕೊಳ್ಳುತ್ತಾರೆ. ನಾನು ಗ್ರಹಿಸಿದಂತೆ ಈ ಜೀವನ ದ್ರವ್ಯಗಳು ಯಾವುವೆಂದರೆ, ಅವರ ಬಾಲ್ಯದ ಕೌಟುಂಬಿಕ ಪರಿಸರ ಮತ್ತು ಅದರಿಂದ ಅವರು ಪಡೆದ ಸಂಸ್ಕಾರಗಳು; ಅವರನ್ನು ಬೆಳೆಸಿದ ಗುರು-ಹಿರಿಯರು; ಅಂದಿನ ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿಸರ; ಸಾಹಿತ್ಯ ಕ್ಷೇತ್ರದಲ್ಲಿ ಅವರನ್ನು ಪ್ರೋತ್ಸಾಹಿಸಿದ ಮತ್ತು ಪ್ರಭಾವಿಸಿದ ಹಿರಿಯರು; ವೃತ್ತಿ, ಪ್ರವೃತ್ತಿಗಳಲ್ಲಿ ತಮ್ಮೊಂದಿಗೆ ಒಡನಾಡಿದ ಗೆಳೆಯರು, ಹಿತೈಷಿಗಳು; ವೈಯುಕ್ತಿಕ ಬದುಕಿನ ಮನೋಜ್ಞ ಪ್ರಸಂಗಗಳು ಇತ್ಯಾದಿ. ಸಣ್ಣವರು, ದೊಡ್ಡವರು ಅನ್ನದೆ ಅದೆಷ್ಟೋ ವ್ಯಕ್ತಿತ್ವಗಳು ಮತ್ತು ಅವರೊಂದಿಗಿನ ಒಡನಾಟದ ಅಸಂಖ್ಯ ಹಾಗೂ ಸಮೃದ್ಧ ನೆನಪುಗಳನ್ನು ದಾಖಲಿಸುವ ಮೂಲಕ, ಎಚ್ಎಸ್‌ವಿ ಅವರ "ಆತ್ಮ" ಈ "ಅನಾತ್ಮಕಥನ"ದಲ್ಲಿ ಮೂಡಿದೆ. ಡಾ. ಜಿ.ಎಸ್.ಅಮೂರ ಅವರು ಹೇಳಿರುವಂತೆ, ಈ ಕೃತಿಯಲ್ಲಿ ಎಚ್ಎಸ್‌ವಿ ಅವರ ವ್ಯಕ್ತಿತ್ವ ಮೂಡಿಬಂದಿರುವಂತೆ, ಬಾಹ್ಯ ಜಗತ್ತೂ ಕೂಡಾ ಪ್ರತಿಫಲಿತವಾಗುತ್ತದೆ.

ಒಮ್ಮೆ ಕೈಗೆ ಎತ್ತಿಕೊಂಡರೆ, ಒಂದೇ ಸಮ ಓದಿಸಿಕೊಂಡು ಹೋಗುವ ಕಥನ ಇದು. ಮೊದಲಿಗೆ, ಬಾಲ್ಯ ಜೀವನದ ಕೆಲವು ಪ್ರಸಂಗಗಳನ್ನು ನೋಡೋಣ. ಇವುಗಳಲ್ಲಿ ೫೦-೬೦ರ ದಶಕದ ಹಳ್ಳಿಯ ಬಾಳು, ಅಂದಿನ ಆಹಾರ ವೈಶಿಷ್ಟ್ಯಗಳು, ಹಬ್ಬಗಳು, ಜಾತ್ರೆಗಳು, ನಂಬಿಕೆಗಳು ಮತ್ತು ಆಚರಣೆಗಳು – ಇವುಗಳ ಬಣ್ಣನೆ ಓದುಗರನ್ನು ಅಂದಿನ ಲೋಕಕ್ಕೆ ಕೊಂಡುಯ್ಯುತ್ತದೆ. ಆ ಕಾಲಕ್ಕೆ ಸರ್ವೇ ಸಾಧಾರಣವಾಗಿದ್ದ ದೈನಂದಿನ ಬದುಕಿನ ಜಂಜಾಟದ ನಡುವೆ, ಕೆಲ ಸಾಮಾನ್ಯ ಜೀವಿಗಳು ತೋರಿದ ಉದಾತ್ತ ನಡೆ, ಜೀವನ ವಿವೇಕ ಹಾಗೂ ಮಾನವೀಯತೆಗಳ ಹೃದ್ಯ ಚಿತ್ರಣವನ್ನು ಎಚ್ಎಸ್‌ವಿ ಈ ಪ್ರಸಂಗಗಳಲ್ಲಿ ನೀಡಿದ್ದಾರೆ. ಅವರ ಹಿರಿಯರಾದ ಪುಟ್ಟಪ್ಪಜ್ಜನ ರಸಿಕತೆ; ಇವರು ದೊಡ್ಡಮ್ಮ ಎಂದು ಕರೆಯುತ್ತಿದ್ದ ದೊಡ್ಡಜ್ಜಿಯ ಅಚ್ಚುಕಟ್ಟುತನ, ವಾತ್ಸಲ್ಯ ಹಾಗೂ ಕಾರ್ಯಕ್ಷಮತೆ; ಅಜ್ಜಿಯ ಪಾಕ ಪ್ರಾವೀಣ್ಯ, ಧೈರ್ಯ; ಒಬ್ಬಂಟಿಯಾಗಿ ಬಾಳುತ್ತಿದ್ದ ಊರಿಗೆಲ್ಲ ಹಾಲು ಸರಬರಾಜು ಮಾಡುತ್ತಿದ್ದ ಭದ್ರಕ್ಕನ ಜೀವನೋತ್ಸಾಹ; ಅಲ್ಲಾಡಿ ರುದ್ರಣ್ಣ ಎಂಬ ಶ್ರೀಮಂತರ ಸುಸಂಸ್ಕೃತ ವ್ಯಕ್ತಿತ್ವ; ಬಾಲ್ಯದ ಗೆಳೆಯರ ತುಂಟಾಟ, ಸಾಹಸಗಳು ಇವೆಲ್ಲವನ್ನೂ ಎಚ್ಎಸ್‌ವಿ ತುಂಬಾ ಆಪ್ತತೆಯಿಂದ ಹಾಸ್ಯಲೇಪನದೊಂದಿಗೆ ನಮಗೆ ಉಣಬಡಿಸುತ್ತಾರೆ.

ಈ ಕಥನಗಳನ್ನು ಓದಿದ ಮೇಲೆ ಅವುಗಳಲ್ಲಿನ ಪಾತ್ರಗಳು ಅಥವಾ ವ್ಯಕ್ತಿತ್ವಗಳು ನಮ್ಮ ಮನಸ್ಸಿನೊಳಗೆ ಇಳಿಯುತ್ತವೆ. ಗೊರೂರರ ನಮ್ಮ ಊರಿನ ರಸಿಕರಲ್ಲಿ ಕಾಣುವ ಶಾಲು ಸಾಬಿ, ಸೀನಪ್ಪ ಇತ್ಯಾದಿಗಳಂತೆ. ನಮ್ಮ ಹಲವು ಹಿರಿಯ ಸಾಹಿತಿಗಳು ತಮ್ಮ ಕೃತಿಗಳಲ್ಲಿ ಅವರ ಊರು, ಜನಗಳ ಚಿತ್ರಗಳನ್ನು ಕಟ್ಟಿಕೊಡುವ ರೀತಿಯಲ್ಲೇ, ಓದುಗರ ಮನದಾಳಕ್ಕೆ ಇಳಿಸಿಬಿಡುವ

ಕಲೆಯನ್ನು ತೋರಿದ್ದಾರೆ. ಗೊರೂರರ ಗೊರೂರು, ಡಿವಿಜಿ ಅವರ ಮುಳಬಾಗಿಲು, ಚಿತ್ತಾಲರ ಹನೇಹಳ್ಳಿ, ಮೂರ್ತಿರಾಯರ ಅಕ್ಕಿಹೆಬ್ಬಾಳು ಇವುಗಳಂತೆ, ಎಚ್ಎಸ್ವಿ ಅವರ ಹೊದಿಗ್ಗೆರೆಯೂ ಈ ಅನಾತ್ಮಕಥನದ ಮೂಲಕ ನಮ್ಮೊಳಗೆ ಇಳಿಯುತ್ತದೆ ಎಂದು ನಿಸ್ಸಂಶಯವಾಗಿ ಹೇಳಬಹುದು.

ಈಗ ಎಚ್ಎಸ್ವಿ ಅವರು ನಮ್ಮ ಮುಂದೆ ತೆರೆದಿಡುವ ಕೆಲ ವ್ಯಕ್ತಿಚಿತ್ರಗಳನ್ನು ನೋಡೋಣ. ಸಿ.ಅಶ್ವಥ್ ಮತ್ತು ಮೈಸೂರು ಅನಂತಸ್ವಾಮಿಯವರಂತಹ ಗಾಯಕರು; ಪುತಿನ, ಜಿಎಸ್ಎಸ್ ಮತ್ತು ಅನಂತಮೂರ್ತಿಯವರಂತಹ ಹಿರಿಯ ಸಾಹಿತಿಗಳು; ವೈದ್ಯರಾಗಿದ್ದ ಅವರ ಶಿಷ್ಯ ಡಾ.ಎಚ್ಎಸ್ವೆಂಕಟೇಶ ಮೂರ್ತಿ, ನಟರಂಗದ ರಾಮಮೂರ್ತಿ, ಆಪ್ತ ಮಿತ್ರರಾದ ನರಹಳ್ಳಿ ಬಾಲಸುಬ್ರಹ್ಮಣ್ಯ, ಆರ್.ಎಸ್.ಎಂ. ಎಂಬ ಉಪಾಧ್ಯಾಯರು, ಹೀಗೆ ಹಲವರು ಹಿರಿಯ, ಕಿರಿಯರೊಂದಿಗಿನ ಒಡನಾಟದ ನೆನಪುಗಳನ್ನು ನಾವು ಕಾಣಬಹುದು.

ಯುಗಾದಿ ಹಬ್ಬದಂದು ಪು ತಿ ನ ಅವರ ಮನೆಗೆ ಭೇಟಿ ನೀಡಿದ ಸಂದರ್ಭವನ್ನು ಎಚ್ಎಸ್ವಿಯವರು ಸೊಗಸಾಗಿ ನಿರೂಪಿಸಿದ್ದಾರೆ. ಉದಾರ ನಡವಳಿಕೆಯೊಂದಿಗೆ ಮಿಳಿತವಾದ ಪು ತಿ ನ ಅವರ ಸಂಪ್ರದಾಯ ಶ್ರದ್ಧೆ, ಹಸಿದ ಅತಿಥಿಯ ಬಗೆಗಿನ ಅವರ ಕಾಳಜಿಯನ್ನು ಈ ಪ್ರಸಂಗದಲ್ಲಿ ನಾವು ಕಾಣಬಹುದು. ಇನ್ನೊಂದು ಪ್ರಸಂಗದಲ್ಲಿ ವೃದ್ಧಾಪ್ಯದಿಂದ ಕಣ್ಣು ಕಾಣಿಸದ ಸ್ಥಿತಿಯಲ್ಲಿದ್ದ ಪು ತಿ ನ ಮುಸ್ಸಂಜೆಯ ಹೊತ್ತಿನಲ್ಲಿ ಗೋಡೆಯ ಕಡೆ ಮುಖ ಮಾಡಿ ಕೂತಿದ್ದಾರೆ. ಅವರನ್ನು ಬಾಗಿಲ ಕಡೆ ಮುಖ ಮಾಡಿ ಕೂಡಿಸಬೇಕೆಂಬ ಎಚ್ಎಸ್ವಿ ಅವರ ಇರಾದೆಗೆ, "ಈಗ ಸೂರ್ಯನಾರಾಯಣ ಮುಳುಗುತ್ತಿರುವ ಸಮಯ, ಅದಕ್ಕೇ ನಾನು ಈಕಡೆ ಮುಖ ಮಾಡಿ ಕೂತಿದ್ದೇನೆ.. ನಾನು ನೋಡುತ್ತಿರುವುದು ಗೋಡೆಯನ್ನಲ್ಲ.. ಸೂರ್ಯನ್ನ" ಎಂದು ಪು ತಿ ನ ಪ್ರತಿಕ್ರಿಯಿಸುತ್ತಾರೆ! "ಕಣ್ಣಿರುವ ನಾವು ನೋಡುವುದು ಗೋಡೆಯನ್ನ, ಕಣ್ಣಿಲ್ಲ ಎಂದು ನಾವು ಕನಿಕರಿಸುತ್ತಿರುವ ಪು ತಿ ನ ನೋಡುತ್ತಿರುವದು ಸೂರ್ಯನಾರಾಯಣನನ್ನ" ಎಂದು ಎಚ್ಎಸ್ವಿ ಇಲ್ಲಿ ಹೇಳುವ ಮಾತು ತುಂಬಾ ಅರ್ಥಪೂರ್ಣವಾಗಿದೆ.

ಹಾಗೆಯೇ ಅನಂತಮೂರ್ತಿಯವರ ಜೊತೆ ಒಡನಾಟದ ಕೆಲವು ಪ್ರಸಂಗಗಳು, ಎಚ್ಎಸ್ವಿ ಅವರೇ ಹೇಳುವಂತೆ ಅವರ ಕಾವ್ಯದ ಕುರಿತ ತೀವ್ರ ಹಸಿವು, ಜೀವನೋತ್ಸಾಹಗಳ ಬಗ್ಗೆ ನಮಗೆ ತಿಳಿವನ್ನು ನೀಡುತ್ತವೆ. ತಮ್ಮ ಕಾವ್ಯ ಕೃಷಿಗೆ ಅನಂತಮೂರ್ತಿಯವರು ನೀಡಿದ ಪ್ರೋತ್ಸಾಹವನ್ನು ಎಚ್ಎಸ್ವಿ ಹೃದ್ಯವಾಗಿ ಬಣ್ಣಿಸಿದ್ದಾರೆ. ಅನಂತಮೂರ್ತಿಯವರು ಕೊನೆಯ ದಿನಗಳಲ್ಲಿ ಅನಾರೋಗ್ಯದಿಂದ ಬಳಲುತ್ತಿದ್ದಾಗಲೂ, ಎಚ್ಎಸ್ವಿ ಅವರ ಪಂಪನ ಕುರಿತ ಕೃತಿಯನ್ನು ತರಿಸಿಕೊಂಡು ಓದಿ ಅದರ ಬಗ್ಗೆ "ಪ್ರಾಚೀನ ಕಾಲದ ಪಂಪ ಕುಬ್ಜನಾಗದೇ ಆಧುನಿಕ ಕಾಲಕ್ಕೆ ಬಂದಿದ್ದಾನೆ" ಎಂಬ ಪ್ರಶಂಸೆಯ ಮಾತನ್ನು ಹೇಳಿದ ಪ್ರಸಂಗ ತುಂಬಾ ಇಷ್ಟವಾಗುತ್ತದೆ. ಇದಕ್ಕೆ ಎಚ್ಎಸ್ವಿಯವರ ವಿನಯಪೂರ್ವಕ ಪ್ರತಿಕ್ರಿಯೆ ಏನೆಂದರೆ "ಇಂಥ ಒಂದು ಸಾಲಿನ ಸಂಪಾದನೆಗಾಗಿ ನಾನು ಸಾವಿರಾರು ಸಾಲು ವ್ರತತೊಟ್ಟು ಬರೆದೇನು!" ಆ ಕಾಲದ ಪ್ರೀತಿ, ಸೌಹಾರ್ದಯುತ ಸಂಬಂಧಗಳ ಬಗ್ಗೆ ಇದೊಂದು ಉತ್ತಮ ನಿದರ್ಶನ. ಹೀಗೆಯೇ ಹೊರನೋಟಕ್ಕೆ ತುಂಬಾ ಗಂಭೀರವಾಗಿ ಕಾಣುತ್ತಿದ್ದ ಹಿರಿಯ ಸಾಹಿತಿ ಜಿಎಸ್ಎಸ್ ಎಷ್ಟು ಸ್ನೇಹಜೀವಿ ಹಾಗೂ ಹಾಸ್ಯ ಪ್ರಜ್ಞೆಯುಳ್ಳವರು ಎಂಬುದನ್ನು ಕೆಲ ಪ್ರಸಂಗಗಳ ಮೂಲಕ ನಿರೂಪಿಸುತ್ತಾರೆ.

ಇನ್ನು "ಅಶ್ವತ್ಥ ಎಂಬ ಅಯಸ್ಕಾಂತ"ಎಂಬ ಬರಹ ಪ್ರತಿಭೆ, ಸೃಜನಶೀಲತೆ ಮತ್ತು ಅದಮ್ಯ ಕನಸುಗಾರಿಕೆಯ ಮಿಶ್ರಣವಾದ, ಸಿ. ಅಶ್ವಥ್ ಅವರ ಸಂಕೀರ್ಣ ವ್ಯಕ್ತಿತ್ವವನ್ನು ನಮ್ಮ ಮುಂದೆ ತೆರೆದಿಡುತ್ತದೆ. ಹಲವು ಆಸಕ್ತಿಕರ ಘಟನೆಗಳ ಮೂಲಕ ಎಚ್ಎಸ್ವಿ ಅವರು ಅಶ್ವಥ್ ರನ್ನು ನಮ್ಮ ಮುಂದೆ ಅನಾವರಣ ಮಾಡುತ್ತಾರೆ. ಅಶ್ವಥ್ ಅವರ ೭೦ನೇ ಹುಟ್ಟುಹಬ್ಬವನ್ನು ಅದ್ದೂರಿಯಾಗಿ ಆಚರಿಸಲು ಎಲ್ಲಾ ತಯಾರಿ ನಡೆದಿರುವಾಗಲೇ, ಅವರು ಹಠಾತ್ತನೆ ಕಣ್ಣು ಮುಚ್ಚಿ, ಎಲ್ಲಿ ಅವರ ಜನ್ಮದಿನದ ಕಾರ್ಯಕ್ರಮ ನಡೆಯಬೇಕಿತ್ತೋ ಅಲ್ಲೇ ಅವರ ಅಂತಿಮ ದರ್ಶನಕ್ಕೆ ಏರ್ಪಾಡು ಮಾಡಬೇಕಾದ ವಿಷಾದಮಯ ಸನ್ನಿವೇಶವನ್ನು ಎಚ್ಎಸ್ವಿ ನಮ್ಮ ಮುಂದೆ ತೆರೆದಿಡುತ್ತಾರೆ. ಇದೇ ರೀತಿ ಮೈಸೂರು ಅನಂತಸ್ವಾಮಿ ಅವರ ಜೊತೆಗಿನ ಸಖ್ಯದ ನೆನಪುಗಳನ್ನೂ ನಿರೂಪಿಸಿದ್ದಾರೆ. ಎಚ್ಎಸ್ವಿ ಅವರ "ಲೋಕದ ಕಣ್ಣಿಗೆ ರಾಧೆಯು ಕೂಡಾ" ಮುಂತಾದ ಕವಿತೆಗಳಿಗೆ ರಾಗ ಸಂಯೋಜನೆ

ಮಾಡಿ ಹಾಡುವ ಮೂಲಕ ಅಪಾರ ಜನಪ್ರಿಯತೆಯನ್ನು ತಂದುಕೊಟ್ಟವರು ಇವರೇ. ವಿಶೇಷವೆಂದರೆ ಅಶ್ವಥ್ ಅವರು ಈ ಕವಿತೆಗಳನ್ನು ಯಾಕೋ ಒಪ್ಪಿರಲಿಲ್ಲ ಎಂದು ತಿಳಿದುಬರುತ್ತದೆ. ಈ ರೀತಿ ಮೊದಲಾದ ಎಚ್‌ಎಸ್‌ವಿ ಮತ್ತು ಅನಂತಸ್ವಾಮಿಯವರ ಸ್ನೇಹ ಬಾಂಧವ್ಯ ಅಪೂರ್ವವಾದದ್ದು.

ಇನ್ನು ಎಚ್‌ಎಸ್‌ವಿ ಅವರ ವೈಯುಕ್ತಿಕ ಬದುಕಿನ ಕೆಲವು ಹೃದಯಂಗಮ ಸನ್ನಿವೇಶಗಳನ್ನು ಒಳಗೊಂಡ ಬರಹಗಳು ಹಲವು ಇಲ್ಲಿವೆ. ಅವರ ಬಾಳಿನ ಬೆಳಕಾದ ಮಡದಿಯನ್ನು ಹದಿನಾರರ ಹರೆಯದಲ್ಲಿ ಮೊದಲ ಬಾರಿಗೆ ಕಂಡಿದ್ದು, ಮದುವೆ ನಿಶ್ಚಯ, ಮದುವೆಗೆ ಮುಂಚೆ ಒಮ್ಮೆ ಆದ ಭೇಟಿ, ಮದುವೆಯ ಶಾಸ್ತ್ರಗಳ ಬಣ್ಣನೆ ಇವೆಲ್ಲವನ್ನೂ ಓದಿಯೇ ಸವಿಯಬೇಕು. ಇದೆಲ್ಲಕ್ಕೂ ಮೀರಿದ್ದು ಎಚ್‌ಎಸ್‌ವಿ ಅವರ ಮೊದಲ ರಾತ್ರಿಯ ಅನುಭವ! ಶಾಸ್ತ್ರ, ಆಚರಣೆಗಳ ಭರದಲ್ಲಿ ರಾತ್ರಿ ಹನ್ನೆರಡಾದರೂ ಮದುಮಕ್ಕಳಿಗೆ ಬಿಡುವೆ ಇಲ್ಲದ ಪರಿಸ್ಥಿತಿ! ಕೊನೆಗೂ ಅವಕಾಶ ಸಿಕ್ಕಿತು ಎಂದಾಗ ಮದುಮಗಳು ಧರಿಸಿದ್ದ ಯಾರ್ಯಾರದೋ ಅಸಂಖ್ಯ ಒಡವೆಗಳನ್ನು ಜೋಪಾನವಾಗಿ ಕಳಚಿಡುವ ಕೆಲಸ! ಇದು ಮುಗಿಯುವ ವೇಳೆಗೆ ಬೆಳಗಾಗುತ್ತದೆ. ಈ ಪ್ರಸಂಗವನ್ನು ರಸಭರಿತವಾಗಿ ವರ್ಣಿಸಿದ್ದಾರೆ.

ವಿಧಿಯ ಅನೂಹ್ಯ ಲೀಲೆಯೆಂಬಂತೆ ೪೦ ವರ್ಷಗಳ ನಂತರ ಅವರ ಶ್ರೀಮತಿಯವರು ಅನಾರೋಗ್ಯ ಪೀಡಿತರಾಗಿದ್ದಾಗ ಒಮ್ಮೆ ವೈದ್ಯರನ್ನು ಭೇಟಿ ಮಾಡಲು ಹೋಗುವಾಗ ಎಲ್ಲಾ ಒಡವೆಗಳನ್ನೂ ಧರಿಸಿರುತ್ತಾರೆ. ಮನೆಗೆ ಬಂದ ಮೇಲೆ ಅತೀವ ಬಳಲಿಕೆಯಿಂದ ಒಡವೆಗಳನ್ನು ತೆಗೆಯದೇ ಹಾಗೇ ಮಲಗುತ್ತಾರೆ. ಆಗ ಎಚ್‌ಎಸ್‌ವಿ ಅವರೇ ಆ ಒಡವೆಗಳನ್ನು ಕಳಚಬೇಕಾಗಿ ಬಂದ ದುರ್ಭರ ಪ್ರಸಂಗ ಓದುಗನ ಮನಸ್ಸನ್ನು ಹಿಂಡುವಂಥದ್ದು. ನಾಲ್ಕು ದಶಕಗಳ ಕಾಲ ಕವಿಯ ಬಾಳನ್ನು ಬೆಳಗಿ, ಬಂಧು–ಬಳಗ, ಗೆಳೆಯರು, ಶಿಷ್ಯ ಸಮೂಹ ಎಲ್ಲರನ್ನೂ ಆದರಿಸುತ್ತಾ, ಮನೆಯ ಮಕ್ಕಳು–ಸೊಸೆಯರಿಗೆ ದಾರಿದೀಪವಾಗಿದ್ದ ತಮ್ಮ ಮಡದಿಯ ಅಕಾಲಿಕ ಅಗಲಿಕೆಯನ್ನು ಎಚ್‌ಎಸ್‌ವಿ ಸ್ವೀಕರಿಸಿದ ರೀತಿ ಅನನ್ಯ. ಅನಾತ್ಮಕಥನದ "ಮರೆಯಲಾಗದ ಆ ಓಕುಳಿ ಸಂಜೆ", ‘‘ನೀನೆಲ್ಲಿ ಈಗ?’’ , ‘‘ಅರ್ಪಣೆ ಎನ್ನುವ ಪ್ರೀತಿಯ ವಹಿವಾಟು" ಮತ್ತು ‘‘ಆಕಾಶವಿತ್ತೆಂಬುದಕ್ಕೆ ಸಾಕ್ಷಿ ಆ ನಕ್ಷತ್ರ" –ಈ ನಾಲ್ಕು ಬರಹಗಳಲ್ಲಿ ಎಚ್‌ಎಸ್‌ವಿ ಅವರು ಚಿತ್ರಿಸಿರುವ ತಮ್ಮ ಮನದನ್ನೆಯ ಜೊತೆಗಿನ ಒಡನಾಟದ ನೆನಪುಗಳನ್ನು ಕಾಣಬಹುದು.

ಕೊನೆಯದಾಗಿ ಅವರ ಶ್ರೀಮತಿಯವರು ಅಗಲಿದ ಸಂದರ್ಭ. 'ಆಕಾಶವಿತ್ತೆಂಬುದಕ್ಕೆ ಸಾಕ್ಷಿ ಆ ನಕ್ಷತ್ರ" ಎಂಬ ಬರಹವು ಆ ಮನ ಕಲಕುವ ಸನ್ನಿವೇಶವನ್ನು ನಮ್ಮ ಮುಂದಿಡುತ್ತದೆ. ಶ್ರೀಮತಿಯವರ ಮೂಗಿನಲ್ಲಿ ಮಗ ಮಾಡಿಸಿಕೊಟ್ಟಿದ್ದ ವಜ್ರದ ಮೂಗುಬಟ್ಟು ಇರುತ್ತದೆ. ಅವರಿಗೆ ಮೂಗುಬಟ್ಟು ತೆಗೆಯುವುದು ಮೊದಲಿನಿಂದಲೂ ಕ್ಲಿಷ್ಟಕರವಾಗಿದ್ದನ್ನು ಅರಿತಿದ್ದ ಎಚ್‌ಎಸ್‌ವಿ ಅದನ್ನು ತೆಗೆಯುವುದು ಬೇಡ ಎನ್ನುತ್ತಾರೆ. ಇದನ್ನು ಕವಿ ಹೃದಯವು ಪರಿಭಾವಿಸಿದ ರೀತಿ ನೋಡಿ:

ಬಿಂದಿಗೆ ಬಿಂದಿಗೆ ತಣ್ಣೀರು ಸುರಿದು ಹಣೆಯಲ್ಲಿದ್ದ
ಬಿಂದಿ ಕರಗಿ ಮುಚ್ಚಿದ್ದ ಕಣ್ಣಂಚಿನಿಂದ ಹರಿಯುತ್ತಿತ್ತು ಕೆನ್ನೀರು
ಮೂಗ ತುದಿಯಲ್ಲೊಂದು ವಜ್ರದ ನತ್ತು–ಹೊತ್ತಿಲ್ಲ ಗೊತ್ತಿಲ್ಲ–
ಹೊಳೆಯುತ್ತಿತ್ತು. **ಆಕಾಶವಿತ್ತೆಂಬುದಕ್ಕೆ ಸಾಕ್ಷಿ ಆ ನಕ್ಷತ್ರ**

ಎಚ್‌ಎಸ್‌ವಿ ಅವರ ಅನಾತ್ಮ ಕಥನ ಕನ್ನಡದ ಶ್ರೇಷ್ಠ ಆತ್ಮಕಥೆಗಳ ಸಾಲಿಗೆ ಸೇರುತ್ತದೆ. ಎಲ್ಲೂ ವಾಚ್ಯವಾಗದೆ, ಭಾವುಕವಾಗದೆ ರಸಮಯ, ವಿನೋದಪೂರ್ಣ ಹಾಗೂ ಸಂಯಮದ ನಿರೂಪಣೆಯೊಂದಿಗೆ ಓದುಗರ ಭಾವಕೋಶವನ್ನು ತಟ್ಟುವ ಒಂದು ಅನನ್ಯ ಕೃತಿ ಇದು.

***

ಡಾ.ಎಚ್ಚೆಸ್ವಿಯವರ ಕವಿತೆಯ ಬಗ್ಗೆ

" ಪ್ರೀತಿ ಕೊಟ್ಟ ರಾಧೆಗೆ.... ಮಾತು ಕೊಟ್ಟ ಮಾಧವ "

– ರೇಣುಕಾ ದೇಸಾಯಿ

ಕನ್ನಡ ಭಾವಗೀತೆಗಳಿಗೆ ತಮ್ಮ ಸುಮಧುರ ಕಂಠ ನೀಡಿ ಭಾವಗೀತೆಗಳನ್ನು ಬಾನೆತ್ತರಕ್ಕೇರಿಸಿ ಭಾವಗೀತೆಗಳ ಭಾವಯಾನ ಮಾಡಿಸಿದವರು ಸಂಗೀತಗಾರ ಮೈಸೂರು ಅನಂತಸ್ವಾಮಿಯವರು, ಅವರೇ ತಯಾರಿಸಿದ ಒಂದು ಅಡಕ ಮುದ್ರಿಕೆ 'ರಾಧಾ ಮಾಧವ ಗುಚ್ಛ' ಅದರಿಂದ ಆಯ್ದುಕೊಂಡ ಗೀತೆಯಿದು. ಇದನ್ನು ಭಾವಗೀತೆಯೆನ್ನಲೋ, ಭಕ್ತಿಗೀತೆಯೆನ್ನಲೋ ಇಲ್ಲ ರಾಧಾಮಾಧವರ ಒಲವಿನ ಪ್ರೀತಿಯನ್ನು ಎತ್ತಿ ಹೇಳಿರುವ ಪ್ರೇಮ ಗೀತೆಯೆನ್ನಲೋ ಎನ್ನಬಹುದಾದ ಎಚ್ಚೆಸ್ವಿಯವರ ಗೀತೆ- **ಪ್ರೀತಿ ಕೊಟ್ಟ ರಾಧೆಗೆ ಮಾತು ಕೊಟ್ಟ ಮಾಧವ.**

ಕಾವ್ಯ ಕಾಮಧೇನು ಎಚ್ಚೆಸ್ವಿ, ಮೃದು ಮಾತಿನ ಮೆಲುದನಿಯ ಕವಿ. ಇವರ ಲೇಖನಿಯಿಂದ ಬಂದ ಪ್ರೇಮ, ಭಕ್ತಿಭಾವಾರ್ಪಣೆಯ ಗೀತೆಯಿದು, ಅಂದು ಯೂಟ್ಯೂಬಿನಲ್ಲಿ ಕೇಳಿದಾಗಿನಿಂದ ಅದರ ಗುಂಗು ಇಡೀ ದಿನ ಮೈಮನ ಹೊಕ್ಕಿದೆ, **ಪ್ರೀತಿ ಕೊಟ್ಟ ರಾಧೆಗೆ ಮಾತು ಕೊಟ್ಟ ಮಾಧವ.**

ಜಾಲತಾಣದಲ್ಲಿ ಇದರ ಪದ್ಯ ಪಾಠವನ್ನು ಗಮನಿಸಿದಾಗ ಎರಡು ಸಾಲಿನ ಪದ್ಯದ ರೂಪದಲ್ಲಿ ಬರೆದಿದೆ, ಇನ್ನೊಂದು ಕೊಂಡಿಯಲ್ಲಿ ನಾಲ್ಕು ಸಾಲಿನಲ್ಲಿ ಬರೆದಿರುವದಿದೆ. ಇದು ಬರೀ ಮೂರು ನುಡಿಗಳ ಕವಿತೆ. ಕೃಷ್ಣನ ಪ್ರೀತಿ, ಉದಾರತೆ, ಭಕ್ತವತ್ಸಲ ಎನ್ನುವ ಭಾವದಲ್ಲಿ ರಚನೆಗೊಂಡಿದೆ. ಓದಿದಾಗ, ಕೇಳಿದಾಗ ಮನಸ್ಸು ಆರ್ದ್ರಗೊಳ್ಳುತ್ತದೆ.

ಪ್ರೀತಿ ಕೊಟ್ಟ ರಾಧೆಗೆ...

-ಡಾ.ಎಚ್.ಎಸ್.ವೆಂಕಟೇಶಮೂರ್ತಿ

ಪ್ರೀತಿ ಕೊಟ್ಟ ರಾಧೆಗೆ
ಮಾತು ಕೊಟ್ಟ ಮಾಧವ ।
ತನ್ನನಿತ್ತ ಕೊಳಲಿಗೆ
ರಾಗ ತೆತ್ತ ಮಾಧವ ॥

ಗಂಧ ಕೊಟ್ಟ ಹೆಜ್ಜೆಗೆ
ಅಂದ ಕೊಟ್ಟ ಮಾಧವ ।
ಅನ್ನ ಕೊಟ್ಟ ಭಕ್ತಗೆ
ಹೊನ್ನ ಕೊಟ್ಟ ಮಾಧವ ॥

ಹಾಲು ಕೊಟ್ಟ ವಿಧುರಗೆ
ಬಾಳು ಕೊಟ್ಟ ಮಾಧವ ।
ದೇಹ ಕೊಟ್ಟ ಮಣ್ಣಿಗೆ
ಜೀವ ಕೊಟ್ಟ ಮಾಧವ

***

ಕವಿ ಎಚ್ಚೆಸ್ವಿಯವರು, ತಾನು ಕುಮಾರವ್ಯಾಸ ಮತ್ತು ತಮ್ಮ ಗುರುಗಳಾದ ಪು.ತಿ.ನ. ಇಬ್ಬರನ್ನೂ ಇಷ್ಟಪಡುತ್ತೇನೆ ಎಂದು ಹೇಳಿಕೊಂಡಿದ್ದಾರೆ. ಕುಮಾರವ್ಯಾಸ ಕೃಷ್ಣನನ್ನು ಕೆಲವು ಕಡೆ ದೇವರು, ಕೆಲವು ಕಡೆ ಮಾನವನೆಂದು ಚಿತ್ರಿಸಿದರೆ, ಪು.ತಿ.ನ ಅವರು, ಕೃಷ್ಣ ಆರಾಧ್ಯದೈವ ಎಂದು ಅವನಲ್ಲಿ ಅಪರಮಿತ ಭಕ್ತಿಯನ್ನಿಟ್ಟು ಕಾವ್ಯ ರಚಿಸಿ ಅವನ ಚರಣಕಮಲಗಳಿಗೆ ಅರ್ಪಿಸಿದ್ದಾರೆ. ಆದರೆ ಇವರಿಬ್ಬರಿಗಿಂತ ಭಿನ್ನವಾಗಿ ಎಚ್ಚೆಸ್ವಿಯವರು ಕೃಷ್ಣನನ್ನು ರಾಧೆಯ ಪ್ರಿಯತಮನಾಗಿ ಹೆಚ್ಚುಕಡೆ ಚಿತ್ರಿಸಿದ್ದಾರೆ.

ಗೋಕುಲದ ಗೋಪಿಯರೆಲ್ಲರಿಗಿಂತ ಹೆಚ್ಚಾಗಿ ರಾಧೆಯು ಕೃಷ್ಣನನ್ನು ಮನಸಾರೆ ಪ್ರೀತಿಸಿದಳು, ಅಪರಿಮಿತವಾಗಿ ಆರಾಧಿಸಿದಳು ಮತ್ತು ಭಕ್ತಿಪರವಶವಾದಳು. ಅದಕ್ಕೆ ಪ್ರತಿಫಲವಾಗಿ ಶ್ರೀಕೃಷ್ಣ ಅವಳಿಗೆ ಮಾತು ಕೊಟ್ಟ!! ಏನಂತ? ನಾನು ನಿನ್ನನ್ನು ಪ್ರೀತಿಸುತ್ತೇನೆ ಎಂದೇ? ಪ್ರೇಮಿಸುತ್ತೇನೆ ಅಂತನೇ? ಇಲ್ಲ ಪ್ರೀತಿಸುವ ಎಲ್ಲ ಪುರುಷರಂತೆ ನಿನ್ನನ್ನು ಮದುವೆಯಾಗಿ ಈ ಜನ್ಮಪೂರ್ತಿ ನಿನ್ನೊಂದಿಗೆ ದಾಂಪತ್ಯ ನಡೆಸುತ್ತೇನೆ ಎಂದೇ? ನಮಗೆಲ್ಲ ಗೊತ್ತಿದ್ದಂತೆ, ಅತಿ ಪುರಾತನ ಲವ್ ಫೇಲ್ಯೂರ್ ಸ್ಟೋರಿ ಅಂತ ಇದ್ರೆ ಅದು ಕೃಷ್ಣ ರಾಧೆಯರದು. ಗೋಕುಲದಿಂದ ನಿರ್ಗಮಿಸುವಾಗ ಕೃಷ್ಣ,

ಗೋಪಿಯರಿಗೆ, ಅದರಲ್ಲೂ ವಿಶೇಷವಾಗಿ ರಾಧೆಗೆ ತಾನು ನಿರ್ಗಮಿಸುತ್ತೇನೆ ಎಂದನೇ ಹೊರತು, ಯಾವಾಗ ಮರಳುತ್ತೇನೆ ಎಂದು ಹೇಳಲೇ ಇಲ್ಲ. ಹಾಗಿದ್ದರೂ, ಎಚ್ಚೆಸ್ವಿಯವರ "ಪ್ರೀತಿ ಕೊಟ್ಟ ರಾಧೆಗೆ ಮಾತು ಕೊಟ್ಟ ಮಾಧವ..." ಸಾಲುಗಳನ್ನು ಓದಿದಾಗ ಎಲ್ಲರ ಮನದಲ್ಲಿ ಒಂದು ನವಿರಾದ ಪ್ರೀತಿಯುಕ್ಕಿ ಮನಸ್ಸು ಮುದಗೊಳ್ಳುತ್ತದೆ. ಹಾಗೆ ಮುಂದಿನ ಸಾಲಿನಲ್ಲಿ ಕವಿ ತನ್ನನ್ನು ತಾನು ಜನಾರ್ದನನಿಗೆ ಅರ್ಪಿಸಿಕೊಂಡ ಕೊಳಲಿಗೆ, ಸಂಗೀತ ಹೊರಹೊಮ್ಮುವ ಶಕ್ತಿಯನ್ನು ದಯಪಾಲಿಸಿದ ಎನ್ನುವಂತೆ, ತನ್ನನಿತ್ತ ಕೊಳಲಿಗೆ ರಾಗ ತೆತ್ತ ಮಾಧವ... ಎನ್ನುತ್ತಾ, ಭಕ್ತಿಯ ಮೋಡಿಗೆ ಸಿಲುಕಿಸಿ ಯಶಸ್ವಿಯಾಗುತ್ತಾರೆ, ಪೂರ್ತಿ ಸಮರ್ಪಣಾ ಭಾವದಿಂದ ಭಜಿಸಿದರೆ ನಿನಗೆ ಬೆಲೆಯುಳ್ಳ ಸ್ಥಿರವಾದ ಶಾಶ್ವತ ಉಡುಗೊರೆ ಸಿಗುವದರಲ್ಲಿ ಅನುಮಾನವಿಲ್ಲ ಎಂದು ಭರವಸೆ ಕೊಡುತ್ತಾರೆ ಕವಿ.

"ಗಂಧ ಕೊಟ್ಟ ಹೆಣ್ಣಿಗೆ ಅಂದ ಕೊಟ್ಟ ಮಾಧವ..." ಕವಿ ಈ ರೀತಿ ಬರೆಯಲು ಶ್ರೀ ಮದ್ಭಾಗವತದಲ್ಲಿರುವ ಒಂದು ಸಂದರ್ಭ ಕಾರಣ. ತ್ರಿವಕ್ರಾ ಕಂಸನ ಗಂಧದ ದಾಸಿಯಾಗಿದ್ದವಳು. ಗಂಧ ತೇಯ್ದು ಕಂಸ, ಕಂಸನ ಆಪ್ತ ಪರಿವಾರದವರಿಗೆ ಹಚ್ಚಿಕೊಳ್ಳಲು ತಲುಪಿಸೋದು ಇವಳ ನಿತ್ಯದ ಕೆಲಸ. ಇವಳು ಅಂಕುಡೊಂಕಾದ ದೇಹವುಳ್ಳವಳು, ಗೂನಿ. ಹಾಗಾಗಿ ಇವಳಿಗೆ ಕುಬ್ಜಾ, ತ್ರಿವಕ್ರಾ, ಎಂಬ ಹೆಸರುಗಳು.

ಕೃಷ್ಣ ಬಲರಾಮರು ಬೃಂದಾವನದಿಂದ ಮಥುರೆಗೆ ಬಂದ ದಿನ, ಅವರು ರಾಜಬೀದಿಯಲ್ಲಿ ನಡೆದು ಹೋಗುತ್ತಿದ್ದರೆ ಅವರ ವರ್ಚಸ್ಸನ್ನು, ತೇಜಸ್ಸನ್ನು, ರೂಪವನ್ನು ನೋಡಿ ಊರಿಗೆ ಊರೇ ಬೆರಗಾಗಿತ್ತು. ಆಗ ಈ ತ್ರಿವಕ್ರೆಯೂ, ಅರಮನೆಗೆ ತಲುಪಿಸಲೆಂದು ಕೈಯಲ್ಲಿ ಗಂಧದ ಮುದ್ದೆ ಹಿಡಿದು ಜನರ ಮಧ್ಯೆ ನಿಂತಿದ್ದಳು. ಕೃಷ್ಣ ಅವಳ ಬಳಿ ಹೋಗಿ ಗಂಧ ಕೇಳಿ ಪಡೆದು ಹಚ್ಚಿಕೊಂಡು, ಅವಳನ್ನು ಸ್ಪರ್ಶಿಸಲು ಅವಳ ವಕ್ರತೆಯೆಲ್ಲಾ ಕಳೆದು ಸುರೂಪಿಯಾದಳು. ತ್ರಿವಕ್ರೆ ಪುಣ್ಯವಂತೆ, ಮಾಧವನ ಕೃಪಾ ದೃಷ್ಟಿಗೆ ಪಾತ್ರಳಾದಳು.

ಮತ್ತೆ ಕವನದ ಸಾಲು ಹೀಗಿದೆ, "ಅನ್ನ ಕೊಟ್ಟ ಭಕ್ತಗೆ ಹೊನ್ನ ಕೊಟ್ಟ ಮಾಧವ...." ಇದು ಕೃಷ್ಣ, ಸುದಾಮರ ಜನಜನಿತ ಕಥೆ, ಕೃಷ್ಣ, ಸುದಾಮರು ಗುರುಕುಲದಲ್ಲಿ ಅಭ್ಯಾಸ ಮಾಡುವಾಗ ಆತ್ಮೀಯ ಸ್ನೇಹಿತರು. ಕಾಲಕ್ರಮದಲ್ಲಿ ಸುದಾಮನಿಗೆ ಬಡತನ, ಬಡತನದ ಬೇಗೆ ತಾಳಲಾರದೆ ಅವನ ಮಡದಿ ನೆನಪಿಸುತ್ತಾಳೆ, "ಕೃಷ್ಣ ನಿಮ್ಮ ಆಪ್ತ ಸ್ನೇಹಿತ ಎನ್ನುತ್ತೀರಿ, ಈಗ ರಾಜನಾಗಿದ್ದಾನೆ, ಅವನ ಬಳಿ ಅಷ್ಟೈಶ್ವರ್ಯವಿದೆ. ನಮಗೆ ಸಹಾಯ ಮಾಡಲಾರನೇ? ಅವನ ಬಳಿ ಹೋಗಿ ನಿಮ್ಮ ಕಷ್ಟ ನಿವೇದಿಸಿಕೊಳ್ಳಿ" ಎನ್ನುವ ಸಲಹೆ ಕೊಡುತ್ತಾಳೆ. ಅದರಂತೆ ಒಂದು ದಿನ ಸುದಾಮ ಕೃಷ್ಣನ ಬಳಿಗೆ ಹೋಗಲು ನಿರ್ಧರಿಸುತ್ತಾನೆ, ಬಹಳ ದಿನಗಳ ನಂತರ ಗೆಳೆಯನನ್ನು ಕಾಣಲು ಹೊರಟವ ಬರಿಗೈಲಿ ಹೋಗಬಾರದೆಂದು, ತನ್ನ ಮನೆಯಲ್ಲಿರುವ ಮುಷ್ಠಿ ಒಣ ಅವಲಕ್ಕಿ ತನ್ನ ಮೇಲು ಹೊದಿಕೆಯ ಅಂಚಿನಲ್ಲಿ ಕಟ್ಟಿಕೊಂಡು ಕೃಷ್ಣನನ್ನು ಕಾಣಲು ಹೋಗುತ್ತಾನೆ. ಅಲ್ಲಿ ಸ್ನೇಹಿತರು ಇಬ್ಬರೂ ಸೇರುತ್ತಾರೆ. ಸುಖ ದುಃಖ ಹಂಚಿಕೊಂಡು, ನಂತರ ಸಂಕೋಚದಿಂದ ಶ್ರೀಮಂತ ಕೃಷ್ಣನನಿಗೆ ಬಡವ ತಾನು ತಂದ ಹಿಡಿ ಒಣ ಅವಲಕ್ಕಿ ಕೊಡುತ್ತಾನೆ, ಅದನ್ನು ತಿಂದ ಶ್ರೀಕೃಷ್ಣ ಸುದಾಮನಿಗೆ ಅಷ್ಟೈಶ್ವರ್ಯ ಕರುಣಿಸುತ್ತಾನೆ. ಅದನ್ನೇ ಕವಿ ಇಲ್ಲಿ ಹೇಳಿರುವದು.

ಇನ್ನು ಮುಂದುವರೆದು ಕವಿ, "ಹಾಲು ಕೊಟ್ಟ ವಿದುರಗೆ ಬಾಳು ಕೊಟ್ಟ ಮಾಧವ..." ಎಂದು ಬರೆಯುತ್ತಾರೆ, ಮಹಾಭಾರತದ ಯುದ್ಧ ಸಂಧಾನಕ್ಕೆ ಕೌರವನಲ್ಲಿ ಶ್ರೀಕೃಷ್ಣ ಹೋದಾಗ, ಚಕ್ರವರ್ತಿ ದುರ್ಯೋಧನ ಷಡ್ ರಸಗಳ ಭೂರಿ ಭೋಜನ ತಯಾರು ಮಾಡಿಸಿದ್ದರೂ, ಅದನ್ನು ತಿರಸ್ಕರಿಸಿ ಮಾಧವನು, ತನ್ನ ಪರಮ ಭಕ್ತನಾದ ವಿದುರನ ಮನೆಗೆ ಊಟಕ್ಕೆ ಹೋಗುತ್ತಾನೆ, ಅದನ್ನೇ ಕವಿ ಪ್ರಾಸಕ್ಕಾಗಿ, ಗೀತೆಯ ಗೇಯತೆಗಾಗಿ ಹಾಲು ಕೊಟ್ಟ ವಿದುರನಿಗೆ ಬಾಳು ಕೊಟ್ಟ ಮಾಧವ ಎಂದು ಸುಂದರವಾಗಿ ಬರೆದಿದ್ದಾರೆ ಅನ್ನಬಹುದು, ಅಲ್ಲದೆ ಇನ್ನೊಂದು ಕಥೆ ಈ ಸಂದರ್ಭವನ್ನು ಹೀಗೆ ವಿವರಿಸುತ್ತದೆ. ಹಸ್ತಿನಾವತಿಗೆ ಪಾಂಡವರ ದೂತನಾಗಿ ಶ್ರೀಕೃಷ್ಣ ಹೋಗಿದ್ದಾಗ ವಿದುರ ಕೊಟ್ಟ ಒಂದು ಕುಡುತೆ ಹಾಲಿನಲ್ಲಿ ಇವನ ಹಸಿವು ನೀಗಿತು. ಹೀಗಾಗಿ ರಾಜನ



ಅರಮನೆಗೆ ಹೋಗಿ ಊಟ ಮಾಡುವದಿಲ್ಲ. ಹೀಗೆ ಕೃಷ್ಣ ವಿದುರನ ಬಳಿ ಬಂದದ್ದು ವಿದುರನಿಗೆ ಜೀವನದಲ್ಲಿ ಬಹುದೊಡ್ಡ ಮಾನ ಸನ್ಮಾನ ಲಭಿಸಿತು, ಅವನ ಬಾಳು ಬಂಗಾರವಾಯ್ತು.

"ದೇಹ ಕೊಟ್ಟ ಮಣ್ಣಿಗೆ ಜೀವ ಕೊಟ್ಟ ಮಾಧವ..." ಇದು ಮಣ್ಣಿಂದ ಆದ ಕಾಯ ಕೊನೆಗೆ ಮಣ್ಣನ್ನೇ ಸೇರುತ್ತದೆ. ಹಾಗಿದ್ದರೆ ಮಣ್ಣಿನಿಂದಾದ ಕಾಯಕ್ಕೆ ಭಗವಂತನೇ ಜೀವ ತುಂಬುವುದು. ಇಲ್ಲಿ ಕವಿ ಮತ್ತೊಮ್ಮೆ ಶ್ರೀಕೃಷ್ಣನನ್ನು ಭಗವಂತನನ್ನಾಗಿಸಿದ್ದಾನೆ.

ಸನಾತನ ಧರ್ಮೀಯರು ಕೃಷ್ಣನಿಗೆ ಸಾಕಷ್ಟು ಆಪಾದನೆ, ಆರಾಧನೆ, ಅರ್ಪಿಸಿದ್ದೇವೆ. ಬಹುಶಃ ಜೀವನದಲ್ಲಿ ಬರುವ ಎಲ್ಲಾ ಪಾತ್ರಗಳನ್ನು ಕೃಷ್ಣನಲ್ಲಿ ಕಂಡಿದ್ದೇವೆ. ಅವನೊಬ್ಬ ರಾಜಕೀಯ ಮುತ್ಸದ್ದಿ, ಅವನೊಬ್ಬ ಚಾಣಾಕ್ಷ, ಅವನೊಬ್ಬ ಗೋಪಿಕೆಯರ ಆರಾಧ್ಯದೈವ, ಹೀಗೆ ಭಾಗವತ, ಮಹಾಭಾರತದಲ್ಲಿ ಒಬ್ಬ ಅಸಾಧಾರಣ ವ್ಯಕ್ತಿಯಾಗಿ ಕಾಣುವ ಶ್ರೀಕೃಷ್ಣ ನಮ್ಮ ಅನುದಿನದ ಬದುಕಿನಲ್ಲಿ ಹಾಸುಹೊಕ್ಕಾಗಿದ್ದಾನೆ. ಅದರಂತೆ ಪುರುಷೋತ್ತಮನಾದ ರಾಮನೂ ಕೂಡಾ. ಹೀಗೆ ಹೇಳುತ್ತಾ ಹೋದರೆ ರಾಮಕೃಷ್ಣರು ಕಾಲ್ಪನಿಕ ವ್ಯಕ್ತಿಗಳು ಎಂದು ಆಪಾದಿಸುವ ಒಂದು ದೊಡ್ಡ ತಂಡವೇ ಇದೆ. ನಾವು ಸನಾತನಿಗಳು ಒಬ್ಬ ಒಳ್ಳೆಯ ವ್ಯಕ್ತಿಯು ಎಲ್ಲ ರೀತಿಯಿಂದ ಒಳ್ಳೆಯದನ್ನು ಮಾಡಿದರೆ ಅವನಿಗೆ ಇನ್ನಷ್ಟು ಮತ್ತಷ್ಟು ಒಳ್ಳೆಯ ಭಾವನೆಗಳನ್ನು ಆರೋಪಿಸಿ, ಆರಾಧಿಸುತ್ತೇವೆ. ಇದು ಈ ನಾಡಿನ ಮನಸುಗಳ ದೊಡ್ಡತನ. ಹೀಗೆ ಎಚ್ಚೆಸ್ವಿ, ರಾಧಾಕೃಷ್ಣರ ಪ್ರೇಮದ ಬಗೆಗೆ ಅನೇಕ ಗೀತೆಗಳನ್ನು ಬರೆದು ನಮ್ಮೆಲ್ಲರ ಮನಸ್ಸನ್ನು ಮೋಡಿ ಮಾಡಿದ್ದಾರೆ.

ರಾಧೆ ಕೃಷ್ಣ... ರಾಧೆ ಕೃಷ್ಣ.... – ಹೀಗೆ ಕೃಷ್ಣನು, ರಾಧೆಯನ್ನು ಅಮರಪ್ರೇಮಿಯನ್ನಾಗಿಸಿದ್ದಾನೆ.

***

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ



ಸಾಹಿತ್ಯ ದಾಸೋಹ – 238

'ಎಚ್ಚೆಸ್ವಿ ಸ್ಮರಣೆ" – ವಿಶೇಷ ದಾಸೋಹ



ಅಧ್ಯಕ್ಷರ ಅನಿಸಿಕೆಗಳು

– ಕೆ.ಎನ್. ಮಹಾಬಲ

ಎಲ್ಲರಿಗೆ ನಮಸ್ಕಾರ
ಸರಳ ಸಜ್ಜನ, ಸಾಹಿತ್ಯ ಪ್ರೋತ್ಸಾಹಕ, ಕವಿ, ಕತೆಗಾರ, ದೂರದರ್ಶನ ಸಾಹಿತಿ, ಚಲನಚಿತ್ರ ಗೀತೆಗಳ ರಚಕ, ನಿರ್ದೇಶಕ, ಸಾಹಿತ್ಯ ಸಂಘಟಕ ಡಾ.ಎಚ್.ಎಸ್.ವೆಂಕಟೇಶಮೂರ್ತಿಯವರ ಸವಿಸ್ಮರಣೆಯಲ್ಲಿ ನಡೆದಿರುವ ಈ ಸುಂದರ ದಾಸೋಹದಲ್ಲಿ ೨೪ ದಾಸೋಹಿಗಳು ಲೇಖಕರಾಗಿ ಹಾಗೂ ಗಾಯಕರಾಗಿ ಭಾಗವಹಿಸಿ ಯಶಸ್ವಿಗೊಳಿಸಿರುವುದು ಸಂತಸದ ವಿಷಯವಾಗಿದೆ ಅಧ್ಯಕ್ಷನಾಗಿ ಎಲ್ಲ ಪ್ರಸ್ತುತಿಗಳ ಬಗ್ಗೆ ಚುಟುಕಾಗಿ ಸ್ಪಂದಿಸುವುದು ನನ್ನ ಸಂತಸದ ಕಾರ್ಯವಾಗಿದೆ.

೧. ಕೆ.ಆರ್.ವೆಂಕಟೇಶ್ ಅವರು ಎಚ್ಚೆಸ್ವಿ ವಿರಚಿತ ಪ್ರಕಟಿತ ಹಾಗೂ ಚಲನಚಿತ್ರಕ್ಕಾಗಿಯೇ ರಚಿಸಿದ ಗೀತೆಗಳ ವಿವರವನ್ನು ತಮ್ಮ ಲೇಖನದಲ್ಲಿ ತಿಳಿಸಿಕೊಡುತ್ತ ಚಿನ್ನಾರಿ ಮುತ್ತ ಚಿತ್ರದ ಗೀತರಚನೆ, ಚಿತ್ರಕತೆಗಾಗಿ ಅವರಿಗೆ ಪ್ರಶಸ್ತಿ ಬಾರದೆಹೋದುದನ್ನು ವಿಷಾದದಿಂದ ಗುರುತಿಸಿದ್ದಾರೆ.

೨. ಧೀರೇಂದ್ರ ಅವರು ಚಿನ್ನಾರಿ ಮುತ್ತ ಚಿತ್ರದ ನಿರ್ಮಾಣ, ಪ್ರದರ್ಶನದ ನಂತರದ ರಸಿಕ ಜನರ ಪ್ರತಿಕ್ರಿಯೆ, ಪ್ರಮುಖ ನಟರ ಅಭಿನಯ, ಚಲನಚಿತ್ರ ಪಡೆದ ಮನ್ನಣೆಗಳು ಎಲ್ಲವನ್ನೂ ಸವಿಸ್ತಾರವಾಗಿ ಚರ್ಚಿಸಿದ್ದಾರೆ.

೩. ಎನ್.ವಿ. ರಘುರಾಂ ಅವರು ಎಚ್ಚೆಸ್ವಿಯವರ ಬಹುಚರ್ಚಿತ ಕವನ 'ಆ ಕಪ್ಪು ಹುಡುಗಿ' ಬಗ್ಗೆ ತನ್ನ ಅನಿಸಿಕೆಗಳನ್ನು ಬಹಳ ವಿಶಿಷ್ಟವಾಗಿ ದಾಖಲಿಸಿದ್ದಾರೆ. ಕವನದಲ್ಲಿನ ನೀಲಿಕೊಳ, ಹೊನ್ನೆಮರ, ಮುರುಕು ಮಂಟಪ, ದೇವಕಣಿಗಲೆ ಇಂಥ ಪ್ರತಿಮೆಗಳನ್ನು ವಿಷದವಾಗಿ ಚರ್ಚಿಸಿದ್ದಾರೆ. ಶುದ್ಧತೆ, ಪ್ರೀತಿ, ನೆನಪು, ಭಕ್ತಿ, ಜೀವನದ ಅನಂತರೂಪದ ಭಾವಗೀತೆಯಾಗಿದೆ ಎಂದಿದ್ದಾರೆ.

೪. ಡಾ ಶ್ರೀಲಕ್ಷ್ಮಿಯವರು ಎಚ್ಚೆಸ್ವಿಯವರ ಭಾವಗೀತೆಗಳ ಲೋಕವನ್ನು ಪ್ರವೇಶಿಸಿ ರಾಗದ ಹೊರತಾಗಿಯೂ ಈ ಕವನಗಳನ್ನು ಓದಿ ಆಸ್ವಾದಿಸಬಹುದು ಎಂದು ತಿಳಿಸುತ್ತ, ಪ್ರಸಿದ್ಧ ಗೀತೆಗಳಾದ ತೂಗುಮಂಚದಲ್ಲಿ, ಹುಚ್ಚುಕೋಡಿ ಮನಸು, ಕೃಷ್ಣಗೀತೆಗಳು ಇಂಥವುಗಳನ್ನು ಉದಾಹರಿಸಿದ್ದಾರೆ. ಹಲವಾರು ಸಾಹಿತ್ಯದ ಪ್ರಕಾರಗಳಲ್ಲಿ ಕೃಷಿ ನಡೆಸಿದ್ದರೂ ಭಾವಗೀತೆಗಳ ರಚನೆಗಳಿಂದಲೇ ಲೋಕಖ್ಯಾತರಾದವರು ಎಚ್ಚೆಸ್ವಿ.

೫. ಕಮಲಾಕ್ಷಿಯವರು ಶ್ರೀ ಎನ್.ಎಸ್. ಶ್ರೀಧರ ಮೂರ್ತಿಯವರು ರಚಿಸಿರುವ ಎಚ್ಚೆಸ್ವಿಯವರ ಚಲನಚಿತ್ರಗೀತೆ, ಧಾರಾವಾಹಿ ಶೀರ್ಷಿಕೆ ಗೀತೆಗಳ ಕೃತಿ "ಹಾಡು ಮುಗಿಯುವುದಿಲ್ಲ" ಬಗ್ಗೆ ಬಹಳ ಉತ್ತಮವಾದ ಪರಿಚಯವನ್ನು ಮಾಡಿಕೊಟ್ಟಿದ್ದಾರೆ. ಇಂಥ ಕೃತಿ ಎಚ್ಚೆಸ್ವಿಯವರ ಗೀತೆಗಳನ್ನು ಕುರಿತು ಹೆಚ್ಚಿನ ಅಧ್ಯಯನ ಮಾಡುವವರಿಗೆ ಒಂದು ಉತ್ತಮ ಆಕರವಾಗಿದೆ.


ಶ್ರೀ ಕೆ.ಎನ್.ಮಹಾಬಲ ಮತ್ತು ಡಾ.ಎಚ್.ಎಸ್.

೬. ಸುಜಾತಾ ರವೀಶ್ ಅವರು ರಾಘವೇಂದ್ರ ಪಾಟೀಲರು ಸಂಪಾದಿಸಿರುವ 'ಎಚ್ಚೆಸ್ವಿ ವಾಚಿಕೆ' ಎಂಬ ಕೃತಿಯನ್ನು ಪರಿಚಯಿಸುತ್ತ, ಕಥಾಪ್ರಬಂಧ ಎಂದು ವರ್ಗೀಕೃತವಾಗಿರುವ ಭಾಗದಲ್ಲಿ ಎಚ್ಚೆಸ್ವಿಯವರ ಪತ್ನಿ ರಾಜಲಕ್ಷ್ಮಿಯವರು ಲಿವರ್ ಸಿರೋಸಿಸ್ ನಿಂದ ಕಾಲವಾದ ಪ್ರಸಂಗದ ವಿವರಣೆ ಮನ ಕಲಕುತ್ತದೆ. ಎಚ್ಚೆಸ್ವಿಯವರ ಸ್ವನಾಮಧೇಯರಾದ ವೈದ್ಯ ವೆಂಕಟೇಶಮೂರ್ತಿಯವರೂ ಕ್ಯಾನ್ಸರಿನಿಂದ ತೀರಿಕೊಂಡ ಪ್ರಸಂಗ ಸಹ ಅಷ್ಟೇ ದುಃಖಕರ.

೭. ಶ್ರೀರಂಗರಾಜನ್ ಅವರು ಎಚ್ಚೆಸ್ವಿಯವರ ಏಕವ್ಯಕ್ತಿ ರಂಗಪ್ರಯೋಗ “ಉರಿಯ ಉಯ್ಯಾಲೆ” ಬಗ್ಗೆ ಒಂದು ಉಪಯುಕ್ತ ಇಣುಕುನೋಟ ಬೀರಿ, ಕೃತಿಯಲ್ಲಿ ದ್ರೌಪದಿಯ ಕೇಂದ್ರ ಪಾತ್ರದಿಂದ ಆರಂಭಿಸಿ ಹಲವಾರು ಪಾತ್ರವನ್ನು ವಿಶ್ಲೇಷಿಸಿರುವುದನ್ನು ರಾಜನ್ ಅವರು ಆಕರ್ಷಕವಾಗಿ ವಿವರಿಸಿದ್ದಾರೆ.

೮. ವಿಠ್ಠಲ ಇಜೇರಿಯವರು ತಮ್ಮ ಲೇಖನವನ್ನು ಎಚ್ಚೆಸ್ವಿಯವರ ಜೀವನ ಪರಿಚಯ ಮಾಡಿಕೊಡುವುದರಿಂದ ಆರಂಭಿಸಿ, ಅವರ ಹಲವು ಪ್ರಸಿದ್ಧ ಶಿಶುಗೀತೆಗಳನ್ನು ವಿಶ್ಲೇಷಿಸಿದ್ದಾರೆ. ಹಾಗೆಯೇ ಕವಿಯ ಕೆಲವು ಮನಸ್ಸಿನ ಮಾತುಗಳನ್ನು ತಮ್ಮ ಲೇಖನದಲ್ಲಿ ತಿಳಿಸಿಕೊಟ್ಟಿದ್ದಾರೆ.

೯. ಹು.ವಾ. ಶ್ರೀಪ್ರಕಾಶ್ ಅವರು ಎಚ್ಚೆಸ್ವಿ ಅವರ ಕೆಲವು ಬಂಗಾಳಿ ಕವಿತೆಗಳ ಅನುವಾದದ ಬಗ್ಗೆ ತಮ್ಮ ಅನಿಸಿಕೆಯನ್ನು ದಾಖಲಿಸಿದ್ದಾರೆ. ಬುದ್ಧದೇವ್ ದಾಸ್ ಗುಪ್ತ, ಪ್ರಣವೇಂದ್ರ ದಾಸ್ ಗುಪ್ತ, ರವೀಂದ್ರನಾಥ ಟಾಗೋರ್ ಅವರ ಹಲವು ಕವನಗಳ ಅನುವಾದವನ್ನು ಪರಿಶೀಲಿಸುತ್ತ ಎಚ್ಚೆಸ್ವಿಯವರು ಒಬ್ಬ ಸಮರ್ಥ ಅನುವಾದಕರು ಎಂಬುದನ್ನು ಪ್ರತಿಪಾದಿಸುತ್ತಾರೆ.

೧೦. ಶಾಂತಿ ವಾಸು ಅವರು "ಇಷ್ಟು ಕಾಲ ಒಟ್ಟಿಗಿದ್ದು", “ಲೋಕದ ಕಣ್ಣಿಗೆ ರಾಧೆಯು ಕೂಡ”, “ನನ್ನ ಹಳೆಯ ಹಾಡುಗಳೆ," ಮುಂತಾದ ಕವಿತೆಗಳನ್ನು ಬಹಳ ಹೃದಯಂಗಮವಾಗಿ ಚರ್ಚಿಸಿ ಅವರೊಂದಿಗಿನ ಹಲವು ಆಪ್ತ ನೆನಪುಗಳನ್ನೂ ಹಂಚಿಕೊಂಡಿದ್ದಾರೆ.

೧೧. ಶೃತಿ ಕಟ್ಟಿಯವರು ಇತ್ತೀಚೆಗೆ ಬಹಳ ವೈರಲ್ ಆಗಿರುವ ಎಚ್ಚೆಸ್ವಿಯವರ ಕವನ "ಇರಬೇಕು ಇರುವಂತೆ"ಯ ಒಳ ಆಶಯವನ್ನು ಬಹಳ ವಿವರವಾಗಿ ಹಾಗೂ ತುಲನಾತ್ಮಕವಾಗಿ ಚರ್ಚಿಸಿದ್ದಾರೆ. ಕವನದ ಸಾಲುಗಳನ್ನು ರಾಗಬದ್ಧವಾಗಿ ಹಾಡಿದ್ದು ಮತ್ತೊಂದು ಬೋನಸ್ ಅಂಶ.

೧೨. ಜಿ.ವಿ.ಅರುಣ ಅವರು ಎಚ್ಚೆಸ್ವಿ ಅವರ ಚಿಂತನೆಗೆ ಹಚ್ಚುವ “ಮಕ್ಕಳಿರಲಮ್ಮ ಮಕ್ಕಳಿಗಾಗಿ” ಕವನವನ್ನು ಅರ್ಥಪೂರ್ಣವಾಗಿ ವಿಶ್ಲೇಷಿಸಿದ್ದಾರೆ. ಮಹಾಭಾರತದ ಪಾತ್ರಗಳಾದ ದುರು (ದುರ್ಯೋಧನ), ಯುಧಿ (ಯುಧಿಷ್ಠಿರ), ಭೀಮ ಪಾತ್ರಗಳ ಬಾಲ್ಯದ ಆಟ ಕುರುಕ್ಷೇತ್ರ ಯುದ್ಧಕ್ಕೂ ಕಾರಣವಾದುದನ್ನು ತಾರ್ಕಿಕವಾಗಿ ಚಿಂತಿಸುತ್ತ ಸಹಬಾಳ್ವೆಯ ಮಹತ್ವವನ್ನೂ ಪ್ರತಿಪಾದಿಸಿದ್ದಾರೆ

೧೩, ಬೆಂ.ಶ್ರೀ.ರವೀಂದ್ರ ಅವರು ಎಚ್ಚೆಸ್ವಿಯವರ ಆತ್ಮಕತೆಯಲ್ಲದ ಆತ್ಮಕತೆ "ಅನಾತ್ಮ ಕಥನ" ದ ಬಗ್ಗೆ ಅದರ ಎಲ್ಲ ಮುಖ್ಯ ವಿವರಗಳೊಡನೆ ನಮ್ಮ ಮುಂದಿಟ್ಟಿದ್ದಾರೆ. ಹೋದಿಗೆರೆ, ಮಲ್ಲಾಡಿಹಳ್ಳಿ ಹಾಗೂ ಬೆಂಗಳೂರು ನಡುವಣ ಜೀವನ ಸಾಹಿತ್ಯ ಯಾತ್ರೆ, ಕುಟುಂಬ, ಸ್ನೇಹವಲಯದ ವಿವರಗಳನ್ನು ಹೊಂದಿರುವ ಈ ಕೃತಿ ಎಲ್ಲ ಸಾಹಿತ್ಯಾಸಕ್ತರು ಓದಬೇಕಾದ್ದು.

೧೪. ಗಣಪತಿ ಹೆಗಡೆಯವರು ಎಚ್ಚೆಸ್ವಿಯವರ "ಮಕ್ಕಳಿಗಾಗಿ ಪಂಪ" ಎಂಬ ವಿಕ್ರಮಾರ್ಜುನ ವಿಜಯದ ತಿಳಿಗನ್ನಡದ ಅವತರಣಿಕೆಯನ್ನು ಸ್ವಾರಸ್ಯಕರವಾಗಿ ಚಿತ್ರಿಸಿದ್ದಾರೆ. ಮಕ್ಕಳ ಮನಸ್ಸಿಗೆ ಪ್ರವೇಶ ಮಾಡುವ ಪ್ರತಿಭೆ ಎಚ್ಚೆಸ್ವಿಯಂಥವರಿಗೆ ಮಾತ್ರ ಎಂದೂ ಅಭಿಪ್ರಾಯಪಡುತ್ತಾರೆ.

೧೫. ಗೌರಿ ಭಟ್ಟ ಅವರು ಎಚ್ಚೆಸ್ವಿಯವರ ಹಲವು ಜನಪ್ರಿಯ ಶಿಶುಗೀತೆಗಳನ್ನು ಪರಿಶೀಲಿಸುತ್ತ ನೀಲಿ ಹಕ್ಕಿ, ಗುಬ್ಬಿಮರಿ, ಕಾಗೆ ಮುಂತಾದ ಪ್ರಾಣಿವರ್ಗದ ಶಿಶುಗೀತೆಯ ಜತೆಗೆ ಭಾವೈಕ್ಯ ಸಾರುವ "ಎಲೆಗಳು ನೂರಾರು" ಬಗ್ಗೆಯೂ ಪ್ರಸ್ತಾಪಿಸಿರುವುದು ಉಚಿತವಾಗಿದೆ.

ಕೆ.ಎನ್. ಮಹಾಬಲ

೯ನೆಯ ಆಗಸ್ಟ್ ೧೯೫೫ರಂದು ಬೆಂಗಳೂರಿನಲ್ಲಿ ಜನನ. ವಾಣಿಜ್ಯ ವಿಷಯದಲ್ಲಿ ಸ್ನಾತಕೋತ್ತರ ಪದವಿ (ಎಂ.ಕಾಂ.). ನಂತರ ಭಾರತೀಯ ಸ್ಟೇಟ್ ಬ್ಯಾಂಕ್ ಸೇರ್ಪಡೆ. ರಾಜ್ಯದ ಹಲವೆಡೆ ಬ್ಯಾಂಕಿನ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿ, ೩೧, ಆಗಸ್ಟ್ ೨೦೧೫ರಂದು ಬ್ಯಾಂಕ್ ಸೇವೆಯಿಂದ ನಿವೃತ್ತಿ. ಈಗ ಬೆಂಗಳೂರಿನಲ್ಲಿ ವಾಸ. ಸೇವಾನಿವೃತ್ತಿ ನಂತರ ಸಾಹಿತ್ಯ ಸೇವೆಗೆ ಸಮರ್ಪಣೆ.

ಪ್ರಕಟಿತ ಸಾಹಿತ್ಯ ಕೃತಿಗಳು: ಇವರ ತಂದೆಯವರಾದ 'ಮೈಸೂರು ಮಲ್ಲಿಗೆ'ಯ ಕವಿ ಕೆ.ಎಸ್. ನರಸಿಂಹಸ್ವಾಮಿ ಯವರನ್ನು ಕುರಿತ ನೆನಪಿನ ಕೃತಿ 'ನನ್ನ ಅಪ್ಪ ಕೆ.ಎಸ್.ನ' (೨೦೨೫), 'ಇಂದೂ ಇದ್ದಾರೆ' ಕವನ ಸಂಕಲನ (೨೦೧೪), 'ಹಾಸ್ಯಬಂಧ' ಹಾಸ್ಯ ಲೇಖನಗಳ ಸಂಗ್ರಹ (೨೦೧೬), 'ಬೊಗಸೆ ತುಂಬ ಹೂವು' ಸಾನೆಟ್ಟುಗಳ ಸಂಗ್ರಹ (೨೦೨೨). ಅಲ್ಲದೆ, ಅಮೆರಿಕನ್ ಕವಿ ಕಾರ್ಲ್ ಸ್ಯಾಂಡ್ ಬರ್ಗ್ ಕವನಗಳ ಕನ್ನಡ ಅನುವಾದದ ಕೃತಿ ಪ್ರಕಟಣೆಯ ಹಂತದಲ್ಲಿದೆ. . .

ಯಶವಂತ ಚಿತ್ತಾಲರ "ಅಪಘಾತ" ಕುರಿತ ವಿಮರ್ಶೆಗೆ 'ಸಂಚಯ' ಸಾಹಿತ್ಯ ಸಂಚಿಕೆಯ ಬಹುಮಾನ (೨೦೧೪)

ಹವ್ಯಾಸಗಳು: ವಿವಿಧ ವಿಷಯಗಳ ಬಗ್ಗೆ ರಸಪ್ರಶ್ನೆ ನಡೆಸುವುದು, ಆಕಾಶವಾಣಿ, ಪ್ರಜಾವಾಣಿ ದಿನಪತ್ರಿಕೆ ಹಾಗೂ ವಿವಿಧ ಸಾಂಸ್ಕೃತಿಕ ಸಂಘಟನೆಗಳಿಗೆ ೩೦೦ಕ್ಕೂ ಹೆಚ್ಚು ರಸಪ್ರಶ್ನೆ ಕಾರ್ಯಕ್ರಮಗಳ ನಿರ್ವಹಣೆ. ಹಲವು ಸಾಹಿತ್ಯ ಕಾರ್ಯಕ್ರಮಗಳ ಸಂಘಟನೆ. ಕನ್ನಡ ಸಂಘ ಹಾಗೂ ಇತರ ವೇದಿಕೆಗಳಿಗೆ ಕಮ್ಮಟ, ರಸಗ್ರಹಣ ಶಿಬಿರ, ಸಾಹಿತ್ಯ ಪರಿಚಯ ಕಾರ್ಯಕ್ರಮಗಳ ವ್ಯವಸ್ಥೆ.

ಭಾರತೀಯ ಸ್ಟೇಟ್ ಬ್ಯಾಂಕಿನಲ್ಲಿ ಕನ್ನಡಪರ ಚಟುವಟಿಕೆಗಳಲ್ಲಿ ಸದಾ ಮುಂಚೂಣಿಯಲ್ಲಿರುವ ಕಾರ್ಯಕರ್ತರಲ್ಲಿ ಮಹಾಬಲರಿಗೆ ಪ್ರಮುಖ ಸ್ಥಾನ. ಬ್ಯಾಂಕಿಂಗ್ ಕಮ್ಮಟಗಳು, ಅನುವಾದ ಕಮ್ಮಟ, ಇಂಗ್ಲಿಷ್–ಕನ್ನಡ ಬ್ಯಾಂಕಿಂಗ್ ನಿಘಂಟು, ಕಾವ್ಯಕಮ್ಮಟ, ಕಥಾಕಮ್ಮಟ ಮುಂತಾದುವುಗಳಲ್ಲಿ ಇವರು ಸದಾ ಸಕ್ರಿಯ. ಪ್ರಾ.ಎಚ್ಚೆಸ್ಕೆಯವರ ಸಂಪಾದಕತ್ವದ 'ಬ್ಯಾಂಕಿಂಗ್ ಪ್ರಪಂಚ'ದಲ್ಲಿ ೨೦ಕ್ಕೂ ಹೆಚ್ಚು ಬ್ಯಾಂಕಿಂಗ್ ಕ್ಷೇತ್ರಕ್ಕೆ ಸಂಬಂಧಿಸಿದ ಲೇಖನಗಳು, ಸ್ಟೇಟ್ ಬ್ಯಾಂಕ್ ಕನ್ನಡ ಸಂಘದ 'ಮಂದಾರ' ಸಾಹಿತ್ಯ ಸಂಚಿಕೆಯಲ್ಲಿ ಹಲವಾರು ಸಾಹಿತ್ಯ ವಿಮರ್ಶೆ, ಅಂಡಯ್ಯನ ಅಚ್ಚಗನ್ನಡ ನಿಷ್ಠೆ, ಲಲಿತ ಪ್ರಬಂಧಗಳು, ಟಿ.ಎಸ್.ವೆಂಕಣ್ಣಯ್ಯ, ಬಿ.ಜಿ.ಎಲ್. ಸ್ವಾಮಿ, ಸು.ರಂ.ಎಕ್ಕುಂಡಿ ಮುಂತಾದವರ ಕುರಿತ ಲೇಖನಗಳು, ಹಾಸ್ಯ ವಿಡಂಬನೆಗಳು ಮಹಾಬಲರ ಲೇಖನಿಯಿಂದ ಮೂಡಿಬಂದಿವೆ.

ಸಮನ್ವಯ ಸಮಿತಿ ಕನ್ನಡವೇ ಸತ್ಯ ವೇದಿಕೆಯ ಸಂಸ್ಥಾಪಕರಲ್ಲೊಬ್ಬರಾದ ಮಹಾಬಲ ಅವರು, ವೇದಿಕೆಯ ಎಲ್ಲಾ ವೈವಿಧ್ಯಮಯ ಚಟುವಟಿಕೆಗಳಲ್ಲಿ ಆರಂಭದಿಂದಲೂ ತೊಡಗಿಸಿಕೊಂಡಿದ್ದಾರೆ. ಪ್ರಸಕ್ತ 'ಸಾಹಿತ್ಯ ದಾಸೋಹ' ಕಾರ್ಯಕ್ರಮದ ಸಂಚಾಲಕರಾಗಿದ್ದು, ಕಳೆದ ೮೮ ತಿಂಗಳುಗಳಿಂದ ದಾಸೋಹವನ್ನು ಯಶಸ್ವಿಯಾಗಿ ಮುನ್ನಡೆಸುತ್ತಿದ್ದಾರೆ. ಸಮನ್ವಯ ಸಮಿತಿ ಪ್ರಕಟಿಸಿದ ಹಲವು ಕೃತಿಗಳ ಸಂಪಾದನೆಯಲ್ಲಿ ಇವರ ಪಾತ್ರ ಬಹಳ ಮಹತ್ವದ್ದು. ಈವರೆಗೆ ಹೊರಬಂದ 'ಸಾಹಿತ್ಯ ದಾಸೋಹ'ದ ಎಲ್ಲಾ ೬೨ ಮಾಸಿಕ ಸಂಚಿಕೆಗಳನ್ನು ರೂಪಿಸುವಲ್ಲಿ ಮಹಾಬಲರ ಮಾರ್ಗದರ್ಶನ ಅನನ್ಯವಾದುದು.

***

೧೬. ಜಗನ್ನಾಥ್ ಅವರು ಪುರಾಣಕಥನ ಆಧರಿಸಿದ "ಹಕ್ಕಿ ಮತ್ತು ನಳ" ಕವನವನ್ನು ವಿಶ್ಲೇಷಿಸಿದ್ದಾರೆ. ಕುವೆಂಪು ಹಾಗೂ ಎಕ್ಕುಂಡಿಯವರ ಕವನಗಳಲ್ಲಿ ಬರುವ ಹಕ್ಕಿಯ ಪ್ರಸ್ತಾಪದ ಜತೆಗೆ ತುಲನೆ ಮಾಡಿರುವುದು ಅರ್ಥಪೂರ್ಣವಾಗಿದೆ. "ಹಾರಿದವು ಹಕ್ಕಿ ಆಕಾಶಕ್ಕೆ ಬಟ್ಟೆ ಸಮೇತ" ಎಂಬ ಸಾಲುಗಳು ಮನ ಕಲಕುತ್ತವೆ ಎನ್ನುವ ಲೇಖಕರು ಕವಿಯ ವರ್ಣನಾಚಾತುರ್, ಪದಲಾಲಿತ್ಯ ಇವುಗಳನ್ನು ಮೆಚ್ಚಿಕೊಳ್ಳುತ್ತಾರೆ.

೧೭. ಶೀಲಾ ಅರಕಲಗೂಡು ಅವರು ಎಚ್ಚೆಸ್ವಿಯವರ "ನದೀ ತೀರದಲ್ಲಿ" ಕವನದ ಬಗ್ಗೆ ಪರಿಚಯಿಸುತ್ತ ಕವಿ ಸೃಷ್ಟಿಸಿರುವ ಭಾವಲೋಕವನ್ನು ಮೆಚ್ಚಿಕೊಳ್ಳುತ್ತಾರೆ. "ಮುದುಕಿ'', ''ಕೃಷ್ಣನ ಜಗತ್ತು " ಕವನಗಳ ಬಗ್ಗೆ ಅರ್ಥಪೂರ್ಣವಾಗಿ ಚರ್ಚಿಸಿದ್ದಾರೆ.

೧೮. ರಾಧಿಕಾ ವಿ. ಗುಜ್ಜರ್ ಅವರು ಎಚ್ಚೆಸ್ವಿಯವರ ಬಹು ಚರ್ಚಿತ ಕವನ "ಲೋಕದ ಕಣ್ಣಿಗೆ ರಾಧೆಯು ಕೂಡ" ಬಗ್ಗೆ ಪ್ರಸ್ತಾಪಿಸುತ್ತ, ರಾಧೆ ನಮಗೆ ಕೃಷ್ಣನನ್ನು ಪ್ರೀತಿಸುವ ಕಣ್ಣುಗಳನ್ನು ನೀಡಿದ್ದಾಳೆ ಎಂಬ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

೧೯. ರೇಣುಕಾ ದೇಸಾಯಿಯವರು "ಪ್ರೀತಿ ಕೊಟ್ಟ ರಾಧೆಗೆ ಮಾತು ಕೊಟ್ಟ ಮಾಧವ" ಎಂಬ ಎಚ್ಚೆಸ್ವಿಯವರ ಜನಜನಿತ ಗೀತೆಯನ್ನು ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ಕವಿತೆಯ ವಸ್ತು ಹಾಗೂ ವಿನ್ಯಾಸವನ್ನು ವಿವರವಾಗಿ ಚರ್ಚಿಸಿರುವ ರೇಣುಕಾ ಕವಿ ರಾಧೆಯನ್ನು ಬಹುತೇಕ ಕೃಷ್ಣನ ಪ್ರಿಯತಮೆಯಾಗಿಸಿದ್ದಾರೆ ಎಂದಿರುವುದು ಅರ್ಥಪೂರ್ಣವಾಗಿದೆ.

೨೦. ಎಚ್ಚೆಸ್ವಿಯವರ ಕೃತಿ ಭಗವದ್ಗೀತೆಯ ಸರಳ ಕನ್ನಡಾನುವಾದ "ಆಪ್ತಗೀತೆ''ಯನ್ನು ಪರಿಚಯಿಸಿರುವ ಶುಭಶ್ರೀ ಪ್ರಸಾದ್ ಅವರು ಕೆಲವು ಮಹತ್ವದ ಶ್ಲೋಕಗಳ ಪದ್ಯಾನುವಾದವನ್ನು ಉದಾಹರಿಸಿರುವುದು ಅರ್ಥಪೂರ್ಣವಾಗಿದೆ. ಎಲ್ಲ ಕಾವ್ಯಾಸಕ್ತರೂ ಓದಿ ಮನನ ಮಾಡಿಕೊಳ್ಳಬೇಕಾದ ಕೃತಿಯಿದು.

೨೧. ಪೂರ್ಣಿಮಾ ಭಗವಾನ್ ಅವರು ಎಚ್ಚೆಸ್ವಿಯವರ ಪ್ರಸಿದ್ಧ ಕವನ "ಶ್ರೀಸಂಸಾರಿ"ಯನ್ನು ಬಹಳ ಸ್ವಾರಸ್ಯಕರವಾಗಿ ವಿಶ್ಲೇಷಿಸಿದ್ದಾರೆ. ಶ್ರೀರಾಮನ ಕೈಯಲ್ಲಿ ಬಿಲ್ಲಿನ ಸ್ಥಾನದಲ್ಲಿ ಅಳಿಲು ಇರಬೇಕಿತ್ತು ಎಂಬ ಕವಿಚಿಂತನೆ ನಿಶ್ಶಸ್ತ್ರೀಕರಣದ ದ್ಯೋತಕವಾಗಿಯೂ ಬಂದಿರುವುದು ಕುತೂಹಲಕಾರಿಯಾಗಿದೆ.

೨೨. ಶಾಂತಾ ನಾಗಮಂಗಲ ಅವರು "ಕೃಷ್ಣನ ಶಾಮಲ ವಕ್ಷದ ಮೇಲೆ" ಎಂಬ ಎಚ್ಚೆಸ್ವಿಯವರ ಭಾವಪೂರ್ಣ ಕವನವನ್ನು ಅದರ ಎಲ್ಲ ಸ್ವಾರಸ್ಯಗಳ ಸಮೇತ ವಿವರಿಸಿದ್ದಾರೆ. ಕವಿತೆಯ ಲಯವಿನ್ಯಾಸದ ಬಗ್ಗೆ ತಿಳಿಸುತ್ತ ಅಪಹೃತಿ ಅಲಂಕಾರ ಎಂಬ ಕಾವ್ಯಾಸಕ್ತರಿಗೆ ಕುತೂಹಲ ಮೂಡಿಸುವಂಥ ವಿಷಯದ ಬಗ್ಗೆ ತಿಳಿಸಿಕೊಟ್ಟಿದ್ದಾರೆ.

೨೩. ನಮ್ಮ ಬಳಗಕ್ಕೆ ಹೊಸದಾಗಿ ಸೇರ್ಪಡೆಯಾಗಿರುವ ಸಾಹಿತ್ಯಾಸಕ್ತರಾದ ಸೀತಾರಾಘವ ಅವರು ಎಚ್ಚೆಸ್ವಿಯವರ "ಅನಾತ್ಮಕಥನ"ದ ವಿಸ್ತೃತ ರೂಪದ ಬಗ್ಗೆ ಹಲವು ಪರಿಚಯಾತ್ಮಕವಾದ ವಿವರಗಳನ್ನು ತಮ್ಮ ಲೇಖನದಲ್ಲಿ ದಾಖಲಿಸಿದ್ದಾರೆ. ಸೀತಾರಾಘವ ಅವರಿಗೆ ವೇದಿಕೆಗೆ ಸ್ವಾಗತ. ನಿಮ್ಮ ಬರೆಹಗಳಿಂದ ವೇದಿಕೆ ಸಮೃದ್ಧವಾಗಲಿ.

ಮಾಲತಿ ಶ್ರೀನಿವಾಸನ್ ಹಾಗೂ ಶೃತಿ ಕಟ್ಟಿ ಅವರುಗಳು ಎಚ್ಚೆಸ್ವಿಯವರ ಗೀತೆಗಳ ಗಾಯನದಿಂದಲೂ ಕವಿಯ ಸವಿಸ್ಮರಣೆಗೆ ಶೋಭೆ ನೀಡಿದ್ದಾರೆ. ಅವರಿಗೆ ಕೃತಜ್ಞತೆಗಳು.

ಇಷ್ಟೊಂದು ಸಾಹಿತ್ಯಾಸಕ್ತರು ತಮ್ಮ ಪ್ರತಿಭೆ, ಪಾಂಡಿತ್ಯ, ಸಮಯಗಳನ್ನು ಧಾರೆಯೆರೆದು ಎಚ್ಚೆಸ್ವಿ ಸವಿಸ್ಮರಣೆಯ ಅಭಿಯಾನ ವನ್ನು ಯಶಸ್ವಿಗೊಳಿಸಿದ್ದಾರೆ. ಎಲ್ಲರಿಗೂ ಅಭಿನಂದನೆಗಳು. ಇದರ ಯಶಸ್ಸಿಗೆ ದುಡಿದ ಶ್ರೀರಂಗರಾಜನ್, ರವಿಕುಸಬಿಯವರಿಗೆ ಹಾಗೂ ಇಂಥದೊಂದು ಪರಿಕಲ್ಪನೆಯ ರೂವಾರಿ ರವೀಂದ್ರ ಅವರಿಗೆ ಅಭಿನಂದನೆಗಳು. ನಮ್ಮ ಕುಟುಂಬದ ಆಪ್ತರೂ, ನನ್ನ ಕಾವ್ಯ ಮಾರ್ಗದರ್ಶಕರೂ ಆದ ಎಚ್ಚೆಸ್ವಿಯವರ ಸ್ಮರಣೆಯ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿರುವುದು ನನ್ನ ಭಾಗ್ಯ ವಿಶೇಷ.

***

ತಿಂಗಳ ಬೆಳಕು-16 – ಉಪನ್ಯಾಸ (28.06.2025)



ಬಾನು ಮುಷ್ತಾಕ್‌ರ ಕಥಾಲೋಕದಲ್ಲೊಂದು ಪಯಣ

ಉಪನ್ಯಾಸಕರು: ಶ್ರೀಮತಿ ಟಿ.ಎಸ್. ಶ್ರವಣ ಕುಮಾರಿ



ಟಿ.ಎಸ್. ಶ್ರವಣ ಕುಮಾರಿ

ಬಾನು ಮುಷ್ತಾಕರ ಕಥಾಲೋಕದಲ್ಲಿ ನನ್ನೊಂದಿಗೆ ಪಯಣಿಸಲು ಇಂದು ನೀವೆಲ್ಲರೂ ಬಂದಿದ್ದೀರಿ. ಇಂದಿನ ಪಯಣದ ಜೊತೆಗಾರರಾಗಿರುವ ನಿಮ್ಮೆಲ್ಲರಿಗೂ ನಾನು, ನಾ ಕಂಡ ಬಾನು ಅವರ ಕಥಾ ವಿಸ್ಮಯಗಳನ್ನು ತೋರಲಿದ್ದೇನೆ. ಅವರ ಕತೆಗಳಲ್ಲಿ ಕಾಣುವ ಜೀವಪರ ನಿಲುವುಗಳು, ನಿರೂಪಣೆಯ ವೈಶಿಷ್ಟ್ಯಗಳು, ಭಾವ ಲೋಕ ಮತ್ತು ಅವರ ಹೆಚ್ಚಿನ ಕತೆಗಳಲ್ಲಿ ಕಂಡುಬರುವ ಮುಸ್ಲಿಂ ಜಗತ್ತಿನ ಒಳಸುಳಿಗಳನ್ನು ನಾವಿಂದು ನೋಡಲಿದ್ದೇವೆ. 728 ಪುಟಗಳಲ್ಲಿ ತೆರೆದುಕೊಂಡಿರುವ 47 ಕತೆಗಳ ಹೂರಣವನ್ನು, ಅದರಲ್ಲೂ ಪ್ರತಿಷ್ಠಿತ ಬೂಕರ್ ಪ್ರಶಸ್ತಿಯನ್ನು ಗೆದ್ದುಕೊಂಡ **'ಹೃದಯದೀಪ'** – **'The Heart Lamp'** ನಲ್ಲಿರುವ ಹನ್ನೆರಡು ಕತೆಗಳನ್ನು ವಿಶೇಷವಾಗಿ ನೋಡೋಣ.

ಕತೆಯ ಬಗ್ಗೆ ಹೆಚ್ಚು ಒತ್ತು ಕೊಡುತ್ತಿರುವುದರಿಂದ ದಿ ಇಂಟರ್‌ನ್ಯಾಷನಲ್ ಬೂಕರ್ ಪ್ರೈಜ್ ಬಗೆಗಿನ ಹೆಚ್ಚಿನ ವಿವರಗಳನ್ನು ನಾನಿಲ್ಲಿ ಹೇಳುತ್ತಿಲ್ಲ.

1948ರ ಏಪ್ರಿಲ್ ಮೂರರಂದು ಹಾಸನದ ವಲ್ಲಭಬಾಯಿಯಲ್ಲಿ ಜನಿಸಿದ ಬಾನು ಮುಷ್ತಾಕರಿಗೀಗ 77ರ ಹರೆಯ. ವಯಸ್ಸಾದಂತೆ ಮತ್ತೂ ಮತ್ತೂ ಪಕ್ವವಾಗುತ್ತಾ ನಡೆದಿರುವ ಬಾನು, ಸ್ತ್ರೀ ಸಂವೇದನೆಯ ಒಂದು ಮುಖ್ಯ ದನಿಯಾಗಿದ್ದಾರೆ. 80ರ ದಶಕದಲ್ಲಿ ಲಂಕೇಶ್ ಗರಡಿಯಲ್ಲಿ ಪಳಗಿ ಬೆಳಕಿಗೆ ಬಂದವರು ಹಿಂತಿರುಗಿ ನೋಡುವ ಪ್ರಮೇಯವೇ ಬಂದಿಲ್ಲ. ಬಾನು ಕೇವಲ ಕತೆಗಾರ್ತಿಯಲ್ಲ ಇವರು ಪತ್ರಿಕಾ ವರದಿಗಾರರು. ಲಂಕೇಶ್ ಪತ್ರಿಕೆಗೆ ಹಾಸನ ಜಿಲ್ಲೆಯ ವರದಿಗಾರ ರಾಗಿದ್ದವರು. ಇವರು ರಾಜಕಾರಣಿ ಸಹ ಆಗಿದ್ದಾರೆ. ಹಾಸನದ ಪುರಸಭೆಗೆ ಸ್ವತಂತ್ರವಾಗಿ ನಿಂತು ಎರಡು ಬಾರಿಯೂ ಗೆದ್ದು ಪುರಸಭಾ ಸದಸ್ಯ ರಾಗಿದ್ದವರು. ಅಂತೆಯೇ ವೃತ್ತಿಯಲ್ಲಿ ಯಶಸ್ವೀ ವಕೀಲೆ ಕೂಡಾ.




ಬೂಕರ್ ಪ್ರಶಸ್ತಿಯೊಂದಿಗೆ ಶ್ರೀಮತಿ ದೀಪಾ ಭಾಸ್ತಿ ಮತ್ತು ಶ್ರೀಮತಿ ಬಾನು ಮುಷ್ತಾಕ್

ಎಂಟು ವರ್ಷದ ಬಾನು ಉರ್ದು ಕಲಿಯಲು ಹಿಂದೆಬಿದ್ದಾಗ ಅವರ ತಂದೆ ಕನ್ನಡ ಮೀಡಿಯಂನಲ್ಲಿ ಕಲಿಯಲು ಸೇರಿಸಿದ್ದು ಶಿವಮೊಗ್ಗದ ಕಾನ್ವೆಂಟಿಗೆ. ಯಾವ ಕಾರಣಕ್ಕಾಗಿ

ಅವರಿಗೆ ಉರ್ದು ಕಲಿಯಲು ಕಷ್ಟವಾಗಿತ್ತೋ, ಆದರೆ ಅದರಿಂದ ಕನ್ನಡ ಭಾಷೆಗಂತೂ ಲಾಭವಾಯಿತು. ಕನ್ನಡ ಕಲಿತು ಡಬಲ್ ಪ್ರಮೋಶನ್ ಪಡೆದು ಎರಡು ವರ್ಷಗಳಲ್ಲಿ ನಾಲ್ಕನೆಯ ತರಗತಿಗೆ ಕಾಲಿಟ್ಟಿದ್ದು ಆ ವಯಸ್ಸಿನ ಸಾಧನೆಯೇ ಸರಿ. ತಂದೆಯು ವರ್ಗವಾದ ಊರುಗಳಲ್ಲಿ ಶಿಕ್ಷಣ ಮುಗಿಸಿದವರು ಕಡೆಗೆ ನೆಲೆಯಾಗಿದ್ದು ಹಾಸನದಲ್ಲಿ. ಹೈಸ್ಕೂಲ್ ದಿನಗಳಲ್ಲೇ 'ಮಹಡಿ ಮನೆ' ಎಂಬ ಕಾದಂಬರಿಯನ್ನು ಬರೆದಿದ್ದರೂ ಅದರ ಬಗ್ಗೆ ಗಮನವೀಯದೆ ಹಾಗೆಯೇ ಕಣ್ಮರೆಯಾದರೂ ಆ ವಯಸ್ಸಿನಲ್ಲೇ ಒಬ್ಬ ಕತೆಗಾರ್ತಿ ಹುಟ್ಟಿದ್ದಂತೂ ನಿಜ.

ಇದುವರೆಗೆ ಅವರ ಆರು ಕಥಾ ಸಂಕಲನಗಳು – ಹೆಜ್ಜೆ ಮೂಡಿದ ಹಾದಿ; ಬೆಂಕಿ ಮಳೆ; ಎದೆಯ ಹಣತೆ; ಸಫೀರಾ, ಬಡವರ ಮಗಳು ಹೆಣ್ಣಲ್ಲ ಮತ್ತು ಹೆಣ್ಣು ಹದ್ದಿನ ಸ್ವಯಂವರ ಹಾಗೂ ಆರೂ ಸಂಕಲನಗಳ ಸಮಗ್ರ ಕತೆಗಳ 'ಹಸೀನಾ ಮತ್ತು ಇತರ ಕತೆಗಳು' ಸಂಗ್ರಹವೂ ಬಂದಿದೆ. ಈಗ ಬಂದಿರುವ 'ಹೃದಯ ದೀಪ' ಅದರಲ್ಲಿನ ಕತೆಗಳನ್ನೇ ಆರಿಸಿದ್ದಾದ್ದರಿಂದ ಅದನ್ನು ಪ್ರತ್ಯೇಕ ಸಂಕಲನವೆಂದು ನಾನಿಲ್ಲಿ ಪರಿಗಣಿಸಿಲ್ಲ. ಅದರಲ್ಲಿ 'ತೊಲೆಗಂಬವಿಲ್ಲದ ಗಗನ' ಎನ್ನುವ ಒಂದು ಹೊಸ ಕತೆ ಮಾತ್ರಾ ಸೇರಿದೆ. ಇವರು ಒಂದು ಕಾದಂಬರಿ, ಒಂದು ಪ್ರಬಂಧ ಸಂಕಲನ ಹಾಗೂ ಒಂದು ಕವಿತಾ ಸಂಕಲನವನ್ನು ಹೊರತಂದಿದ್ದರೂ ಇವರನ್ನು ಪ್ರಮುಖವಾಗಿ ಗುರುತಿಸುವುದು ಕತೆಗಾರ್ತಿಯೆಂದೇ. ಇವರ ಹಲವು ಕತೆಗಳು ದಕ್ಷಿಣ ಭಾರತದ ಎಲ್ಲಾ ಭಾಷೆಗಳಿಗೂ ಮತ್ತು ಇಂಗ್ಲಿಷ್‌ಗೂ ಅನುವಾದವಾಗಿವೆ. ಪ್ರಸ್ತುತ ಬೂಕರ್ ಪ್ರಶಸ್ತಿ ವಿಜೇತ ಸಂಕಲನ 'ದಿ ಹಾರ್ಟ್ ಲ್ಯಾಂಪ್' ಪ್ರಪಂಚದ 47 ಪ್ರಮುಖ ಭಾಷೆಗಳಿಗೆ ಅನುವಾದವಾಗಲಿದೆ. ಇದನ್ನು ಇಂಗ್ಲಿಷಿಗೆ ಅನುವಾದಿಸುವ ಮೂಲಕ ನಮ್ಮ ಕನ್ನಡದ ಅಚ್ಚ ಪ್ರತಿಭೆಯನ್ನು ಅಂತಾರಾಷ್ಟ್ರೀಯ ಮಟ್ಟಕ್ಕೆ ಕರೆದೊಯ್ಯುವಲ್ಲಿ ನಮ್ಮ ಇನ್ನೊಬ್ಬ ಕನ್ನಡತಿ ದೀಪಾ ಭಾಸ್ತಿಯವರ ಶ್ರಮ ಉಲ್ಲೇಖನೀಯ.

ಬಾನು ಮುಷ್ತಾಕರ 'ಹಸೀನಾ ಮತ್ತು ಇತರ ಕತೆಗಳು' ಸಮಗ್ರ ಕಥಾ ಸಂಕಲನ – ಇದು ಎಲ್ಲಾ ಕಥಾ ಸಂಕಲನಗಳನ್ನೂ ಒಳಗೊಂಡ 763 ಪುಟಗಳ ಬೃಹತ್ ಸಂಪುಟ. ಇದರಲ್ಲಿ ಅವರ ಆರೂ ಕಥಾ ಸಂಕಲನದ ಅಷ್ಟೂ ಕತೆಗಳಿವೆ. ಇದರಲ್ಲಿ ಎಲ್ಲ ಸಂಕಲನಗಳಿಂದ ಹೆಕ್ಕಿದ 13 ಕತೆಗಳು 'ಎದೆಯ ಹಣತೆ'ಯಲ್ಲಿದೆ. ಅದರಲ್ಲಿ ಒಂದು ಕತೆ ಬಿಟ್ಟು ಮಿಕ್ಕ 12 ಕತೆಗಳು ಇಂಗ್ಲಿಷ್ಗೆ ಅನುವಾದವಾದ The Heart Lamp ನಲ್ಲಿವೆ.



'ಹಸೀನಾ ಮತ್ತು ಇತರ ಕತೆಗಳು' ಒಂದು ಸಂಪುಟವನ್ನು ಓದಿದರೆ ಎಲ್ಲವನ್ನೂ ಓದಿದಂತೆ.

'ಹಸೀನಾ ಮತ್ತು ಇತರ ಕತೆಗಳು' ಸಮಗ್ರ ಸಂಕಲನದ ಮುನ್ನುಡಿಯಲ್ಲಿ ಬಾನು "ನಮ್ಮ ಕುಟುಂಬ, ನಮ್ಮ ಪರಿಸರ, ನಮ್ಮ ನಂಬಿಕೆ, ಆಚಾರ – ವಿಚಾರ ಮತ್ತು ನಮ್ಮ ಸುರಕ್ಷಿತ ವಲಯ ಎಲ್ಲವೂ ನಮಗೆ ಆಪ್ಯಾಯಮಾನವಾಗಿರುತ್ತದೆ. ಆದರೆ ನಮ್ಮ ಸುತ್ತಮುತ್ತಲಿನ ಸಹಜೀವಿಗಳ ಬಾಳ್ವೆ ನಮ್ಮನ್ನು ಬಾಧಿಸದಿದ್ದಲ್ಲಿ, ತಟ್ಟದಿದ್ದಲ್ಲಿ ನಮ್ಮ ಅಂತರಂಗದ ಸೆಲೆ ಬತ್ತಿದಂತೆಯೇ ಸರಿ; ಮತ್ತು ನಮ್ಮನ್ನು ನಾವೇ ಕಟಕಟೆಯಲ್ಲಿ ನಿಲ್ಲಿಸುವ ಆತ್ಮನಿರೀಕ್ಷಣೆಯ ದಾರುಣ ಅನುಭವಗಳು ನಮ್ಮನ್ನು ಕಿತ್ತು ತಿನ್ನತೊಡಗುತ್ತವೆ" ಎನ್ನುತ್ತಾರೆ. ಅವರ ಕತೆಗಳಲ್ಲಿ ಈ ಮಾತಿನ ಪ್ರತಿಫಲನವನ್ನು ಕಾಣುತ್ತೇವೆ. ಅವರು ಕಿತ್ತುತಿನ್ನುವ

ಬಡತನದಲ್ಲಿ ಬೆಂದವರಲ್ಲ; ಅಸಮ ವೈವಾಹಿಕ ಜೀವನದಲ್ಲಿ ನೊಂದವರಲ್ಲ; ಒಳ್ಳೆಯ ವಿದ್ಯಾವಂತ ಮಕ್ಕಳು; ಗೌರವಯುತ ಉದ್ಯೋಗ – ಹೀಗೆ ಒಂದು ಮಟ್ಟಿಗಿನ ಸುರಕ್ಷಿತ ವಲಯದಲ್ಲೇ ಬಾಳ್ವೆ ನಡೆಸಿದರೂ ಸಮಾಜದ ಇತರರ ನೋವುಗಳಿಗೆ ಅವರು ತಮ್ಮ ಕತೆಗಳಲ್ಲಿ ಧ್ವನಿಯಾಗಿದ್ದಾರೆ.

ಮುಸ್ಲಿಂ ಜಗತ್ತು – ಅವರ ಭಾಷೆ, ವೇಷಭೂಷಣ, ಧಾರ್ಮಿಕ ಕಟ್ಟುಪಾಡುಗಳು, ನಂಬಿಕೆಗಳು, ಆಚರಣೆಗಳು ಇವುಗಳಿಂದಾಗಿ ಬೇರೆ ಧರ್ಮಗಳವರಿಗೆ ಒಂದು ಮಟ್ಟಿಗೆ ನಿಗೂಢ. ಮುಸ್ಲಿಂ ಮಹಿಳೆಯರು ಇತರ ಧರ್ಮೀಯರೊಂದಿಗೆ ಹೆಚ್ಚಾಗಿ ಬೆರೆಯದಿರುವುದರಿಂದ ಅವರ ಬಗ್ಗೆ ಕಪೋಲ ಕಲ್ಪನೆಗಳೂ ಹೆಚ್ಚು. ಬಾನು ಅವರ ಕತೆಗಳು ಇಂತಹ ಗೂಢತೆಯೊಳಗೆ ಪ್ರವೇಶಿಸಿ ಅವರ ಜಗತ್ತನ್ನು ನಮ್ಮ ಕಣ್ಣ ಮುಂದೆ ತಂದಾಗ ಅದರಲ್ಲಿ ದಬ್ಬಾಳಿಕೆಗೆ ಒಳಗಾದ ಅಸಹಾಯಕರು, ಅವರ ಮುಗ್ಧತೆ ಮತ್ತು ಹಿಡಿ ಪ್ರೀತಿಗಾಗಿ ಹಂಬಲಿಸುವ ಹಲವು ಜೀವಗಳಷ್ಟೇ ಕಣ್ಮುಂದೆ ಬರುತ್ತವೆ.

ಧೈರ್ಯದಿಂದ ಬರಹದಲ್ಲಿ ತಮ್ಮ ನಿಲುವನ್ನು ಎತ್ತಿಹಿಡಿದು ಅದಕ್ಕಾಗಿ ಫತ್ವಾದ ಬೆದರಿಕೆಯನ್ನು ಎದುರಿಸಬೇಕಾಗಿ ಬಂದರೂ, ತಾನು ಇನ್ನುಮುಂದೆ ಬರೆಯುವುದಿಲ್ಲ ಎಂದು ಪ್ರಮಾಣ ಪತ್ರ ನೀಡದೆ 'ತನ್ನನ್ನು ನೇಣುಗಟ್ಟಿದರೂ ಕೊನೆ ಉಸಿರಿರುವವರೆಗೆ ಬರೆದೇ ಸಾಯುತ್ತೇನೆ' ಎಂದ ಛಲಗಾರ್ತಿ ಬಾನು. ಇತ್ತೀಚೆಗೆ ಬೂಕರ್ ಪ್ರಶಸ್ತಿ ಪಡೆದ ನಂತರ ಲಂಡನ್ನಿನಲ್ಲಿ ಅಭಿಮಾನಿಯೊಬ್ಬಾಕೆ, "ನೀವೇನಾದರೂ ಮರೆಯಾಗುವಂತಹ ಸಂದರ್ಭ ಬಂದರೆ ನಾನು ನಿಮಗೆ ನೆಲೆಕೊಡುತ್ತೇನೆ" ಎಂದಾಗ ನಕ್ಕು "ನಮ್ಮ ದೇಶವೇ ಹೆಚ್ಚು ಸುರಕ್ಷಿತವಾಗಿದೆ. ಎಷ್ಟೇ ಒಳಜಗಳಗಳಿದ್ದರೂ ಭಾರತದಿಂದ ನಾನು ಹೊರಗೋಡುವ ಪ್ರಸಂಗ ಎದುರಾಗುವುದಿಲ್ಲ. ನಾನು ನನ್ನ ಮಣ್ಣಿನಲ್ಲಿ, ನನ್ನ ಭೂಮಿಯಲ್ಲಿ ಸುರಕ್ಷಿತವಾಗಿದ್ದೇನೆ" ಎಂದುತ್ತರಿಸಿದ ನಮ್ಮ ಹೆಮ್ಮೆ – ಬಾನು.

ಬಾನು ಅವರ ಕತೆಗಳಲ್ಲಿ ಎಲ್ಲೂ ಇಸ್ಲಾಂ ಧರ್ಮದ ಅವಹೇಳನವಿಲ್ಲ; ಬೇರೆ ಧರ್ಮಗಳ ಅವಹೇಳನವೂ ಇಲ್ಲ. ಆದರೆ ಇಸ್ಲಾಂ ಧರ್ಮದ ಹಲವು ಸೂಕ್ಷ್ಮ ವಿಚಾರಗಳು ಆಚರಣೆಯಲ್ಲಿ ಹೇಗೆ ದುರುಪಯೋಗವಾಗುತ್ತಿದೆ ಎನ್ನುವುದು ಅವರ ನಿಜವಾದ ಕಾಳಜಿಯಾಗಿದೆ. ಧರ್ಮಕ್ಕೆ ಬೆಂಬಲವಾಗಿ ನಿಲ್ಲಬೇಕಾದವರೇ ಅದನ್ನು ತಿರುಚಿ ತಮ್ಮ ಅನುಕೂಲಕ್ಕೆ ಬಳಸಿ ಕೊಳ್ಳುತ್ತಿರುವುದು ಅವರಲ್ಲಿ ಕ್ರೋಧವನ್ನುಂಟುಮಾಡಿದೆ. ಅದರಲ್ಲೂ ತಮ್ಮ ಧರ್ಮದ ಅಶಿಕ್ಷಿತ ಮುಗ್ಧ ಅಮಾಯಕ ಹೆಣ್ಣುಗಳು ಈ ಕಾರಣದಿಂದಾಗಿ ಅನುಭವಿಸುತ್ತಿರುವ ತಾರತಮ್ಯ, ಕಷ್ಟ ಕೋಟಲೆಗಳು, ನೋವು, ದುಃಖ, ದುಮ್ಮಾನಗಳು ಅವರಲ್ಲಿ ಹೆಪ್ಪಾಗಿ ನಿಂತು ಆ ನೋವನ್ನು ಇಡೀ ಜಗತ್ತಿನೆದುರಲ್ಲಿ ತೆರೆದಿಡುತ್ತಿದ್ದಾರೆ. ಪುರುಷಾಹಂಕಾರದ ವಿರುದ್ಧ ದನಿಯೆತ್ತುತ್ತಿದ್ದಾರೆ. ಅವರು ಹುಟ್ಟಿ, ಬೆಳೆದು, ಬದುಕುತ್ತಿರುವ ಪರಿಸರವೇ ಅದಾದ್ದರಿಂದ ಅವರ ಹೆಚ್ಚಿನ ಕತೆಗಳು ಮುಸ್ಲಿಂ ಸಮುದಾಯದ ಮತ್ತು ಅಲ್ಲಿನ ಆಚರಣೆಗಳ ಬಗೆಗೇ ಇವೆ. ಹಾಗೆಂದು ಅವರು ಬೇರೆ ಕತೆಗಳನ್ನು ಬರೆದೇ ಇಲ್ಲವೆಂದೇನೂ ಇಲ್ಲ. ಸಿದ್ಧಾಂತ ವಿಚಾರಗಳ ಚಿಂತನೆಗಳ ಕತೆಗಳಿವೆ, ಸಣ್ಣ ಮಕ್ಕಳ ಮನೋವ್ಯಾಪಾರ ಕುರಿತಾದ ಕತೆಗಳಿವೆ, ಅಸಂಗತ ಕತೆಗಳಿವೆ. ಧಾರ್ಮಿಕ ಸಂಗತಿಗಳು, ನಂಬಿಕೆಗಳು ಕತೆಗಳಲ್ಲಿ ಇಣುಕಿವೆ. ಇಂದು ಅವರ ವಿವಿಧ ರೀತಿಯ ಕತೆಗಳಲ್ಲೊಮ್ಮೆ ಯಾನ ಮಾಡಿ ಬರೋಣ ಮತ್ತು ಮುಖ್ಯವಾಗಿ ಬೂಕರ್ ಪ್ರಶಸ್ತಿ ಗೆದ್ದುಕೊಂಡಿರುವ ಕತೆಗಳ ಬಗ್ಗೆ ಮಾತಾಡೋಣ.



ಬಾನು ಅವರ ಕಥಾ ಜಗತ್ತಿನ ಮೂಲ ಹೂರಣವೇ ಎಲ್ಲಾ ವಯೋಮಾನದ ಮುಸ್ಲಿಂ ಹೆಣ್ಣುಮಕ್ಕಳ ಮನಸ್ಸಿಗೆ, ಕಾಲಿಗೆ ತೊಡಿಸಿರುವ ಅದೃಶ್ಯ ಸಂಕೋಲೆಗಳು, ಮುಗ್ಧತೆ, ದಾಸ್ಯ ಮತ್ತು ಪುರುಷ ಪ್ರಾಭಲ್ಯವನ್ನೇ ಜೀವನವಾಗಿ ಒಪ್ಪಿಕೊಂಡುಬಿಟ್ಟಿರುವ ಮನೋಭಾವ. ಇಂತಹ ಕೆಲವು ಕತೆಗಳನ್ನು ಬೂಕರ್ ಕತೆಗಳಲ್ಲೂ ನೋಡುತ್ತೇವೆ. ಬೂಕರ್ ಕತೆಗಳ ಹೊರತಾಗಿಯೂ ಮಹಿಳಾ ಸಂವೇದನೆಯ, ನೋವುಗಳ ಇತರ ಹಲವು ಕತೆಗಳು ನಮಗೆ ದೊರಕುತ್ತವೆ. ಅವುಗಳಲ್ಲಿ ಈ ವಿಷಯಗಳು ಹೇಗೆ ಬಿಂಬಿತವಾಗಿದೆಯೆನ್ನುವುದನ್ನು ಈಗ ಆ ಕತೆಗಳ ಹೂರಣದೊಂದಿಗೆ ನೋಡೋಣ.

'ರಾಹಿಲ ಎಂಬ ಕನ್ನೆಯ ಕತೆ'ಯ ರಾಹಿಲ 28 ವರ್ಷದ ಅವಿವಾಹಿತ ಕೆಳ ಮಧ್ಯಮವರ್ಗದ ಸಂಸಾರದ ಜವಾಬ್ದಾರಿಗಳಲ್ಲಿ ಸಿಲುಕಿಕೊಂಡಿರುವ ಪ್ರೈಮರಿ ಸ್ಕೂಲಿನ ಟೀಚರ್. ಆಸ್ಪತ್ರೆಯೊಂದರ ಅಂಗವಿಕಲ ಕಾಂಪೌಂಡರ್ ವರನ ಪ್ರಸ್ತಾಪ ಬಂದಾಗ ಮನೆಯವರೆಲ್ಲರೂ ನಿರಾಕರಿಸುತ್ತಾರೆ. ಉತ್ತಮ ಹುದ್ದೆಯಲ್ಲಿರುವ ಪ್ರಸಾದ್ ಇವಳೊಂದಿಗೆ ಮದುವೆಯ ಪ್ರಸ್ತಾಪ ಮಾಡಿದಾಗ ತನ್ನ ಜನಾಂಗದ ಕಟ್ಟುಪಾಡುಗಳಿಗೆ ಹೆದರಿ ಅವನಿಂದ ತಪ್ಪಿಸಿಕೊಳ್ಳುವ ಸಲುವಾಗಿ ಆ ಅಂಗವಿಕಲ ಕಾಂಪೌಡರ್‌ನನ್ನೇ ಮದುವೆಯಾಗುವ ನಿರ್ಧಾರ ಮಾಡುವ ಹೊತ್ತಿಗೆ ಅವನ ಮದುವೆಯೂ ನಿಶ್ಚಯವಾಗಿರುತ್ತದೆ. ಜಾತಿ ವ್ಯವಸ್ಥೆಯನ್ನು ಕುರಿತು ರಾಹಿಲ ಆಡುವ ಈ ಮಾತುಗಳು– "ನಮ್ಮ ಜಾತಿಯ ಡಾಕ್ಟರನೊಬ್ಬನನ್ನು ಮದುವೆಯಾಗಬೇಕೆಂದರೆ ದುಡ್ಡು ಸುರಿಯಬೇಕಾಗತ್ತೆ. ಬರೀ ಗಂಡು ಜಾತಿಯ ಡಾಕ್ಟರನ್ನು ಮದುವೆಯಾಗುತ್ತೇನೆಂದರೆ ನನ್ನ ತಂದೆ ತಾಯಿ ವಿಷ ಕುಡಿದು ಪ್ರಾಣ ಬಿಡ್ತಾರೆ; ತಮ್ಮ ಹುಚ್ಚಾಸ್ಪತ್ರೆ ಸೇರುತ್ತಾನೆ. ಮದುವೆಯಾದ ಅಕ್ಕಂದಿರಿಬ್ಬರೂ ತಲಾಕ್ ಹಿಡಿದು ಇಲ್ಲಿಗೆ ಓಡೋಡಿ ಬಂದು ತಲೆ ಘಟ್ಟಿಸಿ ಅಳುತ್ತಾರೆ. ಇದೆಲ್ಲವನ್ನೂ ವಿಚಾರಿಸುವವರ್‍ಯಾರೂ ಇರುವುದಿಲ್ಲ; ಏಕೆಂದರೆ ನಾನು ನನ್ನ ಜಾತಿಯಲ್ಲದ ಗಂಡು ಜಾತಿಯ ಯುವಕನೊಬ್ಬನೊಡನೆ ಮದುವೆಯಾಗಿರುತ್ತೇನೆ" – ಅಸಹಾಯಕತೆಯ ಧ್ವನಿಗಳಾಗಿ ಓದುಗರನ್ನು ಮುಟ್ಟುತ್ತವೆ.

'ಸರಿದ ಕಾರ್ಮೋಡ' ಕತೆಯ ಜಬೀನ್ ಮತ್ತು ನವಾಬರದ್ದು ಅನುರೂಪದ ಪ್ರೀತಿಯ ದಾಂಪತ್ಯ. ಏಳು ಜನ ಅಣ್ಣತಮ್ಮಂದಿರ ಕುಟುಂಬದ ಯಜಮಾನ ನವಾಬನ ಹಿರಿಯಣ್ಣ. ಕಟ್ಟಳೆಗಳನ್ನು ಮೀರುವ ಧಿಮಾಕು ತೋರುವ ಮನೆಯ ಸೊಸೆಯರಿಗೆ ಸವತಿಯೊಬ್ಬಳನ್ನು ತಂದು ಸೇಡು ತೀರಿಸಿಕೊಳ್ಳುವ ದುಷ್ಟ ಮನೋಭಾವ. ಕ್ಷುಲ್ಲಕ ಕಾರಣಕ್ಕೆ ಜಬೀನಳ ಮೇಲೆ ಕೋಪಗೊಂಡು ತಮ್ಮನನ್ನು ಮುಖಮೂತಿ ನೋಡದೆ ದಂಡಿಸಿದಾಗಲೂ ಅವನು ಎದುರಾಡುವುದಿಲ್ಲ; ಜಬೀನಳೂ ಬಾಯ್ಬಿಡುವಂತಿಲ್ಲ. ಮನೆಯ ರಿವಾಜೇ ಅಂತಿರುತ್ತದೆ. ಆಮೇಲೂ ಸಮಾಧಾನವಾಗದೇ ಬಸುರಿಯಾಗಿದ್ದ ಜಬೀನಳನ್ನು ತವರಿಗೆ ಕಳುಹಿಸಿ ನವಾಬನಿಗೆ ಇನ್ನೊಂದು ಮದುವೆಯ ಏರ್ಪಾಡನ್ನು ಮಾಡುತ್ತಾನೆ. ಅದು ಅಪರಾಧವೂ ಅಲ್ಲ ಮತ್ತು ಜಬೀನಳ ಮನೆಯವರೂ ಇದಕ್ಕೆ ಎದುರಾಡುವಂತಿಲ್ಲ. ಆದರೆ ನವಾಬ ಅಣ್ಣನ ವಿರುದ್ಧ ನಿಂತು ಕತೆ ಸುಖಾಂತವಾದರೂ ಹೆಂಡತಿಯರನ್ನು ತಮ್ಮ ಅಂಕೆಯಲ್ಲಿರಿಸಿಕೊಳ್ಳಲು ಪುರುಷರು ಕಂಡುಕೊಂಡಿರುವ ಈ ಉಪಾಯ ದಿಗಿಲುಹುಟ್ಟಿಸುತ್ತದೆ.

ಸಾವೂ ಕೆಲವರಲ್ಲಿ ಸಂಭ್ರಮವನ್ನು ತರುತ್ತದೆ ಎನ್ನುತ್ತದೆ **'ದೇವರು ಮತ್ತು ಅಪಘಾತ'** ಎನ್ನುವ ಹೃದಯವಿದ್ರಾವಕ ಕತೆ. ಹೆಣಕ್ಕೆ ಸ್ನಾನ ಮಾಡಿಸುವ (ಗಸ್ಸಾಲಿನ್) ವೃತ್ತಿಯ ಮರಿಯಮ್ ಬಡವರಲ್ಲಿಯೂ ಕಡುಬಡವಳು. ಇವಳು ನೇಮಕವಾಗಿದ್ದ ಏಳು ಮಸೀದಿಯ ವ್ಯಾಪ್ತಿಯಲ್ಲಿ ಯಾರಾದರೂ ಹೆಂಗಸರು ಸತ್ತಾಗಲಷ್ಟೇ ಇವಳ ಮನೆಯ ಒಲೆ ಕೆಲದಿನ ಉರಿಯುವುದು. ಕಳೆದ 27 ದಿನಗಳಿಂದ ಯಾವ ಸಾವೂ ಸಂಭವಿಸಿಲ್ಲ. ಎಲ್ಲೆಡೆಯೂ ಸೋರುತ್ತಿರುವ ಗುಡಿಸಿಲಿನಲ್ಲಿ, ಈ ಮಳೆಗಾಲದಲ್ಲಿ ಅವಳೊಂದಿಗೆ ಕಡ್ಡಾಯ ಅನಿವಾರ್ಯ ಉಪವಾಸ ಅನುಭವಿಸುತ್ತಿರುವ ಅವಳ ಬಾಣಂತಿ ಮಗಳೂ ಜೊತೆಗಿದ್ದಾಳೆ. ಹತಾಶಳಾಗಿದ್ದವಳಿಗೆ ಕಂಟ್ರಾಕ್ಟರ್ ಆದಮ್ ಸಾಹೇಬರ ಹೆಂಡತಿ, ಮಗಳು ಮತ್ತು ಮೊಮ್ಮಗಳು ಮೂವರೂ ಸತ್ತಿರುವ ಸುದ್ದಿ ಬಂದಾಗ, ಆ ಸಂದರ್ಭದಲ್ಲಿ ಪಠಿಸಬೇಕಾದ ಮಂತ್ರವೂ ಮರೆತುಹೋಗಿ, ಹೊಸ ಚೈತನ್ಯದಿಂದ ನಡೆಯುತ್ತಾಳೆ. ಕ್ರಮಬದ್ಧವಾಗಿ ತನ್ನ ಕೆಲಸವನ್ನು ಪೂರೈಸುತ್ತಾಳೆ. ಹೆಣ್ಣು ಶವಗಳ ಬಗ್ಗೆ ಮರಿಯಮ್ಮಳ ತಾಯಿ ಹೇಳುತ್ತಿದ್ದ "ಒಬ್ಬ ಹೆಣ್ಣು ಶೀಲವಂತೆ ಅನ್ನಿಸಿಕೊಳ್ಳಬೇಕಾದರೆ ಅವಳು ಸತ್ತು ಮೂರು ದಿನ ಆಗ್ಬೇಕು. ನಿರ್ಜೀವ ಹೆಣಗಳೂ ಎಷ್ಟೋ ಬಾರಿ ಆಕರ್ಷಕವಾಗಿ ಕಾಣಬಲ್ಲವು ಮತ್ತು ಹೆಣಗಳೊಡನೆ ಸಂಭೋಗ ನಡೆಸುವ ವಿಕೃತ ಮನಸ್ಸಿನವರು ಕೂಡಾ ಈ

ಪ್ರಪಂಚದಲ್ಲಿದ್ದಾರೆ. ಮೂರು ದಿನಗಳಲ್ಲಿ ಹೆಣ ಕೊಳೆಯಲು ಆರಂಭಿಸಿದ ನಂತರ ಹೆಣ್ಣಿಗೆ ಆ ಭಯವಿಲ್ಲ'' ಎನ್ನುವ ಮಾತುಗಳು ಓದುಗರ ರಕ್ತವನ್ನು ತಣ್ಣಗಾಗಿಸುತ್ತದೆ. ಹೆಣವನ್ನು ನೋಡಲು ಬರುವವರೆಲ್ಲಾ ಅಡುಗೆಯನ್ನು ತಂದು ಅಡುಗೆಮನೆ ತುಂಬಿಹೋಗಿರುತ್ತದೆ. ''ಸಾಹುಕಾರರ ಮನೆಯ ತಟ್ಟೆಯಲ್ಲಿಯೇ ಉಳಿಯಲು, ಸಿಂಕ್ ಮೂಲಕ ಹರಿದು ಹೋಗಿ ಮಲಮೂತ್ರಾದಿಗಳೊಡನೆ ಸೇರಲು, ಚರಂಡಿಯಲ್ಲಿ ಹರಿದು ಹೋಗಲು ಸಾಕಷ್ಟು ಅನ್ನವನ್ನು ಸೃಷ್ಟಿ ಮಾಡಿರುವ ಅಲ್ಲಾಹನೆ ನಮ್ಮಂತ ಬಡವರ ಹೊಟ್ಟೆಗೆ ಸೇರಲು, ನನ್ನ ಹಸೀನಾಳ ಹೆಸರಿಗೆ ಅನ್ನದ ಅಗಳುಗಳನ್ನು ನೀನ್ಯಾಕೆ ಸೃಷ್ಟಿ ಮಾಡಲಿಲ್ಲ'' ಎಂದು ಮೊರೆಯಿಡುವುದು ಬಡತನದ ಪರಾಕಾಷ್ಠೆಯನ್ನು ಬಿಂಬಿಸುತ್ತದೆ. ಅಡುಗೆಯವಳು ಕೊಟ್ಟ ಊಟ ಮಾಡುತ್ತಾಳೆ. ಹೆಣದ ಸ್ನಾನಕ್ಕೆ ಕಾಯಿಸಿ ಮಿಕ್ಕಿದ್ದ ಬಿಸಿ ನೀರು, ಮತ್ತಿತರ ಪರಿಕರಗಳನ್ನು ಉಪಯೋಗಿಸಿ ಎಷ್ಟೋ ದಿನಗಳ ನಂತರ ನೆಮ್ಮದಿಯಿಂದ ಸ್ನಾನ ಮಾಡಿ ಒದ್ದೆ ಬಟ್ಟೆಯಲ್ಲೇ ಇರಲು ಸಿದ್ಧವಾದಾಗ ಸಾಹೇಬರ ಹೆಂಡತಿ ತನ್ನದೊಂದು ಸೀರೆಯನ್ನು ಕೊಡುತ್ತಾಳೆ. ಹೆಣದ ಮೇಲಿನ ರಕ್ತದಲ್ಲಿ ನೆಂದಿದ್ದ ಜರಿಯ ಸೀರೆಗಳನ್ನು, ಪಂಜಾಬಿ ಡ್ರೆಸ್ಸನ್ನು ನೋಡಿದ ಮರಿಯಂ ಬಾಣಂತನ ಮುಗಿಸಿದ ನಂತರ ಮಗಳಿಗೆ ಕೊಟ್ಟು ಕಳಿಸಲು ಒಳ್ಳೆಯ ಉಡುಗೊರೆಗಳು ಸಿಕ್ಕವೆಂದು ಆನಂದಿಸುತ್ತಾಳೆ. ದುಡ್ಡು ಮತ್ತು ಗಂಟಿನೊಂದಿಗೆ ಮನೆಗೆ ಹೊರಟು ಅಲ್ಲಿಂದ ತಂದಿದ್ದ ಅನ್ನವನ್ನು ನಿತ್ರಾಣಳಾಗಿದ್ದ ಮಗಳಿಗೆ ತಿನ್ನಿಸುತ್ತಾಳೆ. ಬಹುದಿನಗಳ ಮೇಲೆ ಈ ದೀನರಿಬ್ಬರ ಹೊಟ್ಟೆ ತುಂಬುತ್ತದೆ.

'ಜೀವಸೆಲೆ' ಕತೆಯಲ್ಲಿ ಗಂಡನ ಅತಿಪ್ರೀತಿಯ ದಿಗ್ಬಂಧನ ಆಬಿದಳಿಗೆ. ಅವಳು ಯಾರೆದುರೂ ಕಾಣಿಸಿಕೊಳ್ಳುವಂತಿರಲಿಲ್ಲ. ಸಿರಾಜ್ ಕೊಲೆಯಾಗಿ ಹೋದಾಗ ಆಬಿದ ದಿನತುಂಬಿದ ಬಸುರಿ. ನೆಮ್ಮದಿಯಿಂದ ಸಂಸಾರವನ್ನು ನಡೆಸಿದ್ದರೂ ಉಳಿಸಿಟ್ಟದ್ದೇನೂ ಇಲ್ಲ. ಐದು ಮಕ್ಕಳು ಮತ್ತು ಮುದಿ ಅತ್ತೆಯೊಂದಿಗೆ ಅಕ್ಷರಶಃ ಬೀದಿಗೆ ಬೀಳುತ್ತಾಳೆ. ನಿರಕ್ಷರಕುಕ್ಷಿ ಆಬಿದಾ ಮನೆಗೆಲಸಕ್ಕೆ ಹೋದರೆ ಗಂಡಸರ ಕಣ್ಣು ಅವಳ ಮೇಲೇ. ಮನೆಯೊಡತಿಯರು ಕೆಲಸದಿಂದ ಬಿಡಿಸಿ ಕಳುಹಿಸುತ್ತಿರುತ್ತಾರೆ. ಮೂವರು ಮಕ್ಕಳನ್ನು ಅನಾಥಾಶ್ರಮಕ್ಕೆ ಸೇರಿಸಿದರೆ ತಪ್ಪಿಸಿಕೊಂಡು ವಾಪಸ್ಸು ಬಂದುಬಿಡುತ್ತಾರೆ. ಹತಾಶಳಾಗಿ ''ನನ್ನನ್ನು ನಾಲ್ಕು ಗೋಡೆಯೊಳಗೆ ಮುಚ್ಚಿಟ್ಟು ಸಾಕಿದಿರಲ್ಲಾ, ಈ ಜಗತ್ತಿನ ಕ್ರೂರತೆಯನ್ನು ಸ್ವಲ್ಪವಾದರೂ ತಿಳಿಸಿದಿರ? ಹೀಗಲ್ಲ ನೀವು ನನ್ನನ್ನು ಬಾಳಿಸಬೇಕಿದ್ದುದು. ಹಸಿದ ಸಿಂಹಗಳ ನಡುವೆ ನೀವಿರಲಿ, ಇಲ್ಲದಿರಲಿ ಜೀವಿಸುವಂತಹ ಸ್ಥೈರ್ಯ ನನಗೆ ಕೊಡಬೇಕಿತ್ತು'' ಎಂದು ಹಲಬುತ್ತಾಳೆ. ಮುದುಕಿ ಅತ್ತೆ ಮತ್ತು ಐದು ಮಕ್ಕಳನ್ನು ಸಾಕಲು ಅವಳು ಖುದ್ದೂಸ್ ಸಾಹೇಬರಿಗೆ ಬಲಿಯಾಗಲೇಬೇಕಾಗುತ್ತದೆ.

ಆ ಸಂಜೆ ಲಾಯರ್ ಸುಮತಿಯ ಆಫೀಸಿಗೆ ದಿಢೀರನೆ ಬಂದ ಜರೀನಾ ಎಂಬಾಕೆ ತಲಾಕ್ ಪತ್ರವನ್ನು ಬರೆದುಕೊಡಬೇಕೆಂದು ಕೋರಿಕೊಳ್ಳುತ್ತಾಳೆ. ತಾನೂ ದುಡಿಯದೆ, ಹೆಂಡತಿ ದುಡಿಯುವುದನ್ನೂ ಸಹಿಸಿದ ಗಂಡನೂ ಅವಳ ಹಿಂದೆಯೇ ಬಂದು, ದೂರುತ್ತಾ ಅವಳನ್ನು ಕೆರಳಿಸತೊಡಗುತ್ತಾನೆ. ತನ್ನ ಪ್ರಾಮಾಣಿಕತೆಯನ್ನು ಸಾಬೀತು ಮಾಡಿಕೊಳ್ಳಲು ಕೂಗಾಡುತ್ತಿದ್ದ ಜರೀನಾಳ ಹಾರಾಟದಿಂದ, ಅವಳಿಂದಾಗಿಯೇ ಈ ಎಲ್ಲಾ ರಾದ್ಧಾಂತ ಎನ್ನುವ ವಾತಾವರಣವನ್ನು ಅವಳ ಗಂಡ ಸೃಷ್ಟಿಸಿಬಿಡುತ್ತಾನೆ. **'ನಮ್ಮೊಳಗಿನ ಜರೀನಾ'** ಕತೆಯಲ್ಲಿ. ಇಡೀ ಪ್ರಕರಣದಲ್ಲಿ ಸುಮತಿ ತನ್ನನ್ನೂ, ತನ್ನ ಸಂಸಾರವನ್ನೂ, ಎಲ್ಲರೂ ತಮ್ಮತಮ್ಮ ಪ್ರಾಮಾಣಿಕತೆಯನ್ನು ಸಾಬೀತುಗೊಳಿಸಿಕೊಳ್ಳಲು ಹೆಣಗುವ ಅಸಹಾಯಕತೆಯನ್ನೂ ಕಾಣುತ್ತಾಳೆ. ತನ್ನನ್ನು ಹಂಗಿಸಲು ಬಂದ ಗಂಡನನ್ನೂ ರೇಗಿಸಿ ಅವನಲ್ಲಿ ಜರೀನಾಳ ವ್ಯಕ್ತಿತ್ವವನ್ನು ಆವಾಹನೆ ಮಾಡಿಬಿಡುತ್ತಾಳೆ. ನಿಜವಾಗಿಯೂ ಪ್ರಾಮಾಣಿಕತೆಯನ್ನು ಕೂಗಾಡಿ ಸಾಬೀತು ಮಾಡಲು ಸಾಧ್ಯವೇ? ಎನ್ನುತ್ತದೆ ಕತೆಯ ಧ್ವನಿ.

ಮನೆಗೆ ಮಾರಿ; ಊರಿಗೆ ಉಪಕಾರಿ ವ್ಯಕ್ತಿತ್ವ **'ಸಫೀರಾ'** ಕತೆಯ ಸಾದಿಕ್‌ನದ್ದು ಎಲ್ಲರಿಗೂ ಒಳ್ಳೆಯವನಾಗಿ ಒಳ್ಳೆಯ ಹೆಸರನ್ನು ಸಂಪಾದಿಸುವ ಖಯಾಲಿ; ಶಾಹೀನ್‌ಗೆ ಅದರ ಬಗ್ಗೆ ಕೋಪ. ಅವನ ಮಿತ್ರ ಅಸ್ಲಂ ಮತ್ತು ಅವನ ಶ್ರೀಮಂತ ಮನೆತನದ ಹೆಂಡತಿ ಸಫೀರಾರ ಗಂಡ–ಹೆಂಡತಿ ಕಲಹದಲ್ಲಿ ರಾಜೀ ಸೂತ್ರಧಾರ ಇವನು. ತನ್ನ ಕುಟುಂಬವನ್ನು ನಿರ್ಲಕ್ಷಿಸಿ, ಕಂಡವರ

ತಂತಾನೇ ಪರಿಹಾರವಾಗುವ ಸಮಸ್ಯೆಗಳಲ್ಲಿ ಸುಖಾಸುಮ್ಮನೆ ತಲೆಕೆಡಿಸಿಕೊಳ್ಳುವ ಗಂಡನನ್ನು ಕಂಡರೆ ಯಾವ ಹೆಂಡತಿ ತಾನೇ ಉರಿದುಬೀಳುವುದಿಲ್ಲ.

'ನಿರ್ಲಿಪ್ತ ನೆರಳು'ವಿನ ರೋಶನ್ ಬೀ, ಷೇಕ್ ಅಹಮದ್‌ನನ್ನು ಮದುವೆಯಾದಾಗ ತನ್ನೊಂದಿಗೆ ತಂದೆಯ ಮನೆಯ ಅರ್ಧ ಸಂಪತ್ತನ್ನು ತಂದವಳು. ಮಕ್ಕಳೆಲ್ಲಾ ಹುಟ್ಟಿದ ಕ್ಷಣವೇ ಸತ್ತು ಕಡೆಗೆ ಉಳಿದದ್ದು ಒಂದು ರೋಗಿಷ್ಟ ಮಗು. ಅವಳ ನಿಗಾವಹಿಸಲು ಬಂದ ಶಕೀಲ ಬೇಗಮ್ ನಿರಾಯಾಸವಾಗಿ ಎರಡನೆಯ ಪತ್ನಿಯಾಗಿ, ಮನೆಯೊಡತಿಯಾಗಿ, ರೋಶನ್ ಬೀ ಮೂಲೆಗುಂಪಾಗಿ ಬಿಡುತ್ತಾಳೆ. ಓಡಾಡುವ ಪ್ರತಿಯೊಬ್ಬರ ಪಾದವನ್ನು ಗಮನಿಸಿ ಅವರ ಮನೋಭಾವವನ್ನು ಪತ್ತೆಹಚ್ಚುತ್ತಿರುತ್ತಾಳೆ. ರೋಗಿಷ್ಟ ಮಗು ಯಾವುದೇ ನಿಗಾ, ಆರೈಕೆ ಸಿಗದೆ ಸಾವನ್ನಪ್ಪುತ್ತದೆ. ಶಕೀಲಳ ಮಗ ನದೀಮ್ ತನ್ನ ಅಮ್ಮನನ್ನು ಎದುರಿಸಿ ರೂಹ್‌ಳನ್ನು ಮದುವೆಯಾಗುತ್ತಾನೆ. ಅವರಿಬ್ಬರಿಗೂ ರೋಶನ್ ಬೀಯನ್ನು ಕಂಡರೆ ಮಮತೆ, ವಾತ್ಸಲ್ಯ. ಐದು ತಿಂಗಳ ಬಸುರಿ ರೂಹ್ ಅವಳಣ್ಣನ ಮದುವೆಗೆ ಹೋಗಿದ್ದನ್ನೇ ಅವಕಾಶ ಮಾಡಿಕೊಂಡು, ಸೊಸೆಯ ಮೇಲೆ ಸೇಡು ತೀರಿಸಿಕೊಳ್ಳುವವಳಂತೆ ಶಕೀಲ, ತನ್ನ ಮೊದಲಿನ ಆಸೆಯಂತೆ ಅವಸರದಲ್ಲಿ ತನ್ನಣ್ಣನ ಮಗಳನ್ನು ಕರೆಸಿಕೊಂಡು ಮಗನಿಗೆ ಇನ್ನೊಂದು ಮದುವೆ ಮಾಡಿಸುವ ಪ್ರಯತ್ನ ಮಾಡುತ್ತಾಳೆ. ಇದಕ್ಕೆ ನದೀಮನೂ ಒಪ್ಪಿಕೊಂಡಾಗ ರೋಶನ್ ಬೀ ಹತಾಶಳಾಗುತ್ತಾಳೆ. ದೇವರಲ್ಲಿ ತಾನು ಇದುವರೆಗೆ ಪಟ್ಟ ಕಷ್ಟಕ್ಕೆಲ್ಲಾ ಪ್ರತಿಫಲವಾಗಿ ಅವರೆಲ್ಲರನ್ನು ಶಿಕ್ಷಿಸಿ ರೂಹಿಯನ್ನು ಕಾಪಾಡು ಎಂದು ಮೊರೆಯಿಡುತ್ತಾಳೆ. ರೂಹಿಯ ಕರೆ ಬಂದಾಗ ಹೀಗಾಗಿದೆ ಎಂದು ಹೇಳುತ್ತಿರುವಾಗಲೇ ಕುಸಿದುಬೀಳುತ್ತಾಳೆ. ಷೇಕ್‌ಅಹಮದ್‌ನಿಗೆ ಹೆಂಡತಿಯ ಅನಾರೋಗ್ಯ ನೆಪವಾಗಿದ್ದರೆ ಮಗ ವಿನಾಕಾರಣ ಹೆಂಡತಿಯ ಗಮನಕ್ಕೂ ತರದೆ ಇನ್ನೊಂದು ಮದುವೆಗೆ ಮುಂದಾಗುವುದು ಆಘಾತವನ್ನು ತರಿಸುತ್ತದೆ. ಮದುವೆ ಎನ್ನುವುದರ ಅರ್ಥವೇನು? ಅದು ಸೇಡಿನ ಸಾಧನವೇ ಎನ್ನುವ ಪ್ರಶ್ನೆಯೇಳುತ್ತದೆ.

ಸಿದ್ಧಾಂತದಲ್ಲಿರುವುದು ಆಚರಣೆಗೆ ಬರಲು ಸಾಧ್ಯವೇ ಎನ್ನುವ ಪ್ರಶ್ನೆ ಎತ್ತುತ್ತದೆ **'ಸಿದ್ಧಾಂತ ಮತ್ತು ಮೊದಲ ರಾತ್ರಿ'** ಕತೆ. ರಾಹತ್‌ಳ ಮದುವೆ ಸಯ್ಯದ್ ಸಾಹೇಬರು ಮತ್ತು ರಶೀದಾ ಬಾನುವಿಗೆ ಕಗ್ಗಂಟಾಗಿರುತ್ತದೆ. ಆದರೆ ವಿದ್ಯಾವಂತ ಮತ್ತು ಬುದ್ಧಿವಂತಳಾಗಿದ್ದ ರಾಹತ್‌ಳನ್ನು ಸಮಾಜ ಸುಧಾರಕ ಇಮ್ರಾನ್ ಪ್ರೀತಿಸಿ ಮದುವೆಯಾಗಲಿಚ್ಚಿಸುತ್ತಾನೆ. ಆದರೆ ಮುಸ್ಲಿಮರಲ್ಲಿ ರೂಢಿಯಲ್ಲಿರುವ ವರದಕ್ಷಿಣೆಯನ್ನು ತೆಗೆದುಕೊಳ್ಳಲು ಒಪ್ಪದೇ ಎಲ್ಲರ ಕೆಂಗಣ್ಣಿಗೆ ಗುರಿಯಾಗುತ್ತಾನೆ. ಅದಕ್ಕೆ ತದ್ವಿರುದ್ಧವಾಗಿ ಹಲವು ಮಹಿಳಾ ಸಮಾಜ ಸುಧಾರಕಿಯರ ಮುಂದೆ ಪ್ರಮಾಣ ಮಾಡಿದ್ದಂತೆ ಮೆಹರ್ ಕೊಡಲು ಸಿದ್ಧನಾಗುತ್ತಾನೆ. ಮೆಹರ್ ಕೊಡುವುದೆಂದರೆ ತಲಾಕ್ ಕೊಡುವ ಮೊದಲ ಹೆಜ್ಜೆಯೆಂದೇ ನಂಬಿರುವ ಹೆಂಡತಿಯನ್ನು, ಅವಳ ತಾಯ್ತಂದೆಯರನ್ನೂ ಒಪ್ಪಿಸಲು ಸಾಧ್ಯವಾಗದೇ ಆ ಹಣವನ್ನು ಬ್ಯಾಂಕಿನಲ್ಲಿರಿಸಿ "ಸುಧಾರಣೆಗೆ ಕಾಲವಿನ್ನೂ ಪಕ್ವವಾಗಿಲ್ಲ" ಎನ್ನುವ ತೀರ್ಮಾನಕ್ಕೆ ಬರುತ್ತಾನೆ.

'ಹೃದಯದ ಹಕೀಕತ್ತು' ಕತೆಯಲ್ಲಿ ನಾಜಿಮಾ ಮತ್ತು ಅತ್ತೆಯ ಮಗ ಫೈರೋಜ್ ಬಾಲ್ಯದಿಂದಲೂ ಪ್ರೀತಿಸಿದ್ದವರು. ಫೈರೋಜ್ ಓದು ಮುಗಿದ ತಕ್ಷಣ ದುಡಿಯಲು ಸೌದಿಗೆ ಹಾರಿದ್ದ. ದಿನವೂ ಮೂರು ಹೊತ್ತೂ ಮಾಂಸಾಹಾರವನ್ನು ತಿನ್ನುವ, ಮನೆಯ ಹೆಂಗಸರೆಲ್ಲಾ ಬಂಗಾರದಲ್ಲೇ ಮುಳುಗಿಹೋಗಿರುವ ಶ್ರೀಮಂತರ ಮನೆಯ ದರ್ಬಾರನ್ನು ನೋಡಿದ ನಾಜಿಮಾಳ ಅಪ್ಪ, ಏಕಪಕ್ಷೀಯವಾಗಿ ಅವರ ಮಗನನ್ನು ತನ್ನ ಅಳಿಯನಾಗಿ ತೀರ್ಮಾನಿಸಿಬಿಡುತ್ತಾರೆ. ಯಾರೆದುರೂ ಹೃದಯವನ್ನು ಬಿಚ್ಚಿಡಲಾಗದೆ ತನ್ನೆಲ್ಲಾ ಆಸೆ ಆಕಾಂಕ್ಷೆಗಳನ್ನು ಹೂತುಹಾಕಿದ ನಾಜಿಮಾ ದೊಡ್ಡಮನೆಯ ಹಿರಿಸೊಸೆಯಾಗಿ ಜವಾಬ್ದಾರಿಯನ್ನು ನಿರ್ವಹಿಸುತ್ತಾಳೆ. ಕಡೆಯ ನಾದಿನಿಗೆ ಫೈರೋಜನ ಸಂಬಂಧ ಬಂದಿದ್ದು ಅದನ್ನು ನಾಜಿಮಾಳೇ ವ್ಯವಹರಿಸಬೇಕೆಂಬ ಅತ್ತೆಯ ಆಜ್ಞೆಗೆ ಅವಳ ಹೃದಯ ಚೂರಾಗುತ್ತದೆ. ತನ್ನ ಜವಾಬ್ದಾರಿ ನಿಭಾಯಿಸಲು ಅತ್ತೆಯ ಮನೆಗೆ ಹೋದಾಗ, ಮನದ ಯಾವುದೋ ಮೂಲೆಯಲ್ಲಿ ಈಗಲೂ ಫೈರೋಜ್ ತನ್ನ ನೆನಪಿಟ್ಟುಕೊಂಡಿರಬಹುದೇ, ತನ್ನನ್ನು ಕರೆದೊಯ್ಯಬಹುದೇ ಎನ್ನುವ ತುಣುಕು ಆಸೆಯಿದ್ದರೂ, ಹಾಗೆ ಆಲೋಚಿಸುವುದು ಕೂಡಾ ಪಾಪ ಎನ್ನುವ ದ್ವಂದ್ವದಲ್ಲಿರುವವಳನ್ನು ಅತ್ತೆ

ಅರ್ಥಮಾಡಿಕೊಂಡರೂ ಅವಳು ಅಸಹಾಯಕಳು. ಅವಳಿಗೂ ತನ್ನ ಜವಾಬ್ದಾರಿಯಿದೆ. ಅತ್ತೆಯೆದುರು ತನ್ನ ಮನಸ್ಸು ಪ್ರಕಟಗೊಂಡ ನಾಜಿಮಾ ಅಲ್ಲಿ ನಿಲ್ಲಲು ಸಾಧ್ಯವಾಗದೆ ಓಡಿಹೋಗುತ್ತಾಳೆ. ಹೃದಯ ಮತ್ತು ಜವಾಬ್ದಾರಿ ಎರಡರ ನಡುವೆ ನಾಜಿಮಾ ನಲಗುತ್ತಾಳೆ.

'ಬಡವರ ಮಗಳು ಹೆಣ್ಣಲ್ಲ' ಬಾನು ಮುಷ್ತಾಕರ ಮಹತ್ವದ ಕತೆಗಳಲ್ಲಿ ಒಂದು. ಇದರಲ್ಲಿ ಬರಿಯ ಹೆಣ್ಣಿನ ಅಸಹಾಯಕತೆಯಷ್ಟೇ ಅಲ್ಲದೆ ಇಸ್ಲಾಂ ಧರ್ಮದ ಷರೀಯತ್ತುಗಳು ಹೇಗೆ ಶ್ರೀಮಂತರ ಕೈಯ ಆಟಿಕೆಗಳಾಗುತ್ತವೆ; ಎಲ್ಲವನ್ನೂ ತಮಗೆ ಅನುಕೂಲವಾಗುವಂತೆ ತಿರುಗಿಸಿಕೊಳ್ಳುವ ಸಾಮರ್ಥ್ಯ ಉಳ್ಳವರಿಗಿದೆ ಎನ್ನುವುದನ್ನು ಸಾಬೀತು ಮಾಡುವ ಕತೆ ಇದು. ಬೀಡಿ ಗಡಂಗಿನ ಮಾಲೀಕ ಹಾಗೂ ಮುತವಲ್ಲಿಯಾಗಿದ್ದ ಸಿರಿವಂತ ಉಸ್ಮಾನ್ ಸಾಬರ ಮಗ ಸಾಲಾರ್ ಕುದುರೆ ಗಾಡಿಯನ್ನು ಹೊಡೆಯುವ ಜೀಲಾನಿಯ ತಂಗಿ ಸಾಜಿದಾಳನ್ನು ಪ್ರೀತಿಸಿ ಅವಳು ಬಸಿರಾಗಿರುತ್ತಾಳೆ. ಸಾಲಾರ್‌ನ ಮದುವೆ ತಾಯಿ ಜುಬೇದಳ ತಂಗಿಯ ಮಗಳೊಂದಿಗೆ ನಿಶ್ಚಯವಾಗಿ ಇನ್ನೆರೆಡು ದಿನಕ್ಕೆ ಮದುವೆಯೆನ್ನುವಾಗ, ಜೀಲಾನಿಗೆ ತಂಗಿಯ ವಿಷಯ ತಿಳಿದು ಕೋಪಿಷ್ಟನಾಗುತ್ತಾನೆ. ಅವಳನ್ನೂ ಚಚ್ಚಿ ಬಂದು ಗಡಂಗಿನಲ್ಲಿ ಕೂತಿದ್ದ ಸಾಲಾರ್‌ನನ್ನು ಸದೆಬಡಿಯುಹಾಕುತ್ತಾನೆ. ವಿಷಯ ತಿಳಿದ ಉಸ್ಮಾನ್ ಸಾಬರು ಕಂಗೆಟ್ಟು ಬೀಗನಾಗುವ ರಜಾಕ್‌ನನ್ನು ಕರೆಸಿಕೊಂಡು ಪಿತೂರಿ ಮಾಡುತ್ತಾರೆ. ಜೀಲಾನಿ ಮಸೀದಿಯಲ್ಲಿ ದೂರನ್ನು ಕೊಟ್ಟಾಗ ಏನೇನೇ ಕುತಂತ್ರಗಳನ್ನು ಮಾಡಿದ್ದರೂ ಅನ್ವರ್‌ನ ಸಾಕ್ಷಿ ಮತ್ತು ಜೀಲಾನಿ ಕುರಾನ್ ಮೇಲೆ ಪ್ರಮಾಣ ಮಾಡಲು ಹೊರಟಾಗ ವಿಧಿಯಿಲ್ಲದೆ ಉಸ್ಮಾನ್ ಸಾಬರು ಮತ್ತು ರಜಾಕ್, ಸಾಜಿದಾ ಮತ್ತು ಸಾಲಾರ್‌ರ ಮದುವೆಗೆ ಒಪ್ಪಿಕೊಳ್ಳಲೇಬೇಕಾಗುತ್ತದೆ. ತಾವು ತೊಂಭತ್ತೇಳೂವರೆ ರೂಪಾಯಿನ ಮೆಹರ್ ಬರೆಸಿ ಜೀಲಾನಿಯಿಂದ ಅವನ ಕುದುರೆಯನ್ನು ಮಾರಿಸಿ ಎರಡು ಸಾವಿರ ರೂಪಾಯಿಗಳ ವರದಕ್ಷಿಣೆಯನ್ನು ಪೀಕಿ ಅದನ್ನು ಮಸೀದಿಗೆ ದಾನ ಮಾಡುತ್ತಾರೆ. ವ್ಯಭಿಚಾರ ಮಾಡಿದವರಿಗೆ ನೀಡುವ ಡುರ್ರೆ ಹೊಡೆಯುವ ಶಿಕ್ಷೆಯಲ್ಲಿ ಸಾಜಿದಾಳಿಗೆ ಚೆನ್ನಾಗಿ ಪೆಟ್ಟುಕೊಟ್ಟು, ಸಾಲಾರನಿಗೆ ನೆಪಮಾತ್ರದ ಹೊಡೆತ ಮುಟ್ಟಿಸುತ್ತಾರೆ. ನಿಕಾ ಮಾಡಿಕೊಂಡು ಬಂದ ಸಾಜಿದಾಳನ್ನು ಮನೆಯ ಕೆಲಸದಾಕೆಯ ಸುಪರ್ದಿಯಲ್ಲಿರಿಸಿ, ಮರುದಿನ ಸಾಲಾರ್‌ನಿಂದ ತಲಾಕ್ ಪತ್ರವನ್ನು ಜೊತೆಗೆ ತೊಂಭತ್ತೇಳೂವರೆ ರೂಪಾಯಿನ ಮೆಹರ್ ಹಣವನ್ನು ಸಾಜಿದಾಳಿಗೆ ಕೊಡಿಸಿದಾಗ ಅದರಿಂದ ಐವತ್ತು ಪೈಸೆಯನ್ನು ಮಾತ್ರಾ ತೆಗೆದುಕೊಂಡು "ನನಗೆ ಒಂದೇ ವ್ಯಥೆ ಇದೆ. ಅದೇನೆಂದರೆ ಈ ಮಗು ಒಬ್ಬ ಗಂಡಸಿಗೆ ಹುಟ್ಟಬೇಕಿತ್ತು ಆದರೆ ಒಬ್ಬ ನಾಮರ್ದನಿಗೆ ಹುಟ್ಟಿದೆ. ಅದರ ಚಿಂತೆ ನಿಮಗೆ ಬೇಡ" ಎನ್ನುತ್ತಾಳೆ. ಚಿರಪರಿಚಿತವಾಗಿದ್ದ ಕೋಣೆಯ ಮೇಜಿನಡಿಯಲ್ಲಿದ್ದ ಸೀಮೆ ಎಣ್ಣೆಯ ಕ್ಯಾನನ್ನು ತೆರೆದು ತನ್ನ ಮೇಲೆ ಸುರಿದುಕೊಂಡು ರಜಾಕ್‌ನ ಮೇಲೂ ಸುರಿದು ಬೆಂಕಿಕಡ್ಡಿ ಗೀರುತ್ತಾಳೆ. ಕತೆಗಾರ್ತಿ "ಪ್ರತಿಕ್ಷಣ ಈ ವ್ಯವಸ್ಥೆಯ ಉಳಿವಿಗೆ ಬಲಿಯಾಗುತ್ತಿರುವ ಅಸಹಾಯಕ ಜೀವಿಗಳ ನೆರವು ಯಾರಿಂದ ಆಗಬೇಕು? ಜೀವನ ಶೈಲಿ ಬದಲಾಗುತ್ತಿದೆ. ಆದರೆ ಆಲೋಚನೆಯ ಧಾರೆ ಹಿಂದಿಗಿಂತಲೂ ಹೆಚ್ಚು ಜಡ್ಡುಗಟ್ಟುತ್ತಿದೆ. ಪ್ರೀತಿ ಪ್ರೇಮ ಕತೆಯಲ್ಲಿ ಮಾತ್ರಾ ಸಹ್ಯವೇ" ಎನ್ನುವ ಪ್ರಶ್ನೆಯನ್ನು ಎತ್ತುತ್ತಾರೆ.

ತನ್ನಿಬ್ಬರು ಹೆಣ್ಣುಮಕ್ಕಳನ್ನು ವಿದ್ಯಾವಂತ ಶ್ರೀಮಂತ ವರನಿಗೆ ಸಂಪ್ರದಾಯದಂತೆ ಕೈತುಂಬಾ ವರದಕ್ಷಿಣೆ ಕೊಟ್ಟು ಶಾದಿಮಹಲ್‌ನಲ್ಲಿ ವಿಜೃಂಭಣೆಯಿಂದ ಮದುವೆ ಮಾಡುವ ಕನಸು ಹೊತ್ತವಳು ಸಾಲಿಹಾ. ಅಮೀನಾಬಿ ಬಂದು, ಮೊಬೈಲ್ ಅಂಗಡಿ ಇಟ್ಟುಕೊಂಡಿರುವ ತನ್ನ ಮಗನಿಗೆ ಆಕೆಯ ಚಿಕ್ಕ ಮಗಳು ಮೆಹಕ್‌ಳನ್ನು ಯಾವ ವರದಕ್ಷಿಣೆಯಿಲ್ಲದೆ, ಮನೆಯಲ್ಲಿಯೇ ನಿಕಾ ಮಾಡಿಕೊಟ್ಟರೂ ಸಾಕು ಎಂದು ಸೆರಗೊಡ್ಡಿ ಬೇಡಿಕೊಂಡಾಗ ಸಾಲಿಹಾ ತಿರಸ್ಕರಿಸಿ ಅವಳನ್ನು ಅವಮಾನಿಸಿ ಕಳುಹಿಸುತ್ತಾಳೆ. ಪ್ರಜ್ಞೆ ತಪ್ಪಿ ಬಿದ್ದ ಮೆಹಕ್, ಮುಂದೆ ಕಾಲೇಜಿಗೂ ಹೋಗದೆ ಖಿನ್ನತೆಗೆ ಒಳಗಾಗುತ್ತಾಳೆ. ಔಷಧಿ, ಯಂತ್ರ, ಮಂತ್ರ ಯಾವುದಕ್ಕೂ ಪರಿಸ್ಥಿತಿ ಸುಧಾರಿಸದಾದಾಗ ಸಾಲಿಹಾ ಸೋತು, ಕಡೆಗೆ ತಾನೇ ಹೋಗಿ ಆಮೀನಾಬೀಯನ್ನು ಬೇಡಿಕೊಂಡು ಅವಳ ಮಗನನ್ನೇ ಅಳಿಯನನ್ನಾಗಿ ಮಾಡಿಕೊಂಡುಬಿಡೋಣವೆನ್ನುವ ತೀರ್ಮಾನಕ್ಕೆ ಬಂದು ಇಬ್ಬರು ಹೆಣ್ಣುಮಕ್ಕಳ ಮದುವೆಯನ್ನೂ ಒಟ್ಟಿಗೆ ಮಾಡಿಬಿಡುವ ನಿರ್ಧಾರವನ್ನು ತಳೆಯುತ್ತಾಳೆ. ಇಬ್ಬರು ಮಕ್ಕಳ ಜಹೇಜ್ (ವರದಕ್ಷಿಣೆ)ಗಾಗಿ ಇದ್ದಬದ್ದ ಮೂಲಗಳಿಂದೆಲ್ಲಾ ಎಳೆದುಕೊಂಡು ತಯಾರಿ ನಡೆಸತೊಡಗುತ್ತಾಳೆ. ಅಂತೆಯೇ ಒಂದು ದಿನ ಮೆಹಕ್‌ಳ ಮೇಲೆ ಮನೆಬಿಟ್ಟು ಹೊರಗೆ ಹೋಗಿದ್ದಾಗ, ಬರುವಷ್ಟರಲ್ಲಿ ಮೆಹೆಕ್ ನೇಣು ಹಾಕಿಕೊಂಡು ಪ್ರಾಣ ಬಿಟ್ಟಿರುತ್ತಾಳೆ.

ಮಗಳ ಮೇಲೆ ಅಪಾರ ಪ್ರೀತಿಯಿರಿಸಿಕೊಂಡಿದ್ದ ಸಾಲಿಹಾ ಗರಬಡಿದು ಕಂಗೆಟ್ಟು ಮಗಳ ಶವ ಹೋಗುವಾಗ ನಿನ್ನನ್ನು ಹೆತ್ತು ಹೊತ್ತು ಸಾಕಿದವಳಿಗೆ ಇಂತಹ ನೋವುಕೊಟ್ಟು ಹೋಗಲು ಹೇಗೆ ಸಾಧ್ಯವಾಯಿತು. **'ಹೇಳಿ ಹೋಗು ಕಾರಣವ'** ಎನ್ನುತ್ತಾ ಗೋಳಾಡುತ್ತಾಳೆ. ಸತ್ತವರಿಗೆ ಮುಂದಿನ ಪಯಣ ಸುಗಮವಾಗಿರುವಂತೆ ಪರ್‌ವರ್‌ದಿಗಾರ್‌ನಲ್ಲಿ ಬೇಡಿಕೊಳ್ಳುವ ಹಲವು ಇಸ್ಲಾಂ ನಂಬಿಕೆಗಳು ಕತೆಯಲ್ಲಿ ಬಂದಿವೆ.

ನಯಾಸ್‌ನ ಇಷ್ಟದಂತೆಯೇ ಅವನ ತಾಯಿ ಸುರಯ್ಯಾ ನಬೀಲಾಳೊಂದಿಗೆ ಮದುವೆ ನಿಶ್ಚಿತಾರ್ಥವನ್ನು ಮಾಡಿಕೊಳ್ಳುತ್ತಾಳೆ. ನಬೀಲಾಳ ಇಷ್ಟಾನಿಷ್ಟದ ಪ್ರಶ್ನೆ ಬರುವುದೇ ಇಲ್ಲ. ಸುರಯ್ಯಾ ಖಾಯಿಲೆಯಿಂದ ಸಾಯುತ್ತಾಳೆ. ಅಷ್ಟರಲ್ಲಿ ನಯಾಸ್ ತನ್ನ ಮನಸ್ಸನ್ನು ಬದಲಿಸಿ ವಸುಮತಿ ಎಂಬುವಳನ್ನು ಮದುವೆಯಾಗುತ್ತಾನೆ. ನಬೀಲಾ ಕೂಡಾ ತಂದೆತಾಯಿಯರ ಇಚ್ಛೆಯಂತೆ ವಸೀಮ್‌ನನ್ನು ಮದುವೆಯಾಗಿ ದುಬೈನಲ್ಲಿ ನೆಲೆಸಿದ್ದಾಳೆ. ನಯಾಸ್ ಈಗ ವಸುಮತಿಗೆ ಡೈವೋರ್ಸ್ ಕೊಡುವುದರಲ್ಲಿದ್ದಾನೆ. ಈ ಪೂರಾ ಪ್ರಕರಣವನ್ನು ಇಸ್ಲಾಂ ಧರ್ಮದ ಆಧಾರದಲ್ಲಿ ನಬೀಲಾಳ ಪಾತ್ರದ ಮೂಲಕ ಲೇಖಕಿ ಹೀಗೆ ಹೇಳಿಸುತ್ತಾರೆ 'ಸಾವಿರಾರು ವರ್ಷಗಳಿಂದ ಮೌನದ ಮಹತ್ವವನ್ನು ನನ್ನಂತಹವರಿಗೆ ಮಾತ್ರಾ ಮನಗಾಣಿಸಿ ನಮ್ಮ ತುಟಿಗಳನ್ನು ನಮ್ಮ ಕೈಯಿಂದಲೇ ಹೊಲಿಸಿ ಅದರಿಂದ ಸ್ರವಿಸುವ ರಕ್ತವು ನಮ್ಮ ನಾಲಿಗೆಯನ್ನು ಉಪ್ಪುಪ್ಪಾಗಿಸಿದರೂ ನಮ್ಮ ತುಟಿಗಳ ವ್ರಣಗಳು ಎಂದೆಂದಿಗೂ ಮಾಯದಂತೆ ಮತ್ತು ಹಸಿ ಗಾಯಗಳಾಗಿರುವಂತೆ ವ್ಯವಸ್ಥಿತವಾಗಿ ನೋಡಿಕೊಂಡ ನಿಮ್ಮ ಹುನ್ನಾರಗಳಿಗೆ ನನ್ನದೊಂದು ಸಲಾಂ' ಎನ್ನುತ್ತಾಳೆ ನಬೀಲಾ, **'ಅರ್ಧ ಆಕಾಶದ ಮೌನ'** ಕತೆಯಲ್ಲಿ. ಮುಸ್ಲಿಂ ಗಂಡಸು ಮದುವೆಯಾಗುವುದರಲ್ಲಿ ಅವನಿಗಿರುವ ಅವಕಾಶಗಳನ್ನು, ಸ್ವಾತಂತ್ರ್ಯಗಳನ್ನು ಲೇಖಕಿ ಗುರುತಿಸುತ್ತಾರೆ.

'ಇಡೀ ಮುಸ್ಲಿಂ ಸಮುದಾಯದಲ್ಲಿ ಪುರುಷರು ಮಹಿಳೆಯರ ಮೇಲ್ವಿಚಾರಕರು ಎಂಬ ಶ್ರೇಯಸ್ಸನ್ನು ತಮ್ಮ ಮೇಲೆ ತಾವೇ ಹೇರಿಕೊಳ್ಳುತ್ತಾರೆ. ಆದರೆ ಆಚರಣೆಯಲ್ಲಿ ಎಲ್ಲಾ ಕಡೆಗಳಲ್ಲಿಗೂ ಕೂಡ ಟೆರರಿಸ್ಟ್‌ಗಳು ಎಂಬ ಬಿರುದನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಪದಕದಂತೆ ಧರಿಸಿದ್ದಾರೆ. ತಮ್ಮ ಹೆಣ್ಣುಮಕ್ಕಳನ್ನು ಸಂಪೂರ್ಣವಾಗಿ ತಮ್ಮ ಅಧೀನದಲ್ಲಿರಿಸಿಕೊಂಡು, ಅವರ ಸರ್ವಸ್ವವನ್ನು ನಿಯಂತ್ರಿಸುತ್ತಾ ತಾವು ಮಾತ್ರ ಬೇರೆ ಹೆಣ್ಣುಮಕ್ಕಳೊಡನೆ ಮುಕ್ತ ಸಂದರ್ಭಗಳನ್ನು ಅನುಭವಿಸುತ್ತಾ ಅವರನ್ನು ಮದುವೆಯಾಗುತ್ತಾರೆ, ತಾಯಂದಿರನ್ನಾಗಿ ಮಾಡುತ್ತಾ ನಂತರ ಅವರಿಗೆ ಮನೆ ಮಠ ನಿರಾಕರಿಸುತ್ತಾ ಅವರನ್ನು ಆಶ್ರಯಹೀನರನ್ನಾಗಿ ಮಾಡುತ್ತಾ ತಾವು ಮಾಡಿದ್ದೇ ಸರಿ ಎಂದು ಸಾಧಿಸುತ್ತಾರೆ'. "ಬೇರೆ ಧರ್ಮದ ಮಹಿಳೆಯನ್ನು ನೀವು ಯರ್ರಾಬಿರ್ರಿಯಾಗಿ ಮದುವೆ ಮಾಡಿಕೊಳ್ಳುವ ಕ್ರಮಕ್ಕೆ ಇಡೀ ಸಮುದಾಯಕ್ಕೆ ಅವಮಾನಕಾರಿಯಾದ ಚಿತ್ರ ವಿಚಿತ್ರ ಹೆಸರುಗಳನ್ನು ಕೊಡುತ್ತಿದ್ದಾರೆ. ಈ ರೀತಿಯಲ್ಲಿ ಮದುವೆಗೋಸ್ಕರ ಮತಾಂತರವಾಗುವ ಕೃತ್ಯವು ಸಜೆಗೆ ಅರ್ಹವಾದ ದುಷ್ಕೃತ್ಯ ಎಂದು ಸಾಬೀತುಗೊಳಿಸುತ್ತಿದ್ದಾರೆ. ತಮ್ಮ ಹೆಂಡಂದಿರನ್ನು ಮತ್ತು ಮಕ್ಕಳನ್ನು ಬೀದಿಪಾಲು ಮಾಡಿದ ನಿಮ್ಮಂತಹವರು ಅವರುಗಳಿಗೆ ಜೀವನಾಂಶವನ್ನು ಕೊಡಬೇಕು ಎಂದು ಆದೇಶ ಮಾಡಿದಾಗ ಇಡೀ ದೇಶಾದ್ಯಂತ ಪ್ರತಿಭಟನೆಯನ್ನು ಮಾಡುವ ತಾಕತ್ತು ಮತ್ತು ನೈತಿಕತೆ ನಿಮಗೆ ಹೇಗೆ ಬಂತು? ಕುಂತಲ್ಲಿ ನಿಂತಲ್ಲಿ ಕಾರ್ಡ್ಲಲ್ಲಿ, ಫೋನಲ್ಲಿ, ಫೇಸ್ಬುಕ್ ಮೂಲಕ ತಲಾಕ್ ಹೇಳುವ ನಿಮ್ಮ ಕೆಟ್ಟ ಚಾಳಿಗೆ ಪ್ರತಿಯಾಗಿ ಏಕಕಾಲದಲ್ಲಿ ತ್ರಿವಳಿ ತಲಾಕ್ ನೀಡುವುದು ಅಪರಾಧ ಎಂದಾಗುತ್ತಿದೆ. ಮುಸ್ಲಿಂ ಸಮುದಾಯದ ಹಿರಿಮೆಯನ್ನು ಪ್ರಪಂಚಕ್ಕೆ ಸಾರುತ್ತೇವೆ ಎಂದು ಹೊರಟ ನಿಮ್ಮಲ್ಲಿ ಅನೇಕರು ಇಸ್ಲಾಂ ಧರ್ಮದ ವ್ಯವಸ್ಥೆಯನ್ನು ಅನ್ಯಾಯ ಕ್ರಮಗಳಿಂದ ಈ ಮಟ್ಟಕ್ಕೆ ತಂದಿರುವಿರಲ್ಲಾ" ಎಂದು ಕಥಾನಾಯಕಿ ಮುಸ್ಲಿಂ ಯುವಕರಿಗೆ ಕೇಳುವ ಪ್ರಶ್ನೆ ಮಹತ್ವವಾದದ್ದು.

ಬೇರೆ ಧರ್ಮದ ಹಲವು ಹೆಂಗಸರ ಪಾಡು ಹೀಗೆಯೇ ಎನ್ನುವುದನ್ನು **'ಲವ್ ಬರ್ಡ್ಸ್'** ಕತೆಯಲ್ಲಿ ಹೇಳುತ್ತಾರೆ. ಪ್ರೀತಿಸಿ ಮದುವೆಯಾದ ಸುಜಾತಳ ಬಸಿರನ್ನು ತೆಗೆಸುವ ನಿರ್ಧಾರವನ್ನು ಅವಳ ಗಂಡ ತೆಗೆದುಕೊಂಡಾಗ, ಇದ್ದ ಕೆಲಸವನ್ನೂ ಬಿಟ್ಟು, ತನ್ನ ಮನೆಯವರೆಲ್ಲರನ್ನೂ ಎದುರುಹಾಕಿಕೊಂಡು ಈ ಸ್ಥಿತಿಯಲ್ಲಿ ದುಡಿಯುವ ಅವಕಾಶವೂ ಇಲ್ಲದಿರುವ ಅವಳು ಬೇರೆ ದಾರಿಯಿಲ್ಲದೆ ಅವನಿಚ್ಛೆಗೆ ತಲೆಬಾಗಲೇಬೇಕಾಗುತ್ತದೆ.

'ಆಸ್ಪತ್ರೆಯಲ್ಲಿ ಒಂದು ದಿನ' ಕತೆಯಲ್ಲಿ ನೋಡುವ ಭೀಕರತೆಯೇ ಬೇರೆ. ಸರ್ಕಾರಿ ಪಿಂಚಣಿಗಾಗಿ ಅರೆಹುಚ್ಚಿ ಕೆಂಪಿಗೆ ಒಂದು ಮಾನಸಿಕ ರೋಗಕ್ಕೆ ಯಾವುದೇ ಪ್ರಮಾಣಪತ್ರ ಸರ್ಕಾರಿ ಆಸ್ಪತ್ರೆಯಲ್ಲಿ ಸಿಗಲು ಸಾಧ್ಯವಿಲ್ಲ ಎಂದು ತಿಳಿಯುತ್ತದೆ. ನಿಮ್ಹಾನ್ಸ್‌ಗೆ ಹೋಗುವ ಖರ್ಚನ್ನು ಭರಿಸಲಾಗದೆ ಅವಳನ್ನು ಇರಿಸಿಕೊಂಡಿದ್ದ ತಂಗಿಯ ಅತ್ತೆ ಕೆಂಪಿಯ ಮೂರು ಬೆರಳುಗಳನ್ನೇ ಮಚ್ಚಿನಿಂದ ತರಿದುಬಿಡುತ್ತಾಳೆ. ಆಸ್ಪತ್ರೆಗೆ ಕರೆತಂದ ತಂಗಿ 'ಈಗಲಾದರೂ ಅವಳಿಗೆ ಪೆನ್ಷನ್ ಬರತ್ತಲ್ವಾ' ಎನ್ನುತ್ತಾಳೆ. ಮನುಷ್ಯ ಯಾವ ಮಟ್ಟದ ನೀಚತನಕ್ಕಿಳಿಯಬಹುದು ಎನ್ನುವುದರ ಅನಾವರಣವಾಗುತ್ತದೆ.

ಅತ್ಯಂತ ಪ್ರೀತಿಯ ತಂದೆ ಸತ್ತಾಗ ಸಬಾ ತೀವ್ರವಾದ ಆಘಾತಕ್ಕೊಳಗಾಗಿ ಖಿನ್ನತೆಗೆ ಜಾರುವ ಮತ್ತು ಮಗನ ಪ್ರೀತಿಯಿಂದಾಗಿ ಅದರಿಂದ ಹೊರಬರುವ **'ಸಾವು'** ಕತೆಯಲ್ಲಿ ಹೆಚ್ಚಿನ ವಿಶೇಷವೇನಿಲ್ಲದಿದ್ದರೂ ಸಬಾಳ ತಂದೆ ಹೇಳುತ್ತಿದ್ದ "ಮನುಷ್ಯರೆದುರು ಸತ್ಯದ ದೀವಟಿಗೆಗಳನ್ನು ಹಿಡಿಯಲು ಎಲ್ಲಾ ಜನಾಂಗದಲ್ಲೂ ದೇವರು ಪ್ರವಾದಿಗಳನ್ನು ಕಳುಹಿಸಿದ್ದಾನೆ. ಸತ್ಯ ಯಾರೊಬ್ಬರ ಸ್ವತ್ತಲ್ಲ. ಎಲ್ಲಾ ಜನಾಂಗಗಳ ಪ್ರವಾದಿಗಳೂ ಎಲ್ಲರಿಗೂ ಮಾನ್ಯರೇ. ಹಾಗಾದಲ್ಲಿ ಈ ರಕ್ತಪಾತಗಳೇಕೆ? ಈ ದ್ವೇಷಗಳೇಕೆ? ಸತ್ಯದ ಸ್ವರೂಪವನ್ನು ಒಪ್ಪಿಕೊಳ್ಳಲು ನಮಗೆ ಅಹಂಕಾರಗಳೇಕೆ? ಸತ್ಯವನ್ನು ನಾವು ಯಾಕೆ ನಿರಾಕರಿಸ್ತೀವಿ? ನಮ್ಮ ಸ್ವಾರ್ಥಗಳಿಗೋ, ನಮ್ಮ ಲಾಭಕ್ಕೋ ನಮ್ಮ ಅಹಂನ ತೃಪ್ತಿಗೋ?" ಎನ್ನುವ ಮಾತುಗಳು ಗಮನ ಸೆಳೆಯುತ್ತವೆ.

ಸಮಾಜ ಸುಧಾರಕರ ಬೂರ್ಜ್ವಾ ಮನೋಭಾವವನ್ನು ತೋರಿಸುವ ಕತೆ **'ಪಾರಿವಾಳದ ರೆಕ್ಕೆಗಳ ಹಾಡು'** ಕತೆಯ ನಾಯಕಿ ಒಬ್ಬ ಪ್ರಜ್ಞಾವಂತಳೆಂದೂ, ಸಮಾಜ ಸುಧಾರಕಿಯೆಂದೂ, ಮನುಷ್ಯ ಸ್ವಾತಂತ್ರ್ಯದ ಅದಮ್ಯ ಪ್ರತಿಪಾದಕಿಯೆಂದೂ ತನಗೆತಾನೇ ಬಿರುದು ಕೊಟ್ಟುಕೊಂಡಿರುವವಳು. ಕಾರ್ಮಿಕ ಇಲಾಖೆಯಲ್ಲಿ ಬಾಲಕಾರ್ಮಿಕರ ಹಕ್ಕುಗಳ ರಕ್ಷಣೆ, ವಿಮುಕ್ತಿ, ಪುನರ್ವಸತಿ ಇವುಗಳ ಅಧಿಕಾರಿಯಾಗಿರುವವಳು. ಅವಳು ಪ್ರತಿಪಾದಿಸುವ ತತ್ವಗಳಿಗೆ ವಿರುದ್ಧವಾಗಿ ಅವಳ ಮನೆಯಲ್ಲಿ ಡೊಮೆಸ್ಟಿಕ್ ಹೆಲ್ಪರ್ ಎಂಬ ಹೆಸರಿನಲ್ಲಿ ಯಾವುದೇ ಕಾನೂನಿನಡಿಯಲ್ಲಿ ಬರದಂತೆ ಒಬ್ಬ ಪುಟ್ಟ ಹುಡುಗಿಯಿದ್ದಾಳೆ. ಡಿಸಿಪ್ಲಿನ್ ಹೆಸರಿನಲ್ಲಿ ಯಾವುದೇ ಸ್ವಾತಂತ್ರ್ಯವಿಲ್ಲದೆ ಸಾಕಷ್ಟು ಶಿಷ್ಟಾಚಾರ ಕಲಿತ ಜೀತದಾಳಿನಂತಿದ್ದಾಳೆ. ಕಾರ್ಯಕ್ರಮದ ನಿಮಿತ್ತವಾಗಿ ಆ ಹುಡುಗಿಯ ಊರಿಗೆ ಹೋಗುವ ಸಂದರ್ಭ ಒದಗಿಬಂದಾಗ ಅವಳ ಭ್ರಮನಿರಸನ ಮಾಡಿಸುವ ಹುಮ್ಮಸ್ಸಿನಿಂದ ಅವಳನ್ನು ಅಲ್ಲಿಗೆ ಕರೆದೊಯ್ಯುತ್ತಾಳೆ. ಆದರೆ ಭ್ರಮನಿರಸನವಾದದ್ದು ನಾಯಕಿಗೆ. ಅವಳ ಕಾಲಿಗೆ ಇವಳು ತೊಡಿಸಿದ್ದ ಸರಪಳಿ, ಹಾಕಿದ್ದ ಬೀಗ ಎಲ್ಲವೂ ಮಾಯವಾಗಿ ಅವಳು ರೆಕ್ಕೆ ಬಂದು ಹಾರುತ್ತಿರುವ ಹಾಗೆ ನಾಯಕಿಗೆ ಭಾಸವಾಗತೊಡಗುತ್ತದೆ. ಸಮಾಜ ಸುಧಾರಕತನದ ಹುಸಿಧೋರಣೆಗಳು, ಸೋಗಲಾಡಿಗಳು ಮತ್ತು ಸ್ವಾತಂತ್ರ್ಯದ ಮಹತ್ವದ ನಡುವಿನ ತರತಮವನ್ನು ತೋರಿಸುವ ಆತ್ಮವ್ಯಂಗ್ಯದ ಧಾಟಿಯ ಕತೆ ಇದಾಗಿದೆ.

ಯುದ್ಧದ ಕರಾಳತೆಯನ್ನು, ಶಾಂತಿಯ ಅವಶ್ಯಕತೆಯನ್ನೂ ಒತ್ತಿ ಹೇಳುವ ಕತೆ **'ಯುದ್ಧ ಮತ್ತು ಅಲೆಮಾರಿ ಮೋಡ'**. ಕತೆ ಒಂದು ಮಟ್ಟಿಗೆ ಅಸಂಗತ ರೀತಿಯಲ್ಲಿ ಸಾಗುತ್ತಾ ಶಾಂತಿ ಪ್ರಿಯರಾದವರನ್ನೂ ಯುದ್ಧ ಹಿಂಸೆಗೆ ಪ್ರಚೋದಿಸುವುದನ್ನು ಹಲವು ರೂಪಕಗಳ ಮೂಲಕ ಹೇಳುತ್ತಾ ಹೋಗುತ್ತದೆ. ಶಾಂತಿಯ ಅವಶ್ಯಕತೆಯನ್ನು ಎತ್ತಿಹಿಡಿಯುತ್ತದೆ.

'ಬೊಗಸೆಯ ನೀರು' ಕತೆ, ಕತೆಯೊಳಗೊಂದು ಕತೆ. ನಾಯಕಿ ಒಂದು ವಿಷಮ ಸಂಸಾರದ ಕತೆಯನ್ನು ಬರೆಯುತ್ತಿರುತ್ತಾಳೆ. ಅದರಲ್ಲಿನ ಅನುಮಾನ ಪಿಶಾಚಿ ಗಂಡನಿಂದ ಬೇರ್ಪಟ್ಟು ತವರಿಗೆ ಬಂದ ಬಸುರಿ ಮುಂದೆ ಕೆಲಸಕ್ಕೆ ಸೇರಿ ತನ್ನ ಮಗುವನ್ನು ತಾನೇ ನೋಡಿಕೊಳ್ಳುತ್ತಾಳೆ. ಮಗ ದೂರವಿದ್ದಾಗ ಒಂಟಿತನ ಕಾಡತೊಡಗುತ್ತದೆ. ವಿಚ್ಛೇದಿತನೊಬ್ಬನ ಸಂಪರ್ಕವಾಗಿ ಪರಸ್ಪರರು ಮೆಚ್ಚಿಕೊಳ್ಳುತ್ತಾರೆ. ಅವನ ಮೇಲಿನ ಪ್ರೀತಿಯನ್ನು ವ್ಯಕ್ತಪಡಿಸಿ ಅವಳೊಂದು ಕವಿತೆ ಬರೆಯುತ್ತಾಳೆ. ಅದನ್ನು ನೋಡಿದ ಗಂಡ ಕೀಳು ಸಾಹಿತ್ಯವೆಂದು ಜರಿದು ಅದನ್ನು ಪ್ರಕಟಣೆಗೆ ಕಳುಹಿಸಬಾರದು ಎಂದು ತಡೆಯೊಡ್ಡಿದಾಗ ಅವಳು ಧಿಕ್ಕರಿಸುತ್ತಾಳೆ. ತನ್ನ ಬವಣೆಯನ್ನೇ ಕತೆಯಾಗಿಸಿ ಬಿಡುಗಡೆಯನ್ನು ಕೊಟ್ಟುಕೊಂಡಿರುತ್ತಾಳೆ ಲೇಖಕಿ. ಆದರೆ ತನ್ನ ಹೆಂಡತಿ ಕಲ್ಪನೆಯಲ್ಲೂ ಹೊಸ ವಿಚಾರಗಳಿಗೆ ತೆರೆದುಕೊಳ್ಳುವುದು ಅವಳ ಗಂಡನಿಗೆ ಬೇಕಿರುವುದಿಲ್ಲ.

'ಕತೆಯಾದವನ ಕತೆ'ಯದ್ದು ಒಂದು ತ್ರಿಕೋಣ ಪ್ರೇಮದ ಕತೆ. ಗಂಡ ತೀರಿಕೊಂಡ ಎಷ್ಟೋ ವರ್ಷಗಳ ನಂತರ ಭೇಟಿಯಾದ ಅವಳಿಗಾಗೇ ನಿರೀಕ್ಷಿಸುತ್ತಿದ್ದವನನ್ನು ನಾಯಕಿ ಮದುವೆಯಾಗುವ ನಿರ್ಧಾರ ತೆಗೆದುಕೊಳ್ಳುತ್ತಾಳೆ. ಹೆಚ್ಚೇನೂ ಹೇಳುವುದಿಲ್ಲ.

'ಪುಟ್ಟ ನಕ್ಷತ್ರ' ಸಹ ಒಂದು ತ್ರಿಕೋನ ಪ್ರೇಮದ ಕತೆ. ಉದಯ ಮತ್ತು ದೌಲತ್ ಇಬ್ಬರಲ್ಲಿ ಯಾರು ಮೊದಲು ತಮ್ಮ ಪ್ರೀತಿಯನ್ನು ವ್ಯಕ್ತಪಡಿಸುತ್ತಾರೋ ಅವರನ್ನು ಮದುವೆಯಾಗಬೇಕೆಂಬ ನಿಶ್ಚಯ ಮಾಡಿರುತ್ತಾಳೆ ರಶ್ಮಿ. ಅಗ್ರೆಸಿವ್ ವ್ಯಕ್ತಿತ್ವದ ದೌಲತ್ ಅದರಲ್ಲಿ ಗೆಲ್ಲುತ್ತಾನೆ. ಆದರೆ ದಾರಿಯಲ್ಲಿ ಅಪಘಾತಕ್ಕೀಡಾಗಿ ಮರಣವನ್ನಪ್ಪುತ್ತಾನೆ. ಅವಳು ಆಘಾತದಲ್ಲಿರುವಾಗ ಉದಯ ಅವಳನ್ನು ಮದುವೆಯಾಗುವ ನಿರ್ಧಾರ ಪ್ರಕಟಿಸುತ್ತಾನೆ. ಉದಯನದ್ದು ಪ್ರೀತಿಯಲ್ಲ, ಕರುಣೆಯಲ್ಲಿ ಕಟ್ಟಿಹಾಕುವ ಹುನ್ನಾರ ಎನ್ನಿಸಿದ ರಶ್ಮಿ ಅವನನ್ನು ತಿರಸ್ಕರಿಸುತ್ತಾಳೆ. ಹೆಣ್ಣು ಬಯಸುವುದು ಪ್ರೀತಿ; ಕರುಣೆಯನ್ನಲ್ಲ ಎನ್ನುತ್ತದೆ ಈ ಕತೆ.

ಎಲ್ಲಿದ್ದರೂ ತನ್ನ ಮೂಲ ಬೇರಿಗಾಗಿ ಅರಸುವ ಮನುಷ್ಯನ ಮೂಲ ಗುಣವನ್ನು ಹೇಳುತ್ತದೆ **'ಬೇರಿಗೊಂದಿಷ್ಟು ಪ್ರೀತಿ'** ಕತೆ. ಬೆಹ್ರೇನ್‌ನಲ್ಲಿ ಐಷಾರಾಮಿ ಪರಿಸರದಲ್ಲಿರುವ ಕಥಾನಾಯಕ. ಅವನ ಮಾವ ನಾಸಿರ್ ಕರ್ನಾಟಕದ ಒಂದು ಕುಗ್ರಾಮದಲ್ಲಿದ್ದು ಇವನ ತಾಯಿಗೆ ಬರಬೇಕಾದ ಆಸ್ತಿಯನ್ನೂ ತನ್ನದನ್ನಾಗೇ ಮಾಡಿಕೊಂಡಿದ್ದರೂ ಆ ಮಾವನ ಪ್ರೀತಿಯ ಬಗ್ಗೆ, ಜಮೀನಿನ ಬಗ್ಗೆ, ಅವನು ಹೇಳುತ್ತಿದ್ದ ರೋಚಕ ಕತೆಗಳ ಬಗ್ಗೆ ಇವನಿಗೆ ಆಕರ್ಷಣೆಯೇ ಇದೆ. ಗೆಳೆಯ ದೇವು ಸೃಷ್ಟಿಸುವ ಒಂದು ಆಕರ್ಷಕ ಭೂಜಾಲದಲ್ಲಿ ನಾಯಕ ಸಿಕ್ಕುಬೀಳುತ್ತಾನೆ. ಇದೇ ಸಮಯದಲ್ಲಿ ನಾಸಿರ್ ಮಾವನೂ ತಾನೀಗ ಆರ್ಥಿಕ ಸಂಕಷ್ಟದಲ್ಲಿರುವುದರಿಂದ ತನ್ನ ಆಸ್ತಿಯನ್ನು ನಾಯಕನೇ ಕೊಳ್ಳುವಂತೆ ಕೋರಿದಾಗ ಬೇಡವೆನ್ನಿಸಿ ದೇವುಗೆ ಹಣ ಕಳಿಸಿ ಖರೀದಿಯ ಪತ್ರಗಳನ್ನು ತರಿಸಿಕೊಳ್ಳುತ್ತಾನೆ. ಭಾರತಕ್ಕೆ ಬಂದಾಗ ಜಮೀನನ್ನು ನೋಡಲು ಹೋದವನಿಗೆ ಕಂಡದ್ದು – ದೊಡ್ಡ ದೊಡ್ಡ ಕಲ್ಲುಬಂಡೆ, ಕುರುಚಲು ಗಿಡ ನೊರಜು ಕಲ್ಲುಗುಡ್ಡೆ ಇಂಥವು. ಮೋಸಹೋಗಿದ್ದರೂ ಅವನನ್ನು ಈ ದೇಶದ ಭೂಮಿಯ ಸೆಳೆತ ಬಿಡುವುದಿಲ್ಲ. ಆ ಬರಡು ಭೂಮಿಯನ್ನು ಹೇಗೆ ಅಭಿವೃದ್ಧಿ ಪಡಿಸಬೇಕೆನ್ನುವ ಕನಸು ಕಾಣುತ್ತಾನೆ.

ಧರ್ಮ, ವರ್ಣ, ಜನಾಂಗ ಎಲ್ಲದರ ಹೊರತಾಗಿ ಬಾಳ್ವೆ ಮಾಡಬೇಕೆಂದು ಹೊರಟ ಮುಸ್ಲಿಂ ಯುವಕ, ಹಿಂದೂ ಯುವತಿ ಹಾಗಿರಲು ಸಾಧ್ಯವಾಯಿತೇ ಎಂದು ಹೇಳುವ ಕತೆ **'ಕಾಡಿನ ಮಧ್ಯೆ ಬೆಳ್ಳಕ್ಕಿ ಹಾರಿದಂತೆ'**. ಕತೆಯಲ್ಲಿ ಮದುವೆಯ ಸಂಬಂಧದ ಬಗ್ಗೆ ಹಲವು ಪ್ರಶ್ನೆಗಳೇಳುತ್ತವೆ.

'ಕರಡಿ ಮತ್ತು ಅಂಗಾಲು' ಕತೆಯಲ್ಲಿ ಯಾವುದೇ ಕಾರಣಕ್ಕೂ ತನ್ನ ಸಮರ್ಥತೆಯನ್ನು ಪರೀಕ್ಷಿಸಿಕೊಳ್ಳಲೂ ಒಲ್ಲದ ಪುರುಷಾಹಂಕಾರದ ಹಮ್ಮಿನ ಗಂಡ; ಜೊತೆಯಲ್ಲಿ ಅನುಮಾನದ ಹುತ್ತ. ಹೆಂಡತಿಯಿಂದ ದೂರವಾಗುವ ತೀರ್ಮಾನ ತೆಗೆದುಕೊಂಡು ಅವಳನ್ನು ಕರೆದುಕೊಂಡು ಕಾರಿನಲ್ಲಿ ಹೋಗುತ್ತಿರುವಾಗ ಅಸಹನೀಯ ಮೌನವನ್ನು ಮುರಿಯಲು ಡ್ರೈವರ್ ಆ ಕಾಡಿನಲ್ಲಿರುವ ಕರಡಿಗಳ ಬಗ್ಗೆ ಪ್ರಚಲಿತವಿರುವ ಕರಡಿ ಪ್ರೀತಿಯ ಕತೆಯನ್ನು ಹೇಳಲುಪಕ್ರಮಿಸುತ್ತಾನೆ. ತನ್ನ ಗಂಡನದ್ದೂ ಕರಡಿಪ್ರೀತಿಯೇ ಎಂದು ನಾಯಕಿ ಆ ಕತೆಯೊಂದಿಗೆ ತನ್ನನ್ನು ಸಮೀಕರಿಸಿಕೊಳ್ಳತೊಡಗುತ್ತಾಳೆ. ಕತೆ ಸುಖಾಂತವಾಗುತ್ತದೆ.

ಇಂದು ನಾವು ನೋಡುತ್ತಿರುವ ಆತಂಕವಾದಿ, ಭಯೋತ್ಪಾದಕ ಪರಿಸರದಲ್ಲಿ **'ಮನೆಯಂಗಳದಲ್ಲಿ ರಕ್ತ'** ಕತೆ ಬಹುಮುಖ್ಯವಾಗಿ ತೋರುತ್ತದೆ. ರೆಹಮತ್ ಮತ್ತು ಶರೀಫರ ಮಗಳು ಅಜ್ರಾಗೆ ಅನೀಸ್‌ನೊಂದಿಗೆ ಮದುವೆ ಗೊತ್ತಾಗಿರುತ್ತದೆ. ಎಷ್ಟು ಕಾದರೂ ಅನೀಸ್ ಜರ್ಮನಿಯಿಂದ ಮರಳದೆ ಈ ಮಧ್ಯೆ ಮಗ ನಯಾಜ್ ಇಂಟರ್‌ನೆಟ್ ಮೂಲಕ ಇನ್ನೊಬ್ಬ ವರನನ್ನು ಹುಡುಕಿ ಮದುವೆಯೂ ಆಗಿಹೋಗುತ್ತದೆ. ನಂತರ ಅನೀಸ್ ಒಬ್ಬ ಭಯೋತ್ಪಾದಕ, ಒಂದು ವಿಮಾನವನ್ನು ನೂರಾಹತ್ತು ಪ್ರಯಾಣಿಕರೊಂದಿಗೆ ಹೈಜಾಕ್ ಮಾಡಿದ ಅವನನ್ನು ಜರ್ಮನಿಯ ಪೋಲೀಸರು ಬಂಧಿಸಿದ್ದಾರೆ ಎನ್ನುವ ವಿಷಯ ತಿಳಿದ ರೆಹಮತ್, ತಾನು ಅಪಾಯದಿಂದ ಪಾರಾದರೂ, ಅಮಾಯಕರಾದ ಅವನ ತಂದೆ, ತಾಯಿಯರ ಸ್ಥಿತಿಯನ್ನು ನೆನೆದು ಖಿನ್ನತೆಗೆ, ಭಯಕ್ಕೆ ಜಾರುತ್ತಾಳೆ. ತನ್ನ ಮಗನೂ, ತನ್ನೆಲ್ಲಾ ಬಂಧುಬಳಗದ ಮಕ್ಕಳೆಲ್ಲರೂ ಇಂತಹುದೇ ಬಲೆಯಲ್ಲಿ

ಸಿಕ್ಕಿಬಿದ್ದಿದ್ದಾರೇನೋ ಎನ್ನುವ ಭಯ ಕಾಡತೊಡಗುತ್ತದೆ. ಕಂಪ್ಯೂಟರಿನ ಬಗ್ಗೆ ಒಂದಿಷ್ಟೂ ಜ್ಞಾನವಿಲ್ಲದವಳಿಗೆ ಇದರ ಮೂಲಕವೇ ತನ್ನ ಮಗನೂ ಅಂತವರ ಬಲೆಗೆ ಬೀಳುತ್ತಿದ್ದಾನೇನೋ ಎನ್ನಿಸಿಬಿಡುತ್ತದೆ. ಕಂಪ್ಯೂಟರಿನ ಮಾನಿಟರನ್ನೆತ್ತಿಕೊಂಡು ಅಂಗಡಿಗೆ ಧಾವಿಸಿ "ನೋಡಪ್ಪಾ ಇದರೊಳಗೆ ಯಾರು ಯಾರು ಟೆರರಿಸ್ಟ್‌ಗಳು ಅಡಗಿ ಕೂತಿದ್ದಾರೆ, ಅವರೆಲ್ಲರನ್ನೂ ನನಗೆ ತೋರಿಸು. ನಾನು ಅವರೊಡನೆ ಮಾತನಾಡಬೇಕಿದೆ. ಅವರು ಮಾಡುತ್ತಿರುವುದು ಸರೀನಾ ಅಂತ ಕೇಳಬೇಕಾಗಿದೆ. ಪಾಪದ ಹೆಂಗಸು, ಮಕ್ಕಳು ಮತ್ತು ಅಮಾಯಕರನ್ನು ಕೊಲ್ಲುವುದು, ಬಾಂಬ್ ಸಿಡಿಸುವುದು, ಪ್ಲೇನ್ ಸಿಡಿಸುವುದು ಅಲ್ಲಾಹನಿಗೆ ಯಾವ ರೀತಿಯಲ್ಲಿ ಪ್ರಿಯ ಎಂದು ಕೇಳಬೇಕಾಗಿದೆ" ಎಂದು ತನ್ನ ಭಯವನ್ನು ತೋರಿದಾಗ ಮಾಲೀಕನಿಗೆ "ಆ ಕ್ಷಣದಲ್ಲಿ ಆಕೆ ಇಡೀ ಪ್ರಪಂಚದ ತಾಯಂದಿರ ಪ್ರತಿನಿಧಿಯಾಗಿ ಕೇಳಬೇಕಾದ ಪ್ರಶ್ನೆಗಳನ್ನು ಕೇಳುತ್ತಿದ್ದಾಳೆ ಹಾಗೂ ತಾನು ಒಬ್ಬ ಜವಾಬ್ದಾರಿಯುತ ಮುಸ್ಲಿಂ ಯುವಕನಾಗಿ ಇಡೀ ಪ್ರಪಂಚ ಕೇಳುತ್ತಿರುವ ಪ್ರಶ್ನೆಗಳಿಗೆ ಉತ್ತರಿಸಬೇಕಿದೆ" ಎನ್ನಿಸಿಬಿಡುತ್ತದೆ. ಯಾವ ತಾಯಿಯೂ ತನ್ನ ಮಗ ಭಯೋತ್ಪಾದಕನಾಗಲಿ ಎಂದು ಬಯಸುವುದಿಲ್ಲ. ಅವರು ಜಗತ್ತಿಗೆಲ್ಲಾ ತಾಯಂದಿರು ಅಷ್ಟೇ.

'ಜನ್ನತೆ ಫಿರ್‌ದೋಸ್' ಮುಸ್ಲಿಮರ ರಂಜಾನಿನ ಉಪವಾಸದ ನಂಬಿಕೆಗಳು, ಜೀವ ದಯೆಯೊಂದಿಗೆ ಅವರು ಹೆಸರನ್ನೂ ತೆಗೆಯದೆ ಬೂರಾ ಜಾನವರ್ ಎಂದು ಕರೆಯುವ ಹಂದಿಯೊಂದಿಗೆ ತಳಕು ಹಾಕಿಕೊಂಡಿರುವ ಒಂದು ಆಸಕ್ತಿದಾಯಕ ಕತೆ. ಒಂದು ದುರ್ವಾಸನೆಯೇ ಮೂಲವಾಗಿ, ಕಟ್ಟುನಿಟ್ಟಾಗಿ ರಂಜಾನಿನ ಕಠಿಣ ಉಪವಾಸದ ವ್ರತವನ್ನು ಆಚರಿಸುತ್ತಿದ್ದ ಜೀನತ್‌ಳ ಕುಟುಂಬ ಒದ್ದಾಡಿಹೋಗುತ್ತದೆ. ದಾವೂದ್ ನಸುಗತ್ತಲಿನಲ್ಲಿ ಅವನ ಕೈಯಲ್ಲಿದ್ದ ಮರಿಯನ್ನು ಅವಳೆಡೆಗೆ ಚಾಚಿ, "ಇದರಮ್ಮ ಹೆರಿಗೆಯಲ್ಲಿ ಸತ್ತುಹೋಗಿದೆ. ಇದನ್ನು ತೆಗೆದುಕೊಂಡು ಬೀದಿಯಲ್ಲಿ ಬಿಟ್ಟುಬಿಡಿ" ಎಂದಾಗ ಅವಳಿಗೆ ನಾಯಿಗಳ ಮಧ್ಯದಿಂದ ಬಿಡಿಸಿಕೊಂಡು ತಾನು ಸಾಕಿದ್ದ ನಸೀಮಳ ನೆನಪುಕ್ಕಿ ತಟ್ಟನೆ ಅವನ ಕೈಯಿಂದ ತೆಗೆದುಕೊಂಡು ಹಿತ್ತಲ ಬಾಗಿಲಿಂದ ಮನೆಯೊಳಗೂ ತಂದು ಮುಂದಿನ ಗೇಟನ್ನು ತೆರೆದು ಮರದಡಿಗೆ ಬಿಡುವಾಗ ನೋಡಿದರೆ ಅದು ನಾಯಿಯ ಮರಿಯಲ್ಲ ಹಂದಿಯ ಮರಿ! ರಂಜಾನ್‌ನಲ್ಲಿ ಹಂದಿಮರಿಯನ್ನು ಮುಟ್ಟಿದ ಜೀನತ್‌ಗೆ ಪಾಪಪ್ರಜ್ಞೆ ಕಾಡಲು ಶುರುವಾಗುತ್ತದೆ. ದಾರಿಯಲ್ಲಿ ನಮಾಜನ್ನು ಮುಗಿಸಿಕೊಂಡು ಬರುತ್ತಿರುವ ಜನರು, ಮೌಲ್ವಿಗಳು ಎಲ್ಲರ ಕಣ್ಣೆದುರೇ ಅವಳು ಹಂದಿಯ ಮರಿಯನ್ನು ಹಿಡಿದಿದ್ದಳು. ತಕ್ಷಣವೇ ಅವಳನ್ನು ಒಳಕರೆತಂದ ಸೊಸೆ ಸ್ನಾನದ ಮನೆಗೊಯ್ಯುತ್ತಾಳೆ. ಮೌಲ್ವಿಗಳು ಮನೆಯೊಳಗೆ ಬಂದು. 'ಹಂದಿಮರಿಯನ್ನು ಮನೆಯೊಳಗೆ ತಂದದ್ದಾಗಲೀ, ಅದನ್ನು ಕಾಪಾಡಿದ್ದಾಗಲೀ ದೋಷವಲ್ಲ. ಅದನ್ನು ತಿನ್ನಬಾರದಷ್ಟೇ' ಎನ್ನುವ ನಿಯಮವನ್ನು ಹೇಳಿದಾಗ ಅವಳ ದುಗುಡ ಸ್ವಲ್ಪ ದೂರವಾಗುತ್ತದೆ. ಹಂದಿಮರಿಯಾದರೂ ಅದೂ ನಸೀಮಳಂತೆ ತಬ್ಬಲಿಯೇ ಅಲ್ಲವೇ. ಅದನ್ನು ಕಾಪಾಡಿದ್ದರಲ್ಲಿ ತಪ್ಪೇನೂ ಇಲ್ಲ ಅಲ್ಲವೇ ಎಂದು ಪ್ರಶ್ನಿಸಿಕೊಳ್ಳುತ್ತಿರುವಾಗ ಮಗ ಜನ್ನತುಲ್ ಫಿರ್ದೌಸ್ (ಉತ್ಕೃಷ್ಟವಾದ ಉನ್ನತವಾದ ಸ್ವರ್ಗ) ಎನ್ನುವ ಸುಗಂಧವನ್ನು ಅವಳ ಮೇಲೆ ಸಿಂಪಡಿಸುತ್ತಾನೆ. ಜೀವ ದಯೆ ಎಲ್ಲಕ್ಕಿಂತಲೂ ಮುಖ್ಯ. ಅದೇ ಸ್ವರ್ಗ. ದುರ್ಗಂಧದಿಂದ ಸುಗಂಧದೆಡೆಗೆ ಹೊರಳುವ ಕತೆ.

'ಕೋಟೆ ಉರುಳಿತ್ತು ಕಡಲು ಮೊರೆದಿತ್ತು' ಕತೆಯಲ್ಲಿ, ಮುಂಬೈ ಸಮೀಪದ ಸಮುದ್ರ ತಟ ಕ್ವೀನ್ ಆಕಾಶಿಯ ಪಕ್ಕದಲ್ಲೊಂದು ಬೆಟ್ಟ, ಅದರ ಮೇಲೊಂದು ಶಿಥಿಲವಾದ ಸ್ಥಿತಿಯಲ್ಲಿದ್ದ ಕೋಟೆ, ಅಲ್ಲೊಂದು ಭರ್ಜರಿ ರೆಸಾರ್ಟ್‌ನಲ್ಲಿ ಮನು ಒಬ್ಬ ಸಿಬ್ಬಂದಿ. ಅಲ್ಲೊಂದು ಅಖಿಲ ಭಾರತೀಯ ಪ್ರಗತಿಗಾಮಿ ಲೇಖಕಿಯರ ಸಮ್ಮೇಳನ ನಡೆಯುತ್ತಿದ್ದಾಗ ಅಲ್ಲಿಗೆ ಬಂದ ಕನ್ನಡದ ಶಕುಂತಲಾ ಎಂಬ ಲೇಖಕಿಯ ಜವಾಬ್ದಾರಿಯನ್ನು ಮನು ವಹಿಸಿಕೊಳ್ಳುತ್ತಾನೆ. ಹುಷಾರು ತಪ್ಪಿದವಳಿಗೆ ಬೇಕಾದ ನೆರವನ್ನೊದಗಿಸಿ ರಾತ್ರಿಯೆಲ್ಲಾ ಕಾಯುತ್ತಾನೆ. ಮರುದಿನ ಬೆಳಗಿನ ಕಾರ್ಯಕ್ರಮದಲ್ಲಿ ಅವಳು ಬಿಚ್ಚಿಟ್ಟ ತನ್ನ ಜೀವನಗಾಥೆ ಅವನಿಗೆ ತನ್ನಕ್ಕನನ್ನು ನೆನಪಿಸುತ್ತದೆ. ಇವಳಂತೆಯೇ ಅವಳೂ ಯಾರೋ ಕೆಳಜಾತಿಯವನನ್ನು ಪ್ರೀತಿಸಿ ಬಸಿರಾಗಿ ಬಂದಿದ್ದಾಗ, ಮನು ಸಾಯುವ ರೀತಿ ಅವಳನ್ನೊದ್ದು ಓಡಿಬಂದಿದ್ದರೆ, ಇವಳ ಗಂಡನನ್ನು ತವರುಮನೆಯವರು ಕೊಲೆಮಾಡಿಸಿರುತ್ತಾರೆ. ತಲತಲಾಂತರದಿಂದ ನಡೆದುಬಂದಿರುವ ವ್ಯವಸ್ಥೆಯ ಪ್ರತೀಕವಾದ ಮನು ಸಂಜೆಯಲ್ಲಿ ಮೊಬೈಲ್ ಸಿಗ್ನಲ್ ನೆಪದಿಂದ ಶಕುಂತಲಳನ್ನು ಕೋಟೆಯವರೆಗೆ ಕರೆದೊಯ್ಯುತ್ತಾ ಹಾದಿಯಲ್ಲಿ ಯಾವುದೇ ಕುರುಹುಳಿಸದೆ ಅವಳನ್ನು ಅಲ್ಲಿಂದ ಬೀಳಿಸಿ ಒಬ್ಬ ವ್ಯಭಿಚಾರಿಣಿಯನ್ನು ಕೊಲೆಮಾಡುವ ಉದ್ದೇಶದಿಂದಿರುವಾಗ ಅವಳ ಮಗನ ಕರೆ ಬಂದು ಅವನ ಯೋಜನೆಗಳು

ತಲೆಗೆಳಗಾಗುತ್ತವೆ. ಇಡೀ ಕತೆಯಲ್ಲಿ ಶಿಥಿಲವಾಗುತ್ತಿರುವ ಕೋಟೆ ತಲತಲಾಂತರದ ಸಂಪ್ರದಾಯಗಳ ಪ್ರತಿಮೆಯಲ್ಲಿ ಕಂಡರೆ ಎಂದಿಗೂ ಬತ್ತದ ಜೀವಸೆಲೆಯಾಗಿ ಸಮುದ್ರ ಕಾಣುತ್ತದೆ.

ಬಾನು ಮುಷ್ತಾಕರ ಕತೆಗಳಲ್ಲಿ ಮಕ್ಕಳನ್ನು ಕೇಂದ್ರವಾಗಿರಿಸಿಕೊಂಡ ಕೆಲವು ಕತೆಗಳನ್ನು ನೋಡುತ್ತೇವೆ:

'ಪರಕೀಯ' ಕತೆಯ ಒಂಭತ್ತು ವರ್ಷದ ಷಫಿಯ ಅಪ್ಪ ರಕ್ತದ ಕ್ಯಾನ್ಸರ್‌ನಿಂದ ತೀರಿಕೊಂಡಾಗ, ಅವನ ತಮ್ಮಂದಿರನ್ನು ಯಾರೊಂದಿಗೋ ಕೆಲಸಕ್ಕೆ ಕಳುಹಿಸಿ ಷಫಿಯನ್ನು ಅವನ ಚಿಕ್ಕಪ್ಪನೊಂದಿಗೆ ಕಳುಹಿಸುತ್ತಾಳೆ ಅವನಮ್ಮ. ಮಗಳನ್ನು ಮಾತ್ರಾ ತನ್ನೊಂದಿಗೆ ಕರೆದುಕೊಂಡು ತನ್ನ ಗಂಡನೊಂದಿಗೆ ಕ್ಲೀನರ್ ಆಗಿದ್ದ ಸುಭಾನನನ್ನೇ ಮದುವೆಯಾಗುತ್ತಾಳೆ. ಚಿಕ್ಕಪ್ಪನ ಮನೆ ಸೇರಿದ ಷಫಿಗೆ ದಿನವೂ ನರಕ. ರಂಜಾನ್ ದಿನ ಅಮ್ಮನನ್ನು, ತಂಗಿಯನ್ನು ನೋಡುವ ಉತ್ಕಟವಾದ ಆಸೆಯಿಂದ ಮನೆಯಿಂದ ಓಡಿ ಬಂದು ಮಸೀದಿಯ ಪ್ರಾರ್ಥನೆಯ ನಂತರ ಎಲ್ಲರೊಂದಿಗೆ ಅವನೂ ಖಬರಸ್ಥಾನಕ್ಕೆ ಹೋಗಿ ಅವನ ಅಪ್ಪನ ಗೋರಿ ಎಲ್ಲೆಂದು ತಿಳಿದುಕೊಂಡರೂ ಹೋಗುವ ಧೈರ್ಯವಾಗದೆ ಅಮ್ಮನನ್ನು ನೋಡಲು ಸುಭಾನನ ಮನೆಗೆ ಬಂದು ಬಚ್ಚಿಟ್ಟುಕೊಂಡಾಗ ಎಲ್ಲರೂ ಅವನನ್ನು ಕಳ್ಳನೆಂದು ಭ್ರಮಿಸಿ ಹೊಡೆಯುತ್ತಾರೆ. ತಂಗಿಯನ್ನು, ಬಸುರಿಯಾಗಿದ್ದ ಅಮ್ಮನನ್ನು ನೋಡಿದ ಷಫಿಗೆ ತಾನು ಎಲ್ಲೂ ಸಲ್ಲದವನು ಎನ್ನುವ ಪರಕೀಯ ಭಾವನೆ ಬಂದುಬಿಡುತ್ತದೆ. ಹೆದರದೆ ಸ್ಮಶಾನದೊಳಗೆ ಹೋಗಿ ಅವರಪ್ಪನ ಗೋರಿಯನ್ನೇ ತಬ್ಬಿ ಮಲಗಿಬಿಡುತ್ತಾನೆ. ಅಮ್ಮನಿಗೆ ಹೊಸ ಜೀವನ ಸಿಕ್ಕಿರಬಹುದು. ಆದರೆ ಮಕ್ಕಳು ತಬ್ಬಲಿಗಳಾದರಲ್ಲವೇ ಎನ್ನುವ ಪ್ರಶ್ನೆಯೇಳುತ್ತದೆ.

'ಹುಟ್ಟು' ಕತೆಯಲ್ಲಿ ಒಂದು ಸಂಪ್ರದಾಯಸ್ಥ ಸಿರಿವಂತ ಅವಿಭಕ್ತ ಕುಟುಂಬದಲ್ಲಿ ಹುಟ್ಟಿದ ಎಲ್ಲರ ಪ್ರೀತಿಯ ಒಬ್ಬಳೇ ಮಗಳು ನಿಶಾತ್. ಅವಳ ಮದುವೆ ಅತ್ತೆಯ ಮಗನೊಂದಿಗೆ ಎಂದು ಅವಳು ಚಿಕ್ಕವಳಿದ್ದಾಗಲೇ ನಿಶ್ಚಯವಾಗಿರುತ್ತದೆ. ನಿಶಾತ್‌ನ್ನು ಕೂಡಾ ಮೆಡಿಕಲ್‌ಗೆ ಸೇರಿಸುವ ಆಸೆಯಿಂದ ತಕ್ಕ ಭದ್ರತೆ ಕಲ್ಪಿಸಿ ಮನೆಯಲ್ಲೇ ಖಾಸಗಿ ಟ್ಯೂಷನ್ನಿನ ವ್ಯವಸ್ಥೆಯಾಗಿರುತ್ತದೆ. ಪಾಠ ಹೇಳಿಕೊಡಲು ಬರುತ್ತಿದ್ದವನೊಂದಿಗೆ ಅವಳು ಓಡಿಹೋಗಿ ಮನೆಯಲ್ಲಿ ಒಂದು ಚಂಡಮಾರುತವೇ ಸೃಷ್ಟಿಯಾಗಿ ಬಿಡುತ್ತದೆ. ಆರು ತಿಂಗಳು ಮನೆಯ ಯಾರಿಗೂ ಮುಖವನ್ನು ತೋರಿಸದ ಸಯ್ಯದ್ ಸಾಹೇಬರು ನಂತರ ಹೊರಬಂದವರು ಮಗಳ ಕರ್ಮಾಂತರವನ್ನು ನೆರವೇರಿಸಿ, ಗೋರಿಯನ್ನೂ ಕಟ್ಟಿಸಿ, ಅವಳಿನ್ನು ತಮ್ಮ ಪಾಲಿಗಿಲ್ಲ ಎನ್ನುವುದನ್ನು ಜಗದೆದುರು ಹೇಳಿಬಿಡುತ್ತಾರೆ. ಅದಾಗಿ ಆರು ವರ್ಷಗಳ ನಂತರ ಅತ್ತೆಯ ಮಗನ ಮದುವೆಯ ದಿನ ಯಾವುದೋ ಅಪರಿಚಿತ ವ್ಯಕ್ತಿಯ ಮೂಲಕ ನಿಶಾತ್ ತನ್ನ ಒಬ್ಬಳೇ ಮಗಳು ಸೀಮಾಳನ್ನು ಅಲ್ಲಿಗೆ ಕಳುಹಿಸಿ ತನ್ನ ಜೀವನ ಸುಖವಾಗಿದ್ದರೂ, ತನ್ನಿಂದ ಘಟಿಸಿಹೋದ ತಪ್ಪಿಗೆ ಎಲ್ಲರ ಕ್ಷಮಾಪಣೆ ಕೇಳಿ ಮಗಳಿಗೆ ತನ್ನ ತವರಿನಲ್ಲೇ ಆಶ್ರಯ ಸಿಗಬೇಕೆನ್ನುವ ಕೋರಿಕೆಯನ್ನು ಸಲ್ಲಿಸಿ ಪತ್ರವನ್ನು ಕಳುಹಿಸಿದಾಗ ಒಂದು ದೊಡ್ಡ ಪ್ರಸಂಗವೇ ಸೃಷ್ಟಿಯಾಗಿಬಿಡುತ್ತದೆ. ಎಲ್ಲರೂ ಆಘಾತಕ್ಕೊಳಗಾಗಿರುವಾಗ ಅಚ್ಚರಿಯೆಂಬಂತೆ ಸಯ್ಯದ್ ಸಾಹೇಬರು ಮೊಮ್ಮಗಳನ್ನು ಎತ್ತಿಕೊಳ್ಳುತ್ತಾರೆ. ತಾನು ಮಾಡಿರಬಹುದಾದ ತಪ್ಪನ್ನು ಮಗಳೊಂದಿಗೆ ವಿನಿಮಯ ಮಾಡಿಕೊಳ್ಳಲು ಸಾಧ್ಯವೇ? ಮಗು ತನ್ನ ತಾಯ್ತಂದೆಯರೊಡನೆ ಬೆಳೆಯಬೇಕೆ, ಇಲ್ಲವೇ ಅಜ್ಜಿ, ತಾತನ ಬಳಿಯಲ್ಲೇ? ಮಕ್ಕಳು ವಿನಿಮಯದ ಸರಕೇ ಎನ್ನುವ ಪ್ರಶ್ನೆಗಳು ಸಹಜವಾಗಿಯೇ ಏಳುತ್ತವೆ.

ಮುಂದಿನ ಕತೆ, **'ತಬ್ಬಲಿ ಚಂದ್ರಮ'**. "ನಾನು ಮರ್ಯಾದೆಗಾಗಿ ಬದುಕಿ ಮರ್ಯಾದೆಗಾಗಿ ಸಾಯುವ ಮನುಷ್ಯ ನೀನೇನಾದರೂ ಯಾರೊಡನೆಯಾದರೂ ಅಫೇರ್ ಮಾಡಿಕೊಂಡಲ್ಲಿ ನನ್ನ ಹೆಣ ನೋಡಬೇಕಾಗುತ್ತೆ" ಎಂದು ಮಗಳಿಗೆ ಹೇಳುವ ಶಾಹಿದ್ ಅಹ್ಮದ್ ಒಬ್ಬ ಜಡ್ಜ್. "ಮೇಲ್ ಚುವಾನಿಸ್ಟಿಕ್ ಆಟಿಟ್ಯೂಡ್ ಇಟ್ಟುಕೊಂಡು ನ್ಯಾಯ ಕೇಳುತ್ತಾ ಎದುರುನಿಲ್ಲುವ ಹೆಣ್ಣುಮಕ್ಕಳಿಗೆ ಎಂತಹ ನ್ಯಾಯದಾನ ನೀಡುವಿರಿ? ಧೂಳು ಹಿಡಿದ ದಪ್ಪ ಪುಸ್ತಕಗಳು ಸತ್ತು ಯಾವ ಕಾಲವಾಗಿದೆಯೋ. ಇನ್ನೂರು ವರ್ಷಗಳ ಹಿಂದಿನ ಕಾನೂನನ್ನು ಇಂದಿಗೂ ಜಾರಿ ಮಾಡ್ತೀರಲ್ಲ ಹಾಗೆ ನನ್ನ ಮದುವೆ ನಿಮ್ಮ ಮರ್ಯಾದೆಯಂತೆ" ಅನ್ನುವ ಮಗಳು ರೂಹಿ. ಅವನು ದಿನವೂ ನೋಡುತ್ತಿದ್ದ ವರದಕ್ಷಿಣೆ, ವಿವಾಹ ಸಂಬಂಧಿತ ಕೊಲೆ ಕೇಸುಗಳು, ಅವನು ಮಗಳ ಮದುವೆ ಮಾಡುವುದಕ್ಕೆ ತಡೆಯಾಗುತ್ತಿದ್ದವೇ! ಕತೆಯಲ್ಲಿ. ನಿಜವಾಗಿ ಏಳುವ ಪ್ರಶ್ನೆ ಕಸ್ಟಡಿ

ಕೇಸುಗಳಲ್ಲಿ ಕಾನೂನಿನ ಅಭಿಪ್ರಾಯ ಮುಖ್ಯವೇ, ಅಥವಾ ಮಗುವಿನದ್ದೇ? ತಾಯಿ ಕೊಲೆಯಾಗಿ, ತಂದೆ ಜೈಲಿನಲ್ಲಿರುವವರ ಮಗು ಯಾರ ಬಳಿಯಲ್ಲಿರಬೇಕು? ದೀಪಾ ಎನ್ನುವ ಒಂದು ಪುಟ್ಟಮಗುವಿನ ಬಗೆಗಿನ ಇಂತಹ ಪ್ರಕರಣದಲ್ಲಿ ಕಾನೂನಿನ ಸಂಕೀರ್ಣತೆ ಕಾಣುತ್ತವೆ. ಜಡ್ಜಾಗಿದ್ದರೂ ಇಂತಹ ಸಂದರ್ಭಗಳಲ್ಲಿ ನೀಡುವ ತೀರ್ಮಾನವನ್ನು ನ್ಯಾಯಯುತವಾದದ್ದು ಎಂದು ಹೇಳುವುದು ಹೇಗೆ? ಆದರೆ ಮಗುವಿನ ತಲೆಯಲ್ಲಿ ಸುತ್ತುವ ಪ್ರಶ್ನೆ. ತಂದೆ ಏತಕ್ಕಾಗಿ ತನ್ನ ತಾಯಿಯನ್ನು ಕೊಂದ ಎನ್ನುವುದು.

ನಮ್ಮೆಲ್ಲರ ಬದುಕನ್ನು ನಿಯಂತ್ರಿಸುವುದು ವಿದ್ಯೆಯಲ್ಲ, ಐಶ್ವರ್ಯವಲ್ಲ, ಮನುಷ್ಯ ಸಂಬಂಧಗಳಲ್ಲ. ನಾವೆಲ್ಲ ಕೇವಲ ಎನ್ನುವ ಯಃಕಶ್ಚಿತ್ ಎನ್ನುವ ಈ ಅಹಂಕಾರಗಳು. ನನಗೆ ದಕ್ಕಿದ್ದು ಬದುಕಿನ ಈ ಮುಖ ಮಾತ್ರಾ ಎನ್ನುವ ಕಥಾ ನಾಯಕಿ. ಮಳೆ ಮತ್ತು ಇಳೆಯ ಸಂಬಂಧದಲ್ಲಿ ತನ್ನ ಮತ್ತು ತನ್ನಿನಿಯನ ಸಂಬಂಧದ ಆತ್ಮಾವಲೋಕನ ಮಾಡಿಕೊಳ್ಳುವ ಕತೆ **'ಚಂದ್ರೂ'** ಒಂದು ಸ್ವಗತದ ಶೈಲಿಯಲ್ಲಿರುವ ಕತೆ.

ಅಸಂಗತ ಶೈಲಿಯ ಕೆಲವು ಕತೆಗಳನ್ನು ನೋಡಬಹುದು. **'ಹೆಜ್ಜೆ ಮೂಡಿದ ಹಾದಿ'** ಕತೆಯಲ್ಲಿ ಪ್ರಕೃತಿ ನಿಸ್ವಾರ್ಥದಿಂದ ಎಲ್ಲವನ್ನೂ ಈ ಜಗತ್ತಿಗೆ ನೀಡಿದ್ದರೂ ಮನುಷ್ಯ ಮೇಲುಕೀಳುಗಳ ಭಾವವನ್ನು ಸೃಷ್ಟಿಸಿಕೊಂಡಿದ್ದಾನೆ. ಅಂತಹ ತುಳಿದವರ ಪರವಾಗಿ ನಿಂತ ಕಥಾನಾಯಕನು ಅವರನ್ನು ಮೇಲೆತ್ತಲು ಎಷ್ಟೋ ಪ್ರಯತ್ನ ಪಡುತ್ತಾನೆ. ಹಲವು ವಿಫಲ ಪ್ರಯತ್ನಗಳ ನಂತರ ಅವನು ಕ್ರಾಂತಿಯಾಗದೇ ಅವರನ್ನು ಎಚ್ಚರಿಸಲು ಸಾಧ್ಯವೇ ಇಲ್ಲವೆನ್ನುವುದನ್ನುಕಂಡುಕೊಳ್ಳುತ್ತಾನೆ. ಬುದ್ಧಿ ಮತ್ತು ಹೃದಯದ ನಡುವಿನ ಸಂವಾದದ ಅಸಂಗತ ರೂಪದಲ್ಲಿ ಹೆಣೆದ ಕತೆ.

'ಗೋಳದ ಗೆಳತಿ'ಯ ಅಬ್ದುಲ್ ಹಮೀದ್ ಅಕೇಲಾ ಹೆಂಡತಿ ಜವೇರಿಯಾಳ ಆಗ್ರಹದ ಮೇಲೆ ಮರಲ್ ಮೀನು ತರಲು ಹೋದಾಗ ಮಾನಸಿಕವಾಗಿ ಅಸ್ವಸ್ಥನಾಗಿಬಿಡುತ್ತಾನೆ. ದೈಹಿಕವಾಗಿ ಕ್ಷೀಣನಾಗುತ್ತಾ ಹೋಗುತ್ತಾನೆ. ಜವೇರಿಯಾಳ ಯಾವುದೇ ಪ್ರಯತ್ನಗಳೂ ಫಲಕಾಣುವುದಿಲ್ಲ. ಸ್ವತಃ ತಾನೇ ಮಸೀದಿಯ ಮೌಲ್ವಿಗಳು ಹೇಳಿದ್ದ ಕ್ರಮವನ್ನು ಅನುಸರಿಸಲು ಹೋದಾಗ ಒಂದು ಜಿನ್ ಪ್ರತ್ಯಕ್ಷವಾಗಿ ಒಂದು ಗೋಳವನ್ನು ಉದುರಿಸಿ ಹೋಗುತ್ತದೆ. ಅದರೊಳಗೆ ಒಂದು ಬೇರೆಯ ಲೋಕವೇ ಕಂಡಂತಾಗಿ ಅದರಲ್ಲೊಬ್ಬ ಹೆಣ್ಣಿದ್ದು ಅವನು ಆ ಲೋಕದಲ್ಲೇ ಮುಳುಗಿಹೋಗುತ್ತಾನೆ.

'ಡೋಡೋ ಹಕ್ಕಿಯ ಕತೆ'ಯ ಡೋಡೋ ಹಕ್ಕಿ 17ನೆಯ ಶತಮಾನದ ಉಷ್ಟ್ರಪಕ್ಷಿಗಳನ್ನು ಹೋಲುವ ಹದ್ದಿನ ಕಾಲುಗಳ ಹಾರಲಾಗದ ಪಕ್ಷಿ ಈಗ ಅಸ್ತಿತ್ವದಲ್ಲಿಲ್ಲ. ಕ್ಯಾಲ್ವೇರಿಯಾ ಮರದ ಬೀಜಗಳನ್ನು ಈ ಹಕ್ಕಿಗಳು ತಿಂದು ವಿಸರ್ಜಿಸಿದ ಮೇಲಷ್ಟೇ ಆ ಬೀಜಗಳು ನೆಲದಲ್ಲಿ ಮೊಳೆಯಬಲ್ಲವು. ಇಲ್ಲದಿದ್ದರೆ ನೂರಾರು ವರ್ಷಗಳಾದರೂ ಅವು ಮೆತ್ತಗಾಗುವುದಿಲ್ಲ.

ಕತೆ ಕಾಲ್ಪನಿಕವಾಗಿ 1640ನೆಯ ಇಸವಿಯಲ್ಲಿ ನಡೆದಿದ್ದು. ಆಗ ಮಾರಿಷಸ್ ದ್ವೀಪಕ್ಕೆ ಕಾಲಿಟ್ಟ ಮನುಷ್ಯರು ತಮ್ಮೊಂದಿಗೆ ಇತರ ಪ್ರಾಣಿಗಳನ್ನೂ ಕರೆತಂದರು. ಸಿಕ್ಕ ಡೋಡೋ ಹಕ್ಕಿಯನ್ನೂ ಮತ್ತು ಅದರ ಮೊಟ್ಟೆಗಳನ್ನೂ ಬೇಯಿಸಿಕೊಂಡು ತಿಂದರು. ಅದನ್ನು ನೋಡುತ್ತಿದ್ದ ಒಂದು ಬಿಳಿಯ ಡೋಡೋ ಹೆಣ್ಣು ಹಕ್ಕಿ ಅಪಾಯದ ಮುನ್ಸೂಚನೆ ಕಂಡುಕೊಂಡಿತ್ತು. ಹಾರಲು ಬಾರದ ತಮ್ಮ ಸಂತತಿ ಹಾರುವುದನ್ನು ಕಲಿಯದೇ ಹೋದರೆ ಈ ಮನುಷ್ಯರಿಂದ ನಿರ್ನಾಮವಾಗುವ ದಿನ ದೂರವಿಲ್ಲ ಎಂದುಕೊಂಡು ಹಾರುವುದನ್ನು ಅಭ್ಯಾಸ ಮಾಡುತ್ತಿತ್ತು. ಒಂದು ಒಕ್ಕಣ್ಣ ಡೋಡೋ ಇದರ ಕಾರಣವನ್ನು ಕೇಳಿ ತಿಳಿದು ಕೊಂಡಿತು. 'ಮೊಟ್ಟೆಯಿಟ್ಟು ಕಾವುಕೊಟ್ಟು ಮರಿ ಮಾಡಿಕೊಂಡಿರಬೇಕಾದ ಹೆಣ್ಣು ಹಕ್ಕಿ ಹೀಗೆಲ್ಲಾ ಯೋಚಿಸುವುದು ಎಂದರೇನು?!' ಎಂದು ಇಡಿಯ ಡೋಡೋ ಪಕ್ಷಿಸಂಕುಲಕ್ಕೆಲ್ಲ ಅಪಾರ ಕೋಪ. ಆ ಬಿಳಿ ಹಕ್ಕಿಯನ್ನು ಕೊಂದು ಬಿಡಬೇಕೆಂದು ಆ ಪಕ್ಷಿಗಳ ಮುಖಂಡರೆಲ್ಲರೂ ತೀರ್ಮಾನ ಮಾಡಿ ಅದನ್ನು ಹುಡುಕಲು ಹೊರಟಾಗ ಅದು ಬದಿಯಲ್ಲಿದ್ದ ಕ್ಯಾಲ್ವೇರಿಯಾ ಮರದ ಎತ್ತರದ ರೆಂಬೆಯಲ್ಲಿ ಕುಳಿತಿರುವುದು ಒಂದು ಕೋತಿಯ ಕಣ್ಣಿಗೆ ಬಿತ್ತು. ಅದನ್ನು ಉಸುರುವಷ್ಟರಲ್ಲೇ ತಾಯಿ ಕೋತಿ ಸುಮ್ಮನಾಗಿಸಿದರೂ ಎಲ್ಲಾ ಡೋಡೋ ಪಕ್ಷಿಗಳಿಗೂ ಅನುಮಾನ ಬಂದು ಆ ಮರವನ್ನು ಸುತ್ತುವರಿದು ಅದರ

ತೊಗಟೆಯನ್ನು ಬಗಿದು ಕಾಂಡವನ್ನು ಬಗಿದು ಘಾಸಿಗೊಳಿಸಿದವು. ಎಷ್ಟೋ ಶತಮಾನಗಳ ಹಿಂದೆ ಆ ಮರದ ಕೆಳಗೆ ಅದರ ಹಣ್ಣುಗಳನ್ನು ತಿಂದುಕೊಂಡು ಬದುಕಿದ್ದ ಒಬ್ಬ ಮಹಾಪುರುಷನೊಬ್ಬ "ಮುಂದೊಂದು ಕಾಲದಲ್ಲಿ ಸತ್ಯವನ್ನು ನುಡಿದ ಒಂದು ಜೀವಿಗೆ ಸ್ವಂತ ಅವನ ರಕ್ತದವರಿಂದಲೇ ಜೀವ ಬೆದರಿಕೆ ಬರುತ್ತದೆ. ಆಗ ಸತ್ಯದ ಪರವಾಗಿರುವುದು ನಿನ್ನ ಧರ್ಮ" ಎಂದು ಆ ಮರಕ್ಕೆ ಒಂದು ಭವಿಷ್ಯವಾಣಿಯನ್ನು ನುಡಿದಿದ್ದ. ಅದು ನೆನಪಿಗೆ ಬಂದ ಮರ ಬಳಲಿದ್ದ ಆ ಬಿಳಿ ಹಕ್ಕಿಯನ್ನು ತನ್ನ ಎಲೆಗಳಿಂದ ಮರೆ ಮಾಡಿ ಅದಕ್ಕೆ ಶಕ್ತಿ ತರಿಸಲು ಮಿರಾಕ್ಷ ಎನ್ನುವ ಹಣ್ಣುಗಳನ್ನು ಕೊಟ್ಟು ಆದಷ್ಟು ಬೇಗನೇ ಅಲ್ಲಿಂದ ಹಾರಿಹೋಗುವಂತೆ ಹೇಳುತ್ತದೆ. ಎಲ್ಲ ಹಕ್ಕಿಗಳೂ ನೋಡುನೋಡುತ್ತಿರುವಂತೆಯೇ ಆ ಬಿಳಿಹಕ್ಕಿ ಅಲ್ಲಿಂದ ಹಾರಿ ತುಂಬಾ ದೂರ ಸಾಗಿಬಿಡುತ್ತದೆ.

ಇಲ್ಲಿ ಲೇಖಕಿ ಹೇಳಿರುವುದು ಹಕ್ಕಿಗಳ ಕತೆಯನ್ನೋ ಅಥವಾ ಅದರ ಮೂಲಕ ಹೆಣ್ಣನ್ನು ದಮನಿಸಿಡುವ ಜನಾಂಗದ ಅಳಿವನ್ನೋ ಎನ್ನುವುದು ಓದುಗನ ಮುಂದೆ ಬರುವ ಒಂದು ಪ್ರಶ್ನೆ. ಜೀವಜಾಲದಲ್ಲಿ ಎಲ್ಲ ಜೀವಗಳೂ ಪರಸ್ಪರ ಅವಲಂಬನೆ ಹೊಂದಿರುವಂತದು; ಒಂದರ ಅಳಿವು ಇನ್ನೊಂದರ ಅಳಿವಿಗೆ ದಾರಿ ಎನ್ನುವ ಸತ್ಯವನ್ನು ತೋರುವ ಕತೆ.

'ಕಡು ಬೇಸಿಗೆ' ಕತೆಯ ನೀಲೂಫರ್ ಮತ್ತು ಜಮೀರ್‌ರದು ಬಹ್ರೇನ್‌ನಲ್ಲಿ ವಾಸ. ಅವರು ಬಾಡಿಗೆಗೆ ಒಂದು ಹೊಸ ಮನೆಯನ್ನು ಹುಡುಕುತ್ತಿರುತ್ತಾರೆ. ಅವರಿಬ್ಬರೂ ಆದಿನ ಬಾಡಿಗೆಗಾಗಿ ನೋಡಲು ಹೋದ ಮನೆಯಲ್ಲಿ ನಡೆದ ವಿದ್ಯಮಾನಗಳು ಸತ್ಯವೋ ಭ್ರಮೆಯೋ ತಿಳಿಯದೆ ನೀಲೂಫರ್‌ಳಿಗೆ ಎಲ್ಲವೂ ಅಯೋಮಯವಾಗುತ್ತದೆ. ಬ್ರೋಕರ್ ರಫಿ ಆ ಮನೆಯ ದುರಂತದ ಕತೆಯನ್ನು ಹೇಳುತ್ತಾನೆ. ಆದರೆ ಆ ಮನೆಯೊಡತಿ ಕೊಟ್ಟ ಪ್ಲಾಸ್ಟಿಕ್ ಕವರ್ ಅವಳ ಕೈಚೀಲದಲ್ಲಿಯೇ ಇದೆ. ಅದು ಅವಳಿಗೆ ಅಮಾನತ್ (ನ್ಯಾಸ)ನಂತೆ ಭಾಸವಾಗಿ ಅದೇ ಮನೆಯಲ್ಲಿ ಇರಲೊಪ್ಪುತ್ತಾಳೆ. ತನ್ನ ಮಗನಿಗೆ ಮುನೀರ್ ಎಂದೇ ಹೆಸರಿಟ್ಟು ಆ ಅನಾಮಧೇಯ ತಾಯಿಯ ಬರುವಿಗಾಗಿ ಕಾಯುತ್ತಿರುತ್ತಾಳೆ.


'ಹೆಣ್ಣು ಹದ್ದಿನ ಸ್ವಯಂವರ' 2038ನೆಯ ಇಸವಿಯಲ್ಲಿ ನಡೆಯಬಹುದು ಎನ್ನುವ ಕಲ್ಪನೆಯ ಕತೆ. ಹುಟ್ಟುತ್ತಿರುವ ಮಗುವಿಗಾಗಿ ಕಾಯುತ್ತಿರುವ ಅಮರ್‌ಗೆ ಹೆಣ್ಣೊಬ್ಬಳು ತನ್ನ ಸಂಗಾತಿಯನ್ನು ಹೇಗೆ ಆರಿಸಿಕೊಳ್ಳುತ್ತಾಳೆ, ಅವಳ ನಿರೀಕ್ಷೆಗಳೇನು, ಮಕ್ಕಳನ್ನು ಹೆರುವಲ್ಲಿ, ಅವನ್ನು ಸ್ವತಂತ್ರವಾಗಿ ಮಾಡುವಲ್ಲಿ ಅವಳ ಮತ್ತು ಮಗುವಿನ ಅಪ್ಪನ ಪಾತ್ರವೇನು ಎನ್ನುವುದನ್ನು ಅವನ ತಾಯಿ ವಾಸಂತಿ ಒಂದು ತಲೆಯ ಮೇಲೆ ಕೊಡವನ್ನು ಹೊತ್ತ ಮಹಿಳೆಯ ರೂಪದಲ್ಲಿರುವ, ಕರಗುತ್ತಾ ಹಾಗೆಯೇ ಇಲ್ಲವಾಗುವ ಮೇಣದ ಬತ್ತಿಯ ಸಂಕೇತದಲ್ಲಿ ಹೇಳುತ್ತಾ ಹೋಗುತ್ತಾಳೆ. ಕತೆ ಅಂತಹ ಪರಿಣಾಮವನ್ನೇನೂ ಬೀರುವುದಿಲ್ಲ.

ಇಷ್ಟರವರೆಗೆ ನಾವು ಬಾನು ಮುಷ್ತಾಕರ ಮಿಕ್ಕೆಲ್ಲಾ ಕತೆಗಳನ್ನು ನೋಡಿದೆವು. ಈಗ ಇಂದು ನಾವು ಅವಲೋಕಿಸಬೇಕಾಗಿರುವ ಬೂಕರ್ ಪ್ರಶಸ್ತಿ ವಿಜೇತ ಹನ್ನೆರೆಡು ಕತೆಗಳ ಬಗ್ಗೆ ನನಗೆ ತೋರಿದಷ್ಟನ್ನು ಇನ್ನು ಮುಂದೆ ಹೇಳಲಿದ್ದೇನೆ.

ಹೃದಯ ದೀಪ

1. ಶಾಯಿಸ್ತ ಮಹಲಿನ ಕಲ್ಲುಚಪ್ಪಡಿಗಳು

ಮಧ್ಯವಯಸ್ಸಿನ ಇಫ್ತಿಕಾರ್ ಅಹಮದ್ ಮತ್ತು ಶಾಯಿಸ್ತಾ ದಂಪತಿಗೆ ಈಗಾಗಲೇ ಆರು ಮಕ್ಕಳಿದ್ದು ಏಳನೆಯದ್ದು ಬಸಿರಿನಲ್ಲಿದೆ. ದೊಡ್ಡ ಮಗಳು ಆಸಿಫಾ ಎಸ್‌ಎಸ್‌ಎಲ್‌ಸಿಗೇ ಓದಿಗೆ ಮುಕ್ತಾಯ ಹಾಡಿ ತಂಗಿ, ತಮ್ಮಂದಿರನ್ನು ನೋಡಿಕೊಳ್ಳುತ್ತಿದ್ದಾಳೆ. ಜೀನತ್ ಪದವೀಧರೆಯಾದ, ಸ್ವಲ್ಪಮಟ್ಟಿಗಿನ ಮುಂದುವರೆದ ಆಲೋಚನಾ ಲಹರಿ ಉಳ್ಳ ಹೆಣ್ಣು. ಅವಳ ಗಂಡ ಮುಜಾಹಿದ್. ಅವರಿಗೆ ಇಫ್ತಿಕಾರ್ ದಂಪತಿಗಳ ಪರಿಚಯವಾಗುತ್ತದೆ. ಶಾಯಿಸ್ತಾಳ ಬಗ್ಗೆ ಇಫ್ತಿಕಾರ್‌ಗೆ ತಾನು ಚಕ್ರವರ್ತಿಯಾಗಿದ್ದಿದ್ದರೆ ಶಾಯಿಸ್ತಾ ಮಹಲ್ ಕಟ್ಟಿಸುತ್ತಿದ್ದೆ ಎನ್ನುವಷ್ಟು ಅಮಿತ ಪ್ರೇಮ. ಶಾಯಿಸ್ತಾ ಹೇಳುವ "ಹೆಂಡತಿ ಸತ್ತರೆ ಗಂಡನಿಗೆ ಮೊಣಕೈ ಎಲುಬಿಗೆ ಪೆಟ್ಟು ಬಿದ್ದಂತೆ. ಮೊಣಕೈಗೆ ಏಟು ಬಿದ್ದರೆ ಒಂದು ಕ್ಷಣ ಭಯಂಕರ ಅಸಹನೀಯ



ನೋವುಂಟಾಗುತ್ತದೆ. ಒಂದೇ ಕ್ಷಣ ಮಾತ್ರಾ. ನಂತರ ಏನೂ ಅನಿಸುವುದಿಲ್ಲ. ಗಾಯವಿಲ್ಲ, ರಕ್ತವಿಲ್ಲ, ಗುರುತಿಲ್ಲ, ನೋವಿಲ್ಲ'' ಈ ಮಾತು ಈ ಕತೆಯ ಜೀವಾಳ. ತಾಯಿಗೆ ಹುಷಾರಿಲ್ಲವೆಂದು ಹೋದ ಜೀನತ್ ಅವಳ ಅಂತ್ಯ ಸಂಸ್ಕಾರವನ್ನು ಮುಗಿಸಿಕೊಂಡೇ ಒಂದೂವರೆ ತಿಂಗಳ ನಂತರ ಬಂದವಳು, ಶಾಯಿಸ್ತಾ ಮತ್ತು ಮಗುವಿಗೆ ಕೊಂಡಿದ್ದ ಉಡುಗೊರೆಗಳನ್ನು ತೆಗೆದುಕೊಂಡು ಹೋದರೆ ಕೋಣೆಯ ಬಾಗಿಲು ಮುಚ್ಚಿದೆ. ಕಾದು ಬಾಗಿಲು ಬಡಿದರೆ ಹೊರಬಂದದ್ದು ಇಫ್ತಿಕಾರ್, ಒಳಗಿದ್ದವಳು ಇನ್ನೂ ಹದಿನೆಂಟೂ ತುಂಬದ ಅವನ ಹೊಸ ಹೆಂಡತಿ. ಶಾಯಿಸ್ತಾ ಅಕಸ್ಮಾತಾಗಿ ಸತ್ತಿದ್ದಾಳೆ. "ಶಾಯಿಸ್ತಳ ನಲವತ್ತನೆಯ ದಿನದ ಫಾತಿಹಾ ಮುಗಿದ ಮಾರನೆಯ ದಿನ ಈಕೆಯನ್ನು ಮದುವೆಯಾದೆ. ಬಡವರ ಮನೆಯ ಹೆಣ್ಣು. ಮಕ್ಕಳನ್ನು ನೋಡಿಕೊಳ್ಳಲು ಯಾರಾದರೂ ಬೇಕಲ್ಲ ಅದಕ್ಕೆ'' ಎನ್ನುತ್ತಾನೆ ಇಫ್ತಿಕಾರ್. "ನೀವು ಶಾಯಿಸ್ತಾ ಮಹಲ್ ಕಟ್ಟಿಸದಿದ್ದರೂ ಪರವಾಗಿಲ್ಲ; ಅವಳ ಗೋರಿಯ ಸುತ್ತ ಸರಿಯಾದ ಕಲ್ಲುಚಪ್ಪಡಿಗಳನ್ನು ಹಾಕಿ ಬಂದೋ ಬಸ್ತ್ ಮಾಡಿಬಿಡಿ. ನಿಮ್ಮ ಪ್ರೀತಿಯ ಅನಂತತೆ, ತೀವ್ರತೆ ಅವಳಿಗೆ ತಲುಪಿ ಎದ್ದು ಬಂದುಬಿಟ್ಟರೆ ನಿಮಗೆ ಕಷ್ಟವಾಗಿಬಿಡುತ್ತದೆ'' ಎಂದು ಜೀನತ್ ಕಹಿಯಾಗಿ ನುಡಿಯುತ್ತಾಳೆ. ಹಿರಿಯ ಮಗಳು ಆಸಿಫಾಳ ಜವಾಬ್ದಾರಿ ಇನ್ನಷ್ಟು ಹೆಚ್ಚಿರುತ್ತದೆ.

2. ಬೆಂಕಿ ಮಳೆ

ಉಸ್ಮಾನ್ ಸಾಹೇಬರು ಮುತಾವಲಿಗಳೂ ಆಗಿ ತಮ್ಮ ಸಮಾಜದಲ್ಲಿ ಒಂದಷ್ಟು ಪ್ರತಿಷ್ಠೆಯನ್ನು ಗಳಿಸಿಕೊಂಡಿದ್ದವರು. ಸಾಕಷ್ಟು ಸ್ಥಿತಿವಂತಳಾದ ತಂಗಿ ಜಮೀಲ, ಗಂಡನ ಕುಮ್ಮಕ್ಕಿನಿಂದ ಶರೀಯತ್ತಿನ ಪ್ರಕಾರ ಪಾಲು ಕೇಳಲು ಬಂದಿದ್ದಾಳೆ. ವಿಧವೆಯಾಗಿ ಏನೂ ಗತಿಯಿಲ್ಲದೆ ಹೊಲಿಗೆ ಯಂತ್ರ ತುಳಿದು ಜೀವನ ಸಾಗಿಸುತ್ತಿರುವ ಸ್ವಾಭಿಮಾನಿ ತಂಗಿ ಸಕೀನ ಪರಕೀಯಳಂತೆ ಹೊರ ಹಜಾರದಲ್ಲೇ ನಿಂತು ತನ್ನ ಮಗನ ಕೆಲಸಕ್ಕೆ ಶಿಫಾರಸ್ಸು ಮಾಡಬೇಕೆಂದು ಕೋರಿಕೊಂಡು ಅರ್ಜಿಯನ್ನು ಕೊಟ್ಟು ಹೊರಟು ಹೋಗುತ್ತಾಳೆ. ಹೆಂಡತಿ ಆರಿಫಾಗೆ ಶರೀಯತ್ತಿನ ಪ್ರಕಾರ ತಂಗಿಯರಿಗೆ ಏನು ಪಾಲು ಕೊಡಬೇಕೋ ಅದನ್ನು ಯಾವ ತಕರಾರಿಲ್ಲದೆ ಕೊಟ್ಟುಬಿಡಲಿ ಎನ್ನುವ ಮನಸ್ಸು, ಏಕೆಂದರೆ ಅವಳಿಗೂ ತನ್ನ ತವರಿನಿಂದ ಪಾಲು ಸಿಕ್ಕಿದೆ. ಊರಿನವರಿಗೆಲ್ಲಾ ಉಪದೇಶ ನೀಡುತ್ತಿದ್ದರೂ ಉಸ್ಮಾನ್ ಸಾಹೇಬರು ಸ್ವತಃ ತಾವು ತಮಗೆ ಅನುಕೂಲವಲ್ಲದ ಶರೀಯತ್ತಿನ ನಿಯಮಗಳಿಂದ ತಪ್ಪಿಸಿಕೊಳ್ಳುವಲ್ಲಿ ಚಾಣಾಕ್ಷರು. ಅದರ ಪ್ರಕಾರ ತಾವು ತಂಗಿಯರಿಗೆ ನೀಡಬೇಕಾದ ಪಾಲನ್ನು ಹೇಗೆ ತಪ್ಪಿಸಿಕೊಳ್ಳಬೇಕೆಂದು ಯೋಚಿಸುತ್ತಿರುವಾಗಲೇ ಅವರ ಶಿಷ್ಯ ದಾವೂದ್ ತಮ್ಮ ಸಮಾಜದ ನಿಸಾರ್ ಎನ್ನುವ ನಿರ್ಗತಿಕ ಕುಡುಕ ಪೇಂಟರ್ ಒಬ್ಬನ ಹೆಣ ಹಿಂದೂಗಳ ರುದ್ರಭೂಮಿಯಲ್ಲಿ ದಫನ್ ಆಗಿರುವಂತಹ ಆಘಾತಕಾರಿ ಸುದ್ದಿಯನ್ನು ತರುತ್ತಾನೆ. ಅದನ್ನು ತಮ್ಮ ಅನುಕೂಲಕ್ಕೆ ತಿರುಗಿಸಿಕೊಂಡು, ಪಾಲಿನ ವಿಷಯವನ್ನು ಪಕ್ಕಕ್ಕಿರಿಸಿ, ಇಡೀ ಸಮಾಜದಲ್ಲಿ ಅದನ್ನೊಂದು ಪ್ರತಿಷ್ಠೆಯ ವಿಷಯವನ್ನಾಗಿ ಮಾಡಿಕೊಂಡು, ಪಾಲು ಕೇಳಿದ ತಂಗಿಯ ಗಂಡನನ್ನೂ ಅದರಲ್ಲೆಳೆದುಕೊಂಡು, ಹೂತಿರುವ ಹೆಣವನ್ನು ತೆಗೆಸಿ ಅದನ್ನು ತಮ್ಮ ಸ್ಮಶಾನದಲ್ಲಿ ದಫನ್ ಮಾಡುವ ವ್ಯವಸ್ಥೆ ಮಾಡುವಲ್ಲಿ ಯಶಸ್ವಿಯಾಗುತ್ತಾರೆ. ಆದರೆ ಸ್ಮಶಾನದೊಳಗೆ ಕಾಲಿಡುವಾಗ ಎದುರಿನಲ್ಲೇ ಕುಡಿದು ತೂರಾಡುತ್ತಾ ಬರುತ್ತಿರುವ ನಿಸಾರ್ ಕಾಣಿಸಿಕೊಳ್ಳುವುದು ಒಂದು ವ್ಯಂಗ್ಯದ ತಿರುವಾಗುತ್ತದೆ. ಕೆಲವರು ಗುರ್ತಿಸಿದರೂ ಅದನ್ನು ಪೋಲೀಸರೆದುರು ಬಿಟ್ಟುಕೊಡದೆ ದಫನ್ ಮಾಡಿ ಬರುತ್ತಾರೆ. ಹದಿನೈದು ದಿನಗಳಿಂದ ಇದರಲ್ಲೇ ಮುಳುಗಿಹೋಗಿದ್ದ ಮುತಾವಲಿಗಳ ತಲೆಕೆಟ್ಟಂತಾಗಿ ಮನೆಗೆ ಬರುವಾಗ ಮಗ ಮೆನೆಂಜೈಟಿಸ್ ಆಗಿ

ಆಸ್ಪತ್ರೆಯಲ್ಲಿ ದಾಖಲಾಗಿರುತ್ತಾನೆ. ಸ್ವಂತ ಮಗನ ಕಾಳಜಿ ವಹಿಸದ, ಸ್ವಂತ ತಂಗಿಯರ ಸಮಸ್ಯೆಗಳನ್ನು ಅವಗಣನೆ ಮಾಡಿದ ಪಾಪಪ್ರಜ್ಞೆ ಅವರನ್ನು ಕಾಡುತ್ತದೆ. ಹಕ್ಕುದಾರ ಮೊರೆ ಇಟ್ಟಲ್ಲಿ ಬೆಂಕಿ ಮಳೆ ಸುರಿದೀತು ಎಂದು ಆರಿಫ ನೆನಪಿಸಿಕೊಳ್ಳುವ ತನ್ನ ತಾಯಿಯ ಮಾತು ನಿಜವಾಗಿರುತ್ತದೆ.

3. ಕರಿನಾಗರಗಳು

ಕುರಾನಿನ ಶರೀಯತ್ತುಗಳನ್ನು ಮುಸ್ಲಿಂ ಪುರುಷ ಸಮೂಹ ಹೇಗೆ ತನ್ನ ಉಪಯೋಗಕ್ಕೆ ತಕ್ಕಂತೆ ತಿರುಚಿ ಅನುಷ್ಠಾನಕ್ಕೆ ತಂದಿವೆ; ಎಲ್ಲಾ ಕಾನೂನುಗಳನ್ನೂ ಮಹಿಳೆಯರನ್ನು ಕಟ್ಟಿಹಾಕುವುದಕ್ಕೆ ಬಳಸಿಕೊಂಡಿದೆ. ಮಾನವೀಯತೆಗೆ ಬೆಲೆಯೇ ಇಲ್ಲವೇ? ನ್ಯಾಯ, ಧರ್ಮ ಎಲ್ಲವೂ ಪುರುಷನ ಪರವಾಗಿಯೇ ಇದೆಯೇ ಎನ್ನುವ ಹಲವು ಪ್ರಶ್ನೆಗಳನ್ನೆತ್ತುವ ಈ ಕತೆ ಗಿರೀಶ್ ಕಾಸರವಳ್ಳಿಯವರ ನಿರ್ದೇಶನದಲ್ಲಿ 'ಹಸೀನಾ' ಎನ್ನುವ ಚಲನಚಿತ್ರವಾಗಿ ಅನೇಕ ಪ್ರಶಸ್ತಿಗಳನ್ನು ಬಾಚಿಕೊಂಡಿತ್ತು. ಅಬ್ದುಲ್ ಖಾದರ್ ಮಸೀದಿಯೊಂದರ ಮುತಾವಲಿಗಳು. ಅವರ ಹೆಂಡತಿ ಆಮಿನ ಹೇಳುವುದು ಹೀಗೆ: "ಮುತವಲ್ಲಿಯಾದ ಮೇಲಾದ್ರೂ ಐದು ಹೊತ್ತು ನಮಾಜು ಮಾಡ್ತಾರಾ? ಸಿನಿಮಾಗೆ ಹೋಗೋದನ್ನು ಬಿಟ್ಟಿದಾರಾ? ಸೈತಾನನ ಮೂತ್ರವನ್ನಾದರೂ ಕುಡಿಯೋದನ್ನ ಬಿಟ್ಟಿದಾರಾ? ಈ ಮುತವಲ್ಲಿತನಕ್ಕೆ ಇಷ್ಟ್ ಬೆಂಕಿ ಹಾಕ". ಅವರ ಬಗ್ಗೆ ತಿಳಿದುಕೊಳ್ಳುವುದಕ್ಕೆ ಇಷ್ಟು ವಿವರಣೆ ಸಾಕು. ಹೆಂಡತಿಯ ಸಂತಾನಹರಣ ಶಸ್ತ್ರಕ್ರಿಯೆಗೆ ಒಪ್ಪದೆ ಹತ್ತು ವರ್ಷಗಳಲ್ಲಿ ಆಮಿನ ಏಳು ಮಕ್ಕಳ ತಾಯಿ. ಅಶ್ರಫ್, ಯಾಕೂಬನ ಹೆಂಡತಿ, ಹಬೀಬ, ಹಸೀನಾ ಮತ್ತು ಮುನ್ನಿಯ ಒಡತಾಯಿ. ಯಾಕೂಬ ಇನ್ನೊಂದು ಮದುವೆಯನ್ನು ಮಾಡಿಕೊಂಡು ಇವರನ್ನು ಕಡೆಗಣಿಸಿದ್ದಾನೆ. ತಾನು ಕೆಲಸ ಮಾಡುತ್ತಿದ್ದ ಮನೆಯೊಡತಿ ಜುಲೇಖಳ ಸಲಹೆಯಂತೆ ನ್ಯಾಯವನ್ನು ಬೇಡಿ ಮಸೀದಿಗೆ ಅರ್ಜಿಯನ್ನು ಮುತಾವಲಿಯವರ ಮೂಲಕ ಹತ್ತಾರು ಬಾರಿ ಸಲ್ಲಿಸಿದ್ದಾಳೆ. ಅವಳ ಗಂಡನ ಬಗ್ಗೆ ಜನಾಭಿಪ್ರಾಯ ಹೀಗಿದೆ: "ಗಂಡಸಿನ ಭೂತ ಎದ್ದೆದ್ದು ಕುಣಿಯುವುದಿಲ್ಲ. ವರ್ತಮಾನ ಅವನಿಗೆ ತಾಗುವುದಿಲ್ಲ. ಭವಿಷ್ಯತ್ತು ಅಣಕಿಸುವುದಿಲ್ಲ, ನಿಗೂಢವಾಗುವುದಿಲ್ಲ. ನಾಚಬೇಕಾದ್ದಿಲ್ಲ; ಉತ್ತರಿಸಬೇಕಾದ್ದಿಲ್ಲ; ಕ್ಷಮೆಯೂ ಬೇಕಿಲ್ಲ – ಏಕೆಂದರೆ ಅವನು ಏನು ಮಾಡಿದರೂ ತಪ್ಪಲ್ಲ".

ಜುಲೇಖ ಹೇಳುವುದು ಕುರಾನಿನ ಷರಿಯತ್ ಪ್ರಕಾರ "ಯುದ್ಧದ ಕಾಲದಲ್ಲಿ ಅನೇಕ ಗಂಡಸರು ಯುದ್ಧದಲ್ಲಿ ಸತ್ತಿದ್ದರೆ ಆಗ ಗಂಡಸು ಒಂದಕ್ಕಿಂತ ಹೆಚ್ಚು ಮದುವೆಯಾಗಬಹುದು. ಹೆಂಡತಿ ದೀರ್ಘಕಾಲದಿಂದ ವಾಸಿಯಾಗದ ಖಾಯಿಲೆಯಿಂದ ನರಳ್ತಾ ಇದ್ದರೆ ಅಥವಾ ಬಂಜೆಯಾದ್ರೆ ಇನ್ನೊಂದು ಮದ್ವೆಯಾಗಬಹುದು. ಅಥವಾ ಒಬ್ಳಿಂದ ಸಾಕಷ್ಟು ತೃಪ್ತಿ ಸಿಗದಿದ್ರೆ. ಅವನು ಇನ್ನೊಂದು ಮದುವೆಯಾದ್ರೂ ಇಬ್ಬರ ಜೊತೇಲೂ ಒಂಚೂರೂ ಕೂಡಾ ವ್ಯತ್ಯಾಸ ಬರದಂತೆ ಸಮಾನವಾಗಿ ನೋಡ್ಕೋಬೇಕು. ಜಮಾತ್‌ನವರು, ಮುತವಲ್ಲಿಗಳು ಕಾನೂನು ತಿಳ್ಕೊಂಡಿಲ್ಲ, ಕಾನೂನು ಜಾರಿಗೊಳಿಸೋ ಅಧಿಕಾರ ಇಲ್ಲ, ದೇಶದ ಕಾನೂನು ತಮಗೆ ಅನುಕೂಲವಾದದ್ದನ್ನು ಮಾತ್ರಾ ಒಪ್ಕೋತಾರೆ. ಹೆಣ್ಣು ಮಕ್ಕಳ ಮೇಲೆ ಬರೀ ಕಟ್ಟಳೆ ಮಾಡೋಕೆ ಬರುವ ವಿದ್ವಾಂಸರು ಅವರಿಗೆ ಇರೋ ಅವಕಾಶಗಳನ್ನು ಒತ್ತಿ ಹೇಳಲ್ಲ. ಹೆಣ್ಣುಮಕ್ಕಳಿಗೆ ವಿದ್ಯಾಭ್ಯಾಸ, ಗಂಡನ ಆಯ್ಕೆಯ ಹಕ್ಕು, ವರದಕ್ಷಿಣೆ ತೆಗೆದುಕೊಳ್ಳದೆ ಮೆಹರ್ ಕೊಟ್ಟು ಮದುವೆ, ತವರಿನವರು ಅವಳ ಹಕ್ಕಿನ ಆಸ್ತಿಯನ್ನು ಕೊಡುವುದು; ಸರಿಹೋಗದಿದ್ದಲ್ಲಿ ವಿಚ್ಛೇದನ ಕೊಡುವ ಹಕ್ಕು – ಇವೆಲ್ಲಾ ಹೆಣ್ಣಿಗಿದೆ. ಆದರೆ ತನ್ನ ದೇಹಸಿರಿಯ ಬಿನ್ನಾಣದ ಪ್ರದರ್ಶನ ಮಾತ್ರಾ ಮಾಡುವಂತಿಲ್ಲ". ಸಾಯುತ್ತಿರುವ ಮಗುವನ್ನು ಹಿಡಿದುಕೊಂಡು ಮಸೀದಿಯಲ್ಲಿ ನ್ಯಾಯಕ್ಕಾಗಿ ಕಾಯುತ್ತಾ ನಿಂತ ಅಶ್ರಫ್‌ಗೆ, ಯಾಕೂಬನ ಎಂಜಲು ತಿಂದು ಅವನ ಪರವಾಗಿ ನಿಂತ ಮುತಾವಲಿಯಿಂದ ಕಡೆಗೂ ನ್ಯಾಯ ಸಿಗುವುದಿಲ್ಲ. ಯಾಕೂಬ ಈ ಸಂದರ್ಭದಲ್ಲಿ ಮಸೀದಿಯ ಕಟ್ಟೆಯ ಮೇಲೆ ನಿಂತು ಜಗವೆಲ್ಲಾ ಕೇಳುವಂತೆ ಆಡುವ "ಕುಂತ್ಕೊಂಡು ವಂದಾ ಮಾಡೋ ನಿಂಗೇ ಇಷ್ಟು ಪೊಗರಿರಬೇಕಾದ್ರೆ ನಿಂತ್ಕಂಡು ವಂದಾ ಮಾಡೋ ನಂಗೆಷ್ಟು ಪೊಗರಿರ್ಬೇಕು" ಎನ್ನುವ ಮಾತು ಓದುಗನ ಹೃದಯವನ್ನೂ ಒಂದು ನಿಮಿಷ ನಿಲ್ಲಿಸಿಬಿಡುತ್ತದೆ. ಅಶ್ರಫ್ ಎಂತಹ ಮುಗ್ಧಳೆಂದರೆ ಈ ಮಾತಿಗೆ ಹೇಗೆ ಪ್ರತಿಕ್ರಿಯೆ ನೀಡ್ಬೇಕು ಅನ್ನೋದನ್ನು ಜುಲೇಖ ಹೇಳಿರ್‍ಲಿಲ್ಲ ಎಂದುಕೊಂಡು ಪೆಚ್ಚಾಗುತ್ತಾಳೆ. ಯಾಕೂಬನ ಒದೆತದ ಗಲಾಟೆಯಲ್ಲಿ ಮಗುವಿನೊಂದಿಗೆ ಅಶ್ರಫ್ ಕೆಳಗೆ ಬೀಳುತ್ತಾಳೆ. ಖಾಯಿಲೆಯ ಮಗು ಮುನ್ನಿ ಬಿದ್ದು ಅಸುನೀಗುತ್ತದೆ. ಮಸೀದಿಯ ಹೊರಗೋಡೆಯಿಂದ ಇಣುಕುತ್ತಿದ್ದ ಅಸಂಖ್ಯಾತ ಸ್ತ್ರೀಯರು ಆ ಕತ್ತಲೆಯನ್ನು ಬೇಧಿಸಿಕೊಂಡು ಒಳನುಗ್ಗಿ ಬಂದು

ಅಶ್ರಫ್‌ಳನ್ನೂ ಅವಳ ಮಕ್ಕಳನ್ನೂ ಕರೆದುಕೊಂಡು ಹೋಗುತ್ತಾರೆ. ಆ ಕ್ಷಣದಿಂದ ಎಲ್ಲಾ ಹೆಂಗಸರೂ ಯಾವುದೇ ಗೌರವವನ್ನು ತೋರದೆ ಮುತವಲ್ಲಿಯನ್ನು ಅಸಡ್ಡೆ ಮಾಡಿ ಗೊತ್ತಾಗುವಂತೆಯೇ ಹೀಯಾಳಿಸುತ್ತಾರೆ. ಆಮಿನ ಮುಂದೆ ಮಕ್ಕಳಾಗದಂತೆ ಆಪರೇಶನ್ ಮಾಡಿಸಿಕೊಳ್ಳಲು ತಾಯಿಯೊಂದಿಗೆ ಹೊರಡುತ್ತಾಳೆ. ಕಡೆಯಲ್ಲಿ ಅನ್ಯಾಯಕ್ಕೆ ಪ್ರತಿಭಟಿಸಲು ಇಡೀ ಸ್ತ್ರೀ ಸಮುದಾಯ ಒಂದಾಗಿ ನಿಲ್ಲುವ ಬಂಡಾಯವೇ ಈ ಕತೆಯ ಹೈಲೈಟ್.

4. ಹೃದಯದ ತೀರ್ಪು

ಯೂಸುಫ್ ಅಖಿಲಳ ಗಂಡ; ಮೆಹಬೂಬ್‌ಬೀಯ ಮಗ. ತನಗಾಗಿ ಎಷ್ಟೋ ಕಷ್ಟಪಟ್ಟಿದ್ದ ತಾಯಿಯೊಂದಿಗೆ ಮಗ ಪ್ರೀತಿಯಿಂದಿರುವುದನ್ನು ಅಖಿಲಳಿಗೆ ಸಹಿಸಲು ಸಾಧ್ಯವಿಲ್ಲದೆ ಮನೆಯನ್ನು ನರಕ ಮಾಡುತ್ತಾಳೆ. ಮನೆ ಇಬ್ಭಾಗವಾಗಿ ಅತ್ತೆ ಸೊಸೆ ಬೇರೆ ಬೇರೆ ಭಾಗಗಳಲ್ಲಿರುತ್ತಾರೆ. ಆದರೆ ಮಗ ಮಾತ್ರಾ ಇಬ್ಬರನ್ನೂ ಒಂದೇ ರೀತಿಯಲ್ಲಿ ಕಾಣುತ್ತಾನೆ. ಮೆಹಬೂಬ್ ಬೀ ಎಲ್ಲದಕ್ಕೂ ಹೊಂದಿಕೊಂಡರೂ ಅಖಿಲಳಿಗೆ ಮಾತ್ರಾ ಅರಗಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಕಲಹಗಳು ನಡೆದಾಗೆಲ್ಲಾ ಯೂಸುಫನ ತಾಳ್ಮೆಯಿಂದಾಗಿ ಅವು ಅಲ್ಲಿಗೇ ನಿಲ್ಲುತ್ತಿದ್ದರೂ ಒಮ್ಮೆ ವಿಪರೀತಕ್ಕಿಟ್ಟುಕೊಳ್ಳುತ್ತದೆ. ಅವನೂ ತಾಳ್ಮೆಯನ್ನು ಕಳೆದುಕೊಂಡು ತನ್ನಮ್ಮನಿಗೆ ವೈಭವದಿಂದ ಮರುಮದುವೆ ಮಾಡಿಸುತ್ತೇನೆಂದು ಶಪಥ ಮಾಡಿಬಿಡುತ್ತಾನೆ. ಅಖಿಲಳೂ ಪಂಥಾಹ್ವಾನವನ್ನು ನೀಡಿಯೇ ಬಿಡುತ್ತಾಳೆ. ಸವಾಲನ್ನು ಸ್ವೀಕರಿಸಿದಂದಿನಿಂದ ಅವನ ವರ್ತನೆಯೇ ಬದಲಾಗಿಹೋಗುತ್ತದೆ. ಅಮ್ಮನಿಗಾಗಿ ಗಂಡನ್ನು ಹುಡುಕತೊಡಗಿ ಕಡೆಗೂ ಅಬ್ದುಲ್ ಗಫಾರರನ್ನು ಫೈಸಲ್ ಮಾಡಿಯೇಬಿಡುತ್ತಾನೆ. ಎಲ್ಲಾ ವಿಷಯವನ್ನೂ ಎಷ್ಟೇ ಮುಗುಮ್ಮಾಗಿ ಮಾಡಿದರೂ ಊರಲ್ಲೆಲ್ಲಾ ಗುಲ್ಲಾಗಿಹೋಗಿ ಅತ್ತೆ, ಸೊಸೆಯ ಕಿವಿಗೂ ಬೀಳುತ್ತದೆ. ಇಬ್ಬರಿಗೂ ಒಬ್ಬರ ಮೇಲೆ ಮತ್ತೊಬ್ಬರಿಗೆ ಅನುಮಾನ. ಅಖಿಲ ಪಂಚಾತಿಕೆಗೆ ಸುತ್ತಮುತ್ತಲಿನವರನ್ನೆಲ್ಲಾ ಸೇರಿಸಿ ಎಲ್ಲರೆದುರು ತನ್ನದೇ ತಪ್ಪೆಂದು ಒಪ್ಪಿಕೊಂಡು ಇನ್ನು ಮುಂದೆ ತಾನು ತಿದ್ದಿಕೊಳ್ಳುವುದಾಗಿಯೂ ಭರವಸೆ ನೀಡಿದಾಗ ಎಲ್ಲರೂ ಯೂಸುಫ್‌ಗೆ ಬುದ್ಧಿವಾದ ಹೇಳತೊಡಗುತ್ತಾರೆ. ಅಸಹಾಯನಾದ ಯೂಸುಫನ ಸ್ಥಿತಿಯನ್ನು ಅರ್ಥಮಾಡಿಕೊಂಡ ಅವನಮ್ಮ ಮಗ ಮಾಡುತ್ತಿರುವುದು ಸರಿಯಾಗಿದೆ ಎಂದು ಅವನ ಪರವಾಗಿ ನಿಂತಾಗ ಬಂದವರೆಲ್ಲರೂ ಮಾತಿಲ್ಲದೆ ಏಳುತ್ತಾರೆ. ಯೂಸುಫ್ ಅವರೆಲ್ಲರಿಗೂ ಅಮ್ಮನ ಮದುವೆಗೆ ಆಮಂತ್ರಣ ನೀಡುತ್ತಾನೆ. "ನಿನ್ನ ಮಗನೇ ನಿನ್ನ ಮದುವೆ ಮಾಡುವ ಅದೃಷ್ಟ ನಿನ್ನದಾಗಲಿ" ಎಂದು ಅಖಿಲಳಿಗೆ ಹಾರೈಸಿದಾಗ ಅವಳು ಕಂಗೆಡುತ್ತಾಳೆ. ಇಸ್ಲಾಂನಲ್ಲಿ ವಿಧವಾವಿವಾಹಕ್ಕೆ ಮಾನ್ಯತೆಯಿದೆ. ಬಹಳ ಮುಂಚೆಯೇ ಗಂಡನನ್ನು ಕಳೆದುಕೊಂಡಿದ್ದರೂ ವಿವಾಹವಾಗದಿದ್ದ ಮೆಹಬೂಬ್ ಬೀ, ಮಗ, ಸೊಸೆಯ ಜಗಳದ ಕಾರಣಕ್ಕಾಗಿ ಅನಿವಾರ್ಯವಾಗಿ ಮದುವೆಯಾಗುವುದು ಕತೆಗೊಂದು ವ್ಯಂಗ್ಯದ ತಿರುವನ್ನಿತ್ತಿದೆ.

5. ಕೆಂಪು ಲುಂಗಿ

ಮುಸ್ಲಿಮರ ವಿಶಿಷ್ಟವಾದ ಹಾಗೂ ಬಹು ಮುಖ್ಯವಾದ ಆಚರಣೆಯಾದ ಸುನ್ನತೆ–ಇಬ್ರಾಹಿಂ ಅಥವಾ ಆಡುಭಾಷೆಯ ಖತ್ನಾದ ಸುತ್ತಲೂ ಹೆಣೆದ ಕತೆ 'ಕೆಂಪು ಲುಂಗಿ'. ಆಚರಣೆಯ ಸಂಪೂರ್ಣ ವಿವರಗಳನ್ನು ಲೇಖಕಿ ಈ ಕತೆಯಲ್ಲಿ ದಾಖಲಿಸಿದ್ದಾರೆ. ಕತೆ ಆರಂಭವಾಗುವುದು ಹೀಗೆ: ತನ್ನ ಆರು ಮಕ್ಕಳನ್ನೂ ಸೇರಿ ಮೈದುನಂದಿರ, ತಂಗಿಯರ ಮೂರರಿಂದ ಹನ್ನೆರಡು ವರ್ಷಗಳೊಳಗಿನ ಹದಿನೆಂಟು ಮಕ್ಕಳು ಬೇಸಿಗೆ ರಜೆಯಲ್ಲಿ ರಜಿಯಾ ಮನೆಯಲ್ಲಿ ಸೇರಿಕೊಂಡು ಹಗಲು ರಾತ್ರಿ ದಾಂಧಲೆ ನಡೆಸಿವೆ. ಮೊದಲೇ ಮಕ್ಕಳ ಗಲಾಟೆಯೆಂದರೆ ಆಗದ ರಜಿಯಾಗೆ ತಡೆಗಟ್ಟುವ ಉಪಾಯವಾಗಿ ಒಂದಷ್ಟು ಮಕ್ಕಳ ಖತ್ನಾ ಮಾಡಿಸಿ ಅವರನ್ನು ಬೇಸಿಗೆ ಮುಗಿಯುವ ತನಕ ಮಲಗಿಸಿಬಿಡಬೇಕು ಎಂದೆನ್ನಿಸಿ, ಅದನ್ನು ಕಾರ್ಯರೂಪಕ್ಕೆ ತರಲು ನಿಶ್ಚಯಿಸಿಬಿಡುತ್ತಾಳೆ. ಅದರಲ್ಲಿ ಎಂಟು ಹೆಣ್ಣು ಮಕ್ಕಳು ಬರುವುದಿಲ್ಲ; ಸಮವಯಸ್ಸಿನ ನಾಲ್ಕು ಗಂಡು ಮಕ್ಕಳಿಗೆ ಮಾಡುವಂತಿಲ್ಲ. ಇನ್ನಾರು ಮಕ್ಕಳಿಗೆ ಖತ್ನ ನಡೆಸುವ ಅವಳ ತೀರ್ಮಾನವನ್ನು ಗಂಡ ಲತೀಫ್ ಅಹಮದ್ ಕೂಡಾ ಒಪ್ಪಿಕೊಳ್ಳುತ್ತಾನೆ. ಅದಕ್ಕಾಗಿ ಗಜಗಟ್ಟಲೆ ಕೆಂಪು ಅಲ್ವಾನಿನ ಬಟ್ಟೆ ತರಿಸಿ ಸಾಕಷ್ಟು ಮಿಕ್ಕಾಗ, ಅವಳಲ್ಲಿ, ತಮ್ಮ ಮಕ್ಕಳೊಂದಿಗೆ ಒಂದಷ್ಟು ಬಡಮಕ್ಕಳಿಗೂ ಖತ್ನ ಮಾಡಿಸಬಹುದೆಂಬ ಯೋಜನೆ ಬರುತ್ತದೆ. ಆ ಪಟ್ಟಣದಲ್ಲಿದ್ದ ಐದು ಮಸೀದಿಗಳಲ್ಲೂ ಆ ಶುಕ್ರವಾರ "ಲತೀಫ್ ಅಹಮದ್ ಸಾಹೇಬರು ದೇವರ ಪ್ರೀತ್ಯರ್ಥವಾಗಿ ಮುಂದಿನ ಶುಕ್ರವಾರ ಮಧ್ಯಾಹ್ನ ನಮಾಜ್ ಮುಗಿದ

ನಂತರ ಸಾಮೂಹಿಕವಾಗಿ ಸುನ್ನತೆ – ಇಬ್ರಾಹಿಂ ಮಾಡಿಸಲು ಸಿದ್ಧತೆ ಮಾಡಿಕೊಂಡಿದ್ದಾರೆ. ಅಗತ್ಯವಿರುವವರು ತಮ್ಮ ಮಕ್ಕಳ ಹೆಸರನ್ನು ಮುಂಚಿತವಾಗಿಯೇ ನೋಂದಾಯಿಸಿಕೊಳ್ಳತಕ್ಕದ್ದು" ಎಂದು ಸಂದೇಶ ಬಿತ್ತರವಾಗುತ್ತದೆ. ಬಹಳಷ್ಟು ಬಡವರು ಹೆಸರು ಬರೆಸಿ ಹೋದರು. ರಜಿಯಾಳೂ ಎಲ್ಲರ ಸಲುವಾಗಿ ಲುಂಗಿಯನ್ನು ಹರಿದೇ ಹರಿದಳು. ತಮ್ಮ ಮಕ್ಕಳ ಲುಂಗಿಗೆ ಜರಿ ಕೆಲಸ; ಮಿಕ್ಕವಕ್ಕೆ ಸಾದಾ ಲುಂಗಿ. ಮೂಟೆಗಟ್ಟಲೆ ಗೋದಿ, ಕೊಬ್ಬರಿ ಗಿಟುಕುಗಳ ಚೀಲಗಳು ಬಂದು ತುಂಬಿಕೊಂಡವು. ಮನೆಮಕ್ಕಳಿಗೆ ಹಸುವಿನ ಬೆಣ್ಣೆ, ಬಾದಾಮಿ, ದ್ರಾಕ್ಷಿ, ಉತ್ತುತ್ತೆ ಎಲ್ಲವೂ ಬಂದವು. ಮುಂದೆ ಯಾವುದೇ ವೈಜ್ಞಾನಿಕ ವಿಧಾನಗಳಿಲ್ಲದೆ, ಕಚ್ಚಾ ರೀತಿಯಲ್ಲಿ ಖತ್ನಾ ಹೇಗೆ ನಡೆಯುತ್ತದೆಂಬ ವಿವರಗಳಿವೆ. 'ದೀನ್ ದೀನ್' ಎನ್ನುತ್ತಾ ಆರ್ತನಾದದೊಂದಿಗೆ ಖತ್ನಾ ಮಾಡಿಸಿಕೊಂಡಿದ್ದ ಮಕ್ಕಳಿಗೆ ಗಾಯದ ಮೇಲೆ ಜರಡಿಯಾಡಿಟ್ಟಿದ್ದ ಬೂದಿ ಉದುರಿಸಿದರೆ ಅಲ್ಲಿಗೆ ಅವರ ಇಲಾಜು ಮುಗಿಯಿತು. ಕೆಂಪು ಲುಂಗಿಯನ್ನು ಸುತ್ತಿಕೊಳ್ಳುತ್ತಾ ಪಕ್ಕದಲ್ಲಿ ಹಾಸಿದ್ದ ಜಮಖಾನೆಯ ಮೇಲೆ ಮಲಗಿ, ಒಂದಷ್ಟು ಕಾಲದ ವಿಶ್ರಾಂತಿಯ ನಂತರ ಎದ್ದು ಹೊರನಡೆದು ಬಾಗಿಲಲ್ಲೇ ಲತೀಫ್ ಸಾಹೇಬರು ಕೊಡುತ್ತಿದ್ದ ಗೋದಿ, ಕೊಬ್ಬರಿ, ಬೆಣ್ಣೆ, ಸಕ್ಕರೆ ಎಲ್ಲಾ ತುಂಬಿದ್ದ ಚೀಲಗಳನ್ನೆತ್ತಿಕೊಂಡು ಬಡಮಕ್ಕಳು ಅವರ ತಾಯಂದಿರು ಖುಷಿಯಾಗಿ ನಡೆದರು. ಬಡತನದ ತೀವ್ರತೆ ಹೇಗಿದೆಯೆಂದರೆ ಒಬ್ಬ ತಾಯಿ ಈಗಾಗಲೇ ಖತ್ನ ಆಗಿರುವ ಮಗನಿಗೂ ಪುನಃ ಮಾಡಿಸಲು ನಿಂತಿರುತ್ತಾಳೆ. ಇನ್ನೊಬ್ಬಾಕೆ ತನ್ನ ತಿಂಗಳ ಮಗುವನ್ನು ಖತ್ನಾಗಾಗಿ ತಂದಿರುತ್ತಾಳೆ.

ತಮ್ಮ ಮನೆಯ ಮಕ್ಕಳನ್ನೆಲ್ಲಾ ಖತ್ನಾಗಾಗಿ ಸಂಜೆ ಆರು ಗಂಟೆಗೆ ಡಾಕ್ಟರ ಬಳಿ ಕರೆದುಕೊಂಡು ಹೋಗುತ್ತಾರೆ. ಎಲ್ಲರಿಗೂ ಅರವಳಿಕೆಯನ್ನು ಕೊಟ್ಟ ಡಾಕ್ಟರು ಅತಿ ಎಚ್ಚರಿಕೆಯಿಂದ ಮಾಡಿ ಆಂಟಿಬಯೋಟಿಕ್ ಕೊಟ್ಟು ಕಳುಹಿಸಿದರೂ ರಜಿಯಾಳ ಮಗನಿಗೆ ಸೋಂಕಾಗಿ ನೋವಾಗಿದೆ. ಮನೆ ಮಕ್ಕಳಿಗೆಲ್ಲಾ ಚೆನ್ನಾಗಿ ಆರೈಕೆ ಮಾಡಿ, ಹಬ್ಬ ಮಾಡಿ ಮನೆಯಲ್ಲಿ ಸಂಭ್ರಮವನ್ನಾಚರಿಸುತ್ತಾರೆ. ಯಾವ ಆರೈಕೆಯೂ ಇಲ್ಲದ ಅಡುಗೆಯವಳ ಮಗ ಆರೀಫ ಐದನೆಯ ದಿನಕ್ಕೇ ಮರಹತ್ತಿ ಕುಣಿಯುತ್ತಿದ್ದಾನೆ. ರಜಿಯಾ "ಖಾರ್ ಕು ಖುದಾ ಕಾ ಯಾರ್, ಗರೀಬ್ ಕು ಪರ್ ವರ್ ದಿಗಾರ್ – (ಹಣವಂತರಿಗೆ ಜನರ ಸಹಾಯವಾದರೆ, ಬಡವರಿಗೆ ದೇವರ ನೆರವು)" ಎಂದುಕೊಳ್ಳುತ್ತಾ ಅವನಿಗೆ ತನ್ನ ಮಗನಿಗೆ ಉಡುಗೊರೆಯಾಗಿ ಬಂದಿದ್ದ ಒಂದು ಉಡುಪನ್ನು ಉಡುಗೊರೆಯಾಗಿ ನೀಡುತ್ತಾಳೆ. ವರ್ಗ ತಾರತಮ್ಯ ಕಂಡುಬಂದರೂ ಕತೆಯಲ್ಲಿ ಒಂದಷ್ಟು ಮಾನವೀಯತೆಯ ಸೆಲೆಯೂ ಇಣುಕುತ್ತದೆ.

6. ಎದೆಯ ದೀಪ

ಇದು ಪ್ರತಿಷ್ಠಿತ ಬೂಕರ್ ಪ್ರಶಸ್ತಿ ಪಡೆದುಕೊಂಡ ಸಂಕಲನದ ಶಿರೋನಾಮೆಯಿರುವ ಕತೆ. ಮೆಹರುನ್ ಐದು ಮಕ್ಕಳ ತಾಯಿ. ತವರಿನಲ್ಲಿ ಇಬ್ಬರು ಮದುವೆಯಾದ ಅಣ್ಣಂದಿರು, ಒಬ್ಬ ತಮ್ಮ, ಇಬ್ಬರು ತಂಗಿಯರಿದ್ದಾರೆ. ಗಂಡ ಇನಾಯತ್ ಒಬ್ಬ ನರ್ಸ್ ಹಿಂದೆ ಬಿದ್ದು ಸಂಸಾರವನ್ನು ಕಡೆಗಣಿಸಿದ್ದಾನೆಂಬ ಕಾರಣಕ್ಕಾಗಿ ತಲಾಕ್ ಕೊಡಬೇಕೆನ್ನುವ ಉದ್ದೇಶದಿಂದ ಮೆಹರುನ್ ತವರಿಗೆ ಬಂದರೆ, ಅವಳ ನಿರ್ಧಾರಕ್ಕೆ ಯಾರ ಬೆಂಬಲವೂ ಇಲ್ಲ. "ಗಂಡ್ಸು, ಕೊಚ್ಚೆ ತುಳಿದಿದಾನೆ; ನೀರಿರೋ ಕಡೆ ತೊಳ್ಕೊಂಡು ಬರ್ತಾನೆ. ಅವನಿಗ್ಯಾವ ಕಳಂಕಾನೂ ಇಲ್ಲ" ಎನ್ನುವ ವಾದ ಎಲ್ಲರದ್ದೂ. ಕಟ್ಟುನಿಟ್ಟಾದ ಸಂಪ್ರದಾಯಸ್ಥ ಕುಟುಂಬದಲ್ಲಿ ಹುಟ್ಟಿ ಎಲ್ಲವನ್ನೂ ನಿಷ್ಠೆಯಿಂದ ಪಾಲಿಸಿದ್ದಕ್ಕೆ ಅವಳಿಗೆ ದೊರೆತ ಪುರಸ್ಕಾರವಿದು. "ಯಾವ ಮನೆಗೆ ನಿನ್ನ ಡೋಲಿ (ವಧುವನ್ನು ಹೊತ್ತೊಯ್ಯುವ ಪಲ್ಲಕ್ಕಿ) ಹೋಯಿತೋ ಅದೇ ಮನೆಯಿಂದ ನಿನ್ನ ಡೋಲ (ಶವವಾಹಕ) ಹೊರಬರಬೇಕು", "ವಂಶದ ಮರ್ಯಾದೆ ಉಳಿಸುವ ಪ್ರಜ್ಞೆ ಇದ್ದಿದ್ದಲ್ಲಿ... ಬೆಂಕಿ ಹಚ್ಕೊಂಡು ಸಾಯ್ಬೇಕಿತ್ತು" ಎನ್ನುವುದು ಅವರೆಲ್ಲರ ಅಭಿಮತ. ಅವಳು ಹಾಗೆ ತವರಿಗೆ ಮರಳಿದರೆ, ಅದನ್ನೇ ಈ ಮನೆಯ ಸೊಸೆಯರೂ ಅನುಸರಿಸಿದರೆ ಗತಿಯೇನು ಎನ್ನುವುದೊಂದು ಭಯವಾದರೆ ಇನ್ನೂ ಮದುವೆಯಾಗದಿರುವ ಇಬ್ಬರು ಹೆಣ್ಣು ಮಕ್ಕಳ ಭವಿಷ್ಯವೇನು ಎನ್ನುವುದು ಇನ್ನೊಂದು ಚಿಂತೆ. ಮೂವರು ಅಣ್ಣತಮ್ಮಂದಿರೂ ಬಲವಂತದಿಂದ ಅವಳನ್ನು ವಾಪಸ್ಸು ಅವಳ ಮನೆಗೆ ಬಿಟ್ಟುಬರಲು ಹೊರಡುತ್ತಾರೆ. ಮೆಹರುನ್ನಳ ಹೆಣ್ತನಕ್ಕೇ ಸವಾಲೆಸೆದು ವಾರದಿಂದ ಮನೆಯ ಮುಖ ನೋಡಿರದಿದ್ದ ಗಂಡ, ಇವರೆಲ್ಲರೂ ಮನೆಗೆ ಬಂದಮೇಲೆ ಬರುತ್ತಾನೆ. ಎರಡೂ ಪಕ್ಷದವರೂ ಏನೂ ನಡೆದೇ ಇಲ್ಲವೆನ್ನುವಂತೆ ನಡೆದುಕೊಳ್ಳುತ್ತಾರೆ. ಹಿರಿಮಗಳು ಸಲ್ಮಾ

ಮೂಲಕ ಮೆಹರುನ್ನಳಿಗೆ ತಲಾಕಿನ ಎಚ್ಚರಿಕೆ ಕೊಟ್ಟ ಗಂಡ ಬಂದವರಿಗೆ ಔತಣದ ವ್ಯವಸ್ಥೆ ಮಾಡಿಸುತ್ತಾನೆ. ಅವರು ಹೊರಟ ಹಿಂದೆಯೇ ತಾನೂ ಹೊರಡುತ್ತಾನೆ. ಇಡೀ ದಿನ ಯೋಚಿಸಿದ ಮೆಹರುನ್ ಆ ರಾತ್ರಿ ಮೈಯಿಗೆ ಸೀಮೇಎಣ್ಣೆ ಸುರಿದುಕೊಂಡು ಸಾಯುವ ನಿರ್ಧಾರ ಮಾಡುತ್ತಾಳೆ. ಅಷ್ಟರವರೆಗೂ ಅಮ್ಮನನ್ನು ಕಾಯುತ್ತಿದ್ದ ಸಲ್ಮಾಗೆ ಆಗಷ್ಟೇ ಮಂಪರು ಬಂದಿರುತ್ತದೆ. ಕೈಗೂಸು ಜೋರಾಗಿ ಕಿರುಚಿ ಅಳತೊಡಗಿದಾಗ ಎಚ್ಚೆತ್ತ ಸಲ್ಮಾ ಇಡೀ ಮನೆಯನ್ನೆಲ್ಲಾ ಜಾಲಾಡಿ ಅಂಗಳಕ್ಕೆ ಬರುವಾಗ ಇನ್ನೇನು ಬೆಂಕಿ ಹಚ್ಚಿಕೊಳ್ಳುವುದರಲ್ಲಿದ್ದ ಅಮ್ಮನನ್ನು ಕಂಡು ಓಡಿಹೋಗಿ ಅವಳ ಕಾಲ ಬುಡದಲ್ಲಿ ಮಗುವನ್ನು ಮಲಗಿಸಿ "ಅಬ್ಬಾಗೋಸ್ಕರ ಸಾಯಲು ಸಿದ್ಧಳಾಗಿರುವ ನೀನು, ನಮಗಾಗಿ ಬದುಕಲು ಸಾಧ್ಯವಿಲ್ಲವೇ. ನಮಗೆ ನೀನು ಬೇಕು" ಎಂದು ತಬ್ಬಿಕೊಂಡಾಗ ಮೆಹರುನ್ ಮಿಕ್ಕೆಲ್ಲರಿಂದ ನಿರೀಕ್ಷಿಸುತ್ತಿದ್ದ ಸಾಂತ್ವನವನ್ನು ಮಗಳಿಂದ ಪಡೆದು ಆತ್ಮಹತ್ಯೆಯ ನಿರ್ಧಾರವನ್ನು ಕೈಬಿಡುತ್ತಾಳೆ. ಒಬ್ಬ ಹೆಣ್ಣಿನ ಬದುಕು – ಸಾವು, ನಿರ್ಧಾರಗಳು ಬೇರೆಯವರ ಅವಶ್ಯಕತೆಗಳಿಗನುವಾಗಿ ಹೊಂದಾಣಿಕೆ ಯಾಗುತ್ತಿರಬೇಕೇ?

7. ಹೈ ಹೀಲ್ಡ್ ಶೂ

ನಯಾಜ್ ಖಾನನ ಅಣ್ಣ ಮೆಹಬೂಬ್ ಖಾನ್ ಮತ್ತು ಅತ್ತಿಗೆ ನಸೀಮಾ ಸೌದಿಯಲ್ಲಿದ್ದು ಆಗಾಗ ಭಾರತಕ್ಕೆ ಬರುವವರು. ನಯಾಜ್, ಅಣ್ಣ ತಂದುಕೊಟ್ಟ ರ್‍ಯಾಡೋ ವಾಚಿಗಿಂತ ಅತ್ತಿಗೆ ಮನೆಯಲ್ಲೆಲ್ಲಾ ತೊಟ್ಟು ಓಡಾಡುತ್ತಿದ್ದ ಒಂದು ಸುಂದರ ಹೈಹೀಲ್ಡ್ ಷೂನ ಆಕರ್ಷಣೆಗೆ ಬೀಳುತ್ತಾನೆ. ಅದನ್ನು ಕದ್ದಾದರೂ ತನ್ನ ಹೆಂಡತಿ ಆರಿಫಾಗೆ ತೊಡಿಸಿಬಿಡಬೇಕೆಂಬ ಗೀಳಿಗೆ ಬಿದ್ದವನಿಗೆ ಆಡಲಾಗದೆ, ಅನುಭವಿಸಲಾಗದೆ ಷೂವನ್ನು ದಕ್ಕಿಸಿಕೊಳ್ಳಲು ಸಾಧ್ಯವಾಗದೆ ಹುಷಾರು ತಪ್ಪುತ್ತಾನೆ. ಅಣ್ಣ ಸವುದಿಯಲ್ಲಿದ್ದರಿಂದ ನಯಾಜ್ ಖಾನನಿಗೆ ಅಪ್ಪನ ಮಾಸ್ತರಿಕೆ ಮತ್ತು ಹಳೆಯ ಮನೆ ಎರಡೂ ಸಿಕ್ಕಿರುತ್ತದೆ ಮತ್ತು ಅಣ್ಣ ಅದರಲ್ಲಿ ಪಾಲನ್ನೂ ಕೇಳಿರುವುದಿಲ್ಲ. ಭಾರತಕ್ಕೆ ಬಂದಾಗೆಲ್ಲಾ ಆ ಹಳೆಯ ಮನೆಯಲ್ಲೇ ಖುಷಿಯಿಂದಿರುತ್ತಾನೆ.

ನಯಾಜ್ ಮನೆಯ ಮುಂದಿದ್ದ ಸುಂದರ ನೆನಪುಗಳ ಆಗರವಾಗಿದ್ದ ಮಾವಿನಮರವನ್ನು ಕಡಿಸಿ ಮಳಿಗೆಗಳನ್ನು ಕಟ್ಟಿಸುವುದರ ಜೊತೆಗೆ ಮನೆಯ ನವೀಕರಣವನ್ನೂ ಮಾಡುತ್ತಾನೆ. ವಿಷಯವನ್ನು ತನಗೆ ತಿಳಿಸದೆ ದೂರವಾಗಿಟ್ಟ ತಮ್ಮನ ವರ್ತನೆಯಿಂದ ಮೆಹಬೂಬ್ ಖಾನ್‌ಗೆ ಅಸಹನೆಯುಂಟಾಗುತ್ತದೆ. ಆದರೆ ಆರಿಫಾಳ ನಿಷ್ಕಲ್ಮಶ ವರ್ತನೆ ಅವನ ಮನವನ್ನು ಮೆದುಗೊಳಿಸಿ ಸೊರಗುತ್ತಿದ್ದ ಅವಳನ್ನು ವೈದ್ಯರಿಗೆ ತೋರಿಸಿ ಅಂತೆಯೇ ಹೊರಗಡೆ ಊಟ ಮಾಡಿ, ಸಂಬಂಧಗಳನ್ನು ಮತ್ತೆ ಸಹಜ ಸ್ಥಿತಿಗೆ ತರುವ ಯೋಚನೆ ಮಾಡುತ್ತಾನೆ. ಹಾಗೆಯೇ ಹೊರಗೆ ಹೋಗಿದ್ದಾಗ ನಯಾಜನಿಗೆ ಅವನು ಹಲವು ವರ್ಷಗಳಿಂದ ಹಂಬಲಿಸುತ್ತಿದ್ದ ಹೈಹೀಲ್ಡ್ ಶೂ ಕಣ್ಣಿಗೆ ಬೀಳುತ್ತದೆ. ತಕ್ಷಣವೇ ಅದನ್ನು ಕೊಂಡು ಬಲವಂತದಿಂದ ಹೆಂಡತಿಯ ಕಾಲಿಗೆ ಇರುಕಿಸಿಯೇ ಬಿಡುತ್ತಾನೆ. ಚೂಪು ತುದಿಯ ಅಟ್ಟೆಯ ಶೂ ಧರಿಸಿಕೊಂಡು ನಡೆಯಲು ಪರಿಪಾಟಲು ಪಡುತ್ತಿರುವ ತುಂಬು ಬಸುರಿ ಆರಿಫಾಳನ್ನು ಬಿಟ್ಟು ಎಲ್ಲರೂ ಮುಂದೆ ನಡೆದುಬಿಟ್ಟಿರುತ್ತಾರೆ. ಹೈಹೀಲ್ಡ್ ಶೂನಿಂದಾಗಿ ಅವಳ ಹೊಟ್ಟೆಯಲ್ಲಿನ ಮಗುವಿನ ಮೇಲೆ ಒತ್ತಡ ಬೀಳಲಾರಂಬಿಸಿ ಸರ್ವಪ್ರಯತ್ನ ನಡೆಸಿ ಕಡೆಗೂ ಶೂವನ್ನು ಕಿತ್ತೆಸೆಯುತ್ತಾಳೆ. ಅದು ಚೂರುಚೂರಾಗಿ ಬೀಳುತ್ತದೆ. ಶೋಕಿಯ ಕೃತ್ರಿಮ ಆಕರ್ಷಣೆಗಳು ನಯಾಜನಿಗಿದ್ದರೂ ಆರಿಫಾ ಸಹಜ ಜೀವನವನ್ನು ಬಯಸುವವಳು. ಆಕರ್ಷಣೆಗೆ, ಬಲವಂತಕ್ಕೆ ಒಳಗಾಗದೇ, ಎಲ್ಲರೂ ಬಿಟ್ಟುಹೋದರೂ ಧೈರ್ಯದಿಂದ ನಡೆದು ತನ್ನತನವನ್ನು ಕಳೆದುಕೊಳ್ಳದೆ ಸುತ್ತುವರಿದ ಪ್ರಲೋಭನೆಯಿಂದ ಹೊರಬಂದು ತನ್ನ ಮಗುವನ್ನು ಕಾಪಾಡಿಕೊಳ್ಳುತ್ತಾಳೆ.

8. ಒಮ್ಮೆ ಹೆಣ್ಣಾಗು ಪ್ರಭುವೇ

ಕಿಂಕಾಪಿನ ಬಟ್ಟೆಯಲ್ಲಿ ಸುತ್ತಿದ ಅಮೂಲ್ಯವಾದ ನಗದಂತೆ ಹೆಂಡತಿಯನ್ನು ಕರೆದುಕೊಂಡು ಹೋಗಿದ್ದವನು, ವಾರದಲ್ಲಿಯೇ ಐವತ್ತು ಸಾವಿರ ರೂಪಾಯಿಗಳನ್ನು ತವರಿಂದ ತರದಿದ್ದರೆ, 'ಇನ್ನು ತವರಿಂದ ಅವಳು ದೂರ' ಎನ್ನುವ ಆಜ್ಞೆ ಮಾಡಿದ. ದುಡ್ಡು ದೊರೆಯದೆ ತವರು ತೊರೆದೇ ಹೋಯಿತು. ಅವನ ಕಣ್ಣಿಗೆ ಅವಳೀಗ ಮಲಿನವಾದ ವಸ್ತ್ರದಲ್ಲಿ ಸುತ್ತಿದ ಗಿಲೀಟಿನ ಒಡವೆ.

ಅವನ ಪುರುಷಹಂಕಾರದಲ್ಲಿ ನರಳುವ ಅವಳಿಗೆ ಯಾರದ್ದೇ, ಯಾವುದೇ ರೀತಿಯ ಒತ್ತಾಸೆಯಿಲ್ಲ. ಜಗತ್ತೆಲ್ಲವೂ ಅವನ ಪರವೇ. ಸತ್ತ ಅಮ್ಮನನ್ನೂ ನೋಡಲು ಕಳಿಸದ ದುಷ್ಟ ಅವನು. "ಸಾಕುವವನು ನಾನು; ಹಡೆಯಲೇನು ಕಷ್ಟ ನಿನಗೆ" ಎನ್ನುವವನಿಗೆ ಅವಳೊಂದು ಭೋಗದ ವಸ್ತು; ಹಡೆಯುವ ಯಂತ್ರ ಅಷ್ಟೇ. ಬೇರೆ ಆಸರೆಯಿಲ್ಲದ ಅವಳು 'ಸೇವಕಿಯಾಗಾದರೂ ಸರಿ, ದುಡಿಸಿಕೊಂಡು ಅನ್ನ ನೀರು ನೆಲೆ ಕಾಣಿಸುತ್ತಿದ್ದ ದಣಿ (ಗಂಡ) ನನಗೆ ನಿಜವಾಗಿಯೂ ಮಹಾತ್ಮನೆನಿಸುತ್ತಿದ್ದ' ಅನ್ನುವಷ್ಟರಮಟ್ಟಿಗೆ ಕುಗ್ಗಿ ಹೋಗುತ್ತಾಳೆ. ಹೊಟ್ಟೆಯಲ್ಲಿ ಗಡ್ಡೆಯಾಗಿ ಆಸ್ಪತ್ರೆ ಸೇರಿದ್ದವಳನ್ನು ತನ್ನ ಎರಡನೆಯ ಮದುವೆಗಾಗಿ ಅವಳಮ್ಮ ಕೊಟ್ಟಿದ್ದ ಸರವನ್ನು ಕೇಳುವಷ್ಟು ಕ್ರೌರ್ಯವನ್ನು ತೋರುತ್ತಾನೆ. ಎರಡನೆಯ ಮದುವೆಯೇಕೆ ಎಂದು ಕೇಳಿದಾಗ ಅವಳ ಹೆಣ್ತನವನ್ನೇ ಅವಮಾನಿಸುತ್ತಾನೆ. 'ನನಗೆ ನೋವುಗಳನ್ನು ಭರಿಸುವ ಶಕ್ತಿಯನ್ನು ನೀನು ನೀಡಿದ್ದೆ. ಆದರೆ ನೋವುಗಳನ್ನು ನೀಡುವ ಇಷ್ಟೊಂದು ಕ್ರೌರ್ಯವನ್ನು ಅವನಿಗೆ ಕೊಡಬಾರದಿತ್ತು' ಎನ್ನುವ ಅವಳ ಮಾತುಗಳು ಹತಾಶೆಯ ಪರಮಾವಧಿಯೆನ್ನಿಸುತ್ತದೆ. ಆಸ್ಪತ್ರೆಯಿಂದಲೂ ಅವಳನ್ನು ಕಳಿಸಿದಾಗ ಮನೆಯ ಬಾಗಿಲು ಹಾಕಿರುತ್ತದೆ. ಮಕ್ಕಳೊಂದಿಗೆ ರಾತ್ರಿಯವರೆಗೆ ಕಾಯುತ್ತಾ ಅಲ್ಲೇ ಮುದುರಿಕೊಂಡಿದ್ದಾಗ ಅವಳ ಗಂಡ ಅವಳ ಕಡೆಗೆ ಕಣ್ಣೂ ಹಾಯಿಸದೆ 'ಕಿಂಕಾಪಿನ ಬಟ್ಟೆಯಲ್ಲಿ ಸುತ್ತಿದ ಅಮೂಲ್ಯವಾದ ನಗ'ದಂತೆ ಇನ್ನೊಬ್ಬ ಹೆಂಡತಿಯನ್ನು ಎತ್ತಿಕೊಂಡು ಮನೆಯೊಳಗೆ ಹೋಗುತ್ತಾನೆ.

ಗಂಡು, ಹೆಣ್ಣು ಇಬ್ಬರೂ ದೈವಸೃಷ್ಟಿಯೇ ಆದರೂ ಈ ತಾರತಮ್ಯವೇಕೆ? ಎಲ್ಲಾ ಕಷ್ಟಗಳು, ನೋವುಗಳು, ಹಿಂಸೆಗಳು ಬರಿಯ ಹೆಣ್ಣಿನ ಪಾಲೇಕೆ? ಸಮಸ್ತ ವೈಭವಕ್ಕೂ, ಸುಖಕ್ಕೂ ದೇವರು ಗಂಡೊಬ್ಬನನ್ನೇ ಹಕ್ಕುದಾರನನ್ನಾಗಿ ಮಾಡಿದ್ದಾನೆಯೇ?

9. ಮೆಲುದನಿಗಳು

Every Saint has a past and every Sinner has a future ಎನ್ನುವಂತೆ ಈ ಕತೆಯ ಅಬಿದನ ಪಾತ್ರ ಬರುತ್ತದೆ. ಕಥಾನಾಯಕಿಯ ಅಮ್ಮ ತನ್ನ ಊರಿನ ಉರಸ್‌ನ ಗಂಧದ ಹೊತ್ತಿಗೆ ಮನೆಯ ಪದ್ಧತಿಯಂತೆ ಅವಳಾದರೂ ಹೋಗಬೇಕು ಎಂದು ಕೋರಿಕೊಳ್ಳುವುದರಿಂದ ಆರಂಭವಾಗುತ್ತದೆ. ಶಾಹ್ ಮೀರ್ ಆಲಿಯವರ ದರ್ಗಾದ ಮುಜಾಫಿರ್ ಆಗಿರುವ ಅಬಿದ್ ಬಂದು ಕರೆಯುತ್ತಾನೆ ಎಂದಾಗ ಅವಳು ಬಾಲ್ಯದಲ್ಲಿನ ಮಾಲೇನಹಳ್ಳಿಯ ಅಜ್ಜಿಯ ಮನೆಯನ್ನು ನೆನಪಿಸಿಕೊಳ್ಳುತ್ತಾಳೆ. ಅವಳ ಬಾಲ್ಯದ ಸವಿನೆನಪುಗಳು ಹಲವು. ಪುಟ್ಟ ಹುಡುಗಿಯ ಎಲ್ಲಾ ನೋವು ನಲಿವುಗಳಿಗೆ ಅಜ್ಜಿಯದ್ದು ಸಕಾರಾತ್ಮಕ ಸ್ಪಂದನೆ. ಅಜ್ಜಿಯ ವಿಶಿಷ್ಟ ವ್ಯಕ್ತಿತ್ವ, ಜೀವ ಕಾರುಣ್ಯ, ಸ್ಪಂದನೆಗಳು, ಆಧ್ಯಾತ್ಮಿಕ ವ್ಯಕ್ತಿತ್ವ ಕತೆಯಲ್ಲಿ ವ್ಯಕ್ತವಾಗುತ್ತಾ, ಅವಳು ಓದುಗನನ್ನು ಆವರಿಸಿಕೊಳ್ಳುತ್ತಾಳೆ.

ಅದೇ ಊರಿನಲ್ಲಿದ್ದ ಪುಟ್ಟಮಕ್ಕಳ ಗುಂಪಿನ ಮುಖಂಡ ಅಬಿದ್ ತಂಟಲಮಾರಿ. ಗುಂಪು ಕಟ್ಟಿಕೊಂಡು ಗುಬ್ಬಚ್ಚಿಯನ್ನು ಕೊಂದು ಅದರೊಳಗಿರುವ ಮೊಟ್ಟೆಯನ್ನು ಹೊರತೆಗೆಯುವುದು, ನದಿಯಲ್ಲಿ ಈಜಾಡುತ್ತಾ ಚೇಷ್ಟೆ ಮಾಡುವುದು, ಕಥಾನಾಯಕಿಯ ಕೆನ್ನೆಗೆ ಮುತ್ತನ್ನಿಡುವುದು ಇಂತಹ ಉಡಾಳ ಈಗ ಆ ಊರಿನ ದರ್ಗಾದ ಮುಜಾವರ್ (ಪೀಠಾಧಿಕಾರಿ) ಎಂದಾಗ ನಾಯಕಿಗೆ ಅಚ್ಚರಿಯಾಗುತ್ತದೆ. ದರ್ಗಾದಲ್ಲಿ ನಡೆಯುವ ಉರುಸ್ ಸಂಬಂಧವಾಗಿ ನಾಯಕಿಯನ್ನು ಕಾಣಲು ಬರುತ್ತೇನೆಂದಾಗ ಅವಳಿಗೆ ಹಲವು ರೀತಿಯ ನಿರೀಕ್ಷೆಗಳಿರುತ್ತವೆ. ಆದರೆ ಅವನು ಬಾಲ್ಯದ್ದೇನೂ ನೆನಪೇ ಇಲ್ಲದಂತೆ, ತುಂಬಾ ಸಂಭಾವಿತನಂತೆ, ಅವಳ ಯಾವುದೇ ಮೌಲ್ಯಮಾಪನಕ್ಕೆ ಒಳಗಾಗದಂತೆ ಕುಳಿತು 'ಆಪಾ' ಎಂದರೆ ಸಹೋದರಿ ಎಂದು ಸಂಬೋಧಿಸಿ ಸಭ್ಯತೆಯಿಂದ ಉರುಹೊಡೆದಂತೆ ಮಾತನಾಡಿದಾಗ ನಾಯಕಿಯ ನಿರೀಕ್ಷೆಗಳೆಲ್ಲಾ ತಲೆಕೆಳಗಾಗಿ ಗೊಂದಲಕ್ಕೊಳಗಾಗುತ್ತಾಳೆ. ಕತೆ ಮೆಲುದನಿಗಳಲ್ಲಿ ಜೀವನದ ಸಂಕೀರ್ಣತೆಯನ್ನು ಅನಾವರಣ ಮಾಡಿಸುತ್ತಾ ಹೋಗುತ್ತದೆ.

10. ಸ್ವರ್ಗವೆಂದರೆ

ಶಮೀಮ್ ಬಾನು ದೊಡ್ಡಮನೆಯ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಿದವಳು. ಮೈದುನಂದಿರು ಮದುವೆಯಾದ ಮೇಲೆ ಜವಾಬ್ದಾರಿಗೆ ಹೆಗಲುಕೊಡದೇ, ಬೇರೆ ಸಂಸಾರ ಹೂಡಿದಾಗ ಭ್ರಮನಿರಸನವಾಗಿ ಅವಳ ವರ್ತನೆಯಲ್ಲಿಯೇ

ಬದಲಾವಣೆಯಾಗಿಹೋಯಿತು. ಹಾಗಾಗಿ, ಕಡೆಯ ಮೈದುನ ಆರಿಫ್‌ನ ಮದುವೆಯಾದಾಗ ತಾನಾಗಿಯೇ ಹೊಸ ದಂಪತಿಗಳನ್ನು ಮನೆಯಿಂದ ಹೊರಹಾಕಿದಳು. ಹೆಂಡತಿಯ ಎಲ್ಲಾ ವಿಪರೀತಗಳನ್ನೂ ತಾನೇಕೆ ಸಹಿಸಿಕೊಂಡು ಅವಳಿಗೆ ಬಾಗುತ್ತಿದ್ದೇನೆ ಎಂದು ಸಾದಕ್ ಮನವನ್ನು ತಡಕಿಕೊಂಡಾಗ ಅವನಿಗೆ ಕಂಡಿದ್ದು ಹನ್ನೊಂದು ವರ್ಷಕ್ಕೇ ನಾಗರಹಾವಿನ ಕಡಿತಕ್ಕೆ ಗಂಡನನ್ನು ಕಳೆದುಕೊಂಡು ವಿಧವೆಯಾಗಿ ಅಣ್ಣನ ಮನೆಯನ್ನು ಸೇರಿಕೊಂಡ, ತಮ್ಮೆಲ್ಲರನ್ನೂ ಎತ್ತಾಡಿಸಿದ, ಮನೆಯ ಎಲ್ಲ ಆಗುಹೋಗುಗಳಿಗೆ ಬೆನ್ನೆಲುಬಾಗಿದ್ದ, ದಿನಕ್ಕೈದು ಬಾರಿ ನಮಾಜು ಮಾಡಿಕೊಂಡು ತನ್ನ ಪಾಡಿಗೆ ತಾನಿರುತ್ತಿದ್ದ ವೃದ್ಧ ಸೋದರತ್ತೆ ಬೀದಾದಿ. ಅವಳನ್ನು ಶಮೀಮ್ ಬಾನು ಮನೆಯಿಂದಾಚೆಗೆ ಹಾಕದಿದ್ದರೆ ಸಾಕು ಎನ್ನುವುದೊಂದೇ ಅವನ ಇರಾದೆ.

ಒಂದು ದಿನ ಮಗ ಅಜೀಮ್ ಬೈಕ್ ಒರೆಸಲು ಒಂದು ಹಳೇ ಬಟ್ಟೆಯನ್ನು ತಂದುಕೊಡಲು ಕೇಳಿದಾಗ ತಂಗಿ ಸನಾ ಅರಿವಿಲ್ಲದೇ ಬೀದಾದಿಯ ಜಾನಮಾಜನ್ನೇ ತಂದುಕೊಟ್ಟು, ಅದು ಕೊಳೆಯಾಗಿ, ಅದನ್ನವನು ಬಾಗಿಲಲ್ಲೇ ಬಿಸಾಡಿಹೋದ. ಆ ಜಾನಮಾಜಿನ ಬಗ್ಗೆ ಅತೀವ ಅಂಟಿದ್ದ ಮುದುಕಿ ಎಷ್ಟು ಒಗೆದರೂ ಅದರ ಕಲೆ ಹೋಗದೆ ಅತಿ ದುಃಖಿತಳಾದಳು. ಶಮೀಮ್ ಬಾನು ಹೊಸ ರೇಷ್ಮೆ ಚಾಪೆಯನ್ನು ಕೊಟ್ಟರೂ ಒಪ್ಪಿಕೊಳ್ಳದೆ ಸಾದತ್‌ನೊಂದಿಗೆ ಅದರೊಂದಿಗಿನ ತನ್ನ ಮಧುರ ನೆನಪುಗಳನ್ನು ಹಂಚಿಕೊಳ್ಳುತ್ತಾ ಒಂದು ವಿಧದ ಭ್ರಮೆಗೆ ಒಳಗಾಗಿಹೋದಳು. ನಮಾಜನ್ನು ಮಾಡುವುದನ್ನೇ ಬಿಟ್ಟುಬಿಟ್ಟಳು. ಇತ್ತ ಶಮೀಮ್ ಬಾನು ಎಲ್ಲಿ ಅವಳ ಶಾಪ ಮಕ್ಕಳಿಗೆ ತಾಕುವುದೋ ಎನ್ನುವ ಭಯದಲ್ಲಿ, ಅಲ್ಲಿಯವರೆಗೆ ಬೇಕಾಬಿಟ್ಟಿಯಾಗಿದ್ದವಳು ತಾನು ನಮಾಜನ್ನು ಮಾಡಲು ಶುರುವಿಟ್ಟುಕೊಂಡು ಜೊತೆಗೇ ಬೇಕಾದಷ್ಟು ವ್ರತಗಳನ್ನು, ಆಚರಣೆಗಳನ್ನು ಮಾಡಲು ಶುರುವಿಟ್ಟುಕೊಂಡಳು. ಒಂದಷ್ಟು ದಿನ ಮೈದುನನ ಮನೆಗೂ ಕಳುಹಿಸಿ ಕರೆದುಕೊಂಡು ಬಂದದ್ದಾಯಿತು. ಒಂದು ದಿನ ಮಕ್ಕಳು ಕಬಾಬನ್ನು ತಿನ್ನುತ್ತಾ ಪೆಪ್ಸಿಯನ್ನು ಕುಡಿಯುತ್ತಾ ಈ ಸಮಸ್ಯೆಯನ್ನು ಹೇಗೆ ಬಗೆಹರಿಸಬೇಕೆಂದು ಯೋಚಿಸುತ್ತಿರುವಾಗ ಅಲ್ಲಿಗೆ ಬಂದ ಬೀದಾದಿಗೆ ಪೆಪ್ಸಿಯನ್ನು ಕೊಟ್ಟರು. ಕುಡಿಯುತ್ತಾ ಅದು ಏನೆಂದು ಕೇಳಿದಾಗ ಮಕ್ಕಳು ಅದು 'ಅಬ್ ಎ ಕೌಸರ್' "ದೇವಲೋಕದ ಪಾನೀಯ" ಎಂದುಬಿಟ್ಟರು. ಅಂದಿನಿಂದ ಆ ಮುದುಕಿ ತಾನು ಸ್ವರ್ಗಲೋಕದಲ್ಲಿಯೇ ಇರುವ ಭ್ರಮೆಯಲ್ಲಿ ಬರೀ ಪೆಪ್ಸಿಯೊಂದನ್ನೇ ಕುಡಿದುಕೊಂಡು ಎಲ್ಲಾ ಸಮಸ್ಯೆಗಳಿಂದಲೂ ದೂರವಾದವಳಂತೆ ನೆಮ್ಮದಿಯಾಗಿಬಿಟ್ಟಳು. ಸನಾಳೇ ಸ್ವರ್ಗದಲ್ಲಿರುವ ಹೂರ್ ಎಂದು ಭ್ರಮಿತಳಾಗಿಬಿಟ್ಟಳು. ಅವಳ ಕಲ್ಪನೆಯ ಸ್ವರ್ಗ ಅವಳ ಕೈಗೆಟುಕಿತ್ತು. ಬಾನುರವರ ಸೂಕ್ಷ್ಮ ಕತೆಗಾರಿಕೆಯ ಕೌಶಲ ಈ ಕತೆಯಲ್ಲೆದ್ದು ತೋರುತ್ತದೆ.

11. ಕಫನ್

ಶಾಜಿಯಾ ಮತ್ತು ಸುಭಾನ್ ಹಜ್‌ಗೆ ಹೋಗುವ ಮುನ್ನ ಏರ್ಪಡಿಸಿದ ಔತಣಕೂಟಕ್ಕೆ ಯಾವುದೇ ಆಹ್ವಾನವನ್ನು ಬಯಸದೇ ಮತ್ತು ಕೋರದೇ, ಅಹಂಕಾರದಿಂದ ಬೀಗದೇ, ಮನಸ್ಸನ್ನು ಕೆಡಿಸಿಕೊಂಡು ಆರೋಪಗಳನ್ನು ಹೊರಿಸದೇ ಅಲ್ಲಿಗೆ ಬಂದವಳು ಯಾಸೀನ್ ಬುವಾ. ಮದುವೆಯಾದ ಮೂರು ವರ್ಷಗಳಲ್ಲೇ ಎರಡು ಮಕ್ಕಳನ್ನು ಪಡೆದು ವಿಧವೆಯಾದ ಯಾಸೀನ್, ಯಾವುದೇ ಇದ್ದತನ್ನು ಪಾಲಿಸದೆ, ನಮಾಜನ್ನು ಮಾಡದೇ ಇದ್ದರೂ ಅವರಿವರ ಮನೆಗಳಲ್ಲಿ ಎಲ್ಲ ರೀತಿಯ ಕೆಲಸಗಳನ್ನೂ ಮಾಡಿ ಸಂಪಾದಿಸಿ ಕಷ್ಟದಲ್ಲಿ ಮಕ್ಕಳನ್ನು ಬೆಳೆಸಿ ಮಗಳ ಮದುವೆ ಮಾಡಿದವಳು. ಮಗನ ಆಟೋರಿಕ್ಷಾದ ದುಡಿಮೆ ಮತ್ತು ತನ್ನ ದುಡಿಮೆಯಿಂದ ಒಂದಷ್ಟನ್ನು ಮಗನ ಮದುವೆಗೆಂದೂ ಉಳಿಸಿದವಳು. ಅದರಲ್ಲಿ ಒಂದು ಸಣ್ಣ ಮೊತ್ತವನ್ನು ಹಿಡಿದುಕೊಂಡು ಶಾಜಿಯಾಳ ಮನೆಯ ಸಮಾರಂಭಕ್ಕೆ ಬಂದ ಯಾಸೀನ್ ಇಡೀ ದಿನ ಬಂದು ಹೋದವರ ಎಂಜಲು ತಟ್ಟೆಗಳನ್ನು, ಅಡುಗೆಯ ಪಾತ್ರೆಗಳನ್ನು ತೊಳೆದುತೊಳೆದು ಹಣ್ಣಾಗಿ, ರಾತ್ರಿ ಹನ್ನೊಂದು ಗಂಟೆಯಲ್ಲಿ ಕಡೆಗೂ ಶಾಹೀನ್‌ಳನ್ನು ಭೇಟಿಯಾಗಿ "ನನ್ನವ್ವ ಇದರಲ್ಲಿ ಆರು ಸಾವಿರ ರೂಪಾಯಿಗಳಿವೆ ನೀನು ಹಜ್‌ಗೆ ಹೋಗುತ್ತಿದ್ದೀಯ ಅಲ್ಲಿಂದ ನನಗೆ ಒಂದು ಕಫನನ್ನು ಪುಣ್ಯಜಲವಾದ ಅಬೇ ಝುಮ್ ಝುಮ್‌ನಲ್ಲಿ ಅದ್ದಿ ತೆಗೆದುಕೊಂಡು ಬಾರವ್ವಾ. ಆ ಕಫನ್‌ನ ಪುಣ್ಯದಿಂದಲಾದರೂ ನಾನು ಸ್ವರ್ಗಕ್ಕೆ ಹೋದೇನು" ಎಂದು ಹೇಳಿದ್ದಕ್ಕೆ ಶಾಹೀನ್ ಕೂಡಾ ಇದ್ಯಾವ ಮಹಾ ದೊಡ್ಡ ವಿಷಯ ಎಂದು ಒಪ್ಪಿಕೊಂಡಳು. 'ನೋಟುಗಳು ಯಾಸೀನ್ ಬುವಾಳ ಕೈಯಿಂದ ಅವಳ ಕೈಗೆ ಬಂದಾಗಲೇ ಅವಳಿಗೆ ಅರ್ಥವಾಗಿದ್ದು ಬಡವರ ಕಿಸೆಯ ಹಣವೂ ಕೂಡಾ ಅವರಂತೆಯೇ ಎಷ್ಟೊಂದು ಮುರಿದು ಛಿದ್ರವಾಗಿ ಸುಕ್ಕಾಗಿ ಮಲಿನವಾಗಿ ತನ್ನ ಸ್ವರೂಪವನ್ನೇ

ಕಳೆದುಕೊಂಡಿರುತ್ತದೆ' ಎಂದು ಕತೆಗಾರ್ತಿ ಹೇಳುವಾಗಿನ ವ್ಯಂಗ್ಯ ಓದುಗನ ಮನನಾಟುತ್ತದೆ. ಹಜ್‌ಗೆ ಹೋದ ಶಾಹೀನ್ ಸಾಕಷ್ಟು ವಸ್ತುಗಳನ್ನು ಖರೀದಿ ಮಾಡಿದರೂ ಅಸಡ್ಡೆಯ ಕಾರಣದಿಂದ ಕಫನ್‌ನ್ನು ಮಾತ್ರಾ ಖರೀದಿಸಲು ಸಾಧ್ಯವಾಗಲಿಲ್ಲ. ವಾಪಸ್ಸು ಬಂದ ಮೇಲೆ ಎಲ್ಲರಿಗೂ ಸಾಕಷ್ಟು ಉಡುಗೊರೆಗಳನ್ನು ಕೊಟ್ಟ ಮೇಲೆ ಬಂದ ಯಾಸೀನ್‌ಗೆ ಒಂದು ಜಾನಮಾಜ್ ಮತ್ತು ಜಪಸರವನ್ನು ಕೊಟ್ಟಾಗ ಅವಳದನ್ನು ತಿರಸ್ಕರಿಸಿ ತನಗೆ ತಾನು ಕೇಳಿದ್ದ ಕಫನ್ ಮಾತ್ರವೇ ಬೇಕೆಂದು ಹಟ ಹಿಡಿದಳು. ಕೋಪಗೊಂಡ ಶಾಹೀನ್ "ನೀನು ಕೊಟ್ಟ ದುಡ್ಡಿನ ಹತ್ತರಷ್ಟನ್ನು ವಾಪಸ್ಸು ಬಿಸಾಕ್ತೀನಿ" ಎಂದು ದುಡ್ಡು ತರುವುದರೊಳಗೆ ಅವಳು ಹೊರಟುಹೋಗಿದ್ದಳು.

ಈಗ ಅವಳ ಸಾವಿನ ಸುದ್ದಿ ಬಂದಿದೆ. ಮಗ ಅಲ್ತಾಫ್ ಕಫನ್ ಕೇಳಿಕೊಂಡು ಬಂದಿದ್ದಾನೆ. ಶಾಹೀನ್‌ಳನ್ನು ಪಾಪಪ್ರಜ್ಞೆ ಮುತ್ತಿಕೊಂಡಿದೆ. ಆ ಬಡವಿ ಅಂತಿಮದಿನದಂದು ತನ್ನ ಸೆರಗನ್ನು ಹಿಡಿದು ಅಲ್ಲಾಹನ ಸಮ್ಮುಖದಲ್ಲಿ ನ್ಯಾಯ ಬೇಡಿದಲ್ಲಿ ತನ್ನ ಇಡೀ ಜೀವಮಾನದ ಪುಣ್ಯವನ್ನೆಲ್ಲಾ ಧಾರೆಯೆರೆದರೂ ಕೂಡಾ ಅವಳೆದುರಿಗೆ ತಾನು ತಪ್ಪಿತಸ್ಥಳೇ ಆಗುವುದೆಂದು ಅವಳು ಗಾಭರಿಗೊಂಡಿದ್ದಾಳೆ. ಬುವಾಗಿಂತಲೂ ಬಡವೆ ತಾನೇ, ಆಕೆಗಿಂತಲೂ ನತದೃಷ್ಟೆ ತಾನೇ ಎಂಬುದು ಅವಳೆದುರಿಗೆ ಸ್ಪಷ್ಟವಾಗತೊಡಗಿದೆ. ಹತಾಶಳಾಗಿ ಗುರುತು ಪರಿಚಯದವರನ್ನೆಲ್ಲಾ ಅವರಲ್ಲಿ ಝುಮ್‌ಝುಮ್‌ನಲ್ಲಿ ನೆನೆಸಿದ ಕಫನ್‌ಗಾಗಿ ಬೇಡುತ್ತಾಳೆ. ಯಾರಿಂದಲೂ ಸಕಾರಾತ್ಮಕ ಉತ್ತರವಿಲ್ಲ. ಇಲ್ಲಿಯೇ ಒಂದು ಕಫನ್ ತಂದು ಅದನ್ನು ಮನೆಯಲ್ಲಿರುವ ಝುಮ್‌ಝುಮ್ ನೀರಿನಲ್ಲಿ ನೆನಸಿಕೊಟ್ಟರೆ ಎಂದುಕೊಂಡರೆ ಅದು ಮೆಕ್ಕಾದ ಕಫನ್ ಆಗುವುದಿಲ್ಲ ಎನ್ನುವ ಸತ್ಯ ತನಗೇ ಗೊತ್ತಿದೆ.

ಮಗ ಫರ್ಮಾನ್ ಅಲ್ತಾಫನೊಂದಿಗೆ ಹೋಗಿ ಯಾಸೀನ್ ಬುವಾಳ ಸಂಸ್ಕಾರಕ್ಕೆ ಬೇಕಾದ ಎಲ್ಲ ಸಿದ್ಧತೆಗಳನ್ನೂ ಮಾಡಿಕೊಟ್ಟು ಮನೆಗೆ ಬಂದು ತಾಯಿಯನ್ನು ಸಂತವಿಸಿದರೂ ಅವಳ ಪಶ್ಚಾತ್ತಾಪಕ್ಕೆ ಬಿಡುಗಡೆಯಿಲ್ಲದೆ ಅವಳಿಗೆ ಅದು "ಯಾಸೀನ್ ಬುವಾಳ ಅಂತ್ಯಕ್ರಿಯೆಯಲ್ಲ ತನ್ನದೇ" ಎನ್ನಿಸಿಬಿಡುತ್ತದೆ. ಕೆಲವು ಯಃಕಶ್ಚಿತ್ ಎನ್ನುವ ವಿಷಯಗಳು ಜೀವನದಲ್ಲಿ ಪರೀಕ್ಷೆಗಳನ್ನೊಡ್ಡಿ ಅಂತರಂಗದ ವಿಮರ್ಶೆಗೆ ಹೇಗೆ ಕಾರಣವಾಗುತ್ತವೆ ಎನ್ನುವುದನ್ನು ಕತೆಗಾರ್ತಿ ಸೂಕ್ಷ್ಮ ಕುಸುರಿಯಂತೆ ಕತೆಯಲ್ಲಿ ಹೆಣೆದಿದ್ದಾರೆ. ಕೆಟ್ಟವಳಲ್ಲದಿದ್ದರೂ ಬಡವರ ಬಗ್ಗೆ ಇರುವ ಅವಜ್ಞೆ, ಧೋರಣೆ; ಬಡವಳಾದರೂ ದುಡಿಯುವ ಯಾಸೀನ್‌ಗಿರುವ ಸ್ವಾಭಿಮಾನ ಕತೆಯೊಂದಿಗೆ ಸಹಜವಾಗಿ ಬೆರೆಯುತ್ತಾ ಹೋಗುತ್ತದೆ.

12. ಅರಬಿ ಮೇಷ್ಟ್ರು

ಕೆಲವು ವಿಷಯಗಳು ಸರಳವಾಗಿ ಕಂಡುಬಂದರೂ ಅಷ್ಟು ಸರಳವಾಗಿರುವುದಿಲ್ಲ ಮತ್ತು ಆ ವಿಷಯದ ಸಂಪೂರ್ಣ ಜವಾಬುದಾರಿಯು ವಿನಾಕಾರಣ ನಮಗೇ ಅಮರಿಕೊಳ್ಳುತ್ತದೆಂಬ ಭೀತಿ ಇದ್ದಾಗಲಂತೂ ಮನುಷ್ಯರ ನಡವಳಿಕೆಗಳು ವಿಚಿತ್ರ ವಾಗಿಬಿಡುತ್ತದೆ ಮತ್ತು ಯಾವ ವಿವರಣೆಗೂ ನಿಲುಕುವುದಿಲ್ಲ ಎಂದುಕೊಳ್ಳುತ್ತಾಳೆ ಕಥಾ ನಾಯಕಿ, ಕತೆಯ ಆರಂಭದಲ್ಲಿ...
ಹೆಣ್ಣುಮಕ್ಕಳ ಪಾಲನೆ ಪೋಷಣೆಯೊಂದಿಗೆ ಓದು ಬರಹ ಮತ್ತು ನಡವಳಿಕೆ, ಧಾರ್ಮಿಕ ಶಿಕ್ಷಣದ ಹೊಣೆಗಾರಿಕೆಯೂ ತಾಯಿಯದೇ ಎನ್ನುವುದು ಅಲಿಖಿತ ನಿಯಮ. ಕಥಾನಾಯಕಿ ತನ್ನ ಹರಯದ ಹೆಣ್ಣುಮಕ್ಕಳಿಗೆ ಕುರಾನಿನ ಶಿಕ್ಷಣವನ್ನು ಕೊಡಿಸಬೇಕಿದೆ. ತಮ್ಮ ಇಮಾಮ್ ಹಜರತ್ ಎನ್ನುವ ಉತ್ತರಾಂಚಲದ ತರುಣ, ಅಲ್ಲಿನ ಮದ್ರಸಾದಲ್ಲಿ ಎಳೆವಯಸ್ಸಿನಲ್ಲಿಯೇ ಕುರಾನನ್ನು ಕಂಠಪಾಟ ಮಾಡಿ ಹಾಫಿಜ್ ಎ ಕುರಾನ್ ಪದವಿಯನ್ನು ಪಡೆದುಕೊಂಡವನನ್ನು ಅರಬಿ ಮೇಷ್ಟ್ರಾಗಿ ಗೊತ್ತುಮಾಡಿಕೊಡುತ್ತಾನೆ. ಅವನೆಂತಹ ಧರ್ಮಭೀರುವೆಂದರೆ ಗಂಡಸರು ಹೆಣ್ಣುಮಕ್ಕಳ ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಾ ಮಾತನಾಡಬಾರದು ಎನ್ನುವ ಪುರುಷರು ಅನುಸರಿಸಬೇಕಾಗಿರುವ ಪರ್ದಾವನ್ನು ಚಾಚೂ ತಪ್ಪದೆ ಪಾಲಿಸುವವನು.

ಹೆಣ್ಣುಮಕ್ಕಳ ತಾಯಿಯಾದ ಕಥಾನಾಯಕಿಗೆ ಸಹಜವಾಗಿಯೇ ಆತಂಕವಿರುತ್ತದೆ. ವಕೀಲೆಯಾದ ಅವಳು ತನ್ನ ಬಿಡುವಿಲ್ಲದ ಕೆಲಸ ಕಾರ್ಯಗಳ ನಡುವೆಯೂ ಇದರೆಡೆಗೆ ಆಗೀಗ ಗಮನ ಹರಿಸುತ್ತಿರುತ್ತಾಳೆ. ಮಕ್ಕಳೂ ಚೆನ್ನಾಗಿ ಕಲಿತು ಪೈಗಂಬರರ ದಿನಾಚರಣೆಯ ಕಾರ್ಯಕ್ರಮದಲ್ಲಿ ಅವರ ಸಾಹಸಗಾಥೆಯ ಗೀತೆಯನ್ನು ಹಾಡಿ ಅಮ್ಮನನ್ನು ಚಕಿತಗೊಳಿಸುತ್ತಾರೆ. ಅವಳು

ಸಮಾಧಾನಪಟ್ಟುಕೊಳ್ಳುತ್ತಿರುವಾಗಲೇ ಒಂದು ಸಂಜೆ ಅವಳು ಆರಾಮಿಲ್ಲದೆ ಬೇಗ ಮನೆಗೆ ಬಂದು ಮಲಗಿದ್ದು, ಸಂಜೆ ಯಾವಾಗಲೋ ಎದ್ದಾಗ ಅಡುಗೆ ಮನೆಯಿಂದ ಕಲರವ ಕೇಳಿಬರುತ್ತಿರುತ್ತದೆ. ಎದ್ದೋಡಿ ಬಂದು ನೋಡುವಾಗ ಅಡುಗೆಮನೆಯಲ್ಲಿ ಇಬ್ಬರು ಮಕ್ಕಳೂ ಒಲೆಯ ಮುಂದೆ ಕುಳಿತಿದ್ದಾರೆ; ಎದುರಲ್ಲಿ ಒಂದು ರಾಶಿ ಗೋಬಿಯ ತುಂಡುಗಳು; ಕಲಸಿದ ಹಿಟ್ಟು; ಒಲೆಯ ಮೇಲೆ ಕಾಯುತ್ತಿರುವ ಎಣ್ಣೆ, ಮೂಲೆಯ ಸ್ಟೂಲಿನ ಮೇಲೆ ವಿರಾಜಮಾನನಾಗಿರುವ ಅರಬಿ ಮಾಸ್ತರು. ಅವಳನ್ನು ಕಂಡಕೂಡಲೇ ಹೆದರಿ ಅಲ್ಲಿಂದ ಎದ್ದೋಡಿದ ಮಾಸ್ತರು ಮತ್ತೆ ಮನೆಯ ಕಡೆ ಸುಳಿಯುವ ಧೈರ್ಯ ಮಾಡುವುದಿಲ್ಲ. ಅವನಿಗೆ ತೀರದ ಗೋಬಿ ಮಂಚೂರಿಯ ಆಸೆ. ದಿನವೂ ದುಡ್ಡು ಕೊಟ್ಟು ತಿಂದರೂ ಅವನ ಆಸೆ ತೀರುವಷ್ಟು ತಿನ್ನಲಾಗುತ್ತಿಲ್ಲ. ಹಾಗಾಗಿ ಈ ಮನೆಯ ಅಡುಗೆಯವಳ ರೆಸಿಪಿಯೊಂದಿಗೆ ಇವರ ಮನೆಯಲ್ಲೇ ಬೇಕಾದಷ್ಟನ್ನು ಮಾಡಿ ತಿಂದು ತೃಪ್ತಿಗೊಳ್ಳುವ ಸನ್ನಾಹ ಅವನದ್ದು. ಹಾಳಾಗಿ ಹೋಗಲಿ, ಇನ್ನೇನೂ ಎಡವಟ್ಟಾಗಲಿಲ್ಲವಲ್ಲ ಎಂದು ಅವಳದನ್ನು ಅಲ್ಲಿಗೆ ಬಿಟ್ಟರೂ, ಅವನ ಬಗೆಗಿನ ಸುದ್ದಿಗಳು ಅವಳನ್ನು ಬಿಡಲಿಲ್ಲ. ಅವನೂ 'ಈಕೆಯ ಮನೆಯಲ್ಲಿ ಪಾಠ ಹೇಳಿಕೊಡುತ್ತಿದ್ದೆ' ಎಂದು ಎಲ್ಲೆಡೆಯೂ ಹೇಳಿಕೊಳ್ಳುವುದನ್ನು ಬಿಡಲಿಲ್ಲ. ಅಜೀಮ್ ಮಸೀದಿಯಲ್ಲಿ ಮೌಲವಿಯಾಗಿದ್ದ ಅವನಿಗೆ ಈಕೆಯ ಗುರುತು ಪರಿಚಯದವರ ಹೆಣ್ಣುಮಕ್ಕಳೊಂದಿಗೆ ಮದುವೆಯ ಪ್ರಸ್ತಾಪ ಬರುತ್ತಿರುತ್ತದೆ. ಆದರೆ ಎಲ್ಲ ಕಡೆಯೂ ಇವನು ಹೆಣ್ಣಿಗಿಂತಲೂ ಗೋಬಿಮಂಚೂರಿಯ ಬಗ್ಗೆಯೇ ಆಸಕ್ತಿಯಿಂದ ಮಾತನಾಡುವುದು, ಹುಡುಗಿಯನ್ನೂ ದಾರಿಯಲ್ಲಿ ನಿಲ್ಲಿಸಿಕೊಂಡು 'ಗೋಬಿ ಮಂಚೂರಿ ಮಾಡಲು ಬರತ್ತಾ?' ಎಂದು ಕೇಳುವುದು ಮಾಡುತ್ತಾ ನಗೆಪಾಟಲಿಗೆ ಈಡಾಗುತ್ತಿದ್ದ ವಿಷಯಗಳು ಇವಳ ಕಿವಿಗೆ ಬೀಳುತ್ತಲೇ ಇರುತ್ತವೆ.

ಕಡೆಗೆ ಅಂತೂ ಅವನ ಮದುವೆಯಾಗುತ್ತದೆ. ಇವಳೂ ನಿರಾಳವಾಗುತ್ತಾಳೆ. ಆದರೆ ಕೆಲವೇ ದಿನಗಳಲ್ಲಿ ಇವಳ ಆಫೀಸಿಗೆ ಆಗಮಿಸಿದ ಹೆಣ್ಣುಮಗಳೊಬ್ಬಳ ದೌರ್ಜನ್ಯದ ಪ್ರಕರಣ – ಹೆಣ್ಣೇ ಪೋಲೀಸ್‌ಗೆ ದೂರು ಕೊಡಲು ಮುಂದಾಗಿದ್ದು, ಮತ್ತೆ ಅದು ಹಜರತ್‌ನ ಗೋಬಿಮಂಚೂರಿಯ ಮುಂದುವರಿದ ಭಾಗವಾಗಿರುತ್ತದೆ. ಗೋಬಿ ಮಂಚೂರಿ ಮಾಡದಿದ್ದಕ್ಕೆ ಅವಳಿಗೆ ಹಿಂಸೆ ಮಾಡಿರುತ್ತಾನೆ.

ಈಗ ಕಥಾನಾಯಕಿಗೆ ಇದು ಕ್ರಿಮಿನಲ್ ಅಪರಾಧವೇ ಆದರೂ ಹೇಗಾದರೂ ಹಜರತ್‌ನನ್ನು ಈ ಗೋಬಿ ಮಂಚೂರಿಯ ಹುಚ್ಚಿನಿಂದ ಬಿಡಿಸಿ ಅವನ ಸಂಸಾರವನ್ನು ನೇರಗೊಳಿಸಬೇಕೆಂದೆನ್ನಿಸುತ್ತದೆ. ಫೋನಿನಲ್ಲಿ ಗೋಬಿ ಮಂಚೂರಿಯ ರೆಸಿಪಿಯನ್ನು ಹುಡುಕುತ್ತಾ ತಮ್ಮನಿಗೆ ಬರಹೇಳುತ್ತಾಳೆ. ಕೆಲವು ಸಣ್ಣ ಪುಟ್ಟ ಆಸೆಗಳು ಎನ್ನಿಸಿದವು ಅಗಾಧವಾಗಿ ತಿರುಗುತ್ತಾ ಜೀವನವನ್ನೇ ಆಟವಾಡಿಸಿಬಿಡುವ ವ್ಯಂಗ್ಯ ಕತೆಯಲ್ಲಿ ನವಿರಾದ ಹಾಸ್ಯದಿಂದ ನಿರೂಪಿತವಾಗಿದೆ.

***

ಎಲ್ಲಾ ಕತೆಗಳನ್ನು ಓದಿದ ನಂತರ ಹಿಂದೂ ಮತ್ತು ಇಸ್ಲಾಂ ಧರ್ಮದ ಕೆಲವು ಒಂದೇರೀತಿಯ ಆಚರಣೆಗಳು ನನ್ನ ಗಮನಕ್ಕೆ ಬಂದವು. ಜನನ ಮತ್ತು ಮರಣದ ನಂತರ ಆಚರಿಸುವ ಕೆಲವು ಕ್ರಿಯಾಕರ್ಮಗಳು, ನಿರ್ದಿಷ್ಟ ಉಪವಾಸಗಳ ಆಚರಣೆ, ಹಿಂದೂಗಳು ಮಹಾಲಯದಲ್ಲಿ, ಮುಸ್ಲಿಮರು ರಂಜಾನಿನಲ್ಲಿ ಸತ್ತವರಿಗಾಗಿ ನಡೆಸುವ ಕ್ರಿಯೆಗಳು, ಸಂಕಷ್ಟ ನಿವಾರಣೆಗಳಿಗಾಗಿ ಮಾಡುವ ವ್ರತಗಳು, ಹೊರುವ ಹರಕೆಗಳು, ನೀಡುವ ದಾನ ಧರ್ಮಗಳು, ಮದುವೆಯ ಹಿಂದಿನ ದಿನ ನಡೆಯುವ ಅರಿಶಿನ ಶಾಸ್ತ್ರ ಮತ್ತು ಹಲ್ದಿ ಶಾಸ್ತ್ರಗಳು, ಕಾಶೀಯಾತ್ರೆ ಮತ್ತು ಹಜ್ ಯಾತ್ರೆಯ ನಂತರ ನಡೆಸುವ ಸಮಾರಾಧನೆಗಳು – ಈ ರೀತಿ ಹಲವು ಆಚರಣೆಗಳನ್ನು ಪಟ್ಟಿಮಾಡುತ್ತಾ ಹೋಗಬಹುದು.

ಒಬ್ಬ ಸಾಹಿತಿಯ ಮನೋಧರ್ಮವನ್ನು, ಬರವಣಿಗೆಯ ರೀತಿಯನ್ನು, ಧೋರಣೆಗಳನ್ನು ಅರ್ಥಮಾಡಿಕೊಳ್ಳಬೇಕಾದರೆ ಆದಷ್ಟು ಮಟ್ಟಿಗೆ ಅವರ ಸಮಗ್ರ ಸಾಹಿತ್ಯವನ್ನು ಓದಬೇಕು ಎನ್ನುವ ನಂಬಿಕೆಯವಳು ನಾನು. ಈ ಸಮಯದಲ್ಲಿ ನಮ್ಮ ಭಾಷೆಗೆ ಒಂದು ಕಿರೀಟವನ್ನು ತಂದು ಕೊಟ್ಟಿರುವ ಬಾನು ಮುಷ್ತಾಕರನ್ನು ಓದಿ ಅರ್ಥಮಾಡಿಕೊಳ್ಳುವ ತುರ್ತು ಅವಶ್ಯಕತೆಯಿದೆ ಎಂದು ನನಗನ್ನಿಸಿದೆ. ಅರ್ಥವಾದಷ್ಟನ್ನು ಸಾಧ್ಯವಾದ ಮಟ್ಟಿಗೆ ನಿಮ್ಮೆಲ್ಲರಿಗೆ ತಿಳಿಸಿದ್ದೇನೆ ಎನ್ನುವ ನಂಬಿಕೆಯಿದೆ ನನಗೆ.

ನನ್ನ ಬಳಿ ಇದ್ದದ್ದು ಸುಮಾರು ವರ್ಷಗಳ ಹಿಂದೆ ಬಂದಿದ್ದ 552 ಪುಟಗಳ ಸಮಗ್ರ ಕತೆಗಳ ಸಂಗ್ರಹ. ಇತ್ತೀಚೆಗೆ ಅವರ ಇನ್ನೊಂದು ಕಥಾ ಸಂಕಲನವಾದ 'ಹೆಣ್ಣು ಹದ್ದಿನ ಸ್ವಯಂವರ' ಸೇರಿಕೊಂಡು 728 ಪುಟಗಳ ಸಂಗ್ರಹವಾಗಿದೆ. ಈ ಸಂಕಲನದ ಎಲ್ಲಾ ಕತೆಗಳನ್ನೂ, ಹಲವರ ವಿಮರ್ಶೆಗಳನ್ನು ಕೂಡಿಕೊಂಡು ಸುಮಾರು ಇನ್ನೂರಕ್ಕೂ ಹೆಚ್ಚು ಪುಟಗಳನ್ನು ಸ್ಕ್ಯಾನ್ ಮಾಡಿ, ಮುದ್ರಿಸಿ ಅದನ್ನೊಂದು ಪುಸ್ತಕವನ್ನಾಗಿ ಮಾಡಿ ನನಗೆ ತಂದುಕೊಟ್ಟ ಶ್ರೀಯುತ ಹಾಲ್ಕುರಿಕೆ ಗುರುಪ್ರಸಾದರ ಸಹಾಯ ಮತ್ತು ಸಹಕಾರವನ್ನು ಅತ್ಯಂತ ಕೃತಜ್ಞತೆಯಿಂದ ಇಲ್ಲಿ ನೆನಪಿಸಿಕೊಂಡು ನನ್ನ ವಂದನೆಯನ್ನು ಸಲ್ಲಿಸುತ್ತೇನೆ. ಅಂತೆಯೇ ತರಂಗ ವಾರಪತ್ರಿಕೆಯಲ್ಲಿ ಇದರ ಬಗ್ಗೆ ಬಂದಿದ್ದ ಏಳು ಪುಟಗಳನ್ನು ಪಿಡಿಎಫ್ ಪ್ರತಿಯಲ್ಲಿ ಕಳುಹಿಸಿದ ಶ್ರೀಯುತ ಶ್ರೀಧರ ಬಾಣಾವರ ಅವರಿಗೂ ಮತ್ತು ವಿಜಯ ಕರ್ನಾಟಕದ ಲೇಖನದ ಫೋಟೋ ಪ್ರತಿಯನ್ನು ಕಳುಹಿಸಿದ ಶ್ರೀಯುತ ಜಿ.ವಿ.ಅರುಣರಿಗೂ ನಾನು ಅಭಾರಿ. ನನ್ನ ಮೇಲೆ ನಂಬಿಕೆಯಿಟ್ಟು, ಇಂದು ಈ ವೇದಿಕೆಯಲ್ಲಿ ಇಷ್ಟೊಂದು ಸುದೀರ್ಘ ಕಾರ್ಯಕ್ರಮಕ್ಕೆ ಅನುವು ಮಾಡಿಕೊಟ್ಟ ಸಮನ್ವಯ ಸಮಿತಿ ಮತ್ತು ಕನ್ನಡವೇ ಸತ್ಯ ಗುಂಪಿನ ಎಲ್ಲಾ ಪದಾದಿಕಾರಿಗಳಿಗೂ, ತಿಂಗಳ ಬೆಳಕು ಕಾರ್ಯಕ್ರಮದ ರೂವಾರಿಗಳಾದ ಶ್ರೀಯುತ ರವಿ ಕುಸಬಿಯವರಿಗೂ, ಜಿ ಮೀಟ್ ನಿರ್ವಹಣೆ ಮಾಡಿದ ಗೆಳತಿ ರಾಧಿಕಾಗೂ ಹಾಗೂ ಇಂದು ಕೇಳುಗರಾಗಿ ಬಂದಿರುವ ತಮ್ಮೆಲ್ಲರಿಗೂ ನನ್ನ ಮನಃಪೂರ್ವಕ ವಂದನೆಗಳು.

***

•

ಸಮನ್ವಯ ಸಮಿತಿ, ಕನ್ನಡವೇ ಸತ್ಯ, ಸಾಹಿತ್ಯ ದಾಸೋಹ ವೇದಿಕೆ

ಸಂಪರ್ಕ ವಿಳಾಸ: ಶ್ರೀ ಬೆಂ.ಶ್ರೀ. ರವೀಂದ್ರ, 'ತವರು', 288, 3ನೆಯ ಮುಖ್ಯ ರಸ್ತೆ, 11ನೆಯ ಅಡ್ಡ ರಸ್ತೆ, 1ನೆಯ ಹಂತ, ವಸಂತ ವಲ್ಲಭ ನಗರ, ವಸಂತಪುರ, ಬೆಂಗಳೂರು – 560 061
ಚರವಾಣಿ: 9448994199 – ಇಮೇಲ್ ವಿಳಾಸ: bsrsbi1954@gmail.com

ಈ ಸಂಚಿಕೆಯ ಸಂಕಲನ, ವಿನ್ಯಾಸ : ಎಸ್. ಶೃಂಗೇಶ್ವರ ಶರ್ಮ
ಚರವಾಣಿ: 9448291329 – ಇಮೇಲ್ ವಿಳಾಸ: sringeswar.sharma@gmail.com

ಸಾಹಿತ್ಯ ದಾಸೋಹ 238 ನಡೆದ ದಿನಾಂಕ: 14 ಜೂನ್ 2025
ಸಂಚಿಕೆಯ ಬಿಡುಗಡೆ ದಿನಾಂಕ: 12 ಜುಲೈ 2025

(ವಿವಿಧ ಲೇಖನಗಳಲ್ಲಿ ಬಳಸಿರುವ ಚಿತ್ರಗಳು – ಕೃಪೆ ಆಯಾ ಲೇಖಕರು ಮತ್ತು ಅಂತರ್ಜಾಲ)